ಗುರುವಾರ, ಫೆಬ್ರುವರಿ 13, 2025 | ಬೆಂಗಳೂರು | ₹ 7.00 | ಸಂಪುಟ 78 | ಸಂಚಿಕೆ 44 | ಪುಟ 16

www.prajavani.net

prajavani.net | prajavani | prajavani | prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಸ್ಪರ್ಧಾವಾಣಿ
'ಪ್ಯಾರಿಸ್ ಹವಾಮಾನ ಒಪ್ಪಂದ'ದಲ್ಲಿ ಏನೇನಿದೆ?



ಆಳ-ಅಗಲ
ನರೇಂದ್ರ ಮೋದಿ-ಡೊನಾಲ್ಡ್ ಟ್ರಂಪ್ 'ಸುಂಕ'ದ ಮಾತುಕತೆ

ಠಾಣೆಗೆ ಕಲ್ಲೆಸೆತ: ಎಂಟು ಮಂದಿ ಸೆರೆ 7

'ಉಚಿತ ಕೊಡುಗೆ: ಜನ ಕೆಲಸ ಮಾಡುತ್ತಿಲ್ಲ' 13

ಸೆನ್ಸೆಕ್ಸ್	ನಿಫ್ಟಿ	₹/$
76,171	23,045	86.95

ಸುಗ್ರೀವಾಜ್ಞೆ ಜಾರಿ

ಬೆಂಗಳೂರು: ಬಲವಂತದ ಸಾಲ ವಸೂಲಿ ಮತ್ತು ಕಿರುಕುಳ ತಪ್ಪಿಸುವ ಉದ್ದೇಶದಿಂದ ರೂಪಿಸಿದ 'ಕರ್ನಾಟಕ ಕಿರು ಸಾಲ ಮತ್ತು ಸಣ್ಣ ಸಾಲ (ಒತ್ತಡ ತಂತ್ರಗಳ ನಿಷೇಧ) ಸುಗ್ರೀವಾಜ್ಞೆ- 2025'ಕ್ಕೆ ರಾಜ್ಯಪಾಲ ಥಾವರಚಂದ್ ಗೆಹಲೋತ್ ಅಂಕಿತ ಹಾಕಿದ ಬೆನ್ನಲ್ಲೆ ರಾಜ್ಯ ಸರ್ಕಾರ ಗೆಜೆಟ್ ಹೊರಡಿಸಿದೆ. ಆ ಮೂಲಕ, ಈ ಸುಗ್ರೀವಾಜ್ಞೆ ಜಾರಿಗೆ ಬಂದಿದೆ. 8

'ಮಾಘ ಹುಣ್ಣಿಮೆ': ಭಕ್ತಿಯಲ್ಲಿ ಮಿಂದೆದ್ದ ಜನಸಾಗರ 7

ಚಿನಕುರುಳಿ

ಪ್ರಕಾಶ್ ಶೆಟ್ಟಿ



ಇನ್ವೆಸ್ಟ್ ಕರ್ನಾಟಕ–2025: ರಾಜ್ಯದ ಶಕ್ತಿ ಪ್ರತಿಬಿಂಬಿಸಿದ ನವೀನ 'ಆವಿಷ್ಕಾರ'

₹4 ಲಕ್ಷ ಕೋಟಿ ಹೂಡಿಕೆಗೆ ಒಲವು


• ಚಂದ್ರಹಾಸ ಹಿರೇಮಳಲಿ

ಬೆಂಗಳೂರು: ಎರಡನೇ ದಿನವೂ ನಿರೀಕ್ಷೆ ಮೀರಿ ಬಂಡವಾಳ ಹೂಡಿಕೆಯ ಪ್ರಸ್ತಾವಗಳು ಹರಿದು ಬರುವ ಮುಖೇನ ಸಂಶೋಧನೆ, ತಯಾರಿಕೆಯಲ್ಲಿ ಕರ್ನಾಟಕವನ್ನು ಶಕ್ತಿ ಕೇಂದ್ರವನ್ನಾಗಿ ಅಭಿವೃದ್ಧಿಪಡಿಸುವ ರಾಜ್ಯ ಸರ್ಕಾರದ ಸಂಕಲ್ಪಕ್ಕೆ ಜಾಗತಿಕ ಹೂಡಿಕೆದಾರರ ಸಮಾವೇಶ ವೇದಿಕೆ ಕಲ್ಪಿಸಿಕೊಟ್ಟಿತು.

ವಿದೇಶಿ ಕಂಪನಿಗಳ ಜತೆಗೆ, ಭಾರತ ಹಾಗೂ ಕರ್ನಾಟಕದ ಹಲವು ಹೆಸರಾಂತ ಕಂಪನಿಗಳು ರಾಜ್ಯದ ವಿವಿಧ ಕ್ಷೇತ್ರಗಳಲ್ಲಿ ಹೂಡಿಕೆ ಮಾಡಲು ಸರ್ಕಾರದ ಜತೆ ಸುಮಾರು ₹4 ಲಕ್ಷ ಕೋಟಿ ಮೊತ್ತದ ಒಪ್ಪಂದ ಮಾಡಿಕೊಂಡವು. ಮೊದಲ ದಿನ ₹3 ಲಕ್ಷ ಕೋಟಿಗೂ ಹೆಚ್ಚು ಮೊತ್ತದ ಹೂಡಿಕೆಯ ಒಪ್ಪಂದ ಏರ್ಪಟ್ಟಿದ್ದವು.

'ವರ್ಲ್ಡ್ ಎಕನಾಮಿಕ್ ಫೋರಂ, ಸ್ವಿಸ್ ಇಂಡಿಯಾ ಚೇಂಬರ್ ಆಫ್ ಕಾಮರ್ಸ್, ಜಪಾನ್, ಸಿಂಗಪುರದ ಪ್ರಮುಖ ಕಂಪನಿಗಳು ಮೂಲಸೌಕರ್ಯ, ಮರುಬಳಕೆ ಇಂಧನ, ತಯಾರಿಕೆ, 'ಕ್ವಿನ್‌ಸಿಟಿ' ಪ್ರಗತಿಯಲ್ಲಿ ಕೈಜೋಡಿಸಲು ಸಮ್ಮತಿಸಿದವು. ಜಪಾನಿನ ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳ ಸಂಘಟನೆ ಜತೆಗಿನ ಒಪ್ಪಂದ ಕರ್ನಾಟಕದ ಸಣ್ಣ ಕೈಗಾರಿಕೆಗಳ ಉತ್ತೇಜನದ ಆಶಯಕ್ಕೆ ನಾಂದಿ ಹಾಡಿತು.

7ನೇ ಪುಟ ನೋಡಿ



ಉಪಮುಖ್ಯಮಂತ್ರಿ ಡಿ.ಕೆ ಶಿವಕುಮಾರ್ ಮತ್ತು ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ ಅವರು ನಾವೀನ್ಯ ಆವಿಷ್ಕಾರಗಳನ್ನು ಬುಧವಾರ ವೀಕ್ಷಿಸಿದರು ಚಿತ್ರ: ರಂಜು ಪಿ

ಮುಖ್ಯಾಂಶಗಳು

- ಸಮಾವೇಶದಲ್ಲಿ 16 ದೇಶಗಳ ರಾಯಭಾರಿಗಳು, ಪ್ರತಿನಿಧಿಗಳು ಭಾಗಿ
- ಭಾರತ, ಕರ್ನಾಟಕದ ಉದ್ಯಮಿಗಳಿಂದಲೂ ಪೈಪೋಟಿ
- ಮೂಲಸೌಕರ್ಯ, ಮರುಬಳಕೆ ಇಂಧನ, ತಯಾರಿಕೆ, 'ಕ್ವಿನ್‌ಸಿಟಿ' ಸಹಯೋಗಕ್ಕೆ ಪ್ರತಿಷ್ಠಿತ ಕಂಪನಿಗಳ ಒಲವು

ಭಾರತದ ಪ್ರಗತಿಯಲ್ಲಿ ಕರ್ನಾಟಕ ಕೊಡುಗೆ ದೊಡ್ಡದು: ಪೀಯೂಷ್



'ಭಾರತವನ್ನು ವಿಶ್ವದ ಮೂರನೇ ಅತಿದೊಡ್ಡ ಆರ್ಥಿಕತೆಯಾಗಿ ರೂಪಿಸುವಲ್ಲಿ ಕರ್ನಾಟಕವು ಮಹತ್ವದ ಪಾತ್ರ ವಹಿಸಲಿದೆ. ಇದಕ್ಕಾಗಿ ರಾಜ್ಯಕ್ಕೆ ಅಗತ್ಯವಿರುವ ಎಲ್ಲ ರೀತಿಯ ಸಹಕಾರವನ್ನು ಕೇಂದ್ರ ಸರ್ಕಾರ ಒದಗಿಸಲಿದೆ' ಎಂದು ಕೇಂದ್ರ ವಾಣಿಜ್ಯ ಸಚಿವ ಪೀಯೂಷ್ ಗೋಯಲ್ ಅವರು ಹೇಳಿದರು.

ಕರ್ನಾಟಕದ ಆರ್ಥಿಕತೆ ಮತ್ತು ಕೈಗಾರಿಕಾ ರಂಗದ ಬೆಳವಣಿಗೆಗೆ ಮಹತ್ತರ ಕೊಡುಗೆ ನೀಡುತ್ತಿರುವ 15 ಉದ್ಯಮಗಳಿಗೆ ಜಾಗತಿಕ ಬಂಡವಾಳ ಹೂಡಿಕೆದಾರರ ಸಮಾವೇಶದ ಬುಧವಾರದ ಕಾರ್ಯಕ್ರಮದಲ್ಲಿ, 'ಇನ್ವೆಸ್ಟ್ ಕರ್ನಾಟಕ' ಪ್ರಶಸ್ತಿ ಪ್ರದಾನ ಮಾಡಿ ಅವರು ಮಾತನಾಡಿದರು.

'2047ರ ವೇಳೆಗೆ ಭಾರತದ ಆರ್ಥಿಕತೆಯನ್ನು ₹2,600 ಲಕ್ಷ ಕೋಟಿಗೆ ಹೆಚ್ಚಿಸಬೇಕಿದೆ. ಇದಕ್ಕಾಗಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಸಹಭಾಗಿತ್ವ ಹಾಗೂ ಸಹಕಾರ ಅತ್ಯಗತ್ಯ. ಈ ನಿಟ್ಟಿನಲ್ಲಿ ಕೇಂದ್ರ ಸರ್ಕಾರವು ರಾಜ್ಯಕ್ಕೆ ಸಂಪೂರ್ಣ ಸಹಕಾರ ನೀಡಲಿದೆ. ರಾಜ್ಯದಲ್ಲಿ ಡೀಪ್-ಟೆಕ್, ಫಿನ್-ಟೆಕ್, ಫ್ಯೂಚರ್ ಇಂಡಸ್ಟ್ರಿಗಳಿಗೆ ಸಮೃದ್ಧ ಅವಕಾಶಗಳಿದ್ದು, ಕರ್ನಾಟಕವು ದೇಶವನ್ನು ಮುನ್ನಡೆಸಲಿದೆ' ಎಂದು ಅವರು ಹೇಳಿದರು.

ಕೆಪಿಸಿಸಿ ಅಧ್ಯಕ್ಷರು ಬದಲು?

ದೆಹಲಿ ಯಾತ್ರೆ ಮುಂದೂಡಿದ ಪರಮೇಶ್ವರ, ಮಹದೇವಪ್ಪ

ಪ್ರಜಾವಾಣಿ ವಾರ್ತೆ

ಬೆಂಗಳೂರು/ಕಲಬುರಗಿ: ಕೆಪಿಸಿಸಿ ಅಧ್ಯಕ್ಷರ ಬದಲಾವಣೆ ಮಾಡುವಂತೆ ದಲಿತ ಸಚಿವರು, ಕೆಲವು ಶಾಸಕರು ಒತ್ತಡ ಹೇರುತ್ತಿರುವ ಬೆನ್ನಲ್ಲೆ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು, 'ಕೆಲವು ರಾಜ್ಯಗಳ ಪ್ರದೇಶ ಕಾಂಗ್ರೆಸ್ ಸಮಿತಿಗಳ (ಪಿಸಿಸಿ) ಅಧ್ಯಕ್ಷರನ್ನು ಸದ್ಯವೇ ಬದಲಾಯಿಸಲಾಗುವುದು' ಎಂದು ಹೇಳಿರುವುದು ಕಾಂಗ್ರೆಸ್ ವಲಯದಲ್ಲಿ ಚರ್ಚೆಗೆ ಕಾರಣವಾಗಿದೆ.



ಕೆಪಿಸಿಸಿ ಅಧ್ಯಕ್ಷರ ಬದಲಾವಣೆ ಕುರಿತಂತೆ ಸುದ್ದಿಗಾರರು ಕೇಳಿದ ಪ್ರಶ್ನೆಗೆ ಕಲಬುರಗಿಯಲ್ಲಿ ಪ್ರತಿಕ್ರಿಯಿಸಿದ ಖರ್ಗೆ ಅವರು, 'ರಾಜ್ಯಕ್ಕೆ (ಕರ್ನಾಟಕಕ್ಕೆ) ಸೀಮಿತವಾಗಿ ಯಾವುದನ್ನೂ ಹೇಳಲಾಗದು. ಒಡಿಶಾ ಪ್ರದೇಶ ಕಾಂಗ್ರೆಸ್ ಸಮಿತಿಗೆ ಹಿಂದುಳಿದ ವರ್ಗದವರನ್ನು ಅಧ್ಯಕ್ಷರನ್ನಾಗಿ ಈಗಾಗಲೇ ನೇಮಿಸಿದ್ದೇವೆ. ಎರಡ್ಮೂರು ರಾಜ್ಯಗಳ ಅಧ್ಯಕ್ಷರನ್ನು ಶೀಘ್ರವೇ ಬದಲಾವಣೆ ಮಾಡಲಾಗುವುದು. ಜೊತೆಗೆ, ಕೆಲವೆಡೆ ಪದಾಧಿಕಾರಿಗಳನ್ನೂ ನೇಮಕ ಮಾಡಲಾಗುವುದು' ಎಂದು ಹೇಳಿದರು.

8ನೇ ಪುಟ ನೋಡಿ

ಅವರು ದೊಡ್ಡವರು: ಡಿಕೆಶಿ



'ಅವರು ದೊಡ್ಡವರು, ನಮ್ಮ ಪಕ್ಷದ ಹಿರಿಯ ನಾಯಕರು. ನಾವೆಲ್ಲ ಇನ್ನೂ ಕಾರ್ಯಕರ್ತರು' ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು.

'ಕೆಪಿಸಿಸಿ ಅಧ್ಯಕ್ಷರ ಬದಲಾವಣೆಗಾಗಿ ದೆಹಲಿಗೆ ಹೋಗುತ್ತಿದ್ದೇನೆ' ಎಂಬ ಸಹಕಾರ ಸಚಿವ ಕೆ.ಎನ್. ರಾಜಣ್ಣ ಅವರ ಹೇಳಿಕೆಯ ಬಗ್ಗೆ ಮೈಸೂರಿನಲ್ಲಿ ಸುದ್ದಿಗಾರರು ಗಮನಸೆಳೆದಾಗ ಪ್ರತಿಕ್ರಿಯಿಸಿದ ಶಿವಕುಮಾರ್, 'ಅವರ ಬಗ್ಗೆ ನಾನೇನು ಪ್ರತಿಕ್ರಿಯಿಸಲಿ' ಎಂದು ಮರು ಪ್ರಶ್ನೆ ಕೇಳಿದರು.

ಅವರು ಕುಬೇರರು: ರಾಜಣ್ಣ



'ನಾವು ಸಣ್ಣವರೋ, ದೊಡ್ಡ ನಾಯಕರೋ ಎಂಬುದು ಬೇರೆ ಪ್ರಶ್ನೆ. ಆದರೆ, ಕುಬೇರರ ಮಾತಿಗೆ ನಾನು ಪ್ರತಿಕ್ರಿಯಿಸುವುದಿಲ್ಲ' ಎಂದು ಸಹಕಾರ ಸಚಿವ ಕೆ.ಎನ್. ರಾಜಣ್ಣ ವ್ಯಂಗ್ಯವಾಗಿ ಹೇಳಿದರು.

ಡಿ.ಕೆ. ಶಿವಕುಮಾರ್ ಅವರ ಹೇಳಿಕೆಗೆ ದೆಹಲಿಯಲ್ಲಿ ಸುದ್ದಿಗಾರರಿಗೆ ಪ್ರತಿಕ್ರಿಯೆ ನೀಡಿದ ರಾಜಣ್ಣ, 'ನನ್ನ ಮನಸ್ಸಿನಲ್ಲಿ ಇರುವುದನ್ನು ರಾಷ್ಟ್ರೀಯ ನಾಯಕರಿಗೆ ತಿಳಿಸಿದ್ದೇನೆ. ಅದನ್ನು ಇಲ್ಲಿ ಬಹಿರಂಗಪಡಿಸುವುದಿಲ್ಲ. ಅದರ ಬಗ್ಗೆ ಪಕ್ಷದ ವೇದಿಕೆಯಲ್ಲಿ ಚರ್ಚಿಸುತ್ತೇನೆ' ಎಂದರು.

ಪರಿಶಿಷ್ಟರ ಸಮಾವೇಶಕ್ಕೆ ಒತ್ತಡ

ನವದೆಹಲಿ: ರಾಜ್ಯದಾದ್ಯಂತ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದ ಸಮಾವೇಶ ನಡೆಸಲು ಅನುಮತಿ ನೀಡಬೇಕು ಎಂದು ಕಾಂಗ್ರೆಸ್ ಹೈಕಮಾಂಡ್‌ಗೆ ಸಹಕಾರ ಸಚಿವ ಕೆ.ಎನ್.ರಾಜಣ್ಣ ಒತ್ತಡ ಹೇರಿದರು. ಕೆ.ಸಿ. ವೇಣುಗೋಪಾಲ್ ಅವರನ್ನು ರಾಜಣ್ಣ ಬುಧವಾರ ಭೇಟಿ ಮಾಡಿ ಚರ್ಚಿಸಿದರು. ಮಲ್ಲಿಕಾರ್ಜುನ ಖರ್ಗೆ ಅವರನ್ನು ಭೇಟಿ ಮಾಡುವುದಾಗಿ ಅವರು ತಿಳಿಸಿದರು.

8ನೇ ಪುಟ ನೋಡಿ


13-02-2025
ಜನ್ಮದಿನದ ಶುಭಾಶಯಗಳು
ಶ್ರೀ ಆರ್. ಅಖಂಡ ಶ್ರೀನಿವಾಸಮೂರ್ತಿ
ಬಡವರ ಬಂಧು, ಎಲ್ಲಾ ವರ್ಗಗಳ ಹಿತ ಚಿಂತಕರು, ನಮ್ಮ ನಿಮ್ಮೆಲ್ಲರ ನೆಚ್ಚಿನ
ನಾಯಕರು, ಅಭಿವೃದ್ಧಿಗಳ ಹರಿಕಾರರು ಪುಲಿಕೇಶಿನಗರ ವಿಧಾನಸಭಾ ಕ್ಷೇತ್ರದ ಜನಪ್ರಿಯ
ಮಾಜಿ ಶಾಸಕರಾದ ಶ್ರೀ ಆರ್. ಅಖಂಡ ಶ್ರೀನಿವಾಸಮೂರ್ತಿ ರವರಿಗೆ
ಹುಟ್ಟುಹಬ್ಬದ ಹಾರ್ದಿಕ ಶುಭಾಶಯಗಳು
ಶುಭಕೋರುವವರು:
ಪುಲಕೇಶಿನಗರದ ವಿಧಾನಸಭಾ ಕ್ಷೇತ್ರದ
ಪದಾಧಿಕಾರಿಗಳು ಮತ್ತು ಕಾರ್ಯಕರ್ತರು
ಅಖಂಡ ಶ್ರೀನಿವಾಸಮೂರ್ತಿಯವರ ಅಭಿಮಾನಿಗಳ ಬಳಗ

ಮೆಟ್ರೊ ಪ್ರಯಾಣ ದರ ಏರಿಕೆಗೆ ಜನಾಕ್ರೋಶ

'ನಮ್ಮ ಮೆಟ್ರೊ' ಪ್ರಯಾಣ ದರವನ್ನು ಎಷ್ಟು ಹೆಚ್ಚಳ ಮಾಡಿದೆ ಎಂಬ ಬಗ್ಗೆ ಲೆಕ್ಕಾಚಾರ ಇಲ್ಲದೇ ಮೆಟ್ರೊದಲ್ಲಿ ಪ್ರಯಾಣಿಸಿದಾಗ ಬೆಲೆ ದುಪ್ಪಟ್ಟಾಗಿರುವುದನ್ನು ಕಂಡು ಪ್ರಯಾಣಿಕರು ಅವಕ್ಕಾಗಿದ್ದಾರೆ. ದುಬಾರಿ ದರ ನಿಗದಿ ಮಾಡಿರುವುದನ್ನು ಖಂಡಿಸಿದ್ದಾರೆ. ಈ ಬಗ್ಗೆ ಸಾರ್ವಜನಿಕರಿಂದ ಆಕ್ರೋಶ ವ್ಯಕ್ತವಾಗಿದೆ.





ಬಿಎಂಆರ್‌ಸಿಎಲ್ ಮೆಟ್ರೊ ಪ್ರಯಾಣ ದರ ಏರಿಕೆ ಮಾಡಿರುವುದನ್ನು ಖಂಡಿಸಿ ಕರ್ನಾಟಕ ರಾಜ್ಯ ರೈತ ಸಂಘ ಕಗ್ಗಲಿಪುರ ಶಾಖೆಯ ಸದಸ್ಯರು ನೈಸ್ ರಸ್ತೆ ಜಂಕ್ಷನ್ ಬಳಿ ಕುರಿ, ಮೇಕೆ, ರಾಗಿ ಹಾಗೂ ಭತ್ತದ ಹುಲ್ಲನ್ನು ಹೊತ್ತುಕೊಂಡು ಪ್ರತಿಭಟನೆ ನಡೆಸಿದರು. ರೈತ ಸಂಘದ ಕಗ್ಗಲಿಪುರ ಶಾಖೆಯ ಅಧ್ಯಕ್ಷ ನದೀಂ ಪಾಷಾ, ಕರ್ನಾಟಕ ಯುವಶಕ್ತಿ ವೇದಿಕೆಯ ರಾಜ್ಯ ಘಟಕದ ಅಧ್ಯಕ್ಷ ರೂಪೇಶ್ ರಾಜಣ್ಣ, ವಿವಿಧ ಸಂಘಟನೆಗಳ ಸದಸ್ಯರು ಪಾಲ್ಗೊಂಡಿದ್ದರು



ಪ್ರಯಾಣ ದರ ಏರಿಕೆ ಆದೇಶ ಹಿಂಪಡೆಯದಿದ್ದರೆ ತೀವ್ರ ಹೋರಾಟ ಮಾಡುವುದಾಗಿ ಬಿಜೆಪಿ ಶಾಸಕರು ರಾಜ್ಯ ಸರ್ಕಾರಕ್ಕೆ ಎಚ್ಚರಿಕೆ ನೀಡಿದ್ದಾರೆ. ದರ ಏರಿಕೆ ಕೇಂದ್ರ ಸರ್ಕಾರದಿಂದಲೇ ನಡೆದಿದೆ ಎಂದು ರಾಜ್ಯ ಸರ್ಕಾರ ಸಮಜಾಯಿಷಿ ನೀಡುತ್ತಿದೆ. ಇವರಿಬ್ಬರ ಜಗಳದಲ್ಲಿ ಪ್ರಯಾಣಿಕರ ಜೇಬು ಖಾಲಿ ಆಗುತ್ತಿದೆ. ಈ ರಾಜಕಾರಣಿಗಳೇನು ಜನರನ್ನು ಕೋತಿಗಳೆಂದು ಭಾವಿಸಿದ್ದಾರೆಯೆ? ಕೂಡಲೇ ಈ ಕೋತಿಯಾಟ ನಿಲ್ಲಿಸಲಿ. ನಿಜವಾದ ಕಾಳಜಿಯಿದ್ದರೆ, ಇಬ್ಬರೂ ಒಟ್ಟಿಗೆ ಕೂತು ಚರ್ಚಿಸಿ, ದರ ಏರಿಕೆಯನ್ನು ಕಡಿಮೆ ಮಾಡಿಸಬೇಕು.

ತಾ.ಸಿ. ತಿಮ್ಮಯ್ಯ, ಎಂಪಿಎಂ ಬಡಾವಣೆ, ಮಲ್ಲತ್ತಹಳ್ಳಿ



ಮೆಟ್ರೊ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಸಹಭಾಗಿತ್ವದ ಯೋಜನೆಯಾಗಿದೆ. ಪ್ರಯಾಣ ದರ ಏರಿಕೆಗೆ ಒಬ್ಬರನ್ನೊಬ್ಬರು ದೂಷಿಸುತ್ತಾ ಜನರಿಗೆ ಟೋಪಿ ಹಾಕುವುದು ಸುಲಭ. ಖಾಸಗಿ ವಾಹನಗಳ ಸಂಖ್ಯೆ ಕಡಿಮೆ ಮಾಡುತ್ತಾ ಕೆಲವರಿಗೆ ಮಾತ್ರ ಅನುಕೂಲವಾಗುವ ರಸ್ತೆಗಳ ಮೇಲಿನ ಹೂಡಿಕೆಯನ್ನು ನಗರ ಪ್ರದೇಶಗಳಲ್ಲಿ ಕಡಿಮೆ ಮಾಡಬೇಕು. ಪರಿಸರ ಮಾಲಿನ್ಯ, ಅಪಘಾತಗಳು, ವಾಹನ ದಟ್ಟಣೆ ಕಡಿಮೆ ಮಾಡುವ ಕುರಿತು ಸಾರ್ವಜನಿಕ ಸಾರಿಗೆಯನ್ನು ಜನಸ್ನೇಹಿಯನ್ನಾಗಿ ಮಾಡಬೇಕು.

ಗುರುರಾಜ ಹ. ನಾಯಕ, ರಾಘವೇಂದ್ರ ಬಡಾವಣೆ ಬನ್ನೇರುಘಟ್ಟ ರಸ್ತೆ



ಮೆಟ್ರೊ ಪ್ರಯಾಣಕ್ಕೆ ಈ ಹಿಂದೆ ₹57 ಪಾವತಿ ಮಾಡುತ್ತಿದೆ. ಈಗ ಅದೇ ಮಾರ್ಗಕ್ಕೆ ₹90 ಪಾವತಿಸಬೇಕಾಗಿದೆ. ಇದು ನಮ್ಮಂತಹ ಜನಸಾಮಾನ್ಯರಿಗೆ ಆರ್ಥಿಕ ಹೊರೆಯಾಗಿದೆ. ಮೆಟ್ರೊ ಒಂದು ಸಾರ್ವಜನಿಕ ಸಾರಿಗೆ ವ್ಯವಸ್ಥೆಯಾಗಿದೆ. ಇದನ್ನು ಲಾಭಕ್ಕೆ ಬಳಸುವ ಬದಲು ಜನಸ್ನೇಹಿ ದರದಲ್ಲಿ ಮುಂದುವರಿಸಬೇಕು.

ಕಿಶೋರ್, ಖಾಸಗಿ ನೌಕರ





ಇತ್ತೀಚೆಗೆ ಸರ್ಕಾರಿ ಬಸ್‌ಗಳ ಪ್ರಯಾಣ ದರವನ್ನು ಏರಿಕೆ ಮಾಡಲಾಗಿದೆ. ಇದರ ಜೊತೆಗೆ ಮೆಟ್ರೊ ಪ್ರಯಾಣ ದರ ಏರಿಕೆಯು ಸಾರ್ವಜನಿಕರಿಗೆ ಗಾಯದ ಮೇಲೆ ಬರೆ ಎಳೆದಂತಾಗಿದೆ. ಇದು ಸಾರ್ವಜನಿಕ ಸಾರಿಗೆಯ ಬಳಕೆ ಕಡಿಮೆ ಮಾಡಿ ಸ್ವಂತ ವಾಹನಗಳ ಬಳಕೆಗೆ ಉತ್ತೇಜಿಸುತ್ತಿದೆ. ಜನರನ್ನು ಆರ್ಥಿಕ ಸಂಕಷ್ಟಕ್ಕೂ ದೂಡುತ್ತದೆ. ಬೆಂಗಳೂರು ನಗರದಲ್ಲಿ ವಾಯು ಮತ್ತು ಶಬ್ದ ಮಾಲಿನ್ಯ ಹೆಚ್ಚಾಗಲಿದ್ದು, ಆರೋಗ್ಯದ ಮೇಲೆ ಪರಿಣಾಮ ಬೀರುತ್ತದೆ. ಮೆಟ್ರೊ ಪ್ರಯಾಣ ದರ ಏರಿಕೆಗೆ ಎಲ್ಲ ವರ್ಗದ ಜನರಿಂದ ವಿರೋಧವಿದೆ. ಸಂಬಂಧಪಟ್ಟವರು ಕೂಡಲೇ ದರ ಏರಿಕೆಯ ಬಗ್ಗೆ ಪರಿಶೀಲಿಸಿ ಸಾರ್ವಜನಿಕ ಸ್ನೇಹಿ ದರವನ್ನು ನಿಗದಿಪಡಿಸಬೇಕು.

ನವೀನ್ ಮಾರಾ, ವಿಜಯನಗರ



ಚಿಕ್ಕಬಿದರಕಲ್ಲು ಮೆಟ್ರೊ ನಿಲ್ದಾಣದಿಂದ ಕಬ್ಬನ್ ಉದ್ಯಾನ ಮೆಟ್ರೊ ನಿಲ್ದಾಣಕ್ಕೆ ಈ ಹಿಂದೆ ನಾನು ₹47.50 ಪ್ರಯಾಣ ದರವನ್ನು ಪಾವತಿ ಮಾಡುತ್ತಿದೆ. ಈಗ ಅದೇ ಮಾರ್ಗದ ಪ್ರಯಾಣ ದರವನ್ನು ₹66.50ಕ್ಕೆ ಏರಿಕೆ ಮಾಡಲಾಗಿದೆ. ನಮ್ಮಂತಹ ಮಧ್ಯಮ ವರ್ಗದ ಜನರಿಗೆ ಇದು ಗಾಯದ ಮೇಲೆ ಬರೆ ಎಳೆದಂತಾಗಿದೆ. ಸರ್ಕಾರಗಳು ದರ ಏರಿಕೆ ಮಾಡುವ ಮುನ್ನ ನಮ್ಮಂತಹವರ ಬಗ್ಗೆ ಯೋಚನೆ ಮಾಡಬೇಕು. ಮೆಟ್ರೊ ಪ್ರಯಾಣ ದರ ಹೆಚ್ಚಳ ತೀರಾ ಅನಿವಾರ್ಯವಾಗಿದ್ದಲ್ಲಿ ಶೇಕಡ 5ರಷ್ಟು ಹೆಚ್ಚಿಸಬಹುದಿತ್ತು. ಅದನ್ನು ಬಿಟ್ಟು ಅವೈಜ್ಞಾನಿಕ ರೀತಿಯಲ್ಲಿ ಮೆಟ್ರೊ ಪ್ರಯಾಣ ದರ ಹೆಚ್ಚಿಸಿರುವುದು ಸರಿಯಲ್ಲ.

ನಳಿನಿಗೌಡ, ಮಾತೃಶ್ರೀ ಬಡಾವಣೆ, ತೋಟದಗುಡ್ಡಹಳ್ಳಿ



ಬೆಂಗಳೂರಿನಲ್ಲಿ ಸಂಚಾರ ದಟ್ಟಣೆ ತಪ್ಪಿಸಿಕೊಳ್ಳಲು ಹಾಗೂ ನಿಗದಿತ ಸಮಯಕ್ಕೆ ಕಚೇರಿ ತಲುಪಲು ಮೆಟ್ರೊ ರೈಲಿನಲ್ಲಿ ಸಾವಿರಾರು ಜನ ಪ್ರಯಾಣಿಸುತ್ತಾರೆ. ನಾನು ಸಹ ಜ್ಞಾನಭಾರತಿಯಿಂದ ಕಾಡುಗೋಡಿಯವರೆಗೆ ಮೆಟ್ರೊದಲ್ಲಿ ಪ್ರತಿನಿತ್ಯ ಪ್ರಯಾಣಿಸುತ್ತಿದ್ದೇನೆ. ಕೇಂದ್ರ ಮತ್ತು ರಾಜ್ಯ ಸರ್ಕಾರಗಳಿಗೆ ಚೆನ್ನಾಗಿ ಗೊತ್ತಿದೆ. ಬೆಂಗಳೂರಿನ ಜನ ಈ ಬೆಲೆ ಏರಿಕೆಯ ಬಗ್ಗೆ ಹೆಚ್ಚು ದಿನ ತಲೆ ಕೆಡಿಸಿಕೊಳ್ಳುವುದಿಲ್ಲ ಎಂದು. ಮೆಟ್ರೊ ಪ್ರಯಾಣ ದರವನ್ನು ಕಡಿತಗೊಳಿಸುವಂತೆ ಆಗ್ರಹಿಸಿ ಸಾರ್ವಜನಿಕರು ಹೋರಾಟಕ್ಕೆ ಇಳಿಯುವ ಅವಶ್ಯಕತೆ ಇದೆ.

ಸಿದ್ದರಾಜು ಎನ್.ಆರ್., ಜ್ಞಾನಭಾರತಿ

ಮಹಾಲಕ್ಷ್ಮಿ ನಿಲ್ದಾಣದಿಂದ ಯಶವಂತಪುರ ನಿಲ್ದಾಣಕ್ಕೆ ಶೇ 5 ರಿಯಾಯಿತಿ ನಂತರ ₹19 ಆಗಿದೆ. ಮೆಟ್ರೊ ಇಷ್ಟು ದುಬಾರಿಯಾದರೆ ನಾಗರಿಕರಿಗೆ ಬಹಳ ಹೊರೆಯಾಗುತ್ತದೆ ಎಂಬ ಕನಿಷ್ಠ ಜ್ಞಾನವೂ ದರ ಏರಿಕೆ ಮಾಡಿದವರಿಗೆ ಇಲ್ಲ ಎಂಬುದು ಗೊತ್ತಾಗುತ್ತದೆ.

ಎಂ. ನಾಗರಾಜ, ಗೋಪಾಲಪುರ

ಅಭಿಪ್ರಾಯ ಕಳುಹಿಸಿ

ಮೆಟ್ರೊ ಪ್ರಯಾಣ ದರ ಏರಿಕೆಯ ಬಗ್ಗೆ ಸಾರ್ವಜನಿಕರು ತಮ್ಮ ಅಭಿಪ್ರಾಯಗಳನ್ನು 50 ಪದಗಳ ಮಿತಿಯಲ್ಲಿ ಈ ಕೆಳಗಿನ ವಾಟ್ಸ್‌ಆ್ಯಪ್ ಸಂಖ್ಯೆಗೆ ಕಳುಹಿಸಬಹುದು. ಜೊತೆಗೆ ನಿಮ್ಮ ಭಾವಚಿತ್ರವೂ ಇರಲಿ.

ವಾಟ್ಸ್‌ಆ್ಯಪ್ ಸಂಖ್ಯೆ: **96060 38256**

ಹೊಸ ಸಮಿತಿ ರಚಿಸಲು ಕೇಂದ್ರಕ್ಕೆ ಪ್ರಸ್ತಾವ ಕಳುಹಿಸಲಿ: ಸೂರ್ಯ

ಪ್ರಜಾವಾಣಿ ವಾರ್ತೆ

ನವದೆಹಲಿ: ನಮ್ಮ ಮೆಟ್ರೊ ಪ್ರಯಾಣ ದರವನ್ನು ಪರಿಶೀಲಿಸಲು ಹೊಸ ದರ ನಿಗದಿ ಸಮಿತಿಯನ್ನು ರಚಿಸುವಂತೆ ರಾಜ್ಯ ಸರ್ಕಾರ ವಿನಂತಿಯನ್ನು ಕಳುಹಿಸಿದರೆ, ಕೇಂದ್ರವು ಅದನ್ನು ಪರಿಗಣಿಸಲು ಸಿದ್ಧವಾಗಿದೆ ಎಂದು ಸಂಸದ ತೇಜಸ್ವಿ ಸೂರ್ಯ ಹೇಳಿದರು.

ಬುಧವಾರ ಇಲ್ಲಿ ಸುದ್ದಿಗಾರರ ಜತೆಗೆ ಮಾತನಾಡಿ, 'ದರ ನಿಗದಿ ಸಮಿತಿಯ ಶಿಫಾರಸಿನ ಆಧಾರದಲ್ಲಿ ಪ್ರಯಾಣ ದರ ಪರಿಷ್ಕರಣೆ ಮಾಡಲಾಗಿದೆ. ದರ ಪರಿಷ್ಕರಣೆ ಮಾಡುವ ಅಧಿಕಾರ ಕೇಂದ್ರಕ್ಕೆ ಇಲ್ಲ. ಹೊಸ ಸಮಿತಿ ರಚಿಸಿ ದರ ಪರಿಷ್ಕರಣೆ ಮಾಡಬಹುದು. ಈ ಸಂಬಂಧ ಬೆಂಗಳೂರು ಮೆಟ್ರೊ ರೈಲು ನಿಗಮ ಹಾಗೂ ರಾಜ್ಯ ಸರ್ಕಾರ ಕ್ರಮ ಕೈಗೊಳ್ಳಬೇಕು. ರಾಜ್ಯವು ವಿನಂತಿಸಿದರೆ ಹೊಸ ಸಮಿತಿಯನ್ನು ರಚಿಸುವುದಾಗಿ ನಗರ ವ್ಯವಹಾರಗಳ ಸಚಿವ ಮನೋಹರ್ ಲಾಲ್ ಖಟ್ಟರ್ ಅವರು ಭರವಸೆ ನೀಡಿದ್ದಾರೆ' ಎಂದು ಹೇಳಿದರು.

ಮುನಿರತ್ನಗೆ ನಿರೀಕ್ಷಣಾ ಜಾಮೀನು

ಬೆಂಗಳೂರು: 'ಒತ್ತುವರಿ ಮಾಡಿ ಅಕ್ರಮವಾಗಿ ಶೆಡ್‌ಗಳನ್ನು ನಿರ್ಮಿಸಿದ್ದಾರೆ ಎಂಬ ಆರೋಪದಡಿ; ತೆರವು ಕಾರ್ಯಾಚರಣೆ ನಡೆಸುವ ವೇಳೆ ಮಾದಿಗ ಸಮುದಾಯದ 20 ವರ್ಷದ ಮಹಿಳೆಯ ಮೇಲೆ ಜಾತಿ ನಿಂದನೆಯ ದೌರ್ಜನ್ಯ ನಡೆಸಿದ್ದಾರೆ' ಎಂಬ ಆರೋಪಕ್ಕೆ ಸಂಬಂಧಿಸಿದ ಪ್ರಕರಣದಲ್ಲಿ ಶಾಸಕ ಮುನಿರತ್ನ ಸೇರಿದಂತೆ ಏಳು ಆರೋಪಿಗಳಿಗೆ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯ ನಿರೀಕ್ಷಣಾ ಜಾಮೀನು ನೀಡಿದೆ. ನ್ಯಾಯಾಧೀಶ ಸಂತೋಷ ಗಜಾನನ ಭಟ್ ಷರತ್ತುಬದ್ಧ ಜಾಮೀನು ಮಂಜೂರು ಮಾಡಿ ಆದೇಶಿಸಿದ್ದಾರೆ.

ವೈಭವದ ರೇಣುಕಾ ಯಲ್ಲಮ್ಮ ಜಾತ್ರೆ

ಪ್ರಜಾವಾಣಿ ವಾರ್ತೆ

ಮಾಗಡಿ: ತಾಲ್ಲೂಕಿನ ಸೋಲೂರು ರಾಷ್ಟ್ರೀಯ ಹೆದ್ದಾರಿ ಬಳಿ ಇರುವ ಆರ್ಯ ಈಡಿಗರ ಮಹಾಸಂಸ್ಥಾನ ಮಠದಲ್ಲಿ ಬುಧವಾರ ರೇಣುಕಾ ಯಲ್ಲಮ್ಮ ದೇವಿ ಜಾತ್ರೆ ಅದ್ದೂರಿಯಾಗಿ ನೆರವೇರಿತು.

ಭರತ ಹುಣ್ಣಿಮೆ ದಿನದ ಅಂಗವಾಗಿ ಬೆಳಗ್ಗೆ ಮಠದಲ್ಲಿ ಸೋಲೂರು ಆರ್ಯ ಈಡಿಗರ ಮಠದ ವಿಖ್ಯಾತಾನಂದ ಸ್ವಾಮೀಜಿಗೆ ಪಾದಪೂಜೆ ಮೂಲಕ ಗುರುಪೂಜೆ ನಡೆಯಿತು. ಗಂಗಾ ಪೂಜೆ, ದೇವಿ ಆರಾಧನೆ ಸೇರಿದಂತೆ ಧಾರ್ಮಿಕ ವಿಧಿ, ವಿಧಾನ ನಡೆದವು.

ಸವದತ್ತಿ ರೇಣುಕಾ ಯಲ್ಲಮ್ಮ ದೇವಾಲಯದಿಂದ ಬಂದಿದ್ದ ಜೋಗತಿ ಅಮ್ಮನವರು ಉತ್ಸವ ಮೂರ್ತಿಗಳಿಗೆ ಪೂಜೆ ನೆರವೇರಿಸಿದರು.

ವಿವಿಧ ಕಲಾ ತಂಡಗಳು ಪ್ರದರ್ಶನ ಜನರ ಗಮನ ಸೆಳೆದವು. ಜತೆಗೆ ಜೋಗತಿ ನೃತ್ಯ ಉತ್ಸವಕ್ಕೆ ಮತ್ತಷ್ಟು ಮೆರಗು ತಂದಿತು. ಜಾತ್ರೆಗೆ ಬಂದಿದ್ದ ಸಾವಿರಾರು ಭಕ್ತರಿಗೆ ಅನ್ನಸಂತರ್ಪಣೆ ನಡೆಯಿತು.

ಆರೋಗ್ಯ ಶಿಬಿರ: ಉಚಿತ ಆರೋಗ್ಯ ತಪಾಸಣಾ ಶಿಬಿರ ನಡೆಯಿತು. ಈ ಶಿಬಿರದಲ್ಲಿ 150ಕ್ಕೂ ಹೆಚ್ಚು ಮಂದಿ ಆರೋಗ್ಯ ತಪಾಸಣೆ ಮಾಡಿಸಿಕೊಂಡರು. ನೂರಕ್ಕೂ ಹೆಚ್ಚು ಮಂದಿಗೆ ಕನ್ನಡಕ ವಿತರಿಸಲಾಯಿತು.

ಮುತ್ತೂಟ್ ಸ್ನೇಹಾಶ್ರಯ ಹಾಗೂ ಕಾವೇರಿ ರಕ್ತ ನಿಧಿ ವತಿಯಿಂದ ನಡೆದ ಆರೋಗ್ಯ ತಪಾಸಣೆಯಲ್ಲಿ ಬೆಂಗಳೂರು ಸ್ಪರ್ಶ ಸೂಪರ್ ಸ್ಪೆಶಾಲಿಟಿ ಆಸ್ಪತ್ರೆ, ಹೆಸರುಘಟ್ಟದ ಸಪ್ತಗಿರಿ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಆಸ್ಪತ್ರೆ, ವೈದೇಹಿ ಮೆಡಿಕಲ್ ಕಾಲೇಜು ಮತ್ತು ಆಸ್ಪತ್ರೆ, ವಾಸನ್ ಐ ಕೇರ್, ಕೆಎಲ್‌ಇ ಡೆಂಟಲ್ ಕಾಲೇಜು ವೈದ್ಯರು ಭಾಗವಹಿಸಿದ್ದರು.

ಸೋಲೂರು ಆರ್ಯ ಈಡಿಗರ ಮಠದ ವಿಖ್ಯಾತಾನಂದ ಸ್ವಾಮೀಜಿ, ಎಂ.ತಿಮ್ಮೇಗೌಡ, ಚಿನ್ನೇಗೌಡ, ಜೆ.ಪಿ. ಸುಧಾಕರ್, ಧರ್ಮವಿಜೇತ್, ಹರೀಶ್, ಶ್ರೀಕಾಂತ್, ಸಂಪತ್, ಗೋಪಾಲ್, ವೆಂಕಟೇಶ್, ದುಶ್ಯಂತ್, ಪ್ರಕಾಶ್, ಸಂತೋಷ್, ಗೋಪಿ ಭಟ್, ಶಶಾಂಕ್ ಸೇರಿದಂತೆ ಇತರರು ಇದ್ದರು.



ಮಾಗಡಿ ತಾಲ್ಲೂಕಿನ ಸೋಲೂರು ಆರ್ಯ ಈಡಿಗರ ಮಠದಲ್ಲಿ ಬುಧವಾರ ಯಲ್ಲಮ್ಮ ದೇವಿ ಜಾತ್ರಾ ಮಹೋತ್ಸವ ನಡೆಯಿತು

2,643 ಅಪಾರ್ಟ್‌ಮೆಂಟ್‌ಗಳಿಗೆ ಡಿಮ್ಯಾಂಡ್ ನೋಟಿಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಾದ್ಯಂತ 2,643 ಅಪಾರ್ಟ್‌ಮೆಂಟ್‌ಗಳು ಕಾವೇರಿ ನೀರಿನ ಹೊಸ ಸಂಪರ್ಕಕ್ಕಾಗಿ ಅರ್ಜಿ ಸಲ್ಲಿಸಿದ್ದು, ಇವುಗಳಿಗೆ ಜಲಮಂಡಳಿ ಡಿಮ್ಯಾಂಡ್ ನೋಟಿಸ್ ಜಾರಿಗೊಳಿಸಿದೆ.

ಇನ್ನೂ 1,252 ಅಪಾರ್ಟ್‌ಮೆಂಟ್‌ಗಳು ಅರ್ಜಿ ಸಲ್ಲಿಸಿಲ್ಲ. ಅಂತಹ ಅಪಾರ್ಟ್‌ಮೆಂಟ್‌ಗಳ ಪಟ್ಟಿಯನ್ನು ಜಲಮಂಡಳಿ ತಯಾರಿಸಿದೆ.

ಡಿಮ್ಯಾಂಡ್ ನೋಟಿಸ್ ನೀಡಿರುವ ಅಪಾರ್ಟ್‌ಮೆಂಟ್‌ಗಳಿಗೆ ಹಣ ಪಾವತಿಸುವಂತೆ ಸೂಚಿಸಲು, ಅರ್ಜಿ ಸಲ್ಲಿಸದಿರುವವರಿಗೆ, ಹೊಸ ಸಂಪರ್ಕ ಪಡೆಯಲು ಮಾಹಿತಿ ನೀಡುವಂತೆ ಜಲಮಂಡಳಿ ಅಧ್ಯಕ್ಷ ರಾಮ್‌ಪ್ರಸಾತ್ ಮನೋಹರ್ ಅಧಿಕಾರಿಗಳಿಗೆ ಸೂಚನೆ ನೀಡಿದ್ದಾರೆ.

ನಗರದ ಪೂರ್ವಭಾಗದ ಸೇವಾ ಠಾಣೆಗಳಿಗೆ ಬುಧವಾರ ಭೇಟಿ ನೀಡಿ, ಕಾವೇರಿ ನೀರಿಗಾಗಿ ಅರ್ಜಿ ಸಲ್ಲಿಸಿದವರಿಗೆ ಹೊಸ ಸಂಪರ್ಕದ ಪತ್ರ ವಿತರಿಸಿ, ಬೆಂಗಳೂರು ಅಪಾರ್ಟ್‌ಮೆಂಟ್ ಫೆಡರೇಷನ್ ಪದಾಧಿಕಾರಿಗಳ ಜೊತೆ ಸಭೆ ನಡೆಸಿದ ಮಾತನಾಡಿದರು.

‘ರಫ್ತಿನಲ್ಲಿ ಕರ್ನಾಟಕದ್ದೇ ಸಿಂಹಪಾಲು’

ಪ್ರಜಾವಾಣಿ ವಾರ್ತೆ



ಕಿರ್ಲೋಸ್ಕರ್ ಸಮೂಹ ಸಂಸ್ಥೆಗಳ ವಿಕ್ರಮ್ ಕಿರ್ಲೋಸ್ಕರ್ ಅವರಿಗೆ ‘ಕೈಗಾರಿಕಾ ಪಾರುಪತ್ಯ’ ಮರಣೋತ್ತರ ಪ್ರಶಸ್ತಿ ನೀಡಿ ಗೌರವಿಸಲಾಯಿತು. ವಿಕ್ರಮ್ ಅವರ ಪತ್ನಿ ಗೀತಾಂಜಲಿ ಕಿರ್ಲೋಸ್ಕರ್ ಪ್ರಶಸ್ತಿ ಸ್ವೀಕರಿಸಿದರು. ಜತೆಗೆ ಇನ್ನೂ 14 ಉದ್ಯಮಗಳಿಗೆ ‘ಇನ್ವೆಸ್ಟ್ ಕರ್ನಾಟಕ’ ಪ್ರಶಸ್ತಿ ಪ್ರದಾನ ಮಾಡಲಾಯಿತು

ಬೆಂಗಳೂರು: ‘ಭಾರತದ ವಾರ್ಷಿಕ ರಫ್ತು ಮೊತ್ತ ₹70 ಲಕ್ಷ ಕೋಟಿಯ ಗುರಿ ಮುಟ್ಟಿದೆ. ಅದರಲ್ಲಿ ಕರ್ನಾಟಕದ್ದೇ ಸಿಂಹಪಾಲು. ಆರ್ಥಿಕ ಅಭಿವೃದ್ಧಿಯಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಒಟ್ಟಿಗೇ ಸಾಗಬೇಕಿದೆ’ ಎಂದು ಕೇಂದ್ರ ವಾಣಿಜ್ಯ ಸಚಿವ ಪೀಯೂಷ್ ಗೋಯಲ್ ಹೇಳಿದರು.

ರಾಜ್ಯದ ಅಭಿವೃದ್ಧಿಯಲ್ಲಿ ಭಾಗಿಯಾದ ಉದ್ಯಮಿಗಳಿಗೆ ‘ಇನ್ವೆಸ್ಟ್ ಕರ್ನಾಟಕ’ ಪ್ರಶಸ್ತಿ ಪ್ರದಾನ ಮಾಡಿ ಮಾತನಾಡಿದ ಅವರು, ‘ಕೇಂದ್ರ ಸರ್ಕಾರವು ನೂರಾರು ಅಭಿವೃದ್ಧಿ ಯೋಜನೆಗಳನ್ನು ಕೈಗೆತ್ತಿಕೊಂಡಿದೆ. ಅವುಗಳ ಎಲ್ಲ ಪ್ರಯೋಜನ ಕರ್ನಾಟಕಕ್ಕೂ ದೊರೆಯಲಿದೆ’ ಎಂದರು.

‘ದೇಶದ ಆರ್ಥಿಕ ಅಭಿವೃದ್ಧಿಯಲ್ಲಿ ಮಹತ್ವದ ಪಾತ್ರ ವಹಿಸಿರುವ ಕರ್ನಾಟಕಕ್ಕೆ ಬಂಡವಾಳ ಆಕರ್ಷಣೆ, ಮೂಲಸೌಕರ್ಯ ಅಭಿವೃದ್ಧಿಗೆ ಅಗತ್ಯವಿರುವ ನೆರವನ್ನು ಕೇಂದ್ರ ನೀಡಲಿದೆ. ರಾಜ್ಯದ ಕೈಗಾರಿಕಾ ನೀತಿಗಳು ಉದ್ಯಮಸ್ನೇಹಿಯಾಗಿದ್ದು, ಇತರ ರಾಜ್ಯಗಳಿಗೆ ಮಾದರಿಯಾಗಿವೆ’ ಎಂದರು.

ಕೈಗಾರಿಕಾ ಸಚಿವ ಎಂ.ಬಿ.ಪಾಟೀಲ, ‘ಕೈಗಾರಿಕೆಗಳ ಸಮಗ್ರ ಅಭಿವೃದ್ಧಿಯನ್ನು ಗಮನದಲ್ಲಿ ಇರಿಸಿಕೊಂಡು ಕೈಗಾರಿಕಾ ನೀತಿಯನ್ನು ರೂಪಿಸಲಾಗಿದೆ. ಇದರಿಂದ ರಾಜ್ಯದ ಎಲ್ಲೆಡೆ ಕೈಗಾರಿಕೆಗಳ ಸ್ಥಾಪನೆ ಮತ್ತು ಅಭಿವೃದ್ಧಿ ಸಾಧ್ಯವಾಗಲಿದೆ’ ಎಂದರು.

ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ‘ಕರ್ನಾಟಕದ ಆರ್ಥಿಕ ಅಭಿವೃದ್ಧಿಯಲ್ಲಿ ಬೆಂಗಳೂರಿಗೆ ಮಹತ್ವದ ಸ್ಥಾನವಿದೆ. ಆದರೆ ಇಲ್ಲಿನ ಸಂಚಾರ ದಟ್ಟಣೆ ದೊಡ್ಡ ಸಮಸ್ಯೆ ಎಂಬ ಮಾತು ಇದ್ದೇ ಇದೆ. ಅದನ್ನು ನಿವಾರಿಸಲು ₹1 ಲಕ್ಷ ಕೋಟಿ ವಿನಿಯೋಗಿಸುತ್ತೇವೆ’ ಎಂದರು.

ಉತ್ಸಾಹ ತುಂಬಿದ ಸಚಿವ ಪಾಟೀಲರ ಚಟುವಟಿಕೆ

ಪ್ರಜಾವಾಣಿ ವಾರ್ತೆ



ಉದ್ಯಮಿ ನಿಖಿಲ್ ಕಾಮತ್ ಜೊತೆ ಸಚಿವ ಎಂ.ಬಿ. ಪಾಟೀಲ

- ದೇಸಿ ತಂತ್ರಜ್ಞಾನಕ್ಕೆ ಮಾರುಹೋದ ವಿದೇಶಿ ಪ್ರತಿನಿಧಿಗಳು
- ಯಕ್ಷಗಾನ ಕಲಾವಿದರ ಜತೆ ಫೋಟೊಗೆ ಮುಗಿಬಿದ್ದ ಜನ
- ಎಲ್ಲರನ್ನೂ ಆಕರ್ಷಿಸಿದ ಲಘು ವಿಮಾನ, ಡ್ರೋನ್
- ಗಮನ ಸೆಳೆದ ವಿದ್ಯುತ್ ಚಾಲಿತ ಕಾರು, ಮೆಟ್ರೊ ಮಾದರಿ

ಬೆಂಗಳೂರು: ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ ಅವರ ಪಾದರಸದಂತಹ ಚಟುವಟಿಕೆ ಜಾಗತಿಕ ಹೂಡಿಕೆದಾರರ ಸಮಾವೇಶಕ್ಕೆ ಹೆಚ್ಚಿನ ಉತ್ಸಾಹ ತುಂಬಿತು.

ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಜತೆಗೂಡಿ ‘ನಾವೀನ್ಯ ಪ್ರದರ್ಶನ’ ಉದ್ಘಾಟಿಸಿದ ಅವರು, ಪ್ರತಿ ಮಳಿಗೆಗೂ ಭೇಟಿ ನೀಡಿ, ಹೊಸ ಹೊಸ ಸಂಶೋಧನೆಗಳು ಮತ್ತು ತಂತ್ರಜ್ಞಾನದ ಆವಿಷ್ಕಾರಗಳ ಬಗ್ಗೆ ಕುತೂಹಲದಿಂದ ಮಾಹಿತಿ ಪಡೆದರು. ಸಮಾವೇಶದ ಭಾಗವಾಗಿ ವಿವಿಧ ಸಭಾಂಗಣದಲ್ಲಿ ನಡೆಯುತ್ತಿದ್ದ ಗೋಷ್ಠಿಗಳ ಕಡೆಗೆ ಸಾಗಿದ ಅವರು, ಅಲ್ಲಿ ಉದ್ಯಮಿಗಳು, ವಿಷಯ ತಜ್ಞರ ಜತೆ ಸಮಾಲೋಚನೆ ನಡೆಸಿದರು.

ಪ್ರತಿಷ್ಠಿತ ವೈದ್ಯಕೀಯ ಸಭೆಗಳೊಂದಿಗೆ ನಡೆದ ದುಂಡು ಮೇಜಿನ ಸಭೆಯಲ್ಲಿ ‘ಕ್ವಿನ್‌ಸಿಟಿ’ಯ ಮಹತ್ವ ಕುರಿತು ವಿವರಿಸಿದರು. ‘ವರ್ಲ್ಡ್ ಎಕನಾಮಿಕ್ ಫೋರಂ, ಸ್ವಿಸ್ ಇಂಡಿಯಾ ಚೇಂಬರ್ ಆಫ್ ಕಾಮರ್ಸ್ ಸಂಸ್ಥೆಗಳ ಜತೆಗಿನ ಒಪ್ಪಂದಗಳನ್ನು ಅಂತಿಮಗೊಳಿಸಿದರು. ವಿವಿಧ ದೇಶಗಳ ರಾಯಭಾರಿಗಳು, ಉನ್ನತ ಮಟ್ಟದ ಪ್ರತಿನಿಧಿಗಳು, ಗಣ್ಯ ಉದ್ಯಮಿಗಳ ಜತೆ ಮಾತುಕತೆ ನಡೆಸಿ, ರಾಜ್ಯದ ಕೈಗಾರಿಕಾ ನೀತಿ, ಪ್ರೋತ್ಸಾಹ, ಉದ್ಯಮಸ್ನೇಹಿ ನಿಯಮಗಳನ್ನು ಮನದಟ್ಟು ಮಾಡಿಕೊಟ್ಟರು. ಬಹರೇನ್, ಜಪಾನ್ ನಿಯೋಗಗಳನ್ನು ಭೇಟಿ ಮಾಡಿದರು. ಸಚಿವರಾದ ಸತೀಶ ಜಾರಕಿಹೊಳಿ, ಕೆ.ಜೆ. ಜಾರ್ಜ್, ದಿನೇಶ್ ಗುಂಡೂರಾವ್, ಪ್ರಿಯಾಂಕ್ ಖರ್ಗೆ, ಡಾ.ಶರಣಪ್ರಕಾಶ ಪಾಟೀಲ, ಎನ್.ಎಸ್. ಬೋಸರಾಜ್ ಸಚಿವರಿಗೆ ಜತೆಯಾದರು. ಕೈಗಾರಿಕಾ ಇಲಾಖೆ ಪ್ರಧಾನ ಕಾರ್ಯದರ್ಶಿ ಸೆಲ್ವಕುಮಾರ್, ಆಯುಕ್ತೆ ಗುಂಜನ್ ಕೃಷ್ಣ ಉಪಸ್ಥಿತರಿದ್ದರು.

ಬಂತು ‘ಹಾರಿಜಾಂಟಲ್ ಲಿಫ್ಟ್’

• ಆರ್. ಮಂಜುನಾಥ್



‘ಇನ್ವೆಸ್ಟ್ ಕರ್ನಾಟಕ’ದಲ್ಲಿ ಪ್ರದರ್ಶನವಾಗಿರುವ ‘ನ್ಯೂವ್ ಕಮ್ಯೂಟ್’ ವಿದ್ಯುತ್ ಚಾಲಿತ ವಾಹನ ಪ್ರಜಾವಾಣಿ ಚಿತ್ರ ಪ್ರಶಾಂತ್ ಎಚ್‌.ಜಿ.

ಬೆಂಗಳೂರು: ಗಾಜಿನ ದ್ವಾರದ ಮುಂದೆ ನಿಂತರೆ ಬಾಗಿಲು ತಂತಾನೆ ತೆರೆದುಕೊಳ್ಳುತ್ತದೆ, ವಾಹನ ಸ್ವಾಗತ ಕೋರಿ ಒಳಗೆ ಕರೆದುಕೊಳ್ಳುತ್ತದೆ. ಯಾವ ಪ್ರದೇಶಕ್ಕೆ ಹೋಗಬೇಕು ಎಂಬುದನ್ನು ಮೆನುವಿನಲ್ಲಿ ಆಯ್ಕೆ ಮಾಡಿಕೊಂಡರೆ, ಅಲ್ಲಿಗೆ ಕರೆದೊಯ್ದು ಬಿಡುತ್ತದೆ. ಬಹುಮಹಡಿಯಲ್ಲಿ ಲಿಫ್ಟ್ ಬಳಸಿದಂತೆ, ರಸ್ತೆಯಲ್ಲಿ ಈ ವಾಹನವನ್ನು ಬಳಸಬಹುದು...

ಇದರ ಹೆಸರು ‘ನ್ಯೂವ್ ಕಮ್ಯೂಟ್’. ಮೆಟ್ರೊದಂತೆ ತನಗೆ ಸೀಮಿತವಾದ ಹಳಿಯಲ್ಲಿ, ಟೈರ್‌ಗಳಲ್ಲಿ ಸಂಚರಿಸುವ ಈ ವಾಹನವನ್ನು ‘ಹಾರಿಜಾಂಟಲ್ ಲಿಫ್ಟ್’ ಎಂದೂ ಕರೆಯಲಾಗುತ್ತದೆ. ಬಹುಮಹಡಿಗೆ ಹೋಗುವ ಲಿಫ್ಟ್ ಮೇಲಕ್ಕೆ ಹೋದರೆ, ಇದು ರಸ್ತೆಯಲ್ಲಿ ಸಮತಲವಾಗಿ ಸಾಗುತ್ತದೆ.

‘ಇನ್ವೆಸ್ಟ್ ಕರ್ನಾಟಕ’ದಲ್ಲಿ ಪ್ರದರ್ಶನವಾಗಿರುವ ‘ನ್ಯೂವ್ ಕಮ್ಯೂಟ್’ ವಿದ್ಯುತ್ ಚಾಲಿತ ವಾಹನ. ಸುಮಾರು 25 ಕಿ.ಮೀ ವೇಗದಲ್ಲಿ ಸಾಗುವ, ಸುಮಾರು ಮೂರು ಕಿ.ಮೀ ಸಂಚರಿಸಲು ಅತ್ಯುತ್ತಮ ‘ಸಂಪರ್ಕ ವಾಹನ’. ವಿಶ್ವವಿದ್ಯಾಲಯ, ಕಂಪನಿಗಳ ಕ್ಯಾಂಪಸ್, ರೆಸಾರ್ಟ್‌ಗಳಲ್ಲಿ ಬಳಸುವ ವಿದ್ಯುತ್ ಚಾಲಿತ ವಾಹನಗಳಂತೆ ಕಾರ್ಯ ನಿರ್ವಹಿಸುತ್ತದೆ. ಇದನ್ನು ನೋಡಿದಾಗ, ಕೇಬಲ್ ಕಾರ್, ಮೆಟ್ರೊದ ಚಿಕ್ಕ ಬೋಗಿ ಎಂದೆನಿಸುತ್ತದೆ. ಆದರೆ, ಇದು ಸ್ವಯಂಚಾಲಿತ ವಾಹನ.

ಏಳರಿಂದ ಎಂಟು ಜನರು ಅಥವಾ 10 ರಿಂದ 12 ಜನರು ಪ್ರಯಾಣಿಸುವ ಸಾಮರ್ಥ್ಯವನ್ನು ಹೊಂದಿದೆ. ನೆಲದಿಂದ ಸುಮಾರು ಎರಡು ಅಡಿಯಷ್ಟು ಎತ್ತರದಲ್ಲಿ ಸ್ಥಾಪಿಸುವ ಹಳಿಯಲ್ಲಿ ಸಂಚರಿಸುವ ‘ನ್ಯೂವ್ ಕಮ್ಯೂಟ್’ ಹವಾನಿಯಂತ್ರಿತ. ಸಿಸಿ ಟಿವಿ ಕ್ಯಾಮೆರಾಗಳನ್ನೂ ಒಳಗೊಂಡಿದ್ದು, ನಿಯಂತ್ರಣ ಕಚೇರಿಗೆ ನೇರವಾದ ದೃಶ್ಯಗಳನ್ನೂ ರವಾನಿಸುತ್ತದೆ. ಚಾಲಕರಹಿತವಾಗಿ, ಪ್ರಯಾಣಿಕರು ವಾಹನದಲ್ಲಿ ನಮೂದಿಸಿರುವ ಸ್ಥಳಕ್ಕೆ ತಲುಪುತ್ತದೆ. ಎಷ್ಟು ವೇಗದಲ್ಲಿ ಹೋಗುತ್ತಿದೆ, ಹೊರಗಿನ ತಾಪಮಾನವೆಷ್ಟು ಎಂಬಂತಹ ಮಾಹಿತಿಯನ್ನೂ ಪರದೆ ಹಾಗೂ ಧ್ವನಿ ಮೂಲಕ ನೀಡುತ್ತದೆ. ‘ನ್ಯೂವ್ ಕಮ್ಯೂಟ್’ ವಾಹನವನ್ನು ಬೆಂಗಳೂರಿನ ದೇವನಹಳ್ಳಿಯಿರುವ ಸೆಲ್‌ಪ್ರೊ ಸಂಸ್ಥೆಯ ರಾಜ್ಯದ ಯುವಕರು ನಿರ್ಮಿಸಿದ್ದಾರೆ.

‘ಆರು ದಿನಗಳಲ್ಲಿ ಇಲ್ಲಿ ಹಳಿಯನ್ನು ನಿರ್ಮಿಸಿ, ‘ನ್ಯೂವ್ ಕಮ್ಯೂಟ್’ ವಾಹನ ಸಂಚರಿಸುವಂತೆ ಮಾಡಿದ್ದೇವೆ. ಇದು ವಿದ್ಯುತ್ ಚಾಲಿತ ವಾಹನವಾಗಿದ್ದು, ಪ್ರತಿ ಕಿ.ಮೀ.ಗೆ ₹1 ನಿರ್ವಹಣಾ ವೆಚ್ಚವಾಗಲಿದೆ. ವಾಹನ ಹಾಗೂ ಹಳಿ ಸ್ಥಾಪನಾ ವೆಚ್ಚ ಒಂದು ಬಾರಿಯದ್ದಾಗಿದೆ. ಮೆಟ್ರೊದಂತಹ ವ್ಯವಸ್ಥೆಯನ್ನೇ ಇಲ್ಲೂ ಅಳವಡಿಸಿಕೊಳ್ಳಲಾಗಿದೆ. ಆದರೆ, ಜನರು ತಾವು ತಲುಪಬೇಕಾದ ಸ್ಥಳಕ್ಕೆ, ಲಿಫ್ಟ್‌ನಲ್ಲಿ ಆಯ್ಕೆ ವ್ಯವಸ್ಥೆಯ ಸೌಲಭ್ಯ ನೀಡಲಾಗಿದೆ’ ಎಂದು ಸೆಲ್‌ಪ್ರೊ ಸಂಸ್ಥೆಯ ಯೋಜನಾ ವ್ಯವಸ್ಥಾಪಕ ಎಂ. ಪ್ರಣಂ ಮಾಹಿತಿ ನೀಡಿದರು.

‘ವಿಮಾನ ನಿಲ್ದಾಣ, ದೊಡ್ಡ ಟೌನ್‌ಶಿಪ್, ಕ್ಯಾಂಪಸ್, ರೆಸಾರ್ಟ್, ಥೀಮ್ ಪಾರ್ಕ್‌ಗಳಲ್ಲಿ ಅಳವಡಿಸಬಹುದು. ಮೆಟ್ರೊದಿಂದ ಬಸ್‌ನಿಲ್ದಾಣಗಳಿಗೆ ಹೋಗಲು ಇದನ್ನು ಸ್ಥಾಪನೆ ಮಾಡಬಹುದು’ ಎಂದು ಹೇಳಿದರು.

ನೋಡುಗರ ಸೆಳೆಯುತ್ತಿರುವ ಹೈಬ್ರಿಡ್ ವಿಮಾನ

ಏರ್‌ಟ್ಯಾಕ್ಸಿಗೆ ‘ಶೂನ್ಯ’ ಸ್ಪರ್ಶ

160 ಕಿ.ಮೀ.	250 ಕಿ.ಮೀ./ಗಂಟೆ	₹12.50 ಕೋಟಿ	20-30 ಕಿ.ಮೀ.
ಗರಿಷ್ಠ ಹಾರಾಟ ದೂರ	ಗರಿಷ್ಠ ಹಾರಾಟ ವೇಗ	ಅಂದಾಜು ಬೆಲೆ	ದೂರದ ಸ್ಥಳಗಳಿಗೆ ಹೋಗಿಬರಲು ಬಳಕೆ



‘ಶೂನ್ಯ’ ಹೈಬ್ರಿಡ್ ವಿಮಾನ ಚಿತ್ರ: ಸರಳಾ ಏವಿಯೇಷನ್

• ಒಬ್ಬ ಪೈಲಟ್, 6 ಪ್ರಯಾಣಿಕರ ಅವತರಣಿಕೆ • ಒಬ್ಬ ಪೈಲಟ್, 4 ಪ್ರಯಾಣಿಕರ ಅವತರಣಿಕೆ • ಹೆಲಿಕಾಪ್ಟರ್‌ನಂತೆ ಟೇಕ್‌ಆಫ್ ಮತ್ತು ಲ್ಯಾಂಡ್ ಆಗುವ ಸಾಮರ್ಥ್ಯ • ವಿಮಾನದಂತೆ ವೇಗದ ಹಾರಾಟ • ರನ್‌ವೇ ಅವಶ್ಯ ಇಲ್ಲ, ಕಾರ್ಯಾಚರಣೆಗೆ ಹೆಲಿಪ್ಯಾಡ್ ಸಾಕು

• ಜಯಸಿಂಹ ಆರ್.

ಮುಖ್ಯಾಂಶಗಳು

- ತಯಾರಿಕೆಗೆ ಸಿದ್ಧವಿರುವ ಮಾದರಿಯ ಪ್ರದರ್ಶನ
- 2026ರ ಆರಂಭದಲ್ಲಿ ಪ್ರಾಯೋಗಿಕ ಹಾರಾಟ
- 2028ಕ್ಕೆ ತಯಾರಿಕೆ ಮತ್ತು ಪೂರೈಕೆ ಆರಂಭ

ಬೆಂಗಳೂರು: ಏರ್‌ಟ್ಯಾಕ್ಸಿ ಸೇವೆಗೆ ಆಧುನಿಕ ಸ್ಪರ್ಶ ನೀಡಲು ಹೊರಟಿರುವ ಬೆಂಗಳೂರಿನ ನವೋದ್ಯಮ ‘ಸರಳಾ ಏವಿಯೇಷನ್’ ಎಲ್ಲರ ಕಣ್ಸೆಳೆಯುವಂಥ, ಇತ್ತ ವಿಮಾನವೂ ಅಲ್ಲದ, ಅತ್ತ ಹೆಲಿಕಾಪ್ಟರ್ ಸಹ ಅಲ್ಲದ ಭಿನ್ನ ವೈಮಾನಿಕ ವಾಹನವನ್ನು ಅಭಿವೃದ್ಧಿಪಡಿಸಿದೆ.

ವಿಮಾನ ಮತ್ತು ಹೆಲಿಕಾಪ್ಟರ್‌ನ ಕಾರ್ಯಾಚರಣೆ ತತ್ವಗಳ ಮಿಶ್ರಣದಂತಿರುವ ಈ ಅತ್ಯಾಕರ್ಷಕ ವೈಮಾನಿಕ ವಾಹನಕ್ಕೆ ಕಂಪನಿಯು ‘ಶೂನ್ಯ’ ಎಂದು ಹೆಸರಿಟ್ಟಿದೆ. ಸಂಪೂರ್ಣ ವಿದ್ಯುತ್ ಚಾಲಿತವಾಗಿರುವ ‘ಶೂನ್ಯ’ದ ಪ್ರಾಯೋಗಿಕ ಹಾರಾಟಕ್ಕೆ ಇನ್ನೂ ವರ್ಷ ಒಪ್ಪತ್ತು ಕಾಯಬೇಕಿದೆ.

ಭವಿಷ್ಯತ್ತಿನ ಕಾಲದಿಂದ ವರ್ತಮಾನಕ್ಕೆ ಬಂದಿರುವ ವಿಮಾನದಂತೆ ಕಾಣುವ ‘ಶೂನ್ಯ’ ಡೂಮ್ಸ್‌ಡೇ, ಸ್ಟಾರ್ ಟ್ರೆಕ್ ಮೊದಲಾದ ಹಾಲಿವುಡ್ ಸಿನಿಮಾಗಳಲ್ಲಿನ ವೈಮಾನಿಕ ನೌಕೆಗಳನ್ನು ನೆನಪಿಸುತ್ತದೆ. ಐಷಾರಾಮಿ ಕಾರುಗಳಲ್ಲಿ ಇರುವಂತೆ ಸನ್‌ರೂಫ್ ಅನ್ನೂ ಹೊಂದಿರುವ ವಿನ್ಯಾಸವು, ಅದರ ಅಂದವನ್ನು ಹೆಚ್ಚಿಸಿದೆ. ಹೂಡಿಕೆದಾರರ ಸಮಾವೇಶದ ಪ್ರದರ್ಶನ ಕೇಂದ್ರದಲ್ಲಿ ಸರಳಾ ಏವಿಯೇಷನ್‌ನ ಮಳಿಗೆಯತ್ತ ಅತಿಹೆಚ್ಚು ಜನರನ್ನು ‘ಶೂನ್ಯ’ ಸೆಳೆಯುತ್ತಿದೆ.

‘ಅತ್ಯಂತ ದಟ್ಟಣೆಯ ನಗರಗಳಿಂದ ವಿಮಾನ ನಿಲ್ದಾಣಗಳಿಗೆ, ಉಪನಗರಗಳಿಗೆ ಏರ್‌ಟ್ಯಾಕ್ಸಿ ಸೇವೆ ಒದಗಿಸುವಲ್ಲಿ ಹೆಲಿಕಾಪ್ಟರ್ ಮತ್ತು ಸಣ್ಣ ವಿಮಾನಗಳಿಗಿಂತ ವಿಶಿಷ್ಟವಾದ ವಿಮಾನ ರೂಪಿಸುವುದು ನಮ್ಮ ಉದ್ದೇಶವಾಗಿತ್ತು. ಅದನ್ನು ಸಾಧಿಸುವಲ್ಲಿ ಯಶಸ್ವಿಯಾಗಿದ್ದೇವೆ’ ಎನ್ನುತ್ತಾರೆ ಸರಳಾ ಏವಿಯೇಷನ್‌ನ ಸಿಇಒ ಆ್ಯಡ್ರಿಯನ್ ಷಮಿಡ್ಟ್.

‘ಒಮ್ಮೆ ಚಾರ್ಜ್ ಮಾಡಿದರೆ ಗರಿಷ್ಠ 160 ಕಿ.ಮೀ. ದೂರ ಕ್ರಮಿಸುವ ಸಾಮರ್ಥ್ಯ ಇದಕ್ಕಿದೆ. ಬೆಂಗಳೂರು–ಮೈಸೂರು, ಮುಂಬೈ–ಪುಣೆ, ದೆಹಲಿ–ಗುರುಗ್ರಾಮ–ನೋಯ್ಡಾ ಮಧ್ಯೆ ಏರ್‌ಟ್ಯಾಕ್ಸಿ ಸೇವೆ ಒದಗಿಸಲು ‘ಶೂನ್ಯ’ವನ್ನು ಬಳಕೆ ಮಾಡಿಕೊಳ್ಳಬಹುದು. ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣವನ್ನು ನೆಲೆಯಾಗಿಸಿಕೊಂಡು ಬೆಂಗಳೂರಿನಲ್ಲಿ ಸೇವೆ ಆರಂಭಿಸಲು ಮಾತುಕತೆ ನಡೆಯುತ್ತಿದೆ’ ಎಂದು ಅವರು ಮಾಹಿತಿ ನೀಡಿದರು.



ಶೂನ್ಯ ಹೈಬ್ರಿಡ್ ವಿಮಾನದಲ್ಲಿ ಕೂತು ನೋಡುಗರತ್ತ ಕೈಬೀಸಿದ ಕೈಗಾರಿಕಾ ಸಚಿವ ಎಂ.ಬಿ.ಪಾಟೀಲ. ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಅಧಿಕಾರಿಗಳು ವಿಮಾನದಲ್ಲಿ ಕೂತು ಪ್ರಾತ್ಯಕ್ಷಿಕೆ ನೋಡಿದರು ಪ್ರಜಾವಾಣಿ ಚಿತ್ರ/ ರಂಜು ಪಿ

‘ಕೆಲಸಗಾರರು ಇಲ್ಲವೆಂಬುದು ಮಿಥ್ಯೆ’

ಪ್ರಜಾವಾಣಿ ವಾರ್ತೆ



ಎರಡನೇ ಮತ್ತು ಮೂರನೇ ಹಂತದ ನಗರಗಳಲ್ಲಿ ಹೂಡಿಕೆ ಅವಕಾಶಗಳ ಕುರಿತ ಸಂವಾದದಲ್ಲಿ ಇಂಕ್‌ಟಾಕ್ಸ್ ಸಿಇಒ ಲಕ್ಷ್ಮೀ ಪ್ರತೂರಿ, ಮುಖ್ಯಮಂತ್ರಿಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಎಲ್.ಎ.ಅತೀಕ್, ನೆಕ್ಸ್ಟ್‌ವೆಲ್ತ್ ಸಿಇಒ ಮೈಥಿಲಿ ರಮೇಶ್ ಮತ್ತು ಕಿರಾಣಾ ಪ್ರೊ ಸಂಸ್ಥಾಪಕ ದೀಪಕ್ ರವೀಂದ್ರನ್ ಚರ್ಚಿಸಿದರು ಪ್ರಜಾವಾಣಿ ಚಿತ್ರ/ರಂಜು ಪಿ

ಬೆಂಗಳೂರು: ‘ಎರಡನೇ ಮತ್ತು ಮೂರನೇ ಹಂತದ ನಗರಗಳಲ್ಲಿ ಸಮರ್ಥ ಮಾನವ ಸಂಪನ್ಮೂಲ, ಮೂಲಸೌಕರ್ಯ ಸಿಗುವುದೇ ಇಲ್ಲ ಎಂದು ಬಹುತೇಕ ಉದ್ಯಮಿಗಳು ಗೊಣಗುತ್ತಾರೆ. ಆದರೆ ಅದು ಮಿಥ್ಯೆ’ ಎಂದು ನೆಕ್ಸ್ಟ್‌ವೆಲ್ತ್ ಎಂಟರ್‌ಪ್ರೆನರ್ಸ್ ಲಿಮಿಟೆಡ್‌ನ ಸಿಇಒ ಮೈಥಿಲಿ ರಮೇಶ್ ಅಭಿಪ್ರಾಯಪಟ್ಟರು.

ಜಾಗತಿಕ ಬಂಡವಾಳ ಹೂಡಿಕೆದಾರರ ಸಮಾವೇಶದ ಎರಡನೇ ದಿನವಾದ ಬುಧವಾರ ಆಯೋಜಿಸಲಾಗಿದ್ದ ‘ಭಾರತದ ಎರಡನೇ ಮತ್ತು ಮೂರನೇ ಹಂತದ ನಗರಗಳಲ್ಲಿನ ಅವಕಾಶಗಳು’ ವಿಚಾರಗೋಷ್ಠಿಯಲ್ಲಿ ಅವರು ಮಾತನಾಡಿದರು. ‘ಮೆಟ್ರೊ ನಗರಗಳಾಚೆಗೂ ಉದ್ಯಮಗಳನ್ನು ಸ್ಥಾಪನೆ ಮಾಡಿದರೆ, ಅಲ್ಲಿನ ಅವಕಾಶಗಳು ತೆರೆದುಕೊಳ್ಳುತ್ತವೆ’ ಎಂದರು.

ಕಿರಾಣಾ ಪ್ರೊ ಸಂಸ್ಥಾಪಕ ದೀಪಕ್ ರವೀಂದ್ರನ್, ‘ಬೆಂಗಳೂರು, ಕೊಚ್ಚಿಗಳಂತಹ ಮೆಟ್ರೊ ನಗರಗಳಲ್ಲಿ ನವೋದ್ಯಮಗಳ ಬಂಡವಾಳ ಕ್ರೋಡೀಕರಣಕ್ಕೆ ವಿಪರೀತ ಪೈಪೋಟಿ ಇದೆ. ಆದರೆ ಸಣ್ಣ ನಗರಗಳಲ್ಲಿ ಅಂತಹ ಪೈಪೋಟಿ ಕಡಿಮೆ ಮತ್ತು ಜನರನ್ನು ತಲುಪುವುದು ಸುಲಭ. ನವೋದ್ಯಮಗಳು ಮತ್ತು ಹೊಸ ಸ್ವರೂಪದ ಯೋಜನೆಗಳ ಪ್ರಗತಿ ನಿಧಾನ ಗತಿಯಲ್ಲಿದ್ದರೂ, ಯಶಸ್ಸಿನ ಸಾಧ್ಯತೆ ಹೆಚ್ಚು’ ಎಂದರು.

ಮುಖ್ಯಮಂತ್ರಿಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಎಲ್.ಕೆ.ಅತೀಕ್, ‘ರಾಜ್ಯದ ಎರಡನೇ ಮತ್ತು ಮೂರನೇ ಹಂತದ ನಗರಗಳಲ್ಲಿ ಸಮರ್ಥ ಮಾನವ ಸಂಪನ್ಮೂಲ, ಉತ್ತಮ ಮೂಲಸೌಕರ್ಯ ಲಭ್ಯವಿದೆ. ಬೆಂಗಳೂರಿನಾಚೆಗೂ ಉದ್ಯಮಗಳನ್ನು ವಿಸ್ತರಿಸದೇ ಹೋದರೆ, ಆ ಸಂಪನ್ಮೂಲ ವ್ಯರ್ಥವಾಗುತ್ತದೆ. ಹೀಗಾಗಿಯೇ ಅಂತಹ ನಗರಗಳಲ್ಲಿ ಉದ್ಯಮಗಳ ಸ್ಥಾಪನೆಗೆ ರಾಜ್ಯ ಸರ್ಕಾರವು ಹೆಚ್ಚು ಉತ್ತೇಜನ ನೀಡುತ್ತಿದೆ’ ಎಂದರು.

‘ನಾವೀನ್ಯವೇ ಶಕ್ತಿ’

‘ಮಾರುಕಟ್ಟೆಯಲ್ಲಿ ಈಗಾಗಲೇ ಪ್ರಬಲ ಸ್ಥಾನ ಹೊಂದಿರುವ ಕಂಪನಿ ಮತ್ತು ಅದರ ಉತ್ಪನ್ನಗಳಿಗೆ ಪ್ರಬಲ ಪೈಪೋಟಿ ನೀಡುವುದಾದರೆ, ನಮ್ಮ ಯೋಚನೆ ಮತ್ತು ಉತ್ಪನ್ನ ಎರಡೂ ನಾವೀನ್ಯದಿಂದ ಕೂಡಿರಬೇಕು’ ಎಂದು ನಥಿಂಗ್ ಸ್ಮಾರ್ಟ್‌ಫೋನ್ ಕಂಪನಿಯ ಸಹ ಸಂಸ್ಥಾಪಕ ಆಕಿಸ್ ಇವಾನ್‌ಗೆಲ್ಡಿಸ್ ಅಭಿಪ್ರಾಯಪಟ್ಟರು.

‘ಯಾವುದೇ ಉತ್ಪನ್ನಕ್ಕೆ ನಮ್ಮ ಉತ್ಪನ್ನ ಪರ್ಯಾಯ ಎಂದು ಬಿಂಬಿಸಿದರೆ, ಅದರ ಮಾರುಕಟ್ಟೆ ಸೀಮಿತವಾಗುತ್ತದೆ. ಬದಲಿಗೆ ನಮ್ಮ ಉತ್ಪನ್ನ ವಿಶಿಷ್ಟವಾದುದು. ಅದು ಯಾವುದಕ್ಕೂ ಪರ್ಯಾಯವಲ್ಲ, ಅದಕ್ಕೆ ಪರ್ಯಾಯವೂ ಇಲ್ಲ ಎಂಬಂತೆ ಅದನ್ನು ಅಭಿವೃದ್ಧಿ ಮಾಡಿರಬೇಕು’ ಎಂದರು.

ಹಸಿರು ಇಂಧನ ಉತ್ಪಾದನೆಗೆ ಒತ್ತು

• ಕೆ.ಎಚ್. ಓಬಳೇಶ್



ಅರ್ಥಶಾಸ್ತ್ರಜ್ಞ ಸೈಮನ್ ಲಾಂಗ್, ಸಿಸ್ಕೊ ಇಂಡಿಯಾ ಅಧ್ಯಕ್ಷೆ ಡೈಸಿ ಚಿತ್ತಿಲಪಿಲ್ಲಿ, ಐಬಿಎಂ ಕನ್ಸಲ್ಟಿಂಗ್‌ನ ಪಾಲುದಾರ ರಾಮಿ ಅಹೋಲಾ, ಇಂಟರ್‌ನ್ಯಾಷನಲ್ ಕೌನ್ಸಿಲ್ ಫಾರ್ ಸರ್ಕ್ಯುಲರ್ ಎಕಾನಮಿಯ ವ್ಯವಸ್ಥಾಪಕ ನಿರ್ದೇಶಕಿ ಶಾಲಿನಿ ಗೋಯಲ್ ಭಲ್ಲಾ ಮತ್ತು ಗೋದ್ರೇಜ್ ಆಗ್ರೋವೆಟ್ ಕಂಪನಿಯ ಕಾರ್ಯ ನಿರ್ವಾಹಕ ನಿರ್ದೇಶಕ ಬುರ್ಜಿಸ್ ಗೋದ್ರೇಜ್ ಸಮಾಲೋಚನೆ

ಬೆಂಗಳೂರು: ‘ಕೇಂದ್ರ ಸರ್ಕಾರವು 2030ರೊಳಗೆ 500 ಗಿಗಾವಾಟ್‌ನಷ್ಟು ನವೀಕರಿಸಬಹುದಾದ ಇಂಧನ ಉತ್ಪಾದಿಸುವ ಗುರಿ ಹೊಂದಿದೆ. ಇದಕ್ಕೆ ಪೂರಕವಾಗಿ ಪ್ರತಿ ವಲಯದಲ್ಲೂ ಹಸಿರು ಇಂಧನ ಬಳಕೆಗೆ ಒತ್ತು ನೀಡಿದೆ’ ಎಂದು ಇಂಟರ್‌ನ್ಯಾಷನಲ್ ಕೌನ್ಸಿಲ್ ಫಾರ್ ಸರ್ಕ್ಯುಲರ್ ಎಕಾನಮಿಯ (ಐಸಿಸಿಇ) ವ್ಯವಸ್ಥಾಪಕ ನಿರ್ದೇಶಕಿ ಶಾಲಿನಿ ಗೋಯಲ್ ಭಲ್ಲಾ ಹೇಳಿದರು.

ಜಾಗತಿಕ ಹೂಡಿಕೆದಾರರ ಸಮಾವೇಶದ ಅಂಗವಾಗಿ ‘ಸುಸ್ಥಿರ ತಯಾರಿಕೆ-ಜಾಗತಿಕ ಮಟ್ಟದಲ್ಲಿ ಹಸಿರು ಇಂಧನ ಉತ್ಪಾದನೆಯ ಬೆಳವಣಿಗೆ’ ಕುರಿತು ನಡೆದ ಗೋಷ್ಠಿಯಲ್ಲಿ ಅವರು ಮಾತನಾಡಿದರು.

ನವೀಕರಿಸಬಹುದಾದ ಇಂಧನ ಉತ್ಪಾದನೆಗೆ ಅಗತ್ಯವಿರುವ ಕೌಶಲಾಭಿವೃದ್ಧಿಗೂ ಸರ್ಕಾರ ಆದ್ಯತೆ ನೀಡಿದೆ. ದೇಶದಲ್ಲಿ ಶಕ್ತಿ ಪರಿವರ್ತನೆಗೆ ಸಂಬಂಧಿಸಿದಂತೆ ಜಾಗೃತಿ ಮೂಡಿಸುತ್ತಿದೆ. ಉತ್ಪಾದನಾ ಸಾಮರ್ಥ್ಯ ಹೆಚ್ಚಳಕ್ಕೆ ಅಗತ್ಯ ಕ್ರಮಕೈಗೊಂಡಿದೆ. ಇದು ಕೇಂದ್ರದ ವಿಕಸಿತ ಭಾರತದ ಆಶಯಕ್ಕೆ ಪೂರಕವಾಗಿದೆ ಎಂದು ಹೇಳಿದರು.

ದೇಶದ ಹಸಿರು ಇಂಧನ ವಲಯದಲ್ಲಿ 2070ರ ವೇಳೆಗೆ ಐದು ಕೋಟಿ ಉದ್ಯೋಗಗಳು ಸೃಷ್ಟಿಯಾಗಲಿವೆ ಎಂದರು.

ಸಿಸ್ಕೊ ಇಂಡಿಯಾ ಹಾಗೂ ಎಸ್‌ಎಎಆರ್‌ಸಿ ಅಧ್ಯಕ್ಷೆ ಡೈಸಿ ಚಿತ್ತಿಲಪಿಲ್ಲಿ ಮಾತನಾಡಿ, ‘ಸರ್ಕಾರವು ಹಂತ ಹಂತವಾಗಿ ದೇಶದಲ್ಲಿ ಇಂಧನ ಹೊರಸೂಸುವಿಕೆಯ ಪ್ರಮಾಣವನ್ನು ಶೂನ್ಯಕ್ಕೆ ಇಳಿಸುವ ಗುರಿ ಹೊಂದಿದೆ. ಇದಕ್ಕೆ ಪೂರಕವಾಗಿ ಹಸಿರು ಇಂಧನ ವಲಯದಲ್ಲಿರುವ ಉದ್ದಿಮೆಗಳಿಗೆ ಸಹಾಯಧನ ಸೇರಿದಂತೆ ಅಗತ್ಯ ಆರ್ಥಿಕ ನೆರವು ನೀಡಬೇಕಿದೆ’ ಎಂದು ಹೇಳಿದರು.

‘ಮಾಧ್ಯಮಕ್ಕೆ ಋಜು ಮಾರ್ಗವೇ ಸೂಕ್ತ’

ಬೆಂಗಳೂರು: ಸುದ್ದಿ ಮಾಧ್ಯಮ ಎಂಬುದು ತಾಳ್ಮೆಯ ಯಾನ. ಅತಿ ಎಡವೂ ಅಲ್ಲದ, ಅತಿ ಬಲವೂ ಅಲ್ಲದ ಋಜುಮಾರ್ಗದಲ್ಲಿ ಇರಬೇಕು ಎಂದು ‘ದಿ ಪ್ರಿಂಟ್’ ಸಂಪಾದಕ ಶೇಖರ್ ಗುಪ್ತ ಹೇಳಿದರು.

‘ಉದ್ಯಮಶೀಲತೆ ಮತ್ತು ಡಿಜಿಟಲ್ ಕ್ರಾಂತಿ’ ಕುರಿತು ನಡೆದ ಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಮೊಬೈಲ್‌ನಲ್ಲಿ ಎಲ್ಲ ಸುದ್ದಿಗಳು ಸಿಗುವ ಈ ಕಾಲದಲ್ಲಿ ಹಣ ನೀಡಿ ಯಾಕೆ ಪತ್ರಿಕೆ ಖರೀದಿ ಮಾಡಬೇಕು? ಟಿ.ವಿ. ಏಕೆ ನೋಡಬೇಕು? ಅದರ ಅಗತ್ಯ ಜನರಿಗೆ ಇರುವುದಿಲ್ಲ. ಆದರೂ, ಇವತ್ತಿಗೂ ಪತ್ರಿಕೆ ಖರೀದಿಸುವವರು, ಟಿ.ವಿ. ನೋಡುವವರು ಯಾಕಿದ್ದಾರೆ ಅಂದರೆ ಅಷ್ಟರ ಮಟ್ಟಿಗೆ ಇನ್ನೂ ವಿಶ್ವಾಸ ಉಳಿಸಿಕೊಂಡಿದೆ’ ಎಂದರು.

‘ಎಕ್ಸೆಲ್ ಪಾರ್ಟ್‌ನರ್ಸ್’ನ ಸ್ಥಾಪಕ ಪಾಲುದಾರ ಪ್ರಶಾಂತ್ ಪ್ರಕಾಶ್ ಗೋಷ್ಠಿ ನಡೆಸಿಕೊಟ್ಟರು.

‘ರಾಜ್ಯಗಳ ವಿಭಜನೆಯಿಂದ ಪ್ರಗತಿ’

• ಗಂಜಿ ಆದಿಶೇಷ



ಮಾಂಟೆಕ್ ಸಿಂಗ್ ಅಹ್ಲುವಾಲಿಯಾ ಅವರನ್ನು ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ ಸ್ವಾಗತಿಸಿದರು

ಬೆಂಗಳೂರು: ‘ಆರ್ಥಿಕ ಪ್ರಗತಿ ಸಾಧಿಸಲು ರಾಜ್ಯಗಳ ವಿಭಜನೆ ಮಾಡಬೇಕು. ಸಣ್ಣ ಸಣ್ಣ ರಾಜ್ಯಗಳ ರಚನೆಯಿಂದ ತ್ವರಿತ ಅಭಿವೃದ್ಧಿ ಸಾಧ್ಯ’ ಎಂದು ಯೋಜನಾ ಆಯೋಗದ ಮಾಜಿ ಉಪಾಧ್ಯಕ್ಷ ಮಾಂಟೆಕ್ ಸಿಂಗ್ ಅಹ್ಲುವಾಲಿಯಾ ಅಭಿಪ್ರಾಯಪಟ್ಟರು.

ನಗರದ ಅರಮನೆ ಮೈದಾನದಲ್ಲಿ ನಡೆಯುತ್ತಿರುವ ‘ಇನ್ವೆಸ್ಟ್ ಕರ್ನಾಟಕ’ ಸಮಾವೇಶದ ಎರಡನೇ ದಿನವಾದ ಬುಧವಾರ ಆಯೋಜಿಸಿದ್ದ ‘ಭಾರತದ ಆರ್ಥಿಕ ಅಭಿವೃದ್ಧಿ ಮತ್ತು ಜಾಗತಿಕ ಸವಾಲುಗಳು’ ಗೋಷ್ಠಿಯಲ್ಲಿ ಅವರು ಮಾತನಾಡಿದರು.

ರಾಜ್ಯಗಳು ಭೌಗೋಳಿಕವಾಗಿ ಚಿಕ್ಕದಿದ್ದರೆ ಪರಿಣಾಮಕಾರಿ ಆಡಳಿತ ಜಾರಿಗೆ ತರಬಹುದು. ರಾಜ್ಯಗಳ ರಚನೆಯಿಂದ ಜಲ ಬಿಕ್ಕಟ್ಟು ಸೇರಿ ಹಲವು ಸಮಸ್ಯೆ ಸೃಷ್ಟಿಯಾಗಬಹುದು. ಆದರೆ, ಬೇರೆ ದೇಶಗಳು ನೀರಿನ ಹಂಚಿಕೆಗೆ ಕೆಲ ಮಾರ್ಗಗಳನ್ನು ಅನುಸರಿಸುತ್ತಿವೆ. ಅದೇ ರೀತಿ ಕೇಂದ್ರ ಸರ್ಕಾರವು ದೇಶದಲ್ಲಿ ಯಾವ ರೀತಿ ನೀರು ಹಂಚಿಕೆ ಮಾಡಬೇಕು ಎನ್ನುವುದನ್ನು ನಿರ್ಧರಿಸಬೇಕು ಎಂದು ಸಲಹೆ ನೀಡಿದರು.

ಅಭಿವೃದ್ಧಿಯ ಹಂಚಿಕೆ ಮತ್ತು ದಕ್ಷ ಆಡಳಿತದ ದೃಷ್ಟಿಯಿಂದ ದೊಡ್ಡ ರಾಜ್ಯಗಳ ವಿಭಜನೆ ಅತ್ಯಗತ್ಯ. ರಾಜ್ಯಗಳಲ್ಲಿ ಒಂದೇ ನಗರಕ್ಕೆ ಅಭಿವೃದ್ಧಿ ಕೇಂದ್ರೀಕರಿಸುವುದರಿಂದ ಹಲವು ಸಮಸ್ಯೆಗಳು ತಲೆದೋರಿವೆ ಎಂದು ಅಭಿಪ್ರಾಯಪಟ್ಟರು.

1991ರಿಂದ ದೇಶದಲ್ಲಿ ಸುಧಾರಣೆ ಪರ್ವ ಶುರುವಾಯಿತು. ಅಂದಿನ ಪ್ರಧಾನಿ ಪಿ.ವಿ.ನರಸಿಂಹರಾವ್ ಅವರ ನೇತೃತ್ವದಲ್ಲಿ ಮನಮೋಹನ್‌ಸಿಂಗ್ ಅವರು ದೇಶದಲ್ಲಿ ಉಂಟಾಗಿದ್ದ ಬಿಕ್ಕಟ್ಟನ್ನು ಬಗೆಹರಿಸುವ ಜೊತೆಗೆ ಸುಧಾರಣೆ ಕ್ರಮಗಳನ್ನು ಕೈಗೊಂಡರು. ಅಂದು ಸಮನ್ವಯ ಇತ್ತು. ಆದರೆ, ಇಂದು ಶೇ 8ರಷ್ಟು ಜಿಡಿಪಿ ಬೆಳವಣಿಗೆ ಸಾಧಿಸಲು ಮತ್ತಷ್ಟು ಆರ್ಥಿಕ ಸುಧಾರಣೆಗಳ ಅಗತ್ಯವಿದೆ ಎಂದರು.

ಅರ್ಥಶಾಸ್ತ್ರಜ್ಞ ಮತ್ತು ಲೇಖಕ ಸಲ್ಮಾನ್ ಸೋಝ್ ಕಾರ್ಯಕ್ರಮ ನಡೆಸಿಕೊಟ್ಟರು.

ಮಾನವರಹಿತ ಎಫ್‌ಡಬ್ಲ್ಯುಡಿ-ಯುದ್ಧ ಬಾಂಬರ್

• ಬಾಲಕೃಷ್ಣ ಪಿ.ಎಚ್.



ವಸ್ತುಪ್ರದರ್ಶನದಲ್ಲಿ ‘ಬಾಂಬರ್’ ಯುಎವಿ. ಪ್ರಜಾವಾಣಿ ಚಿತ್ರ: ಪ್ರಶಾಂತ್ ಎಚ್‌.ಜಿ.

ಬೆಂಗಳೂರು: ಬಾಂಬ್, ಕ್ಷಿಪಣಿ ಸ್ಫೋಟ ಸಹಿತ ವಿವಿಧ ಪ್ರಯೋಗಗಳನ್ನು ಯುದ್ಧರಂಗದಲ್ಲಿ ನಡೆಸುವಾಗ ಮಾನವ ಬಳಕೆ ಕಡಿಮೆ ಮಾಡಲು ಸ್ವಯಂಚಾಲಿತವಾಗಿ ಕೆಲಸ ಮಾಡುವ ‘ಎಫ್‌ಡಬ್ಲ್ಯುಡಿ-ಬಾಂಬರ್’ ಇದರ ಪ್ರತಿಕೃತಿಯು ಜಾಗತಿಕ ಬಂಡವಾಳ ಹೂಡಿಕೆದಾರರ ಸಮಾವೇಶದಲ್ಲಿ ಹೆಚ್ಚು ಆಕರ್ಷಣೆಗೆ ಪಾತ್ರವಾಗಿತ್ತು.

ಭಾರತದ ಪ್ರಥಮ ಇಂಡೀಜಿನಿಯಸ್ ಏರ್‌ಕ್ರಾಫ್ಟ್ ಎಂದು ಹೆಸರು ಪಡೆದಿರುವ ಈ ಬಾಂಬರ್ ಅನ್ನು ಎಲೆಕ್ಟ್ರಾನಿಕ್ಸ್ ಸಿಟಿಯ ‘ಫ್ಲೈಯಿಂಗ್ ವೆಡ್ಜ್ ಡಿಫೆನ್ಸ್ ಆ್ಯಂಡ್ ಏರೋಸ್ಪೇಸ್’ ಕಂಪನಿ ತಯಾರಿಸಿದೆ. ಲೇಸರ್ ಗೈಡೆಡ್ ರಾಕೆಟ್, ಕ್ಯಾಮೆರಾ ಮತ್ತು ಸಂವಹನ, ನೈಜ ಸಮಯದ ಕಾರ್ಯಾಚರಣೆ, ಗಡಿ ಭದ್ರತೆ, ಭಯೋತ್ಪಾದನೆಯ ವಿರುದ್ಧ ಕಾರ್ಯಾಚರಣೆಗಳಿಗೆ ಬಳಸಿಕೊಳ್ಳಬಹುದಾದ ಮಾನವರಹಿತ ಯುದ್ಧ ವೈಮಾನಿಕ ವಾಹನ (ಯುಎವಿ) ಇದಾಗಿದೆ.

6.5 ಮೀಟರ್ ಉದ್ದ ಇರುವ ‘ಬಾಂಬರ್’ 102 ಕೆ.ಜಿ. ಭಾರವನ್ನು ಸಾಗಿಸಬಲ್ಲದು. ಒಮ್ಮೆ ಇಂಧನ ತುಂಬಿಸಿದರೆ 24 ಗಂಟೆ ಹಾರಾಟ ನಡೆಸಬಲ್ಲ ಸಾಮರ್ಥ್ಯ ಇರುವ ಈ ವೈಮಾನಿಕ ವಾಹನವನ್ನು ಯುದ್ಧದ ಸಂದರ್ಭದಲ್ಲಿ ಮಾತ್ರವಲ್ಲ, ತುರ್ತು ಸ್ಥಿತಿಯಲ್ಲಿ ಅತಿವೇಗದಲ್ಲಿ ಔಷಧ ಸಾಗಾಟಕ್ಕೆ ಬಳಕೆ ಮಾಡಬಹುದು. ಇನ್ನಿತರ ಅಗತ್ಯ ಸಂದರ್ಭದಲ್ಲಿಯೂ ಉಪಯೋಗಿಸಬಹುದು ಎಂದು ಕಂಪನಿಯ ಸಿಒಒ ನರಸಿಂಹ ಅವರು ಮಾಹಿತಿ ನೀಡಿದರು.

‘ಮಾನವರಹಿತ ಯುದ್ಧ ವೈಮಾನಿಕ ವಾಹನದ ವಿನ್ಯಾಸ, ಎಂಜಿನ್ ತಯಾರಿಯಿಂದ ಹಿಡಿದು ಎಲ್ಲವನ್ನೂ ‘ಫ್ಲೈಯಿಂಗ್ ವೆಡ್ಜ್ ಡಿಫೆನ್ಸ್ ಆ್ಯಂಡ್ ಏರೋಸ್ಪೇಸ್’ ಕಂಪನಿಯೇ ತಯಾರಿಸಿದೆ. ಎಲೆಕ್ಟ್ರಾನಿಕ್ಸ್ ಸಿಟಿ ಮತ್ತು ಯಲಹಂಕದ ಎಲ್ಸಿಯಾದಲ್ಲಿ ತಯಾರಿಸಲಾಗಿದೆ. ನಮ್ಮ ಕಂಪನಿಯು ಡಿಆರ್‌ಡಿಒ, ಆರ್ಮಿ ಡಿಸೈನ್ ಬ್ಯೂರೊ ಸಹಿತ ವಿವಿಧ ಸಂಸ್ಥೆಗಳೊಂದಿಗೆ ಸಹಭಾಗಿ ಆಗಿದೆ’ ಎಂದು ವಿವರಿಸಿದರು.

‘ಇದರ ಅಂತರರಾಷ್ಟ್ರೀಯ ಬೆಲೆ ₹ 250 ಕೋಟಿ ಆಗಿದ್ದು, ನಾವು ಇಲ್ಲಿನ ಸಂಪನ್ಮೂಲಗಳನ್ನು ಬಳಸಿಕೊಂಡು ತಯಾರಿಸಿರುವುದರಿಂದ ₹ 25 ಕೋಟಿಗೆ ಒದಗಿಸುತ್ತಿದ್ದೇವೆ. ಆಫ್ರಿಕಾದ ಒಂದು ದೇಶಕ್ಕೆ 35 ಬಾಂಬರ್ ಒದಗಿಸಲು ಕಾರ್ಯಾದೇಶ ನೀಡಿದ್ದು, ಮೊದಲ ಬಾಂಬರ್ ಎರಡು ವಾರದ ಒಳಗೆ ಕಳುಹಿಸಲಾಗುವುದು. ದೇಶದ ಹೆಸರನ್ನು ನಾವು ಬಹಿರಂಗಪಡಿಸುವಂತಿಲ್ಲ’ ಎಂದು ಹೇಳಿದರು.

‘ಬಾಂಬರ್’ ಅಲ್ಲದೇ ಲಂಬವಾಗಿ ಏರುವ ಮತ್ತು ಇಳಿಯುವ ಸಾಮರ್ಥ್ಯ ಇರುವ ‘ಲೋಟೆರಿಂಗ್ ಮನಿಷನ್’ ಯುಎವಿ ತಯಾರಿಸಲಾಗಿದೆ. ಇದು ಕಡಿಮೆ ಸ್ಥಳಾವಕಾಶ ಇರುವಲ್ಲಿಯೂ ಸಂಚರಿಸುವ, ಇಳಿಯುವ, ಟೇಕ್ ಆಫ್ ಆಗುವ ಶಕ್ತಿಯನ್ನು ಹೊಂದಿದೆ. ‘ಯಮ’ ಎಂಬ ಇನ್ನೊಂದು ಯುಎಇಯನ್ನು ‘ಆತ್ಮಾಹುತಿ ಏರ್‌ಕ್ರಾಫ್ಟ್’ ಎಂದೂ ಕರೆಯಲಾಗುತ್ತದೆ. ಇದು ಗಂಟೆಗೆ 200 ಕಿ.ಮೀ. ವೇಗದಲ್ಲಿ ಚಲಿಸಬಲ್ಲದು ಮತ್ತು ಗಂಟೆಗೆ 320 ಕಿ.ಮೀ. ವೇಗದಲ್ಲಿ ದಾಳಿ ಮಾಡಬಲ್ಲದು ಎಂದು ನರಸಿಂಹ ಮಾಹಿತಿ ನೀಡಿದರು.

ಪ್ರಜಾವಾಣಿ ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: classifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ADMISSION CORNER



CONNECT ಕ್ಲಾಸಿಫೈಡ್ಸ್



PUBLIC NOTICE

PUBLIC NOTICE

This is to inform the general public that my client Mr. TEJAS KIRAN.C.R. S/o. Sri. Ravikiran C.N, Aged about 26 years residing at No.1954, 8th Main, 'E' Block, 2nd Stage, Rajajinagar, Bengaluru - 560010. My client Mr. Tejas Kiran.C.R. is a GPA holder of property Residential site bearing No.78, totally measuring 184.5 square meter in the layout known as "KNS ANIRVAN PHASE-III" formed as per the Layout Plan sanctioned by the Bengaluru Development Authority vide No. BDA/TPM/PRL-11/2016-17/819/2017-18, dated: 21-07-2017, formed in Sy.No.73 (Schedule "A" property), situated at Kannalli Village, Yeshwanthapura Hobli, Bengaluru North Taluk, Bengaluru, The said GPA executed by M/s. K.N.S. INFRASTRUCTURE PVT.LTD. Represented by its Director Mr.K.N.Boregowda in favour of my client Mr. Tejas Kiran.C.R. and registered in the office of Sub registrar Vijayanagar, document No. VJN-4-00620/2017-18, stored in C. D. No. VJND198 of book-IV, dated: 05-03-2018.

My client lost the above said original General Power of Attorney, original Agreement and original Katha No.BDA/R.D(W)/K.S.No.78/2018-19 of the schedule property. My client has, lodged the complaint on 22-01-2025 at Bengaluru City Police and Lost Report No.1441278/2025 in respect of above said documents. In the event any person finds or in possession of the above said original documents kindly handed over the same to the below mentioned address within 15 days of the publication of this notice. The general public is informed not to act on the basis of the said original documents.

SCHEDULE 'A' PROPERTY

All that piece and parcel of the Converted land bearing Sy.No.73, measuring 02 Acres 20 Guntas (+) 07 Guntas 'A' Kharab, totally measuring 02 Acres 27 Guntas, situated at Kannalli Village, Yeshwanthapura Hobli, Bengaluru North Taluk, Bengaluru (This property has been converted for non agricultural residential purposes, vide Conversion Order dated : 24-12-2014, bearing No.A.L.N. : (N)/ (Y) SR/58/2014-15 issued by the Deputy Commissioner, Bengaluru District, Bengaluru and bounded on the: East by: Land in Sy.No.72. West by: Land in Sy.No.74, North by: Road & Land in Sy.Nos. 71 & 72, South by: Remaining portion of the same Sy.No.73

SCHEDULE 'B' PROPERTY
(PROPERTY CONVEYED UNDER THIS DEED)

All that piece and parcel of residential site bearing No.78, totally measuring 184.5 Square meter, in the Layout known as "KNS ANIRVAN PHASE-III" formed as per the Layout Plan sanctioned by the Bengaluru Development Authority vide No.BDA/TPM/PRL-11/2016-17/819/2017-18, dated : 21-07-2017, formed in Sy.No.73 (Schedule "A" property), situated at Kannalli Village, Yeshwathapura Hobli, Bengaluru North Taluk, Bengaluru and bounded on

BIT-1: East to West 22.28 meter, North to South (6.49+9.41)/2 meter - Square meter 177.13, BIT-2: East to West 2.27 meter, North to South (6.49)/2 meter - Square meter 7.37 Totally measuring 184.5 Square meter - Area bounded on East by: Road, West by: Park, North by: Site No.79, South by: Sy.No.73

L.VEENA, ADVOCATE
12, 2nd 'B' Main, RHCS Layout,
Annapoorneshwarinagar,
Bangalore - 560091
Date: 11-02-2025

PUBLIC NOTICE

This is to inform the general public that my client Mr. TEJAS KIRAN.C.R. S/o. Sri. Ravikiran C.N, Aged about 26 years residing at No.1954, 8th Main, 'E' Block, 2nd Stage, Rajajinagar, Bengaluru - 560010. My client Mr. Tejas Kiran.C.R. is a GPA holder of property Residential site bearing No.79, measuring East to West: (28.82+24.55)/2 meter and North to South: 12.19 meter, totally measuring 325.29 square meter in the layout known as "KNS ANIRVAN PHASE-III" formed as per the Layout Plan sanctioned by the Bengaluru Development Authority vide No.BDA/TPM/PRL-11/2016-17/819/2017-18, dated: 21-07-2017, formed in Sy.No.73 (Schedule "A" property), situated at Kannalli Village, Yeshwanthapura Hobli, Bengaluru North Taluk, Bengaluru. The said GPA executed by M/s. K.N.S. INFRASTRUCTURE PVT.LTD. Represented by its Director Mr.K.N.Boregowda in favour of my client Mr. Tejas Kiran.C.R. and registered in the office of Sub registrar Vijayanagar, document No. VJN-4-00624/2017-18, stored in C. D. No. VJND198 of book-IV, dated: 05-03-2018.

My client lost the above said original General Power of Attorney, original Agreement and original Katha No. BDA/R.D(W)/K.S.No.79/2018-19 of the schedule property. My client has, lodged the complaint on 22-01-2025 at Bengaluru City Police and Lost Report No.1441337/2025 in respect of above said documents. In the event any person finds or in possession of the above said original documents kindly handed over the same to the below mentioned address within 15 days of the publication of this notice. The general public is informed not to act on the basis of the said original documents.

SCHEDULE 'A' PROPERTY

All that piece and parcel of the Converted land bearing Sy.No.73, measuring 02 Acres 20 Guntas (+) 07 Guntas 'A' Kharab, totally measuring 02 Acres 27 Guntas, situated at Kannalli Village, Yeshwanthapura Hobli, Bengaluru North Taluk, Bengaluru (This property has been converted for non agricultural residential purposes, vide Conversion Order dated: 24-12-2014, bearing No. A.L.N: (N)/ (Y) SR/58/2014-15 issued by the Deputy Commissioner, Bengaluru District, Bengaluru and bounded on the: East by: Land in Sy.No.72, West by: Land in Sy.No.74, North by: Road & Land in Sy.Nos.71 & 72, South by: Remaining portion of the same Sy.No.73

SCHEDULE 'B' PROPERTY
(PROPERTY CONVEYED UNDER THIS DEED)

All that piece and parcel of residential site bearing No.79, measuring East to West: (28.82+24.55) /2 meter and North to South: 12.19 meter, totally measuring 325.29 Square meter, in the Layout known as "KNS ANIRVAN PHASE-III" formed as per the Layout Plan sanctioned by the Bengaluru Development Authority vide No.BDA/TPM/PRL-11/2016-17/819/2017-18, dated: 21-07-2017, formed in Sy.No.73 (Schedule "A" property), situated at Kannalli Village, Yeshwathapura Hobli, Bengaluru North Taluk, Bengaluru and bounded on, East by: Road, West by: Park, North by: Site No.80, South by: Site No.78.

L.VEENA, ADVOCATE
12, 2nd 'B' Main, RHCS Layout,
Annapoorneshwarinagar,
Bangalore - 560091
Date: 11-02-2025

PUBLIC NOTICE

The general public is hereby informed that my client has instituted a civil suit bearing O S No.1083/25 before the competent court for partition of property with respect to the property bearing No.254, Municipal Corporation Number 254, PID 97-3-254, situated at 14th Cross, 5th Main Road, RT Nagar, 2nd Block, Bangalore against Mary D'Cruz and her son Agnel John D'Cruz.

Any person dealing with the said property in any manner whatsoever is hereby cautioned that such dealings shall be subject to the outcome of the said suit. My client shall not be held responsible for any claims, losses, or disputes arising out of any transactions concerning the aforementioned property during the pendency of the suit.

This notice serves as a public caution to avoid any inconvenience or legal complications.

Date:12.02.2025

HJK LAW PARTNERS
#1038, Rajajinagar 4th Block,
Dr. Rajkumar Road,
Bangalore-10. Ph: 080 23151715

REAL ESTATE SELLING

Industrial & Factory

Peenya

BUYING, SELLING, RENTING, Industrial Land, Building, shed. Peenya, Yeshwanthpur, Dabespet, Nelamangala, Doddaballapur. 9590909945 9844083019

Residential/ Commercial

Rajajinagar

SALE 35X45, BDA Rajajinagar, west facing, 17TH G main, 28000/sqft, 9916800300

PERSONAL

Change of Name

I, N_LAKSHMI W/o.Krishnamurthy R/a#542 36th Main 16th Cross, 6th`Phase Bangalore 560078 have changed my Name from LAKSHMI KRISHNAMURTHY to N_LAKSHMI vide`affidavit dated:28.3.2022 before`Notary HS.DharmaPrasad Bengaluru

I, HARSHAVARDHANA ANJINAPPA GARUDA, S/o Sri M. Anjinappa, age 42 years, R/at No.3, Villa LGCL Beautiful World, Chikkagubbi Village, Hennur Bagaluru Main Road, Bengaluru-560 077 do hereby declare that I have changed my name from HARISH KUMAR .A to HARSHAVARDHANA ANJINAPPA GARUDA, vide affidavit dated 10-02-2025, sworn before Advocate and Notary RAVI KUMAR .V, at Bangalore.

CHANGE OF NAME

I, **IKBAL HUSAIN MUKKADAYIL KOYAKUTTY** Residing at # 2397, Crescent 2nd Main, 3rd Cross Near, Old Airport Road, H.A.L 3rd Stage, Bangalore North, Vimanapura Bangalore-560017 have changed my name to **IQBAL HUSSAIN MUKKADAYIL KOYAKUTTY** vide affidavit dated 01.02.2025 before notary V. Rajashekhara, Bangalore.

I, ANISHA_ROY_C as single Parent of Minor KID R/a.T14, 301, L&T Raintree Boulevard Next to Phoenix Mall_of Asia Bytarayanapura Bengaluru-92, have changed my minor KID name from ADITHYA_ROY_B to ADITHYA_ROY vide`affidavit 12.02.2025 before`Notary Hemalatha Bangalore

I, NANDA_KUMAR KIRUBAKARAN S/o.Kirubakaran R/a.#Villa-518 Concorde Napa Valley Road.#47 Taralu Village, Kanakapura Main Road,Bangalore South, Bangalore 560082 Declare that in my Passport my wife's name entered without surname as ARCHANA instead of ARCHANA NANDAKUMAR vide`affidavit dated:11.2.2025 before`Notary Chethana.S.V. Bangalore

I, ARCHANA NANDAKUMAR W/o.Nanda Kumar Kirubakaran R/a.#Villa-518 Concorde Napa Valley Road.#47 Taralu Village Kanakapura Main Road,Bangalore South Bangalore 560082 Declare`that in my Passport my husband's name entered without surname as NANDA_KUMAR instead of NANDA KUMAR KIRUBAKARAN vide`affidavit dated:11.2.2025 before`Notary Chethana.S.V. Bangalore



CHANGE OF NAME

I,**THANMAYI KUMAR** Residing at # 91, 2nd Main, 10th Cross, Govindarajanagar, Vijayanagar, Bangalore-560040 have changed my name to **SNEHA K THANMAYI** vide affidavit dated 05.02.2025 before Notary B. Prasanna, Bangalore. Henceforth I shall be known as **SNEHA K THANMAYI** only.

I, ABHISHEK P, S/o Parameshwarappa R/at No. 1134, Shiva Krupa 20th Cross, A Block, Sahakaranagar, Bangalore-560092 have changed my name to ABHISHEK PARAMESHWARAPPA vide affidavit dated: 12/2/2025 Before Notary Onkarappa.N.R Bangalore.

Lost

DOCUMENT LOST

I, SHOBHA BAI, Residing at No 48/1, 1st Main Road, Near JJ Apartments, Byraveshwar Nagar, Bangalore- 560072 have lost Original Sale Deed bearing Document No/ Identification :1421/2022-23 Finders Please **Contact 9620833751**







ರಾಜ್ಯ ಅಬಕಾರಿ ಇಲಾಖೆ

ಡೆಪ್ಯುಟಿ ಕಮೀಷನರ್ ಆಫ್ ಎಕ್ಸೈಸ್‌ರವರ ಕಛೇರಿ,
ಸ್ಟ್ರೀಟ್ ಓಲ್ಡ್, ಬಿ. ಎಂ. ರಸ್ತೆ, 28ನೇ ವಾರ್ಡ್, ಕೋರ್ಟ್ ಎದುರು,
ಶ್ರೀ ಸಾಯಿ ಬಾಬಾ ಮಂದಿರ ಪಕ್ಕ, ರಾಮನಗರ ಟೌನ್, ರಾಮನಗರ – 562 159,
ದೂರವಾಣಿ: 080–2727 1059, ಇಮೇಲ್: dceramanagara@gmail.com

ಸಂಖ್ಯೆ : ಇಎಕ್ಸ್‌ಇ/ಆರ್.ಎನ್.ಆರ್./ಇ–ಪ್ರೋ/21/2024–25
ದಿನಾಂಕ : 07–02–2025

ಅಲ್ಪಾವಧಿ ಟೆಂಡರ್ ಪ್ರಕಟಣೆ

(ಇ–ಪ್ರೊಕ್ಯೂರ್‌ಮೆಂಟ್ ಮೂಲಕ ದ್ವಿ–ಲಕೋಟೆ ಪದ್ಧತಿ)

ಈ ಕೆಳಗೆ ನಮೂದಿಸಿದ ಡೆಪ್ಯುಟಿ ಕಮೀಷನರ್ ಆಫ್ ಎಕ್ಸೈಸ್, ರಾಮನಗರ ಜಿಲ್ಲೆಯ ಕಛೇರಿಯಲ್ಲಿ ಕಾರ್ಯನಿರ್ವಹಿಸಲು ಬಾಹ್ಯಮೂಲಗಳಿಂದ ಬೆರಳಚ್ಚುಗಾರರು – 02, ಕೌಶಲ್ಯವುಳ್ಳ ಗಣಕಯಂತ್ರ ನಿರ್ವಾಹಕರು – 01 ವಾಹನ ಚಾಲಕರು – 03, ಮತ್ತು 'ಡಿ' ಗ್ರೂಪ್ – 01, ಹುದ್ದೆಗಳಿಗೆ ಹೊರಗುತ್ತಿಗೆ ಮಾನವ ಸಂಪನ್ಮೂಲ ಸಂಸ್ಥೆಯಿಂದ ಸೇವೆಯನ್ನು ಪಡೆಯಲು ಕರ್ನಾಟಕ ಪಾರದರ್ಶಕ ಅಧಿನಿಯಮ 1999 ನಿಯಮಗಳು 2000 ರ ಮೇರೆಗೆ ದ್ವಿ–ಲಕೋಟೆ ಪದ್ಧತಿಯಲ್ಲಿ ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಅಲ್ಪಾವಧಿ ಟೆಂಡರ್‌ನ್ನು ಆಹ್ವಾನಿಸಲಾಗಿದೆ.

ಇ–ಪ್ರೊಕ್ಯೂರ್‌ಮೆಂಟ್ ವಿಳಾಸ : www.kppp.karnataka.gov.in ನಲ್ಲಿ ಪರಿಶೀಲಿಸಿ ಸೂಕ್ತ ದಾಖಲಾತಿಗಳೊಂದಿಗೆ ಟೆಂಡರ್ ಸಲ್ಲಿಸಬಹುದಾಗಿರುತ್ತದೆ. ಇ–ಪ್ರೊಕ್ಯೂರ್‌ಮೆಂಟ್‌ನಲ್ಲಿ ಕಾಣಿಸಿದ ಷರತ್ತು ಮತ್ತು ನಿಬಂಧನೆಗಳು ಹಾಗೂ ಇತರೆ ವಿವರಗಳನ್ನು ಗಮನಿಸಿ ಅರ್ಜಿ ಸಲ್ಲಿಸುವುದು.

ಸಹಿ/– ಡೆಪ್ಯುಟಿ ಕಮೀಷನರ್ ಆಫ್ ಎಕ್ಸೈಸ್
ರಾಮನಗರ ಜಿಲ್ಲೆ. ರಾಮನಗರ.

ಡಿಐಪಿಆರ್/ರಾಮನಗರ/576/ಮಣಿಪಾಲ್/2024–25

ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಚಿಕ್ಕಬಳ್ಳಾಪುರ

ಎಂ.ಜಿ.ರಸ್ತೆ, ಚಿಕ್ಕಬಳ್ಳಾಪುರ–562101, E-mail: apmccbp@gmail.com
ಕ್ರಮ ಸಂಖ್ಯೆ: ಕೃಮಾಇ/ಕೃಉಮಾಸ(ಚಿಬ)/513/2024–25 ದಿನಾಂಕ: 11.02.2025

ಸಂಕ್ಷಿಪ್ತ ಪ್ರಕಟಣೆ 2ನೇ ಕರೆ

ಚಿಕ್ಕಬಳ್ಳಾಪುರ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ ಪೆರೇಸಂದ್ರ ಉಪ–ಮಾರುಕಟ್ಟೆ ಪ್ರಾಂಗಣದಲ್ಲಿ ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ ವ್ಯವಹಾರ (ಮಾರುಕಟ್ಟೆ ಪ್ರಾಂಗಣದಲ್ಲಿ ಸ್ವತ್ತಿನ ಹಂಚಿಕೆ ನಿಯಂತ್ರಣ) ನಿಯಮಾವಳಿಗಳು 2004 ರ ನಿಯಮ (13) ರನ್ವಯ ಕೆಳಗೆ ಕಾಣಿಸಿದ ಮಳಿಗೆಗಳನ್ನು ಲೀವ್ & ಲೈಸೆನ್ಸ್ ಫೀ ಆಧಾರದ ಮೇಲೆ ಪರವಾನಗಿ ಪಡೆದಿರುವ ಅರ್ಹ ಪೇಟೆ ಕಾರ್ಯಕರ್ತರುಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ ವಿವರಗಳು ಈ ಕೆಳಗಿನಂತಿದೆ.

ಕಟ್ಟಡದ ಸಂಖ್ಯೆ	ಮಾಸಿಕ ಲೀ&ಲೈಸೆನ್ಸ್ ಶುಲ್ಕ	ಮೀಸಲಾತಿವಿವರ
ಪೆರೇಸಂದ್ರ ಉಪ–ಮಾರುಕಟ್ಟೆ ಪ್ರಾಂಗಣದಲ್ಲಿ 4 ಸಂಖ್ಯೆ ಎನ್‌ಜಿಆರ್‌ಜಿಗೋದಾಮುಗಳು (100 ಮೆ.ಟನ್ ಸಾಮರ್ಥ್ಯ) ಅಧಿಸೂಚಿತ ಕೃಷಿ ಉತ್ಪನ್ನಗಳು (ನಿಯಮ 13ರಡಿ)		
ಗೋದಮು ಸಂಖ್ಯೆ: 1,2,3 ಮತ್ತು 4	ರೂ.17,250/–	ಸಾಮಾನ್ಯ ವರ್ಗ

ಮೇಲ್ಕಂಡ ಗೋದಾಮುಗಳಿಗೆ ನೊಂದಣೆ ವೆಚ್ಚ ಮತ್ತು ಖಾಲಿ ಟೆಂಡರ್ ಫಾರಂ ಫೀ ಪಾವತಿಸಿ ಅರ್ಜಿ ಪ್ರತ್ಯೇಕವಾಗಿ ಪಡೆಯಲು ಕೊನೆಯ ದಿ: 27.02.2025 ಚೆಕ್ಕು/ ನಗದು ಮೂಲಕ 2 ತಿಂಗಳ ಮುಂಗಡದೊಂದಿಗೆ ಭರ್ತಿ ಅರ್ಜಿ/ ಟೆಂಡರ್ ಫಾರಂ ನಮೂನೆಗಳನ್ನು ಸಲ್ಲಿಸುವ ಕೊನೆಯ ದಿ: 01.03.2025 ರಂದು ಸಂಜೆ 5.30 ರ ಒಳಗೆ. ಹೆಚ್ಚಿನ ಮಾಹಿತಿಗಾಗಿ ಹಾಗೂ ಷರತ್ತು–ವಾ ನಿಬಂಧನೆಗಳಿಗೆ (ರಜಾದಿನಗಳನ್ನು ಹೊರತುಪಡಿಸಿ) ಕಚೇರಿ ವೇಳೆಯಲ್ಲಿ ಖುದ್ದಾಗಿ ಬಂದು ಸಂಪರ್ಕಿಸಬಹುದಾಗಿದೆ. ಹಂಚಿಕೆಗೆ ಸಂಬಂಧಿಸಿದ ಅರ್ಜಿಗಳನ್ನು ಒಪ್ಪುವ ಅಥವಾ ತಿರಸ್ಕರಿಸುವ ಹಕ್ಕನ್ನು ಸಮಿತಿಯು ಕಾಯ್ದಿರಿಸಿಕೊಂಡಿದ್ದು, ಸಮಿತಿಯ ತೀರ್ಮಾನವೇ ಅಂತಿಮವಾಗಿರುತ್ತದೆ.

ಸಹಿ/–
ಕಾರ್ಯದರ್ಶಿ
ಕೃಉಮಾಸ, ಚಿಕ್ಕಬಳ್ಳಾಪುರ.

ಸಹಿ/–
ಆಡಳಿತಾಧಿಕಾರಿ,
ಕೃಉಮಾಸ, ಚಿಕ್ಕಬಳ್ಳಾಪುರ.

ವಾಸಾಸಂಇ/ಚಿಕ್ಕಬಳ್ಳಾಪುರ/ಆರ್.ಓ.ಸಂಖ್ಯೆ 373/ಕೆ.ಎಸ್.ಎಂ.ಸಿ.ಎ/2024–25

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

(ಸಿ.ಐ.ಎನ್: ಯು40109ಕೆಎ1999ಎಸ್‌ಜಿಸಿ025521)

ಟೆಂಡರ್ ಪ್ರಕಟಣೆ

(ಕರ್ನಾಟಕ ಸಾರ್ವಜನಿಕ ಸಂಗ್ರಹಣಾ ಪೋರ್ಟಲ್ ಮೂಲಕ ಮಾತ್ರ)

ಕವಿಪ್ರನಿನಿಯು ಕೆಳಕಂಡ ಕಾಮಗಾರಿಗಳಿಗಾಗಿ ಬಿಡ್‌ಗಳನ್ನು ಆಹ್ವಾನಿಸಿದೆ.

I. ಸಂಖ್ಯೆ: ಅಇಂವಿ/ಪ್ರ(ಕಾ)/ಬೆಂಮಕ್ಷೇವ(ದ)/ಕಾನಿಇಂ(ಕ)/ಸಕಾನಿಇಂ–1/ಎಫ್–180/24–25/8871–73 ದಿನಾಂಕ: 11.02.2025

ಬಿಡ್ ವಿಚಾರಣೆ ಸಂಖ್ಯೆ: ಕವಿಪ್ರನಿನಿ/ಅ.ಇಂ/ಟಿಆರ್(ಎಂ)/ಬಿಎಂಎಆರ್‌ಝಡ್(ಎಸ್)/ಇಇ(ಓ)/ಎಇಇ–1/24–25/ಇ.ಪಿ.ಆರ್–15, ಕರೆ–3 ದಿನಾಂಕ: 01.10.2024 ರ ಅನ್ವಯ ಬೆಂ.ಮ.ಕ್ಷೇ.ವ. ದಕ್ಷಿಣ ವೃತ್ತದ ಅಡಿಯಲ್ಲಿ ಬರುವ ಟಿ.ಎಲ್.ಎಂ. ಉಪ–ವಿಭಾಗ ಹೂಡಿ ವ್ಯಾಪ್ತಿಯ ಹಿರಂಡನಹಳ್ಳಿ ಲೇಕ್ ಹತ್ತಿರ ಹಾದು ಹೋಗಿರುವ 66ಕೆವಿ ಡಿಜಿ–3 ಮತ್ತು ಡಿಜಿ–4 ಜೋಡಿ ಮಾರ್ಗದ ಟವರ್ ಸಂಖ್ಯೆ 70 ಮತ್ತು 72ರ ನಡುವೆ 01 ಸಂಖ್ಯೆ ಡಿಎ+03, ಕವಿಪ್ರನಿನಿ ವಿನ್ಯಾಸದ ಎನ್‌ಬಿಟಿ ಮಧ್ಯಂತರ ಗೋಪುರಗಳನ್ನು ಅಳವಡಿಸಿ ಲಂಭಾಂತರವನ್ನು ಹೆಚ್ಚಿಸುವ ಕಾಮಗಾರಿ ನಿರ್ವಹಿಸುವುದು.

II. ಸಂಖ್ಯೆ: ಅಇಂವಿ/ಪ್ರ(ಕಾ)/ಬೆಂಮಕ್ಷೇವ(ದ)/ಕಾನಿಇಂ(ಕ)/ಸಕಾನಿಇಂ–1/ಎಫ್–180/24–25/8874–76 ದಿನಾಂಕ: 12.02.2025

ಬಿಡ್ ವಿಚಾರಣೆ ಸಂಖ್ಯೆ: ಕವಿಪ್ರನಿನಿ/ಅ.ಇಂ/ಟಿಆರ್(ಎಂ)/ಬಿಎಂಎಆರ್‌ಝಡ್(ಎಸ್)/ಇಇ(ಓ)/ಎಇಇ–1/23–24/ಇ.ಪಿ.ಆರ್–29, ಕರೆ–6 ದಿನಾಂಕ: 03.02.2024ರ ಅನ್ವಯ ಬೆಂ.ಮ.ಕ್ಷೇ.ವ. ದಕ್ಷಿಣ ವೃತ್ತದ ಅಡಿಯಲ್ಲಿ ಬರುವ ಟಿ.ಎಲ್.ಎಂ. ಉಪ–ವಿಭಾಗ ಹೂಡಿ ವ್ಯಾಪ್ತಿಯ ಹೆಚ್.ಎಂ.ಟಿ. ಲೇಔಟ್, ಆರ್‌ಟಿ ನಗರದಲ್ಲಿ ಹಾದು ಹೋಗಿರುವ 66ಕೆವಿ ಐಟಿಐ–ಹೆಬ್ಬಾಳ 1 & 2 (ಹೆಬ್ಬಾಳ–ಎಲ್.ಆರ್.ಬಂಡೆ & ಹೆಬ್ಬಾಳ–ಬಾಣಸವಾಡಿ ಪಾಟರಿ ರಸ್ತೆಗೆ ಟ್ಯಾಪ್ ಮಾಡಿರುವ) ಜೋಡಿ ಮಾರ್ಗದ ಟವರ್ ಸಂಖ್ಯೆ 06 ಮತ್ತು 07ರ ನಡುವೆ 02 ಸಂಖ್ಯೆ ಡಿಸಿ+6 ಎನ್‌ಬಿಟಿ, ಮಧ್ಯಂತರ ಗೋಪುರಗಳನ್ನು ಅಳವಡಿಸಿ ಲಂಭಾಂತರವನ್ನು ಹೆಚ್ಚಿಸುವ ಕಾಮಗಾರಿ ನಿರ್ವಹಿಸುವುದು.

III. ಸಂಖ್ಯೆ: ಅಇಂವಿ/ಪ್ರ(ಕಾ)/ಬೆಂಮಕ್ಷೇವ(ದ)/ಕಾನಿಇಂ(ಕ)/ಸಕಾನಿಇಂ–1/ಎಫ್–180/24–25/8877–79 ದಿನಾಂಕ: 12.02.2025

ಬಿಡ್ ವಿಚಾರಣೆ ಸಂಖ್ಯೆ: ಕವಿಪ್ರನಿನಿ/ಅ.ಇಂ/ಟಿಆರ್(ಕಾ)/ಬಿಎಂಎಆರ್‌ಝಡ್(ಎಸ್)/ಇಇ(ಓ)/ಎಇಇ–1/24–25/ಇ.ಪಿ.ಆರ್–83, ಕರೆ–1 ದಿನಾಂಕ: 12.02.2025ರ ಅನ್ವಯ ಬೆಂ.ಮ.ಕ್ಷೇ.ವ. ದಕ್ಷಿಣ ಕಾರ್ಯಾಚರಣೆ ವೃತ್ತದ ಅಡಿಯಲ್ಲಿ ಬರುವ ಟಿ.ಎಲ್.ಎಂ. ಉಪ–ವಿಭಾಗ ವ್ಯಾಪ್ತಿಯ ಸೆಂಟ್ ಥಾಮಸ್ ನಗರ, ಹೆಚ್.ಬಿ.ಆರ್. ಲೇಔಟ್, ಸೆಂಟ್ ಚಾರ್ಲ್ಸ್ ಶಾಲೆಯ ಹತ್ತಿರದಲ್ಲಿ ಹಾದು ಹೋಗಿರುವ 66ಕೆವಿ ಹೆಬ್ಬಾಳ–ಐ.ಟಿ.ಐ ಜೋಡಿ ಮಾರ್ಗದಿಂದ–ಪಾಟರಿ ಮಾರ್ಗದ ಉಪ–ಕೇಂದ್ರದ ಜೋಡಿ ಮಾರ್ಗದ ಟವರ್ ಸಂಖ್ಯೆ 22 ಮತ್ತು 23ರ ನಡುವೆ 02 ಸಂಖ್ಯೆ ಡಿಡಿ+6 ಎನ್‌ಬಿಟಿ ಗೋಪುರಗಳನ್ನು ಅಳವಡಿಸಿ ಲಂಭಾಂತರವನ್ನು ಹೆಚ್ಚಿಸುವ ಕಾಮಗಾರಿ ನಿರ್ವಹಿಸುವುದು.

ಮೇಲಿನ ಕಾಮಗಾರಿಗಳಿಗೆ, ಬಿಡ್‌ಗಳನ್ನು ಇ–ಪ್ರೊಕ್ಯೂರ್‌ಮೆಂಟ್ ವಿಧಾನದ ಮೂಲಕ ಮಾತ್ರ ಸ್ವೀಕರಿಸಲಾಗುವುದು. ವಿಷಯದ ಟೆಂಡರ್‌ಗಳಿಗೆ ಸಂಬಂಧಿಸಿದ ವಿವರವಾದ ಪ್ರಕಟಣೆಯನ್ನು ಕವಿಪ್ರನಿನಿ ವೆಬ್‌ಸೈಟ್: https://kptcl.karnataka.gov.in ಗೆ ಹೈಪರ್‌ಲಿಂಕ್ 'E Procurement KPTCL'ನಲ್ಲಿ ಅಥವಾ ವೆಬ್‌ಸೈಟ್ https://kppp.karnataka.gov.inನಲ್ಲಿ ದಿನಾಂಕ: 13.02.2025ರಂದು ಅಥವಾ ತದನಂತರ ಲಾಗಿನ್ ಮಾಡುವ ಮೂಲಕ ಪಡೆಯಬಹುದು. ಹೆಚ್ಚಿನ ವಿವರಗಳನ್ನು ಕೆಳಸಹಿದಾರರ ಕಚೇರಿಯಿಂದ ಪಡೆಯಬಹುದಾಗಿದೆ.

ಸಹಿ/– ಅಧೀಕ್ಷಕ ಇಂಜಿನಿಯರ್, ವಿದ್ಯುತ್,
ಪ್ರಸರಣ(ಕಾರ್ಯಾಚರಣೆ), ಬೆಂಮಕ್ಷೇವ ದಕ್ಷಿಣ ವೃತ್ತ, ಕವಿಪ್ರನಿನಿ,
ಕಚೇರಿ ಸಂಕೀರ್ಣ, ನೆಲಮಹಡಿ, ಆನಂದರಾವ್ ವೃತ್ತ, ಬೆಂಗಳೂರು–560 009.

ಗುಜರಾತ್ ಪೆಟ್ರೋಸಿಂಥಿಸ್ ಲಿಮಿಟೆಡ್

ನೋಂದಾಯಿತ ಕಚೇರಿ: ನಂ.24, 2ನೇ ಮುಖ್ಯರಸ್ತೆ, 1ನೇ ಹಂತ, ದೊಡ್ಡನೆಕ್ಕುಂಡಿ ಕೈಗಾರಿಕಾ ಪ್ರದೇಶ, ಮಹದೇವಪುರ ಅಂಚೆ, ಬೆಂಗಳೂರು - 560 048. CIN : L23209KA1977PLC043357
E-mail : info@gpl.in, secretarial@gujaratpetrosynthese.com Website: www.gpl.in

ಡಿಸೆಂಬರ್ 31, 2024 ರ ತ್ರೈಮಾಸಿಕ ಮತ್ತು ಒಂಬತ್ತು ತಿಂಗಳ ಅವಧಿಗೆ ಅಂತ್ಯಗೊಂಡ ಅಪರಿಶೋಧಿತ ಆರ್ಥಿಕ ಫಲಿತಾಂಶಗಳ ಸ್ಟೇಟ್‌ಮೆಂಟ್

(ರೂ. ಸಾವಿರಗಳಲ್ಲಿ)

ಕ್ರ. ಸಂ.	ವಿವರಗಳು	ಡಿಸೆಂಬರ್ 2024 ರ ತ್ರೈಮಾಸಿಕಕ್ಕೆ ಅಂತ್ಯಗೊಂಡ	ಡಿಸೆಂಬರ್ 2024 ರ ಒಂಬತ್ತು ತಿಂಗಳ ಅವಧಿಗೆ ಅಂತ್ಯಗೊಂಡ	ಡಿಸೆಂಬರ್ 2023 ರ ತ್ರೈಮಾಸಿಕಕ್ಕೆ ಅಂತ್ಯಗೊಂಡ
1	ನಿರ್ವಹಣೆಯಿಂದ ಬಂದ ಒಟ್ಟು ವರಮಾನ	50,391	1,46,756	40,265
2	ನಿವ್ವಳ ಲಾಭ/ (ನಷ್ಟ) ಅವಧಿಗೆ (ತೆರಿಗೆಯ ಮುಂಚೆ, ವಿನಾಯಿತಿ ಪಡೆದ/ಮತ್ತು ವಿಶೇಷ ವಸ್ತುಗಳು)	6,697	16,093	2,141
3	ನಿವ್ವಳ ಲಾಭ/ (ನಷ್ಟ) ತೆರಿಗೆಯ ಅವಧಿಯ ಮುಂಚೆ (ವಿನಾಯಿತಿ ಪಡೆದ ನಂತರ/ಮತ್ತು ವಿಶೇಷ ವಸ್ತುಗಳು)	6,697	16,093	2,141
4	ನಿವ್ವಳ ಲಾಭ / (ನಷ್ಟ) ತೆರಿಗೆಯ ಅವಧಿಯ ನಂತರ (ವಿನಾಯಿತಿ ಪಡೆದ ನಂತರ/ಮತ್ತು ವಿಶೇಷ ವಸ್ತುಗಳು)	5,335	9,628	6,947
5	ಸಂಪೂರ್ಣ ಸಮಗ್ರ ಅವಧಿಯ ಆದಾಯ [ಒಳಗೊಂಡಿರುವ ಲಾಭ/(ನಷ್ಟ) ಅವಧಿಗೆ(ತೆರಿಗೆಯನಂತರ) ಹಾಗೂ ಇತರೆ ಸಮಗ್ರ ಆದಾಯ (ತೆರಿಗೆಯನಂತರ)	5,335	9,628	6,947
6	ಈಕ್ವಿಟಿ ಷೇರುಬಂಡವಾಳ (ಮುಖಬೆಲೆ ರೂ.10 ಪ್ರತಿಷೇರಿಗೆ)	5,969	5,969	5,969
7	ಮೀಸಲು (ಪುನರುಜ್ಜೀವನ ಮೀಸಲು ಹೊರತುಪಡಿಸಿ) ಹಿಂದಿನ ವರ್ಷದ ಲೆಕ್ಕ ಪರಿಶೋಧನೆಯ ಆಯವ್ಯಯ ಪಟ್ಟಿಯಲ್ಲಿ ತೋರಿಸಿರುವಂತೆ			4,24,925
8	ಪ್ರತಿ ಷೇರಿನಗಳಿಕೆ (ಪ್ರತಿ ರೂ.10ಕ್ಕೆ) (ಕಾರ್ಯಾಚರಣೆಗಳನ್ನು ಮುಂದುವರಿಸುವುದಕ್ಕಾಗಿ ಹಾಗೂ ಸ್ಥಗಿತಗೊಳಸುವುದಕ್ಕಾಗಿ) 1. ಮೂಲಭೂತ: 2. ಡೈಲ್ಯೂಟೆಡ್:	0.89	1.61	1.16

ಸೂಚನೆಗಳು:

ಎ). ಈ ಮೇಲಿನವು 31ನೇ ಡಿಸೆಂಬರ್ 2024ರ ತ್ರೈಮಾಸಿಕ ಹಾಗೂ ಒಂಬತ್ತು ತಿಂಗಳ ಅವಧಿಗೆ ಅಂತ್ಯಗೊಂಡ ಆರ್ಥಿಕ ಫಲಿತಾಂಶಗಳ ಸಂಕ್ಷಿಪ್ತ ರೂಪವಾಗಿರುತ್ತದೆ ಹಾಗೂ ಫೆಬ್ರುವರಿ 12, 2025 ರಂದು ಲೆಕ್ಕ ಪರಿಶೋಧನಾ ಸಮಿತಿಯಿಂದ ಈ ಮೇಲ್ಕಂಡ ಫಲಿತಾಂಶಗಳು ಪುನರಾ–ವಲೋಕನಗೊಂಡಿದ್ದು, ಕಂಪನಿಯ ನಿರ್ದೇಶಕರ ಮಂಡಳಿಯ ಸಭೆಯಲ್ಲಿ ಪರಿಗಣಿಸಿ, ದಾಖಲಿಸಿ, 2015ರ ಸೆಬಿಯ ನಿಯಂತ್ರಣಗಳ(ಲಿಸ್ಟಿಂಗ್ ಮತು ಇತರೆ ಘೋಷಣೆಗಳ ಅವಶ್ಯಕತೆಗಳು) 33ನೇಯ ನಿಯಂತ್ರಣದಡಿ ಸ್ಟಾಕ್‌ಎಕ್ಸ್‌ಚೇಂಜ್‌ನಲ್ಲಿ ಸಲ್ಲಿಸಲಾಗಿದೆ. ಶಾಸನಬದ್ಧ ಲೆಕ್ಕಪರಿಶೋಧಕರು ಮೇಲಿನ ಫಲಿತಾಂಶಗಳ ಸೀಮಿತ ಪರಿಶೀಲನೆಯನ್ನು ನಡೆಸಿದ್ದಾರೆ. ಈ ಆರ್ಥಿಕ ಫಲಿತಾಂಶಗಳ ಪೂರ್ಣ ನಮೂನೆಯು ಬಿಎಸ್‌ಇ ಲಿಮಿಟೆಡ್‌ನ ವೆಬ್‌ಸೈಟ್ www.bseindia.com ಮತ್ತು ಕಂಪನಿಯ ವೆಬ್‌ಸೈಟ್ www.gpl.in ನಲ್ಲೂ ಲಭ್ಯವಿದೆ. ಈ ಕೆಳಗಿನ ಕ್ಯೂ. ಆರ್ ಕೋಡ್ ಅನ್ನು ಸ್ಕ್ಯಾನ್ ಮಾಡುವ ಮೂಲಕ ತ್ರೈಮಾಸಿಕ ಹಣಕಾಸು ಫಲಿತಾಂಶಗಳ ಪೂರ್ಣ ಸ್ವರೂಪವನ್ನು ಪಡೆಯಬಹುದು. ಬಿ). ಕಂಪನಿಯು ಒಂದು ಸೆಗ್ಮೆಂಟ್‌ನಲ್ಲಿ ಮಾತ್ರ ಕಾರ್ಯ ನಿರ್ವಹಿಸುತ್ತದೆ. ಸಿ). ಅಗತ್ಯವಿದ್ದಲ್ಲಿ ಹೋಲಿಕೆ ಮಾಡಲು, ಹಿಂದಿನ ತ್ರೈಮಾಸಿಕ / ಅವಧಿಯ ಅಂಕಿ ಅಂಶಗಳನ್ನು ಮರು ಸಂಗ್ರಹಿಸಲಾಗಿದೆ/ ಮರು ಜೋಡಿಸಲಾಗಿದೆ.

ಗುಜರಾತ್ ಪೆಟ್ರೋಸಿಥಿನ್ಸ್ ಲಿಮಿಟೆಡ್‌ನ ಪರವಾಗಿ
ಸಹಿ/– ಊರ್ಮಿ. ಎನ್. ಪ್ರಸಾದ್
ಜಂಟಿ ವ್ಯವಸ್ಥಾಪಕ ನಿರ್ದೇಶಕರು ಡಿ.ಐ.ಎನ್: 00319482

ಸ್ಥಳ : ಬೆಂಗಳೂರು
ದಿನಾಂಕ : 12/02/2025



ಜಾಗತಿಕ ಹೂಡಿಕೆದಾರರ ಸಮಾವೇಶದ ಅಂಗವಾಗಿ ರಾಜ್ಯ ಜೈವಿಕ ಇಂಧನ ಅಭಿವೃದ್ಧಿ ಮಂಡಳಿಯ ಮಳಿಗೆಯನ್ನು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಉದ್ಘಾಟಿಸಿದರು. ಸಚಿವ ಎಂ.ಬಿ.ಪಾಟೀಲ, ಮಂಡಳಿ ಅಧ್ಯಕ್ಷ ಎಸ್.ಈ. ಸುಧೀಂದ್ರ ಉಪಸ್ಥಿತರಿದ್ದರು

ಜೈವಿಕ ಇಂಧನ ಪ್ರಗತಿಗೆ ಶ್ಲಾಘನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜೈವಿಕ ಇಂಧನ ಕ್ಷೇತ್ರದಲ್ಲಿ ಒಂದು ದಶಕದಲ್ಲಿ ಅನುಷ್ಠಾನಗೊಳಿಸಿರುವ ಕಾರ್ಯ ಯೋಜನೆಗಳು ಹಾಗೂ ಮಂಡಳಿ ಮುಂದಿನ ದಿನಗಳಲ್ಲಿ ರೂಪಿಸಲಿರುವ ಜೈವಿಕ ಇಂಧನ ಕಾರ್ಯ ಯೋಜನೆಗಳ ಪ್ರಾತ್ಯಕ್ಷಿಕೆಯನ್ನು ರಾಜ್ಯ ಜೈವಿಕ ಇಂಧನ ಅಭಿವೃದ್ಧಿ ಮಂಡಳಿ ಆಯೋಜಿಸಿತ್ತು.

ಜಾಗತಿಕ ಹೂಡಿಕೆದಾರರ ಸಮಾವೇಶದ ಅಂಗವಾಗಿ ಮಂಡಳಿಯ ಮಳಿಗೆಯನ್ನು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಉದ್ಘಾಟಿಸಿದರು.

ಈ ವೇಳೆ ಮಂಡಳಿ ಅಧ್ಯಕ್ಷ ಎಸ್.ಈ. ಸುಧೀಂದ್ರ ಅವರು ಜೈವಿಕ ಇಂಧನ ಕಾರ್ಯ ಯೋಜನೆಗಳು, ಮುಂದಿನ ದಿನಗಳಲ್ಲಿ ಮಂಡಳಿಯು ಕೈಗೊಳ್ಳಲಿರುವ ವಾಣಿಜ್ಯೀಕರಣ ಕಾರ್ಯಯೋಜನೆಗಳ ಕುರಿತು ಸಚಿವರಾದ ಶಿವಕುಮಾರ್, ಎಂ.ಬಿ. ಪಾಟೀಲ ಅವರಿಗೆ ಮನವರಿಕೆ ಮಾಡಿಕೊಟ್ಟರು.

ರಾಜ್ಯದಲ್ಲಿ ಜೈವಿಕ ಇಂಧನ ಕ್ಷೇತ್ರದಲ್ಲಿ ಒಂದು ಬಿಲಿಯನ್ ಡಾಲರ್‌ಗೂ ಹೆಚ್ಚಿನ ಹೂಡಿಕೆಗೆ ಅವಕಾಶಗಳಿರುವ ಸಾಧ್ಯತೆಗಳ ಕುರಿತು ಅಂಕಿ, ಅಂಶಗಳೊಂದಿಗೆ ವಿವರಿಸಿದರು. ಬಯೊ ಡೀಸೆಲ್, ಬಯೊ ಬ್ರಿಕೇಟ್, ಕಂಪ್ರೆಸ್ಡ್ ಬಯೊ ಗ್ಯಾಸ್ ಮೊದಲಾದ ಜೈವಿಕ ಇಂಧನ ಕಾರ್ಯ ಪ್ರಯೋಜನಗಳ ಕುರಿತು ಸಚಿವರು ಮೆಚ್ಚುಗೆ ವ್ಯಕ್ತಪಡಿಸಿದರು.

ಬಜೆಟ್‌ನಲ್ಲಿ ಮಂಡಳಿಗೆ ಹೆಚ್ಚಿನ ಅನುದಾನ ನೀಡಬೇಕೆಂಬ ಅಧ್ಯಕ್ಷರ ಮನವಿಗೆ ಸಕಾರಾತ್ಮಕವಾಗಿ ಸ್ಪಂದಿಸಿದ ಸಚಿವರು, ಈ ಕ್ಷೇತ್ರದಲ್ಲಿ ಹೂಡಿಕೆದಾರರನ್ನು ಆಕರ್ಷಿಸಲು ಅನುಕೂಲ ಮಾಡಿಕೊಡಲಾಗುವುದು ಎಂದರು.

ತಿಂಗಳಿಗೆ ಶೇ 3ರಷ್ಟು ವಸೂಲಿ: ಶಾಲೆ ವಿರುದ್ಧ ಆಕ್ರೋಶ

ಶುಲ್ಕ ಪಾವತಿ ವಿಳಂಬಕ್ಕೆ ದಂಡ

ಪ್ರಜಾವಾಣಿ ವಾರ್ತೆ



ಬೆಂಗಳೂರು: ಶುಲ್ಕದ ಕಂತು ಪಾವತಿಸಲು ತಡ ಮಾಡಿದ್ದಕ್ಕೆ ಯಲಹಂಕದ ಸಿಂಗನಾಯಕನಹಳ್ಳಿಯಲ್ಲಿರುವ ವಿಬ್‌ಗಯಾರ್ ಶಾಲೆಯವರು ಕೆಲ ಪೋಷಕರು ಮತ್ತು ಮಕ್ಕಳಿಂದ ಶುಲ್ಕದ ಜೊತೆಗೆ, ಶೇಕಡ 3ರಷ್ಟು ಮೊತ್ತವನ್ನು ದಂಡದ ರೂಪದಲ್ಲಿ ಬಡ್ಡಿ ವಸೂಲಿ ಮಾಡುತ್ತಿದ್ದಾರೆ ಎಂದು ಪೋಷಕರು ಆರೋಪಿಸಿದ್ದಾರೆ.

ಈ ಕ್ರಮವನ್ನು ಖಂಡಿಸಿ ಪೋಷಕರು ಕೆಲವು ಸಂಘಟನೆಗಳ ಕಾರ್ಯಕರ್ತರೊಂದಿಗೆ ಸೇರಿ ಮಂಗಳವಾರ ಶಾಲೆಯ ಎದುರು ಪ್ರತಿಭಟನೆ ನಡೆಸಿ, ಆಡಳಿತ ಮಂಡಳಿ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಪೋಷಕರ ಮನವೊಲಿಸಲು ಶಾಲೆಯವರು ಪ್ರಯತ್ನಿಸಿದ್ದಾರೆ. ಇದಕ್ಕೆ ಒಪ್ಪದ ಪೋಷಕರು, ಆಡಳಿತ ಮಂಡಳಿಯನ್ನು ತರಾಟೆಗೆ ತೆಗೆದುಕೊಂಡಿದ್ದಾರೆ. 'ತಡವಾಗಿ ಶುಲ್ಕ ಪಾವತಿಸಿದರೆ ದಂಡ ವಿಧಿಸಬೇಕೆಂದು ಯಾವ ಕಾನೂನಲ್ಲಿದೆ?' ಎಂದಿದ್ದಾರೆ.

ನಂತರ ಮಾಧ್ಯಮಗಳೊಂದಿಗೆ ಮಾತನಾಡಿದ ಪೋಷಕರು, 'ನಾವು ಐದು ಕಂತುಗಳಲ್ಲಿ ಶುಲ್ಕವನ್ನು ಪಾವತಿಸುತ್ತೇವೆ. ಶಾಲೆ ಆರಂಭಕ್ಕೆ ಮುನ್ನವೇ ಮಾರ್ಚ್ ತಿಂಗಳಲ್ಲೇ ಎರಡು ಕಂತು ಶುಲ್ಕ ಕಟ್ಟಿಸಿಕೊಳ್ಳುತ್ತಾರೆ. ಉಳಿದ ಮೂರು ಕಂತುಗಳನ್ನು ಜನವರಿ ತಿಂಗಳೊಳಗೆ ಹಂತ ಹಂತವಾಗಿ ಪಾವತಿಸಬೇಕು. ಇದು ತಡವಾಗಿದ್ದಕ್ಕೆ ಮೊನ್ನೆ ಶುಲ್ಕ ಪಾವತಿಸಲು ಹೋದ ಪೋಷಕರ ಬಳಿ ತಿಂಗಳಿಗೆ ಶೇ 3ರಂತೆ ದಂಡ ಸೇರಿಸಿ ಪಾವತಿಸಲು ಕೇಳಿದ್ದಾರೆ' ಎಂದು ದೂರಿದರು.

ಎಸ್ಸೆಸ್ಸೆಲ್ಸಿ ವಿದ್ಯಾರ್ಥಿಯೊಬ್ಬರ ಪೋಷಕ ಲೋಕೇಶ್, 'ವರ್ಷಕ್ಕೆ ₹1.58 ಲಕ್ಷ ಶುಲ್ಕ ಪಾವತಿಸುತ್ತೇನೆ. ಕಳೆದ ಮಾರ್ಚ್‌ನಲ್ಲಿ ₹50 ಸಾವಿರ ಕಟ್ಟಿದ್ದೆ. ಉಳಿದಿದ್ದನ್ನು ಮೂರು ಕಂತುಗಳಲ್ಲಿ ಕಟ್ಟಬೇಕಿತ್ತು. ನಾನು ಆ ಹಣವನ್ನು ಒಟ್ಟಿಗೆ ಕಟ್ಟಿದೆ. ಶುಲ್ಕ ಪಾವತಿ ತಡವಾಗಿದ್ದಕ್ಕೆ ತಿಂಗಳಿಗೆ ಶೇ 3ರಂತೆ ₹9 ಸಾವಿರವನ್ನು ಶುಲ್ಕದ ಜೊತೆ ಸೇರಿಸಿ ಕಟ್ಟಲು ಕೇಳಿದರು. ಇದನ್ನು ರಸೀದಿಗಳಲ್ಲಿ ಲಿಖಿತವಾಗಿಯೇ ಕೊಟ್ಟಿದ್ದಾರೆ. ಇದು ಅನ್ಯಾಯ' ಎಂದರು.

ಪ್ರತಿಕ್ರಿಯೆಗಾಗಿ ವಿಬ್‌ಗಯಾರ್ ಶಾಲೆಯವರನ್ನು ಸಂಪರ್ಕಿಸಲು ಪ್ರಯತ್ನಿಸಿದಾಗ ಅವರು ಲಭ್ಯವಾಗಲಿಲ್ಲ.



ಭಾರತದಲ್ಲಿನ ಜಪಾನ್ ರಾಯಭಾರಿ ಕೀಚಿ ಒನೊ ಅವರ ನೇತೃತ್ವದ ನಿಯೋಗವು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಕಾವೇರಿ ನಿವಾಸದಲ್ಲಿ ಬುಧವಾರ ಭೇಟಿಯಾಗಿ, ಮಾತುಕತೆ ನಡೆಸಿತು

ಜೋಯಾಲುಕ್ಕಾಸ್: ಶೇ 50ರಷ್ಟು ರಿಯಾಯಿತಿ

ಬೆಂಗಳೂರು: ಜೋಯಾಲುಕ್ಕಾಸ್‌ನಿಂದ ವರ್ಷದ ಅತಿದೊಡ್ಡ ಆಭರಣ ಮಾರಾಟದ ಅಂಗವಾಗಿ ಗ್ರಾಹಕರಿಗೆ ವಿಶೇಷ ಕೊಡುಗೆ ಪ್ರಕಟಿಸಲಾಗಿದೆ.

ಜೋಯಾಲುಕ್ಕಾಸ್‌ನ ಮಳಿಗೆಗಳಲ್ಲಿ ಎಲ್ಲಾ ಆಭರಣಗಳ ಮಜೂರಿ ಮೇಲೆ ಶೇ 50ರಷ್ಟು ರಿಯಾಯಿತಿ ಘೋಷಿಸಲಾಗಿದೆ. ಮಾರ್ಚ್ 9ರ ವರೆಗೆ ಈ ಕೊಡುಗೆ ಇರಲಿದೆ. ಈ ವಿಶೇಷ ಕೊಡುಗೆಯ ಜೊತೆಗೆ, ಗ್ರಾಹಕರಿಗೆ ಪ್ರತಿ ಖರೀದಿಯೊಂದಿಗೆ ಉಚಿತ ಆಜೀವ ಪರ್ಯಂತ ನಿರ್ವಹಣೆ, ಒಂದು ವರ್ಷದ ಉಚಿತ ವಿಮೆ ಮತ್ತು ಮರುಖರೀದಿ ಖಾತರಿ ನೀಡಲಾಗುತ್ತಿದೆ ಎಂದು ತಿಳಿಸಿದೆ. ಚಿನ್ನ, ವಜ್ರ, ಕತ್ತರಿಸದ ವಜ್ರ, ಹರಳು, ಪ್ಲಾಟಿನಂ ಮತ್ತು ಬೆಳ್ಳಿ ಆಭರಣಗಳಿಗೆ ರಿಯಾಯಿತಿ ಸಿಗಲಿದೆ. ಗ್ರಾಹಕರು ಹತ್ತಿರದ ಜೋಯಾಲುಕ್ಕಾಸ್‌ನ ಮಳಿಗೆಗೆ ಭೇಟಿ ನೀಡಿ ಈ ಪ್ರಯೋಜನ ಪಡೆದುಕೊಳ್ಳಬಹುದು ಎಂದು ತಿಳಿಸಿದೆ.

ಅನಿಕೇತನ ತ್ರೈಮಾಸಿಕಕ್ಕೆ ಲೇಖನ ಆಹ್ವಾನ

ಬೆಂಗಳೂರು: ಕರ್ನಾಟಕ ಸಾಹಿತ್ಯ ಅಕಾಡೆಮಿಯು ಅನಿಕೇತನ ತ್ರೈಮಾಸಿಕಕ್ಕೆ ಲೇಖನಗಳನ್ನು ಆಹ್ವಾನಿಸಿದೆ. ಕರ್ನಾಟಕ ಜಾನಪದ ವಿಶ್ವವಿದ್ಯಾಲಯದ ಸಹಾಯಕ ಸಂಶೋಧನಾಧಿಕಾರಿ ಮಲ್ಲಿಕಾರ್ಜುನ ಬಿ. ಮಾನ್ಪಡೆ ಅವರನ್ನು ಸಂಪಾದಕರನ್ನಾಗಿ ನೇಮಿಸಲಾಗಿದೆ. ಲೇಖನಗಳನ್ನು ಕಳುಹಿಸುವವರು ಸಂಪಾದಕರನ್ನು ಸಂಪರ್ಕಿಸಬಹುದು (9916202298) ಎಂದು ಅಕಾಡೆಮಿ ರಿಜಿಸ್ಟ್ರಾರ್ ಕರಿಯಪ್ಪ ಎನ್. ಪ್ರಕಟಣೆಯಲ್ಲಿ ತಿಳಿಸಿದ್ದಾರೆ.





ವೈಮಾನಿಕ ಪ್ರದರ್ಶನದಲ್ಲಿ ಸೂರ್ಯ ಕಿರಣ್ ತಂಡವು ಆಕಾಶದಲ್ಲಿ ಬಗೆ ಬಗೆಯ ಚಿತ್ತಾರ ಬಿಡಿಸಿ ಬೆರಗು ಮೂಡಿಸಿತು (ಎಡ ಚಿತ್ರ). ಸುಡು ಬಿಸಿಲಿನ ನಡುವೆ ವೈಮಾನಿಕ ಪ್ರದರ್ಶನವನ್ನು ಕುತೂಹಲದಿಂದ ಕಣ್ತುಂಬಿಕೊಂಡ ಜನಸ್ತೋಮ

₹40 ಕೋಟಿ ವೆಚ್ಚ, 400 ಕಿ.ಮೀ. ವರೆಗೂ ಕಾರ್ಯಾಚರಣೆ ಸಾಮರ್ಥ್ಯ

ಯುದ್ಧ ವಿಮಾನ ಪತ್ತೆಗೆ ‘ವಿಎಚ್‌ಎಫ್ ರೇಡಾರ್’

• ಕೆ.ಎಸ್.ಸುನಿಲ್

ಬೆಂಗಳೂರು: ರಕ್ಷಣಾ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆ (ಡಿಆರ್‌ಡಿಒ) ಅಭಿವೃದ್ಧಿ ಪಡಿಸಿರುವ ‘ವಿಎಚ್‌ಎಫ್ ರೇಡಾರ್’, ಐದನೇ ತಲೆಮಾರಿನ ಎಫ್-35, ಎಸ್‌ಯು-57 ಯುದ್ಧ ವಿಮಾನಗಳನ್ನು ಪತ್ತೆ ಹಚ್ಚುವ ಸಾಮರ್ಥ್ಯ ಹೊಂದಿದೆ.

ಡಿಆರ್‌ಡಿಒ ಅಭಿವೃದ್ಧಿಪಡಿಸಿದ ಹಾಗೂ ತಯಾರಿಸಿದ 10 ಅತ್ಯುತ್ತಮ ಉತ್ಪನ್ನಗಳು ಯಲಹಂಕ ವಾಯು ನೆಲೆಯಲ್ಲಿ ನಡೆಯುತ್ತಿರುವ ವೈಮಾನಿಕ ಪ್ರದರ್ಶನದ ಮಳಿಗೆಯಲ್ಲಿ ಗಮನ ಸೆಳೆಯುತ್ತಿವೆ.

ಸ್ವದೇಶಿ ತಂತ್ರಜ್ಞಾನ ಬಳಸಿ ₹40 ಕೋಟಿ ವೆಚ್ಚದಲ್ಲಿ ಅಭಿವೃದ್ಧಿ ಪಡಿಸಿರುವ ವಿಎಚ್‌ಎಫ್ ರೇಡಾರ್ 400 ಕಿ.ಮೀ. ವ್ಯಾಪ್ತಿವರೆಗೂ ಕಾರ್ಯಾಚರಣೆ ನಡೆಸುವ ಸಾಮರ್ಥ್ಯ ಹೊಂದಿದೆ. ಶತ್ರು ದೇಶಗಳ ಐದನೇ ಪೀಳಿಗೆಯ ಯುದ್ಧ ವಿಮಾನಗಳನ್ನು ಗುರುತಿಸಿ, ಸಂಕೇತ ರವಾನಿಸಲಿದೆ. ಆಗ ನಿಗದಿತ ಗುರಿಯನ್ನು ಧ್ವಂಸ ಮಾಡಲು ಸಾಧ್ಯವಾಗುತ್ತದೆ. 20 ನಿಮಿಷಗಳಲ್ಲಿ ಯಾವುದೇ ಸ್ಥಳದಲ್ಲಿ ರೇಡಾರ್ ನಿಯೋಜಿಸಬಹುದು ಎಂದು ತಂತ್ರಜ್ಞರು ವಿವರಿಸಿದರು.

‘ಐದನೇ ಪೀಳಿಗೆಯ ಎಫ್ 35, ಎಸ್‌ಯು 57 ಯುದ್ಧ ವಿಮಾನಗಳು ರೇಡಾರ್‌ಗೂ ಸಿಗದೆ ದೇಶದೊಳಗೆ ನುಸುಳಿ ಬಂದು ದಾಳಿ ನಡೆಸುತ್ತಿದ್ದವು. ಈ ವಿಮಾನಗಳನ್ನು ವಿಎಚ್‌ಎಫ್ ರೇಡಾರ್ ಪತ್ತೆ ಹಚ್ಚುವ ಸಾಮರ್ಥ್ಯ ಹೊಂದಿದೆ. ರಷ್ಯಾ, ಅಮೆರಿಕ, ಇಸ್ರೇಲ್ ದೇಶಗಳು ಮಾತ್ರ ಈ ರೇಡಾರ್ ಅನ್ನು ಬಳಸುತ್ತಿವೆ. ರಷ್ಯಾದಿಂದ ಆಮದು ಮಾಡಿಕೊಳ್ಳುತ್ತಿದ್ದೇವು. ಈಗ ಸ್ವದೇಶದಲ್ಲಿಯೇ ತಯಾರಾಗುವುದರಿಂದ ಭಾರತೀಯ ಸೇನೆಗೆ ಬಲ ಬಂದಂತಾಗಿದೆ. ಮುಂದಿನ ತಿಂಗಳು ಕೋಲಾರದಲ್ಲಿ ಇದರ ಪ್ರಯೋಗಾರ್ಥ ಪರೀಕ್ಷೆ ನಡೆಸಲಾಗುವುದು’ ಎಂದು ಹಿರಿಯ ವಿಜ್ಞಾನಿ ರಾಘವೇಂದ್ರ ‘ಪ್ರಜಾವಾಣಿ’ ಗೆ ತಿಳಿಸಿದರು.

‘ಆರನೇ ತಲೆಮಾರಿನ ಯುದ್ಧ ವಿಮಾನಗಳ ಪತ್ತೆಗಾಗಿ ₹800 ಕೋಟಿ ವೆಚ್ಚದಲ್ಲಿ ಈ ವಿಎಚ್‌ಎಫ್ ರೇಡಾರ್ ಸಾಮರ್ಥ್ಯವನ್ನು ಹೆಚ್ಚಿಸಲಾಗುವುದು. 8 ಸಾವಿರ ಕಿ.ಮೀ. ವ್ಯಾಪ್ತಿಯವರೆಗೂ ಕಾರ್ಯಾಚರಣೆ ನಡೆಸುವುದರಿಂದ ಪಾಕಿಸ್ತಾನ, ಚೀನಾ ದೇಶಗಳ ನೆಲೆಗಳ ಮೇಲೂ ಕಣ್ಗಾವಲು ಇರಿಸಬಹುದಾಗಿದೆ’ ಎಂದರು.



ಯಲಹಂಕ ವಾಯುನೆಲೆಯಲ್ಲಿ ನಡೆಯುತ್ತಿರುವ ವೈಮಾನಿಕ ಪ್ರದರ್ಶನದ ಮಳಿಗೆಯಲ್ಲಿ ಗಮನ ಸೆಳೆದ ಡಿಆರ್‌ಡಿಒ ಅಭಿವೃದ್ಧಿಪಡಿಸಿರುವ ವಿಎಚ್‌ಎಫ್ ರೇಡಾರ್ ಪ್ರಜಾವಾಣಿ ಚಿತ್ರಗಳು: ಎಂ.ಎಸ್.ಮಂಜುನಾಥ್

ಬಿರು ಬಿಸಿಲು: ಅರ್ಧಕ್ಕೆ ಹೊರಟ ಪ್ರೇಕ್ಷಕರು

ವೈಮಾನಿಕ ಪ್ರದರ್ಶನದ ಮೂರನೇ ದಿನವಾದ ಬುಧವಾರ ಕೇವಲ ಪ್ರದರ್ಶಕರಿಗಷ್ಟೇ ಅವಕಾಶವಿದ್ದರೂ ಪ್ರೇಕ್ಷಕರಿಗೆ ಕೊರತೆ ಇರಲಿಲ್ಲ. ಪ್ರವೇಶ ದ್ವಾರದಲ್ಲಿ ಉದ್ದುದ್ದ ಸಾಲಿನಲ್ಲಿ ನಿಂತು ಜನರು ಪಾಸ್ ತೋರಿಸಿ, ಪ್ರವೇಶ ಪಡೆದುಕೊಳ್ಳುತ್ತಿದ್ದರು.

ಮೊದಲ ಮೂರು ದಿನ ಉದ್ಯಮಿಗಳು, ದೇಶ, ವಿದೇಶಗಳ ಸೇನಾಪಡೆ ಮುಖ್ಯಸ್ಥರು, ಕೈಗಾರಿಕೋದ್ಯಮಿಗಳು, ಗಣ್ಯರಿಗೆ ಮಾತ್ರ ಅವಕಾಶ ಕಲ್ಪಿಸಲಾಗಿದೆ. ಆದರೆ, ಎಚ್‌ಎಎಲ್, ಬಿಇಎಲ್, ಐಎಎಫ್, ಡಿಆರ್‌ಡಿಒ, ಎನ್‌ಎಎಲ್ ಸಿಬ್ಬಂದಿ, ನಿವೃತ್ತ ಸಿಬ್ಬಂದಿ ಹಾಗೂ ಕುಟುಂಬದವರು ಹೆಚ್ಚಿನ ಸಂಖ್ಯೆಯಲ್ಲಿ ಭೇಟಿ ನೀಡಿದ್ದರು. ಪೊಲೀಸ್ ಹಾಗೂ ಅಧಿಕಾರಿಗಳ ಕುಟುಂಬದವರು ಸಹ ಬಂದಿದ್ದರು. ವಾಯುನೆಲೆಯ ಕೆಲವು ಕಡೆ ಸ್ಥಾಪಿಸಿರುವ ಮೊಬೈಲ್ ಶೌಚಾಲಯಗಳ ಎದುರು ಮಹಿಳೆಯರು ಸಾಲುಗಟ್ಟಿ ನಿಂತಿದ್ದರು.

‘ಗುರುವಾರದಿಂದ ವೈಮಾನಿಕ ಪ್ರದರ್ಶನ ವೀಕ್ಷಣೆಗೆ ಸಾರ್ವಜನಿಕರಿಗೆ ಅವಕಾಶ ನೀಡಿರುವುದರಿಂದ ಹೆಚ್ಚಿನ ಸಂಖ್ಯೆಯಲ್ಲಿ ಬರುತ್ತಾರೆ. ಹಾಗಾಗಿ ಶೌಚಾಲಯಗಳ ಸಂಖ್ಯೆ ಮತ್ತಷ್ಟು ಹೆಚ್ಚಿಸಬೇಕು’ ಎಂದು ಆಗ್ರಹಿಸಿದರು.

ಮಧ್ಯಾಹ್ನ 12ಕ್ಕೆ ಸರಿಯಾಗಿ ವೈಮಾನಿಕ ಪ್ರದರ್ಶನ ಆರಂಭಗೊಂಡಿತು. ಅರ್ಧ ತಾಸು ಬಿಸಿಲಿನಲ್ಲಿಯೇ ನಿಂತು ವೀಕ್ಷಿಸಿದರು. ಬಿಸಿಲಿನ ತಾಪ ಹೆಚ್ಚುತ್ತಿದ್ದಂತೆ ಹೆಚ್ಚಿನ ಜನರು ಪ್ರದರ್ಶನ ಮುಗಿಯುವವರೆಗೂ ಇರದೇ, ಅರ್ಧಕ್ಕೆ ಮನೆಯತ್ತ ಹೊರಟರು.

ಸೂರ್ಯ ಕಿರಣ್ ವಿಮಾನಗಳು ಆಗಸದಲ್ಲಿ ಬಗೆ ಬಗೆಯ ಚಿತ್ರಗಳನ್ನು ಬಿಡಿಸಿ ನೋಡುಗರಲ್ಲಿ ಬೆರಗು ಮೂಡಿಸಿದವು. ಒಂದೊಂದು ವಿನ್ಯಾಸ ಮೂಡಿಸುವಾಗಲೂ ವಿಮಾನಗಳು ಒಂದೊಂದು ದಿಕ್ಕಿನಿಂದ ಬಂದು ಜನರ ಹೃದಯ ಬಡಿತ ಹೆಚ್ಚಿಸಿದವು. ಕೇವಲ 5 ಮೀಟರ್ ಅಂತರದಲ್ಲಿ ಸೂರ್ಯಕಿರಣ್ ನ 9 ವಿಮಾನಗಳ ಹಾರಾಟವು ಸ್ಮೃತಿ ಪಟಲದಲ್ಲಿ ಉಳಿಯುವಂತಿತ್ತು.

ರಷ್ಯಾದ ಎಸ್‌ಯು 57 ಮತ್ತು ಅಮೆರಿಕದ ಎಫ್ 35 ಯುದ್ಧ ವಿಮಾನಗಳ ಶರವೇಗದ ಹಾರಾಟ ಪ್ರಮುಖ ಆಕರ್ಷಣೆಯಾಗಿದ್ದವು. ಕಿವಿ ಗುಂಯ್ ಎನ್ನುವಷ್ಟು ಶಬ್ದದೊಂದಿಗೆ 90 ಡಿಗ್ರಿಯಲ್ಲಿ ಆಕಾಶಕ್ಕೆ ಏರುವ ವೇಳೆ ಎಲ್ಲರೂ ಒಂದು ಕ್ಷಣ ಮೂಕವಿಸ್ಮಿತರಾದರು.



ಬೆಂಗಳೂರಿನ ಯಲಹಂಕ ವಾಯುನೆಲೆಯಲ್ಲಿ ಬುಧವಾರ ನಡೆದ ಏರೊ ಇಂಡಿಯಾ 15ನೇ ಆವೃತ್ತಿಯಲ್ಲಿ ಭಾರತೀಯ ವಾಯುಸೇನೆಯ ಬ್ಯಾಂಡ್ ಏರ್ ವಾರಿಯರ್ಸ್ ಸಿಂಫೋನಿ ಆರ್ಕೆಸ್ಟ್ರಾ ತಂಡವು ಸಂಗೀತ ಕಾರ್ಯಕ್ರಮ ಪ್ರಸ್ತುತಪಡಿಸಿತು ಪ್ರಜಾವಾಣಿ ಚಿತ್ರ

ಯುವಜನತೆಯ ಹೃದಯ ಗೆದ್ದ ವಾಯುಸೇನೆ ಬ್ಯಾಂಡ್

• ಇ.ಎಸ್. ಸುಧೀಂದ್ರ ಪ್ರಸಾದ್

ಬೆಂಗಳೂರು: ಯಲಹಂಕ ವಾಯುನೆಲೆಯಲ್ಲಿ ಆಯೋಜನೆಗೊಂಡಿರುವ ಏರೊ ಇಂಡಿಯಾದ 15ನೇ ಆವೃತ್ತಿಯಲ್ಲಿ ಭಾರತವನ್ನೂ ಒಳಗೊಂಡು ವಿವಿಧ ದೇಶಗಳ ಯುದ್ಧ ವಿಮಾನಗಳ ಜತೆಗೆ, ವಾಯು ಸೇನೆಯ ಬ್ಯಾಂಡ್ ಯುವ ಮನಸ್ಸುಗಳನ್ನು ಸೂರೆ ಮಾಡಿದೆ.

‘ಅನಿಸುತಿದೆ ಏಕೋ ಇಂದು’, ‘ಗೊಂಬೆ ಹೇಳುತೈತೆ’, ‘ತೇರೆ ಬಿನಾ ನಹಿ ಲಗದಾ’, ‘ಪರಿಂದಾ’, ‘ಮಸ್ತ್ ಕಲಂದರ್’, ‘ಸಮ್ಮರ್ ಆಫ್ 69’, ‘ಸ್ಮೋಕ್ ಆನ್ ದಿ ವಾಟರ್’ ಹೀಗೆ ಕನ್ನಡ, ಹಿಂದಿ, ಇಂಗ್ಲಿಷ್ ಹಾಡುಗಳನ್ನು ಪ್ರಸ್ತುತಪಡಿಸುವ ವಾಯು ಸೇನೆಯ ನೀಲಿ ಸಮವಸ್ತ್ರಧಾರಿಗಳ ಬ್ಯಾಂಡ್‌ನ ಮೋಡಿಗೆ ಯುವಜನತೆ ಕೇಕೆ ಹಾಕುತ್ತಾ ಹೆಜ್ಜೆಯನ್ನೂ ಹಾಕಿದರು.

ಸ್ಕ್ವಾಡ್ರನ್ ಲೀಡರ್ ಎಲ್.ಎಸ್. ರೂಪಚಂದ್ರ ಅವರ ನಿರ್ದೇಶನದ ಏರ್ ವಾರಿಯರ್ಸ್ ಸಿಂಫೊನಿ ಆರ್ಕೆಸ್ಟ್ರಾ ತಂಡವು ವಿಮಾನಗಳ ಪ್ರದರ್ಶನಕ್ಕೆ ಮೀಸಲಿರುವ ಸ್ಥಿರ ಪ್ರದರ್ಶನ ಮಳಿಗೆಯ ಎದುರೇ ವೇದಿಕೆ ಹೊಂದಿದೆ. ದೇಶಾಭಿಮಾನದ ಗಾಯನಗಳೊಂದಿಗೆ ಬಾಲಿವುಡ್‌ನ ಸ್ಫೂರ್ತಿಯ ಗೀತೆಗಳು, ಫ್ಯೂಷನ್, ರಾಕ್ ಮತ್ತು ಪಾಪ್ ಗೀತೆಗಳನ್ನು ಬುಧವಾರ ಪ್ರಸ್ತುತಪಡಿಸಿತು.

ಬೃಹತ್ ಸ್ಪೀಕರ್‌ಗಳಲ್ಲಿ ಹೊರಹೊಮ್ಮುತ್ತಿದ್ದ ಗೀತೆಗಳನ್ನು ಆಲಿಸಲು ಸೇರಿದ ಯುವಜನರ ಒತ್ತಾಯ ಮುಂದುವರಿಯುತ್ತಲೇ ಈ ತಂಡ ಬರೋಬ್ಬರಿ ಒಂದೂವರೆ ಗಂಟೆಗಳ ಕಾಲ ಪ್ರದರ್ಶನ ನೀಡಿತು.

ಸ್ಯಾಕ್ಸೊಫೋನ್‌ನಲ್ಲಿ ರಾಜೇಂದ್ರ ಸಿಂಗ್, ಕೊಳಲಿನಲ್ಲಿ ಅಲೆಕ್ಸ್‌ಮಾನ್, ಬೇಸ್ ಗಿಟಾರ್ ಮತ್ತು ಗಾಯನದಲ್ಲಿ ಎಲ್.ಎನ್. ಸಿಂಗ್, ಎಂ.ಎನ್. ಸಿಂಗ್, ಹೋಷಿಯಾರ್ ಸಿಂಗ್ ಮತ್ತು ಶಿವಂಗು ಧಾರ್, ಕೀಬೋರ್ಡ್‌ನಲ್ಲಿ ಆ್ಯಲನ್ ಡಿ. ಸ್ಯಾಮ್ಯುಯಲ್ ಮತ್ತು ಸುಖಮ್ ಬ್ರೊರಾಕೂರ್, ಲೀಡ್ ಗಿಟಾರ್‌ನಲ್ಲಿ ಆದರ್ಶ ಪ್ರಧಾನ್ ಮತ್ತು ಸುಜಿತ್ ಬಾರಾ, ಡ್ರಮ್ಸ್ ವಾದಕ ಶ್ಯಾಮ್ ಮೋಹನ್, ಪರ್ಕಷನ್‌ನಲ್ಲಿ ಮಯೂರ್ ಮಹಾಂತಾ ಅವರ ತಂಡದ ಮೋಡಿಗೆ ಯುವ ಮನಸ್ಸುಗಳು ಜಾರಿಹೋದವು.

ತಿರಂಗ ಸೇನಾನಿ ಎಂಬ ತಮ್ಮದೇ ಸ್ಫೂರ್ತಿದಾಯಕ ಗೀತೆಯೊಂದಿಗೆ ಸಾರಂಗ್ ಫ್ಯೂಷನ್ ಸಂಗೀತವನ್ನು ಈ ತಂಡ ಪ್ರಸ್ತುಪಡಿಸಿತು. ಭಾರತೀಯ ಶಾಸ್ತ್ರೀಯ ಸಂಗೀತದೊಂದಿಗೆ ಆಫ್ರಿಕಾದ ಎಲೆಕ್ಟ್ರಾನಿಕ್ ಸಂಗೀತದ ಸಮ್ಮಿಳಿತ, ಮಿಲಿಟರಿ ಬೇಸ್ ಸಾಧನದೊಂದಿಗೆ ಹೊರಹೊಮ್ಮುತ್ತಿದ್ದ ಸಂಗೀತಕ್ಕೆ ನೆರೆದಿದ್ದ ಯುವ ಸಮೂಹ ತಲೆಯಾಡಿಸಿತು. ಇನ್ನೂ ಕೆಲವರು ಹೆಜ್ಜೆಯನ್ನೂ ಹಾಕಿದರು.

ತಮ್ಮ ತಂಡದ ಕುರಿತು ಮಾಹಿತಿ ನೀಡಿದ ಸ್ಕ್ವಾಡ್ರನ್ ಲೀಡರ್ ಎಲ್.ಎಸ್. ರೂಪಚಂದ್ರ, ‘ಏರೊ ಇಂಡಿಯಾದ ಮೊದಲ ಮೂರು ದಿನ ಬೆಳಿಗ್ಗೆ ಮಾತ್ರ ಪ್ರದರ್ಶನ ನೀಡಲಾಯಿತು. ಗುರುವಾರ ಮತ್ತು ಶುಕ್ರವಾರ ಸಾರ್ವಜನಿಕರ ಭೇಟಿಗೆ ಅವಕಾಶ ಕಲ್ಪಿಸಿರುವುದರಿಂದ ನಾಲ್ಕು ಬಾರಿ ನಮ್ಮ ತಂಡ ಪ್ರದರ್ಶನ ನೀಡುವಂತೆ ವ್ಯವಸ್ಥೆ ಮಾಡಲಾಗಿದೆ. ಬೆಳಿಗ್ಗೆ 7, 7.45, ಮಧ್ಯಾಹ್ನ 12 ಹಾಗೂ 3ಕ್ಕೆ ಪ್ರದರ್ಶನ ನೀಡಲಾಗುವುದು’ ಎಂದರು.

68ನೇ ಸಿಸಿಎಚ್ ನ್ಯಾಯಾಲಯದಿಂದ ಆದೇಶ ಪ್ರಕಟ

ಕೊಲೆ: ಅಪರಾಧಿಗೆ ಜೀವಾವಧಿ ಶಿಕ್ಷೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮೊಬೈಲ್‌ಗೆ ಕರೆನ್ಸಿಯನ್ನು ಉಚಿತವಾಗಿ ಹಾಕಲಿಲ್ಲ ಎನ್ನುವ ಕಾರಣಕ್ಕೆ ಅಂಗವಿಕಲ ವ್ಯಕ್ತಿಯನ್ನು ಮಾರಕಾಸ್ತ್ರಗಳಿಂದ ಕೊಚ್ಚಿ ಕೊಲೆ ಮಾಡಿದ್ದ ಅಪರಾಧಿಗೆ 68ನೇ ಸಿಸಿಎಚ್ ನ್ಯಾಯಾಲಯವು ಜೀವಾವಧಿ ಜೈಲು ಶಿಕ್ಷೆ ಹಾಗೂ ₹50 ಸಾವಿರ ದಂಡ ವಿಧಿಸಿ ಆದೇಶಿಸಿದೆ.

ಮಡಿವಾಳದ ಅಮಾನ್ ಉಲ್ಲಾ ಶಿಕ್ಷೆಗೆ ಒಳಗಾದ ಅಪರಾಧಿ. ಮಡಿವಾಳ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ 2016ರ ಮಾರ್ಚ್ 5ರಂದು ರಾತ್ರಿ 10 ಗಂಟೆಯ ಸುಮಾರಿಗೆ ಮೊಹಮ್ಮದ್ ನಾಸಿರುದ್ದೀನ್ ಅವರ ಕೊಲೆ ನಡೆದಿತ್ತು. ಈ ಕೊಲೆ ಪ್ರಕರಣದಲ್ಲಿ ಅಮಾನ್ ಉಲ್ಲಾ ಅಪರಾಧಿ ಎಂದು ನ್ಯಾಯಾಲಯ ಸಾರಿದೆ.

ಅಂಗವಿಕಲರಾಗಿದ್ದ ಮೊಹಮ್ಮದ್ ನಾಸಿರುದ್ದೀನ್ ಅವರು ಮೊಬೈಲ್ ಅಂಗಡಿ ನಡೆಸುತ್ತಿದ್ದರು. ಅದೇ ಅಂಗಡಿಗೆ ಅಮಾನ್ ಉಲ್ಲಾ ಕರೆನ್ಸಿ ಹಾಕಿಸಿಕೊಳ್ಳಲು ಬರುತ್ತಿದ್ದ. ಕರೆನ್ಸಿಯನ್ನು ಹಲವು ಬಾರಿ ಹಾಕಿಸಿಕೊಂಡು, ಹಣ ನೀಡಿರಲಿಲ್ಲ. 2016ರ ಮಾರ್ಚ್ 5ರಂದು ಅಂಗಡಿಗೆ ಬಂದು ಕರೆನ್ಸಿಯನ್ನು ಉಚಿತವಾಗಿ ಹಾಕಿಕೊಡುವಂತೆ ಬಲವಂತ ಮಾಡಿದ್ದ. ಈ ವಿಚಾರಕ್ಕೆ ಇಬ್ಬರ ಮಧ್ಯೆ ಗಲಾಟೆ ನಡೆದಿತ್ತು. ನಾಸಿರುದ್ದೀನ್‌ಗೆ ಅಪರಾಧಿ ಚಾಕುವಿನಿಂದ ತಲೆ, ಎದೆಭಾಗಕ್ಕೆ 24 ಬಾರಿ ಇರಿದು ಕೊಲೆ ಮಾಡಿ ಪರಾರಿ ಆಗಿದ್ದ.

ಮಡಿವಾಳ ಠಾಣೆಯ ಪೊಲೀಸರು ಪ್ರಕರಣ ದಾಖಲಿಸಿಕೊಂಡು, ಆರೋಪಿಯನ್ನು ಬಂಧಿಸಿದ್ದರು. ತನಿಖೆ ನಡೆಸಿ ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಿದ್ದರು.

ವಾದ-ಪ್ರತಿವಾದ ಆಲಿಸಿದ ನ್ಯಾಯಾಧೀಶೆ ಎಂ.ರಶ್ಮಿ ಅವರು ಅಮಾನ್ ಉಲ್ಲಾನನ್ನು ಅಪರಾಧಿ ಎಂದು ಘೋಷಿಸಿ, ಶಿಕ್ಷೆ ಹಾಗೂ ದಂಡ ವಿಧಿಸಿದ್ದಾರೆ. ಪ್ರಾಸಿಕ್ಯೂಷನ್ ಪರವಾಗಿ ಸರ್ಕಾರಿ ವಕೀಲ ಆರ್.ವಿ. ಭಟ್ ವಾದ ಮಂಡಿಸಿದ್ದರು.

ಮೊಬೈಲ್ ಬಳಸದಂತೆ ಬುದ್ಧಿಮಾತು: ವಿದ್ಯಾರ್ಥಿನಿ ಆತ್ಮಹತ್ಯೆ

ಕಾಡುಗೋಡಿ ಪೊಲೀಸ್ ಠಾಣಾ ವ್ಯಾಪ್ತಿಯ ಅಸೆಟ್ಜ್ ಮಾರ್ಕ್ ಅಪಾರ್ಟ್‌ಮೆಂಟ್‌ನ 20ನೇ ಮಹಡಿಯಿಂದ ಜಿಗಿದು ವಿದ್ಯಾರ್ಥಿನಿಯೊಬ್ಬಳು (15 ವರ್ಷ) ಬುಧವಾರ ಆತ್ಮಹತ್ಯೆ ಮಾಡಿಕೊಂಡಿದ್ದಾಳೆ.

ವೈಟ್‌ಫೀಲ್ಡ್‌ನ ಸಿಬಿಎಸ್‌ಇ ಶಾಲೆಯೊಂದರಲ್ಲಿ 10ನೇ ತರಗತಿಯಲ್ಲಿ ವಿದ್ಯಾರ್ಥಿನಿ ಓದುತ್ತಿದ್ದಳು.

ಪೋಷಕರ ಜತೆಗೆ ಅಪಾರ್ಟ್‌ಮೆಂಟ್‌ನ ಫ್ಲ್ಯಾಟ್‌ನಲ್ಲಿ ನೆಲಸಿದ್ದ ವಿದ್ಯಾರ್ಥಿನಿ, ಬುಧವಾರ 11.30ರ ಸುಮಾರಿಗೆ ಆತ್ಮಹತ್ಯೆ ಮಾಡಿಕೊಂಡಿದ್ದಾಳೆ ಎಂದು ಮೂಲಗಳು ತಿಳಿಸಿವೆ.

ವಿದ್ಯಾರ್ಥಿನಿಯ ಪೋಷಕರು ಮಧ್ಯಪ್ರದೇಶದವರು. ವಿದ್ಯಾರ್ಥಿನಿಯ ತಂದೆ ಸಾಫ್ಟ್‌ವೇರ್ ಎಂಜಿನಿಯರ್ ಆಗಿದ್ದು, ನಗರದ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದಾರೆ. ತಾಯಿ ಗೃಹಿಣಿ. ಘಟನೆ ನಡೆದಾಗ ತಂದೆ ಕೆಲಸಕ್ಕೆ ತೆರಳಿದ್ದರು.

ಫೆಬ್ರುವರಿ 15ರಿಂದ ಶಾಲೆಯಲ್ಲಿ ಪರೀಕ್ಷೆಗೆ ದಿನಾಂಕ ನಿಗದಿ ಆಗಿತ್ತು. ಪರೀಕ್ಷೆ ವೇಳೆಯಲ್ಲಿ ಮೊಬೈಲ್ ಬಳಕೆ ಕಡಿಮೆ ಮಾಡಿ ಓದಿನತ್ತ ಗಮನ ಹರಿಸುವಂತೆ ಬುಧವಾರ ಬೆಳಿಗ್ಗೆ ತಾಯಿ ಬುದ್ಧಿಮಾತು ಹೇಳಿದ್ದರು. ಅದಾದ ಮೇಲೆ ತಾಯಿ ಮನೆ ಕೆಲಸದಲ್ಲಿ ಮಗ್ನರಾಗಿದ್ದರು. ತಾಯಿಯ ಮಾತಿನಿಂದ ಕೋಪಗೊಂಡಿದ್ದ ಮಗಳು, ಮಹಡಿಗೆ ತೆರಳಿ ಅಲ್ಲಿಂದ ಜಿಗಿದು ಆತ್ಮಹತ್ಯೆ ಮಾಡಿಕೊಂಡಿದ್ದಾಳೆ ಎಂಬುದು ಪ್ರಾಥಮಿಕ ತನಿಖೆಯಿಂದ ಗೊತ್ತಾಗಿದೆ.

ಮಾಹಿತಿ ತಿಳಿದು ಘಟನಾ ಸ್ಥಳಕ್ಕೆ ತೆರಳಿ ಪರಿಶೀಲನೆ ನಡೆಸಲಾಗಿದೆ. ಮರಣೋತ್ತರ ಪರೀಕ್ಷೆ ನಡೆಸಲು ಮೃತದೇಹವನ್ನು ಆಸ್ಪತ್ರೆಗೆ ರವಾನಿಸಲಾಗಿದೆ ಎಂದು ಪೊಲೀಸರು ಹೇಳಿದರು.

‘ಕಾಡುಗೋಡಿ ಪೊಲೀಸ್ ಠಾಣೆಯಲ್ಲಿ ಅಸಹಜ ಸಾವು ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಲಾಗುತ್ತಿದೆ’ ಎಂದು ವೈಟ್‌ಫೀಲ್ಡ್ ಡಿಸಿಪಿ ಶಿವಕುಮಾರ್ ಗುಣಾರೆ ತಿಳಿಸಿದರು.

ರ‍್ಯಾಪರ್ ಆತ್ಮಹತ್ಯೆ

ಬೆಂಗಳೂರು: ಕಾಡುಬೀಸನಹಳ್ಳಿ ಅಪಾರ್ಟ್‌ಮೆಂಟ್‌ವೊಂದರಲ್ಲಿ ನೆಲಸಿದ್ದ ಒಡಿಶಾದ ರ‍್ಯಾಪರ್ ಅಭಿನವ್ ಸಿಂಗ್ ವಿಷ ಸೇವಿಸಿ ಫೆ. 9ರಂದು ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ನಗರದ ಕಂಪನಿಯೊಂದರಲ್ಲಿ ಅಭಿನವ್ ಎಂಜಿನಿಯರ್ ಆಗಿದ್ದರು.

ಭಾನುವಾರ ರಾತ್ರಿ ಸ್ನೇಹಿತರ ಜತೆಗೆ ತಮ್ಮ ಫ್ಲ್ಯಾಟ್‌ನಲ್ಲಿ ಪಾರ್ಟಿ ಮಾಡಿದ್ದರು. ಸ್ನೇಹಿತರು ತೆರಳಿದ ನಂತರ ವಿಷ ಸೇವಿಸಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂದು ಪೊಲೀಸರು ಹೇಳಿದರು.

ಮಾರತ್‌ಹಳ್ಳಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಿಕೊಳ್ಳಲಾಗಿದೆ. ಮರಣ ಪತ್ರ ದೊರೆತಿಲ್ಲ. ಯಾವ ಕಾರಣಕ್ಕೆ ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂಬುದರ ಕುರಿತು ತನಿಖೆ ನಡೆಸಲಾಗುತ್ತಿದೆ ಎಂದು ಪೊಲೀಸರು ತಿಳಿಸಿದರು.

‘ಪತ್ನಿ ಕಿರುಕುಳದಿಂದ ಅಭಿನವ್ ಸಿಂಗ್ ಆತ್ಮಹತ್ಯೆ ಮಾಡಿಕೊಂಡಿದ್ದಾರೆ’ ಎಂದು ಕುಟುಂಬಸ್ಥರು ಆರೋಪಿಸಿದ್ದಾರೆ. ಮರಣೋತ್ತರ ಪರೀಕ್ಷೆ ನಡೆಸಿ ಮೃತದೇಹವನ್ನು ಕುಟುಂಬದವರಿಗೆ ಹಸ್ತಾಂತರ ಮಾಡಲಾಗಿದೆ.

‘ಅಭಿನವ್ ಸಿಂಗ್ ಅವರ ಪತ್ನಿ ವಿರುದ್ಧ ಒಡಿಶಾದಲ್ಲಿ ಪ್ರಕರಣವೊಂದು ದಾಖಲಾಗಿದ್ದು, ಅಲ್ಲಿನ ಪೊಲೀಸರು ತನಿಖೆ ನಡೆಸುತ್ತಿದ್ದಾರೆ’ ಎಂದು ಮೂಲಗಳು ಹೇಳಿವೆ.

ನಿರ್ಜನ ಪ್ರದೇಶಕ್ಕೆ ಕರೆದೊಯ್ದು ಸುಲಿಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರಕ್ಕೆ ಬರುವ ಹೊರ ರಾಜ್ಯಗಳ ಪ್ರಯಾಣಿಕರನ್ನೇ ಗುರಿಯಾಗಿಸಿ, ನಿರ್ಜನ ಪ್ರದೇಶಕ್ಕೆ ಕರೆದೊಯ್ದು ಮಾರಕಾಸ್ತ್ರ ತೋರಿಸಿ ನಗದು ಹಾಗೂ ಚಿನ್ನಾಭರಣ ಸುಲಿಗೆ ಮಾಡುತ್ತಿದ್ದ ಇಬ್ಬರು ಆಟೊ ಚಾಲಕರನ್ನು ಕಮರ್ಷಿಯಲ್ ಸ್ಟ್ರೀಟ್ ಠಾಣೆ ಪೊಲೀಸರು ಬಂಧಿಸಿದ್ದಾರೆ.



ಮೊಹಮ್ಮದ್ ನೇಫಲ್



ಜಾವೇದ್ ಖಾನ್

ಆನೇಪಾಳ್ಯ ನಿವಾಸಿಗಳಾದ ಮೊಹಮ್ಮದ್ ನೇಫಲ್(25) ಮತ್ತು ಜಾವೇದ್ ಖಾನ್(25) ಬಂಧಿತರು.

ಪಶ್ಚಿಮ ಬಂಗಾಳದ ನಾಮಾಜಿ ಮಂಡಲ್ ಎಂಬುವರು ನೀಡಿದ ದೂರು ಆಧರಿಸಿ, ಆರೋಪಿಗಳನ್ನು ಬಂಧಿಸಲಾಗಿದೆ. ಬಂಧಿತರಿಂದ ಕೃತ್ಯಕ್ಕೆ ಬಳಸುತ್ತಿದ್ದ ಒಂದು ಆಟೊ ಹಾಗೂ ₹2 ಸಾವಿರ ನಗದು ಜಪ್ತಿ ಮಾಡಿಕೊಳ್ಳಲಾಗಿದೆ. ತಲೆಮರೆಸಿಕೊಂಡಿರುವ ಮತ್ತೊಬ್ಬನಿಗಾಗಿ ಶೋಧ ನಡೆದಿದೆ ಎಂದು ಪೊಲೀಸರು ಹೇಳಿದರು.

ಫೆ.9ರಂದು ನಾಮಾಜಿ ಮಂಡಲ್‌ಗೆ ಚಾಕು ತೋರಿಸಿ ಸುಲಿಗೆ ಮಾಡಿಕೊಂಡು ಆರೋಪಿಗಳು ಪರಾರಿ ಆಗಿದ್ದರು.

‘ದೂರುದಾರ ಮಂಡಲ್ ಅವರು ಎರಡು ತಿಂಗಳ ಹಿಂದೆ ನಗರಕ್ಕೆ ಬಂದು ನಾರಾಯಣಪುರದ ಬಾಡಿಗೆ ಮನೆಯಲ್ಲಿ ನೆಲಸಿದ್ದಾರೆ. ನಿರ್ಮಾಣ ಹಂತದ ಕಟ್ಟಡಗಳಲ್ಲಿ ಗಾರೆ ಕೆಲಸ ಮಾಡುತ್ತಿದ್ದಾರೆ. ಫೆ.9ರಂದು ಪಶ್ಚಿಮ ಬಂಗಾಳಕ್ಕೆ ತೆರಳಲು ರಾತ್ರಿ 11 ಗಂಟೆಯ ಸುಮಾರಿಗೆ ಬೈಯಪ್ಪನಹಳ್ಳಿ ರೈಲು ನಿಲ್ದಾಣಕ್ಕೆ ಬಂದಿದ್ದರು. ಅವರು ರೈಲು ನಿಲ್ದಾಣದ ಪ್ಲ್ಯಾಟ್‌ಫಾರ್ಮ್ ತಲುಪುವಷ್ಟರಲ್ಲಿ ರೈಲು ಹೊರಟಿತ್ತು. ನಾರಾಯಣಪುರದಲ್ಲಿ ಇರುವ ಬಾಡಿಗೆ ಮನೆಗೆ ವಾಪಸ್ ಹೋಗಲು ರಾತ್ರಿ 11.30ರ ಸುಮಾರಿಗೆ ಆಟೊ ಕೇಳಿದ್ದರು. ಚಾಲಕ ಮೊಹಮ್ಮದ್ ನೇಫಲ್ ಜತೆಗೆ ಮಾತುಕತೆ ನಡೆಸಿ ₹200 ಬಾಡಿಗೆಗೆ ಒಪ್ಪಿಸಿದ್ದರು. ಚಾಲಕ ನೇಫಲ್, ಮಂಡಲ್ ಅವರನ್ನು ಆಟೊದಲ್ಲಿ ಕೂರಿಸಿಕೊಂಡು ಪುಲಿಕೇಶಿನಗರದ ಕಡೆಗೆ ಬಂದಿದ್ದ. ಅಲ್ಲಿ, ಜಾವೇದ್ ಖಾನ್ ಮತ್ತು ಸಲ್ಮಾನ್ ಟೀ ಕುಡಿಯುತ್ತಾ ನಿಂತಿದ್ದರು. ಅವರನ್ನೂ ಆಟೊದಲ್ಲಿ ಹತ್ತಿಸಿಕೊಂಡಿದ್ದ’ ಎಂದು ಮೂಲಗಳು ಹೇಳಿವೆ.

‘ಶಿವಾಜಿನಗರ ಬಸ್ ನಿಲ್ದಾಣ ಸಮೀಪದ ನಿರ್ಜನ ಪ್ರದೇಶಕ್ಕೆ ಮಂಡಲ್ ಅವರನ್ನು ಕರೆದೊಯ್ದು ಚಾಕು ತೋರಿಸಿ ಹಣಕ್ಕೆ ಬೇಡಿಕೆ ಇಟ್ಟಿದ್ದರು. ಹಣವಿಲ್ಲ ಎಂದಾಗ ಆತನ ಜೇಬಿನಲ್ಲಿದ್ದ ₹2 ಸಾವಿರ ಕಸಿದುಕೊಂಡು ಮಂಡಲ್ ಅವರನ್ನು ರಸ್ತೆಯಲ್ಲೇ ಬಿಟ್ಟು ಪರಾರಿ ಆಗಿದ್ದರು’ ಎಂದು ಪೊಲೀಸರು ಹೇಳಿದರು.

ಆಟೊ ಚಾಲಕರಿಬ್ಬರ ಕೊಲೆ

ಪರಪ್ಪನ ಅಗ್ರಹಾರ ಪೊಲೀಸ್ ಠಾಣಾ ವ್ಯಾಪ್ತಿಯ ಸಿಂಗಸಂದ್ರ, ದೊಡ್ಡ ನಾಗಮಂಗಲದಲ್ಲಿ ಎರಡು ಪ್ರತ್ಯೇಕ ಪ್ರಕರಣಗಳಲ್ಲಿ ಇಬ್ಬರು ಆಟೊ ಚಾಲಕರನ್ನು ದುಷ್ಕರ್ಮಿಗಳು ಕೊಲೆ ಮಾಡಿದ್ದಾರೆ.



ಸಿದ್ದೇಶ್



ಸಿದ್ದಪ್ಪ

ಮದ್ಯ ಕೊಡಿಸುವಂತೆ ಪೀಡಿಸುತ್ತಿದ್ದ ಆಟೊ ಚಾಲಕ, ಸಿಂಗಸಂದ್ರದ ನಿವಾಸಿ ಜಗದೀಶ್(37) ಮೇಲೆ ಕಲ್ಲು ಎತ್ತಿಹಾಕಿ ಕೊಲೆ ಮಾಡಲಾಗಿದೆ. ಕೊಲೆಯ ಆರೋಪದಡಿ ಕೂಡ್ಲು ನಿವಾಸಿ ಸಿದ್ದೇಶ್ ಎಂಬಾತನನ್ನು ಪೊಲೀಸರು ಬಂಧಿಸಿದ್ದಾರೆ.

ಹಣಕಾಸಿನ ವಿಚಾರಕ್ಕೆ ದೊಡ್ಡ ನಾಗಮಂಗಲದಲ್ಲಿ ನಡೆದ ಗಲಾಟೆಯಲ್ಲಿ ಪರಿಚಯಸ್ಥನೇ ದೊಣ್ಣೆಯಿಂದ ಹೊಡೆದು ಹಾಸನದ ಆಟೊ ಚಾಲಕ ದರ್ಶನ್‌ನನ್ನು(24) ಕೊಲೆ ಮಾಡಿದ್ದಾನೆ. ಆರೋಪಿ, ಕಲಬುರಗಿಯ ಸಿದ್ದಪ್ಪ ಬಿರಾದಾರ್‌ನನ್ನು(32) ಪೊಲೀಸರು ಬಂಧಿಸಿದ್ದಾರೆ.

ದರ್ಶನ್ ಮತ್ತು ಸಿದ್ದಪ್ಪ ಬಿರಾದಾರ್ ಪರಿಚಯಸ್ಥರು. ಎರಡು ತಿಂಗಳ ಹಿಂದೆ ಆರೋಪಿಯಿಂದ ದರ್ಶನ್ ₹2,000 ಸಾಲ ಪಡೆದುಕೊಂಡಿದ್ದ. ಸಾಲವನ್ನು ವಾಪಸ್ ಕೊಟ್ಟಿರಲಿಲ್ಲ. ಈ ವಿಚಾರಕ್ಕೆ ಬಾರ್‌ನಲ್ಲಿ ಗಲಾಟೆ ನಡೆದು ದರ್ಶನ್‌ಗೆ ದೊಣ್ಣೆಯಿಂದ ಹೊಡೆದು ಕೊಲೆ ಮಾಡಲಾಗಿದೆ ಎಂದು ಪೊಲೀಸರು ಹೇಳಿದರು.

ಮರ್ಯಾದೆಗೇಡು ಹತ್ಯೆ ಶಂಕೆ

ಆನೇಕಲ್: ತಾಲ್ಲೂಕಿನ ಹಾರೋಹಳ್ಳಿ ಕೆರೆಯಲ್ಲಿ ಬುಧವಾರ ಯುವತಿಯ ಶವ ಪತ್ತೆಯಾಗಿದೆ.

ಸಹನಾ(20) ಮೃತ ಯುವತಿ. ಈಕೆಯ ಸಾವು ಮರ್ಯಾದೆಗೇಡು ಹತ್ಯೆ ಎಂಬ ಅನುಮಾನ ವ್ಯಕ್ತವಾಗಿದೆ.

‘ಮಗಳನ್ನು ಬೈಕ್‌ನಲ್ಲಿ ಕರೆದೊಯ್ಯುತ್ತಿದ್ದೆ. ನಿಯಂತ್ರಣ ತಪ್ಪಿದ ಬೈಕ್ ಕೆರೆಗೆ ಬಿದ್ದಿತು. ನಾನು ಈಜಿ ದಡ ಸೇರಿದ್ದು, ಮಗಳು ಮೃತಪಟ್ಟಿದ್ದಾಳೆ’ ಎಂದು ಯುವತಿಯ ತಂದೆ ರಾಮಮೂರ್ತಿ ಹೆಬ್ಬಗೋಡಿ ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ.

ಸಹನಾ ಯುವಕನೊಬ್ಬನನ್ನು ಪ್ರೀತಿಸಿದ್ದಳು ಎನ್ನಲಾಗಿದೆ. ಆದರೆ, ಸಂಬಂಧಿ ಯುವಕನೊಬ್ಬನ ಜೊತೆ ಆಕೆಯ ಮದುವೆ ಮಾಡಲು ಪೋಷಕರು ಮುಂದಾಗಿದ್ದರು.

ಆದರೆ, ಸಹನಾ ಪ್ರೀತಿಸಿದವನನ್ನೇ ಮದುವೆಯಾಗುವುದಾಗಿ ಹಠ ಹಿಡಿದಿದ್ದಳು. ಈ ವಿಚಾರವಾಗಿ ಸಹನಾ ಮತ್ತು ಆಕೆಯ ತಂದೆ ನಡುವೆ ಜಗಳ ನಡೆದಿತ್ತು.

ಹುಸ್ಕೂರಿನ ಮುಖಂಡರೊಬ್ಬರ ಮನೆಯಲ್ಲಿ ಬುಧವಾರ ಯುವಕನ ಕುಟುಂಬ ಮತ್ತು ಸಹನಾ ಕುಟುಂಬದ ನಡುವೆ ಪಂಚಾಯಿತಿ ನಡೆದಿತ್ತು. ಪ್ರೀತಿಸಿದವನನ್ನೇ ಮದುವೆಯಾಗುವುದಾಗಿ ಯುವತಿ ಹೇಳಿದ್ದಳು. ಇದರಿಂದ ಆಕೆಯ ತಂದೆ ಕೋಪಗೊಂಡಿದ್ದರು ಎಂದು ಹೇಳಲಾಗುತ್ತಿದೆ.

ಜಯಪ್ರಕಾಶ್ ಕುರಿತ ರಾಜ್ಯ ಮಟ್ಟದ ವಿಚಾರ ಸಂಕಿರಣ

ಬಂಜಗೆರೆ ಹೋರಾಟ, ಬದುಕು ಮೆಲುಕು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಾಹಿತಿ ಬಂಜಗೆರೆ ಜಯಪ್ರಕಾಶ್ ಅವರು ಸಾಹಿತ್ಯ ಮತ್ತು ಸಾಂಸ್ಕೃತಿಕ ಕ್ಷೇತ್ರಕ್ಕೆ ನೀಡಿದ ಕೊಡುಗೆ, ಅವರ ಬದುಕು, ಸಂಶೋಧನೆ ಹಾಗೂ ಹೋರಾಟವನ್ನು ಅವರ ಆಪ್ತರು, ಒಡನಾಡಿಗಳು ನಗರದಲ್ಲಿ ಮಂಗಳವಾರ ನಡೆದ ಕಾರ್ಯಕ್ರಮದಲ್ಲಿ ಮೆಲುಕು ಹಾಕಿದರು.

‘ಪದ’ ಸಾಂಸ್ಕೃತಿಕ ಸಂಘಟನೆ ಏರ್ಪಡಿಸಿದ್ದ ‘ಬಂಜಗೆರೆ ಜಯಪ್ರಕಾಶ್ ಅವರ ಸಾಹಿತ್ಯ ಮತ್ತು ಸಾಂಸ್ಕೃತಿಕ ಕೊಡುಗೆ’ ಎಂಬ ವಿಷಯ ಕುರಿತ ರಾಜ್ಯ ಮಟ್ಟದ ವಿಚಾರ ಸಂಕಿರಣ ಹಾಗೂ ಅಭಿನಂದನಾ ಸಮಾರಂಭದಲ್ಲಿ ಮಾತನಾಡಿದ ಬಹುತೇಕರು, ಬಂಜಗೆರೆ ಜಯಪ್ರಕಾಶ್ ಅವರ ಹೋರಾಟಗಳು, ಜೈಲುವಾಸ, ಬಂಡಾಯ ಸಾಹಿತ್ಯ, ಚಳವಳಿಯನ್ನು ನೆನಪಿಸಿಕೊಂಡರು.

ಅವರ ಬದುಕು-ಒಡನಾಟ ಹಾಗೂ ಸಂಶೋಧನೆ ಕುರಿತು ಗೋಷ್ಠಿಗಳು ನಡೆದವು. ಲೇಖಕರೊಂದಿಗೆ ಜಯಪ್ರಕಾಶ್ ಸಂವಾದ ನಡೆಸಿದರು.

ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಸಾಹಿತಿ ಬರಗೂರು ರಾಮಚಂದ್ರಪ್ಪ, ‘ಹಿಂದಿನ ತಲೆಮಾರು ಮತ್ತು ಹೊಸ ತಲೆಮಾರುಗಳ ಪರಸ್ಪರ ಭೇಟಿಯಿಂದ ಸಾಹಿತ್ಯ ಹಾಗೂ ಸಾಂಸ್ಕೃತಿಕ ಕ್ಷೇತ್ರಕ್ಕೆ ಚಲನಶೀಲತೆ ಬರುತ್ತದೆ. ಬಂಜಗೆರೆ ಅವರು ಹೋರಾಟ ಮತ್ತು ಸಾಹಿತ್ಯವನ್ನು ಒಂದುಗೂಡಿಸಿದ ವಿಧಾನ, ಎರಡರಲ್ಲೂ ಸಮಚಿತ್ತವನ್ನು ಉಳಿಸಿಕೊಂಡಿರುವುದು ವಿಶಿಷ್ಟವಾದ ಸಂಗತಿ’ ಎಂದು ಹೇಳಿದರು.

ಸಾಹಿತಿ ಕೆ.ಮರುಳಸಿದ್ದಪ್ಪ ಮಾತನಾಡಿ, ‘ಬಂಜಗೆರೆ 90ರ ದಶಕದಲ್ಲಿ ಕರ್ನಾಟಕ ಪ್ರತ್ಯೇಕ ರಾಷ್ಟ್ರ ಎಂದು ಗೋಡೆ ಬರಹ ಚಳವಳಿ ಮಾಡಿದ್ದರು. ಆಗ ಏನು ಆಗಲಿಲ್ಲ. ಅವರ ‘ಆನುದೇವಾ ಹೊರಗಣವನು’ ಭಾರಿ ಚರ್ಚೆಗೆ ಕಾರಣವಾಯಿತು ಮತ್ತು ಪ್ರತಿರೋಧ ಸಹ ಎದುರಿಸಿತ್ತು. ಆದರೆ, ಅವರ ಮೇಲೆ ಹಲ್ಲೆ ನಡೆಯಲಿಲ್ಲ. ಈಗ ಅಂತಹ ಮಾತನಾಡಲು ಧೈರ್ಯ ಮಾಡುವುದಿರಲಿ, ಪ್ರಾಣಕ್ಕೂ ಮಾರಕವಾಗಬಹುದು ಎಂಬ ಆತಂಕದಲ್ಲಿ ಇದ್ದೇವೆ’ ಎಂದು ಕಳವಳ ವ್ಯಕ್ತಪಡಿಸಿದರು.



ನಗರದಲ್ಲಿ ಮಂಗಳವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಸಾಹಿತಿ ಬಂಜಗೆರೆ ಜಯಪ್ರಕಾಶ್ ಮತ್ತು ನಾಗರತ್ನಾ ಜಯಪ್ರಕಾಶ್ ಅವರನ್ನು ಸನ್ಮಾನಿಸಲಾಯಿತು. ಪದ ಸಂಸ್ಥೆಯ ಅಶ್ವಿನಿ ದೇವರಾಜ್, ಪ್ರಧಾನ ಕಾರ್ಯದರ್ಶಿ ಪದ ದೇವರಾಜ್, ಸಿದ್ದನಗೌಡ ಪಾಟೀಲ, ಪ್ರೊ.ರಾಜಪ್ಪ ದಳವಾಯಿ, ಬಸವರಾಜ ಸಬರದ ಮತ್ತು ಅವಿರತ ಹರೀಶ್ ಉಪಸ್ಥಿತರಿದ್ದರು ಪ್ರಜಾವಾಣಿ ಚಿತ್ರ

ಪರಿಪೂರ್ಣ ಹೋರಾಟಗಾರ, ಸಾಹಿತಿ ಎಂಬ ಭ್ರಮೆ ನನಗೆ ಇಲ್ಲ. ಸಾಹಿತ್ಯ, ಸಂಶೋಧನೆ, ಹೋರಾಟ ನಡೆಯುತ್ತಲೇ ಇರುತ್ತದೆ. ನಾನ್ನ ದಾರಿ ಬಗ್ಗೆ ತೃಪ್ತಿಯಿದೆ

ಬಂಜಗೆರೆ ಜಯಪ್ರಕಾಶ್, ಸಾಹಿತಿ

ಸಮಾರೋಪದಲ್ಲಿ ಮಾತನಾಡಿದ ಸಾಹಿತಿ ಸಿದ್ದನಗೌಡ ಪಾಟೀಲ, ‘ಬಂಡಾಯ ಸಾಹಿತ್ಯ ಸಂಘಟನೆ ನಡೆದಾಗಿನಿಂದಲೂ ಜಯಪ್ರಕಾಶ್ ಅವರನ್ನು ನೋಡಿದ್ದೇನೆ. ಬೆಂಗಳೂರಿನಲ್ಲಿ ನಡೆದ ವಿಶ್ವಸುಂದರಿ ಸ್ಪರ್ಧೆ ವಿರೋಧಿಸಿ, ಹೋರಾಟ ಮಾಡಿದ ನಮ್ಮನ್ನು ಬಂಧಿಸಿದ್ದರು. ಅನಾರೋಗ್ಯದಲ್ಲೂ ಅವರು ಭಾಗವಹಿಸಿದ್ದರು’ ಎಂದರು.

ಇದೇ ವೇಳೆ ಬಂಜಗೆರೆ ಜಯಪ್ರಕಾಶ್ ಮತ್ತು ಪತ್ನಿ ನಾಗರತ್ನಾ ಅವರನ್ನು ಸನ್ಮಾನಿಸಲಾಯಿತು.

ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಪುರುಷೋತ್ತಮ ಬಿಳಿಮಲೆ, ಕನ್ನಡ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಪ್ರೊ.ಎಲ್.ಎನ್.ಮುಕುಂದರಾಜ್, ರಂಗಕರ್ಮಿ ರಾಜಪ್ಪ ದಳವಾಯಿ, ಸಾಹಿತಿ ಬಸವರಾಜ ಸಬರದ ಮಾತನಾಡಿದರು. ಪದ ಸಂಘಟನೆಯ ಕಾರ್ಯದರ್ಶಿ ದೇವರಾಜ್, ಶಿವಲಿಂಗ ಪ್ರಸಾದ್ ನಿರೂಪಿಸಿದರು.

ನಗರದಲ್ಲಿ ಇಂದು

ನಾಗೇಶ ಹೆಗಡೆ ಮತ್ತು ಶಾರದಾ ಗೋಪಾಲ ಅನುವಾದಿಸಿರುವ ಪ್ರೊ. ಮಾಧವ ಗಾಡ್ಗೀಳರ ಆತ್ಮಕಥೆ ‘ಏರುಘಟ್ಟದ ನಡಿಗೆ’ ಪುಸ್ತಕ ಬಿಡುಗಡೆ: ಈಶ್ವರ ಖಂಡ್ರೆ, ಅಧ್ಯಕ್ಷತೆ: ಕೆ.ಈ. ರಾಧಾಕೃಷ್ಣ, ಪುಸ್ತಕದ ಅವಲೋಕನ: ನರೇಂದ್ರ ರೈ ದೇರ್ಲ, ‘ಗಾಡ್ಗೀಳ್ ಪರಿಸರ ಕಾಣ್ಕೆಗಳ’ ಕುರಿತು: ಜಿ.ಆರ್. ಗೋಪಿನಾಥ್, ಉಪಸ್ಥಿತಿ: ಅಲ್ಮಿತ್ರಾ ಪಟೇಲ್, ನಟರಾಜ್ ಸಾಗರನಹಳ್ಳಿ, ಆಯೋಜನೆ: ಆಕೃತಿ ಆಶಯ ಪಬ್ಲಿಕೇಶನ್ಸ್, ಸ್ಥಳ: ಚಿತ್ರಕಲಾ ಪರಿಷತ್ತಿನ ಸಭಾಂಗಣ, ಕುಮಾರಕೃಪಾ ರಸ್ತೆ, ಬೆಳಿಗ್ಗೆ 10



ಮಾಧವ ಗಾಡ್ಗೀಳ್

ಗವಿಗಂಗಾಧರೇಶ್ವರ ಬ್ರಹ್ಮರಥೋತ್ಸವ: ಬೆಳಿಗ್ಗೆ 10.30ಕ್ಕೆ ಮಾಘ ಕೃಷ್ಣ ಪ್ರಥಮಿ, ಅಭಿಷೇಕ ಮತ್ತು ಉತ್ಸವ, ಸಂಜೆ 6.30ಕ್ಕೆ ವೃಷಭ ವಾಹನೋತ್ಸವ, ಆಯೋಜನೆ ಮತ್ತು ಸ್ಥಳ: ಗವಿಗಂಗಾಧರೇಶ್ವರ ದೇವಸ್ಥಾನ, ಗವಿಪುರ, ಗುಟ್ಟಹಳ್ಳಿ, ಹನುಮಂತನಗರ

ಮಾದಿಗ ಸಂಬಂಧಿತ ಜಾತಿಗಳ ಸಮನ್ವಯ ಸಭೆ: ಭಾಗವಹಿಸುವವರು: ಎಚ್.ಎನ್. ನಾಗಮೋಹನದಾಸ್, ಎಚ್. ಆಂಜನೇಯ, ಎಲ್. ಹನುಮಂತಯ್ಯ, ಎಂ. ಶಿವಣ್ಣ, ಬಿ.ಎನ್. ಚಂದ್ರಪ್ಪ, ಆರ್. ಧರ್ಮಸೇನಾ, ರಾಮಕೃಷ್ಣ ದೊಡ್ಡಮನಿ, ಗೋನಾಳ್ ಭೀಮಪ್ಪ, ಆಯೋಜನೆ: ಕರ್ನಾಟಕ ಮಾದಿಗ ಒಳ ಮೀಸಲಾತಿ ಹೋರಾಟ ಸಮಿತಿ, ಸ್ಥಳ: ಡಾ.ಬಿ.ಆರ್. ಅಂಬೇಡ್ಕರ್ ಭವನ, ವಸಂತನಗರ, ಮಧ್ಯಾಹ್ನ 1.30ರಿಂದ



ನಾಗಮೋಹನ ದಾಸ್

ವಿದ್ಯಾರ್ಥಿವೇತನ ಘೋಷಣೆ ಮತ್ತು ವಿತರಣಾ ಕಾರ್ಯಕ್ರಮ, ಶಿಕ್ಷಣ ಸಬಲೀಕರಣ ಮಹಿಳಾ ಸಬಲೀಕರಣ: ಅತಿಥಿಗಳು: ಡಿ.ಕೆ. ಶಿವಕುಮಾರ್, ಎನ್.ಎ. ಹ್ಯಾರಿಸ್, ಎಂ.ಪಿ. ಅಹಮ್ಮದ್, ಆಶರ್ ಓ., ಆಯೋಜನೆ: ಮಲಬಾರ್ ಚಾರಿಟೇಬಲ್ ಟ್ರಸ್ಟ್, ಸ್ಥಳ: ಹೋಟೆಲ್ ದಿ ಲಲಿತ್ ಅಶೋಕ್, ಕುಮಾರಕೃಪಾ ರಸ್ತೆ, ಮಧ್ಯಾಹ್ನ 3

ಪುರಂದರದಾಸರ ಆರಾಧನಾ ಮಹೋತ್ಸವ: ಹರಿದಾಸ ಕೃತಿಗಳ ಗಾಯನ: ವಿಜಯಕುಮಾರ್ ಪಾಟೀಲ್, ಹಾರ್ಮೋನಿಯಂ: ಬಸವರಾಜ್ ಹಿರೇಮಠ್, ತಬಲಾ: ಕೇಶವ್ ಜೋಷಿ, ಪುರಂದರ ವೈಭವ ಮಹಿಷಾಸುರ ಮರ್ಧಿನಿ ನೃತ್ಯರೂಪಕ: ಪೂರ್ಣಿಮಾ ರಜನಿ, ಕಾವ್ಯಾ ದಿಲೀಪ್, ಆಯೋಜನೆ: ರಾಘವೇಂದ್ರ ಸಂಗೀತ ಸೇವಾ ಪ್ರತಿಷ್ಠಾನ, ಸ್ಥಳ: ದೇವಗಿರಿ ವೆಂಕಟೇಶ್ವರ ಟ್ರಸ್ಟ್, ವೆಂಕಟೇಶ್ವರ ದೇವಸ್ಥಾನ ಬನಶಂಕರಿ, ಎರಡನೇ ಹಂತ, ಸಂಜೆ 5ರಿಂದ

‘ಶ್ರೀಮನೋಹರ ಸ್ವಾಮಿ ಪರಾಕು’ ಯಕ್ಷಗಾನ ಪ್ರದರ್ಶನ: ಸ್ಥಳ: ನಯನಾ ಸಭಾಂಗಣ, ಕನ್ನಡ ಭವನ, ಜೆ.ಸಿ. ರಸ್ತೆ, ಸಂಜೆ 6ರಿಂದ

60ನೇ ನಾದಜ್ಯೋತಿ ಸಂಗೀತ ಸಂಭ್ರಮ-2025: ಗಾಯನ: ಟಿ.ಎಸ್. ಸತ್ಯವತಿ, ಪಿಟೀಲು: ಮಾಥೂರ್ ಶ್ರೀನಿಧಿ, ಮೃದಂಗ: ತುಮಕೂರ್ ರವಿಶಂಕರ್, ಘಟ: ಎಸ್.ಎನ್. ನಾರಾಯಣಮೂರ್ತಿ, ಆಯೋಜನೆ: ನಾದಜ್ಯೋತಿ ಸಂಗೀತ ಸಭಾ ಟ್ರಸ್ಟ್, ಸ್ಥಳ: ಶ್ರೀರಾಮ ಮಂದಿರ, ಈಸ್ಟ್‌ಪಾರ್ಕ್, ಮಲ್ಲೇಶ್ವರ, ಸಂಜೆ 6ರಿಂದ

‘ಶ್ರೀಕೃಷ್ಣ ಸಂಧಾನ’ ನಾಟಕ ಪ್ರದರ್ಶನ: ನಿರ್ದೇಶನ: ಶ್ರೀಮಂತ ಸುರೇಶ, ಆಯೋಜನೆ: ಸಾಫಲ್ಯ ರಂಗ ತಂಡ, ಸ್ಥಳ: ಕಲಾಗ್ರಾಮ ಮಲ್ಲತ್ತಹಳ್ಳಿ, ಸಂಜೆ 7.15



ಭಾರತ ಹುಣ್ಣಿಮೆ ಅಂಗವಾಗಿ ಕೊಪ್ಪಳ ತಾಲ್ಲೂಕಿನ ಹುಲಿಗಿಯ ಹುಲಿಗೆಮ್ಮ ದೇವಿ ದರ್ಶನ ಪಡೆಯಲು ಬುಧವಾರ ಬಂದಿದ್ದ ಸಹಸ್ರಾರು ಭಕ್ತರು ತುಂಗಭದ್ರಾ ನದಿಯಲ್ಲಿ ಸ್ನಾನ ಮಾಡಿದರು ಪ್ರಜಾವಾಣಿ ಚಿತ್ರ/ಭರತ್ ಕಂದಕೂರ



ಯಾದಗಿರಿ ಜಿಲ್ಲೆಯ ಕಕ್ಕೇರಾ ಪಟ್ಟಣದ ಸಮೀಪದ ತಿಂಥಣಿ ಮೌನೇಶ್ವರ ರಥೋತ್ಸವವು ಅಪಾರ ಸಂಖ್ಯೆಯಲ್ಲಿ ಸೇರಿದ್ದ ಭಕ್ತರ ನಡುವೆ ಸಂಭ್ರಮದಿಂದ ಜರುಗಿತು ಚಿತ್ರ: ಮಹಾಂತೇಶ ಹೊಗರಿ



ಬಳ್ಳಾರಿಯಲ್ಲಿ ಕೋಟೆ ಮಲ್ಲೇಶ್ವರಸ್ವಾಮಿ ರಥೋತ್ಸವವು ಭಕ್ತರ ಸಮ್ಮುಖದಲ್ಲಿ ಅದ್ದೂರಿಯಾಗಿ ನಡೆಯಿತು ಚಿತ್ರ: ಮುರಳಿಕಾಂತರಾವ್

‘ಮಾಘ ಹುಣ್ಣಿಮೆ’: ಭಕ್ತಿಯಲ್ಲಿ ಮಿಂದೆದ್ದ ಜನಸಾಗರ

ಸವದತ್ತಿ ಯಲ್ಲಮ್ಮನ ಗುಡ್ಡ; ಒಂದೇ ದಿನದಲ್ಲಿ ಸುಮಾರು 10 ಲಕ್ಷ ಜನರ ಭೇಟಿ: ಜಿಲ್ಲಾಧಿಕಾರಿ

ಪ್ರಜಾವಾಣಿ ವಾರ್ತೆ

ಉಗರಗೋಳ (ಬೆಳಗಾವಿ ಜಿಲ್ಲೆ): ಸವದತ್ತಿ ತಾಲ್ಲೂಕಿನ ಯಲ್ಲಮ್ಮನ ಗುಡ್ಡದಲ್ಲಿ ಭಾರತ ಹುಣ್ಣಿಮೆ ಪ್ರಯುಕ್ತ ಬುಧವಾರ ನಡೆದ ಜಾತ್ರೆಯಲ್ಲಿ ಅಪಾರ ಸಂಖ್ಯೆಯ ಭಕ್ತರು ಪಾಲ್ಗೊಂಡರು. ರಾಜ್ಯದಿಂದ ಅಲ್ಲದೇ ಮಹಾರಾಷ್ಟ್ರ, ಗೋವಾ ಮೊದಲಾದ ಕಡೆಗಳಿಂದ ಭಕ್ತರು ಹರಿದುಬಂದರು.

ಬೆಳಿಗ್ಗೆ ಮತ್ತು ಸಂಜೆ ದೇವಿಗೆ ವಿಶೇಷ ಪೂಜೆ ನೆರವೇರಿತು. ಜೋಗುಳಬಾವಿ ಮತ್ತು ಎಣ್ಣೆ ಹೊಂಡದಲ್ಲಿ ಭಕ್ತರು ಪವಿತ್ರ ಸ್ನಾನ ಮಾಡಿದರು. ಉರುಳುಸೇವೆ, ದೀಡ್ ನಮಸ್ಕಾರ ಹಾಕಿ, ಹರಕೆ ತೀರಿಸಿದರು.

ಚಕ್ಕಡಿಗಳಲ್ಲಿ ಗ್ರಾಮೀಣ ಜನರು ಗುಡ್ಡದ ಪರಿಸರದಲ್ಲಿ ಟೆಂಟ್‌ಗಳನ್ನು ಹಾಕಿ, ನೆಲೆ ನಿಂತರು. ಅಲ್ಲಿಯೇ ಖಾದ್ಯಗಳನ್ನು ತಯಾರಿಸಿ ನೈವೇದ್ಯ ನೀಡಿದರು. ಜೋಗತಿಯರ ಸಮ್ಮುಖದಲ್ಲಿ ಪರಡಿ ತುಂಬಿದರು. ಉಧೋ ಉಧೋ ಯಲ್ಲಮ್ಮ ಎಂಬ ಜೈಕಾರ ಎಲ್ಲೆಡೆ ಮೊಳಗಿತು.

ದೇವಸ್ಥಾನದ ಆವರಣ ಭಂಡಾರದಿಂದ ಕಂಗೊಳಿಸಿತು.

ಚೌಡಕಿ ನಿನಾದದೊಂದಿಗೆ ಜೋಗತಿಯರು ನೃತ್ಯ ಮಾಡಿದರು. ಇದೇ ಮೊದಲ ಬಾರಿಗೆ ಎಲ್‌ಇಡಿ ಪರದೆಗಳನ್ನು ಅಳವಡಿಸಿ, ದೇವಸ್ಥಾನದ ಹೊರಗಿದ್ದವರಿಗೂ ದರ್ಶನ ಸಿಗುವಂತೆ ವ್ಯವಸ್ಥೆ ಮಾಡಲಾಗಿತ್ತು.

‘ರೇಣುಕಾ ಯಲ್ಲಮ್ಮ ಜಾತ್ರೆಗೆ ಆಗಮಿಸುವ ಭಕ್ತಾದಿಗಳಿಗೆ ಅಚ್ಚುಕಟ್ಟಾಗಿ ವ್ಯವಸ್ಥೆ ಮಾಡಲಾಗಿದೆ. ಒಂದೇ ದಿನ ಸುಮಾರು 10 ಲಕ್ಷ ಜನ ಆಗಮಿಸುವ ಸಾಧ್ಯತೆ ಇದೆ’ ಎಂದು ಜಿಲ್ಲಾಧಿಕಾರಿ ಮೊಹಮ್ಮದ್ ರೋಷನ್ ತಿಳಿಸಿದರು.



ಬೆಳಗಾವಿ ಜಿಲ್ಲೆಯ ಸವದತ್ತಿ ತಾಲ್ಲೂಕಿನ ಯಲ್ಲಮ್ಮನ ಗುಡ್ಡದಲ್ಲಿ ಎಣ್ಣೆ ಹೊಂಡದಲ್ಲಿ ಭಕ್ತರು ಪವಿತ್ರ ಸ್ನಾನ ಮಾಡಿದರು ಪ್ರಜಾವಾಣಿ ಚಿತ್ರ

ಮುತ್ತೈದೆತನ ಸಂಪ್ರದಾಯ ಆಚರಣೆ

ಹರಪನಹಳ್ಳಿ (ವಿಜಯನಗರ ಜಿಲ್ಲೆ): ಉಚ್ಚಂಗಿದುರ್ಗಕ್ಕೆ ಭಾರತ ಹುಣ್ಣಿಮೆ ಪ್ರಯುಕ್ತ ರಾಜ್ಯದ ವಿವಿಧ ಜಿಲ್ಲೆಗಳಿಂದ ಅಲ್ಲದೇ ತಮಿಳುನಾಡು, ಆಂಧ್ರಪ್ರದೇಶ-ದಿಂದ ಬುಧವಾರ ಭಕ್ತಸಾಗರ ಹರಿದು ಬಂತು.

ಹುಣ್ಣಿಮೆ ಮುನ್ನಾ ದಿನ ಕೋಟೆಗೆ ಸಾವಿರಾರು ಪುನರ್ವಸತಿ ಕಲ್ಪಿತ ದೇವದಾಸಿಯರು, ಜೋಗಪ್ಪ ಅವರು ಬೆಟ್ಟದ ಮೇಲೆ ನಿಗದಿತ ಸ್ಥಳದಲ್ಲಿ ಸ್ನಾನ ಮಾಡಿ, ತಾವು ಬಳಸುತ್ತಿದ್ದ ಹಳೆಯ ಪಡ್ಲಗಿ, ಹಸಿರು ಬಳೆ, ಬಿಳಿ, ಕೆಂಪು ಮುತ್ತುಗಳಿರುವ ಸರ, ಸೀರೆಗಳನ್ನು ಕೋಟೆಯ ಆವರಣದಲ್ಲಿ ಬಿಟ್ಟು, ಬಟ್ಟೆ, ಸಾಮಗ್ರಿ ಧರಿಸಿ ಹೊಸ ಪಡ್ಲಗಿ ತುಂಬಿಸಿ ಮುತ್ತೈದೆತನ ಪಡೆಯುವ ಸಂಪ್ರದಾಯ ಆಚರಿಸಿದರು.

‘ನಮ್ಮ ಹಿರಿಯರು ಭರತ ಹುಣ್ಣಿಮೆ ದಿನ ಉಚ್ಚಂಗೆಮ್ಮ ದೇವಿ ದರ್ಶನ ಪಡೆದು, ಸಾಮಗ್ರಿ ಅರ್ಪಿಸುತ್ತಿದ್ದರು. ಹೀಗೆ ಮಾಡುವುದರಿಂದ ಮುತ್ತೈದೆತನ ಸಿಗುತ್ತದೆ ಎಂಬುದು ನಮ್ಮ ನಂಬಿಕೆ’ ಎಂದು ಪುನರ್ ವಸತಿ ಕಲ್ಪಿತ ದೇವದಾಸಿ ಗಂಗಮ್ಮ ಹೇಳಿದರು.



ಹರಪನಹಳ್ಳಿಯ ಮೈಲಾರ ಲಿಂಗೇಶ್ವರ ದೇವಸ್ಥಾನದ ಆವರಣದಲ್ಲಿ ಗೊರವಯ್ಯ ಕೋಟೆಪ್ಪ ಬಿಲ್ಲನ್ನೇರಿ ಕಾರಣಿಕ ನುಡಿಯುವುದನ್ನು ಜನರು ಮೊಬೈಲ್ ಫೋನ್‌ನಲ್ಲಿ ಸೆರೆಹಿಡಿದರು ಚಿತ್ರ: ಡಿ. ವಿಶ್ವನಾಥ

‘ಮುತ್ತಿನ ರಾಶಿಗೆ ಮಂಜು ಮುಸುಕೀತಲೇ ಪರಾಕ್’

ಪ್ರಜಾವಾಣಿ ವಾರ್ತೆ

ಹರಪನಹಳ್ಳಿ (ವಿಜಯನಗರ ಜಿಲ್ಲೆ): ಪಟ್ಟಣದ ಹೊರವಲಯದಲ್ಲಿ ಭಾರತ ಹುಣ್ಣಿಮೆ ದಿನ ನಡೆದ ದೊಡ್ಡಮೈಲಾರ ಲಿಂಗೇಶ್ವರ ಕಾರ್ಣಿಕೋತ್ಸವದಲ್ಲಿ ಗೊರವಯ್ಯ ಕೋಟೆಪ್ಪ ‘ಮುತ್ತಿನ ರಾಶಿಗೆ ಮಂಜು ಮುಸುಕೀತಲೇ ಪರಾಕ್’ಎಂದು ದೈವವಾಣಿ ನುಡಿದರು.

ಪಟ್ಟಣದ ಅನತಿ ದೂರದಲ್ಲಿರುವ ದೊಡ್ಡ ಮೈಲಾರಲಿಂಗೇಶ್ವರ ದೇವಸ್ಥಾನದ ಆವರಣದಲ್ಲಿ ಢಮರುಗದ ನಿನಾದ, ಚಾಟಿ ಬೀಸಿ ಚಟ್ ಚಟ್ ಸದ್ದು, ಪ್ರಜ್ವಲಿಸುತ್ತಿದ್ದ ದೀವಟಿಗೆ, ಬೆತ್ತ, ಸರಪಳಿಯ ನೂರಾರು ಗೊರವಪ್ಪರು, ನೆರೆದಿದ್ದ ಸಾವಿರಾರು ಭಕ್ತರ ‘ಏಳು ಕೋಟಿ ಏಳು ಕೋಟಿ ಚಹಾಂಗ ಬಲೋ’ ಜಯ ಘೋಷಣೆಯು ಭಕ್ತಿಯ ಪರಾಕಾಷ್ಠೆ ತಲುಪುವಂತೆ ಮಾಡಿ ಮೈಲಾರ ಲಿಂಗೇಶ್ವರ ಜಾತ್ರೆಗೆ ಮೆರುಗು ನೀಡಿತು.

9 ದಿನ ಉಪವಾಸ ವ್ರತ ಆಚರಿಸಿದ್ದ ಗೊರವಯ್ಯ ಕೋಟೆಪ್ಪ ಅವರನ್ನು ಪಾದಗಟ್ಟೆಯ ಮರಡಿಯಿಂದ ಮೆರವಣಿಗೆ ಮೂಲಕ ಕರೆತರಲಾಯಿತು. ಗೊರವಪ್ಪ ಸಂಜೆ 5.46ಕ್ಕೆ ಬಿಲ್ಲನ್ನೇರಿ ಸದ್ದಲೇ ಎನ್ನುತ್ತಿದ್ದಂತೆ ನೆರೆದವರೆಲ್ಲ ನಿಶ್ಯಬ್ದವಾದರು. ಕೆಲವೇ ಕ್ಷಣಗಳಲ್ಲಿ ಮೇಲಿನಂತೆ ಕಾರಣಿಕ ನುಡಿದು ಬೀಳುತ್ತಿದ್ದ ಕೋಟೆಪ್ಪನನ್ನು ಗೊರವ ಸಮೂಹ ಎತ್ತಿ ಹಿಡಿದರು.

‘ಪ್ರಸಕ್ತ ವರ್ಷದ ಮಳೆಗೆ ಸಮೃದ್ಧವಾಗಿ ಉತ್ತಮ ಫಸಲು ಬರುತ್ತದೆ. ಆದರೆ, ಇಳುವರಿ ಕುಂಠಿತ ಎಂಬ ಸಂದೇಶ ನೀಡಿದ್ದಾರೆ’ ಎಂದು ಭಕ್ತರು ತಿಳಿಸಿದರು.

ತ್ರಿವೇಣಿ ಸಂಗಮ: ಕುಂಭಮೇಳ ಸಂಪನ್ನ

• ಮೋಹನ್ ಕುಮಾರ ಸಿ.

ತಿ.ನರಸೀಪುರ (ಮೈಸೂರು ಜಿಲ್ಲೆ): ‘ದಕ್ಷಿಣ ಪ್ರಯಾಗ’ ಖ್ಯಾತಿಯ ಇಲ್ಲಿನ ತ್ರಿವೇಣಿ ಸಂಗಮದಲ್ಲಿ ಮೂರು ಲಕ್ಷಕ್ಕೂ ಹೆಚ್ಚು ಭಕ್ತರು ಬುಧವಾರ ‘ಮಾಘ ಹುಣ್ಣಿಮೆ’ಯ ಪುಣ್ಯಸ್ನಾನ ಮಾಡಿದರು. ಸಡಗರದಿಂದ ನಡೆದ ಮೂರು ದಿನಗಳ ‘ಕುಂಭಮೇಳ’ ಸಂಪನ್ನಗೊಂಡಿತು.

ಕಾವೇರಿ, ಕಪಿಲೆ ಹಾಗೂ ಗುಪ್ತಗಾಮಿನಿ ಸ್ಫಟಿಕ ನದಿಗಳ ಸಂಗಮಕ್ಕೆ ಮುಂಜಾನೆ 3 ಗಂಟೆಯಿಂದಲೇ ಭಕ್ತರು ಹರಿದು ಬಂದರು. ಬೆಳಗಿನ ಚಳಿ, ಮಧ್ಯಾಹ್ನದ ಬಿರು ಬಿಸಿಲಿನಲ್ಲೇ ಜಳಕ ಮಾಡಿದರು. ಮೂರು ಕಿ.ಮೀ ಹಿಂದೆಯೇ ವಾಹನಗಳನ್ನು ನಿಲ್ಲಿಸಿ, ನಡೆದೇ ಸರದಿ ಸಾಲಿನಲ್ಲಿ ಆಗಮಿಸಿ, ಭಕ್ತಿ ಮೆರೆದರು.

ಅಗಸ್ತ್ಯೇಶ್ವರ ದೇಗುಲದಲ್ಲಿ ಬೆಳಿಗ್ಗೆ 5.30ರಿಂದ 11 ಗಂಟೆವರೆಗೆ ಪುಣ್ಯಾಹ, ಗಣಹೋಮ, ಪೂರ್ಣಾಹುತಿ, ಅಭಿಷೇಕ, ಸಪ್ತನದಿತೀರ್ಥ ಕಲಶ ಪೂಜೆ, ಮಹಾಮಂಗಳಾರತಿ ನಡೆಯಿತು. ನಂತರ ಸಪ್ತ ನದಿಗಳ ತೀರ್ಥಗಳಿದ್ದ ಕುಂಭಗಳನ್ನು ತ್ರಿವೇಣಿ ಸಂಗಮದಲ್ಲಿ ಸಂಯೋಜಿಸಲಾಯಿತು.

ಸುತ್ತೂರು ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಆದಿಚುಂಚನಗಿರಿ ನಿರ್ಮಲಾನಂದನಾಥ ಸ್ವಾಮೀಜಿ, ಕಾಗಿನೆಲೆ ಶಾಖಾ ಮಠದ ಶಿವಾನಂದಪುರಿ ಸ್ವಾಮೀಜಿ, ತಿರುಚ್ಚಿಮಠದ ಜಯೇಂದ್ರಪುರಿ ಸ್ವಾಮೀಜಿ, ದತ್ತ ವಿಜಯಾನಂದತೀರ್ಥ ಸ್ವಾಮೀಜಿ, ಸ್ವಯಂಪ್ರಕಾಶ ಸಚ್ಚಿದಾನಂದ ಸರಸ್ವತಿ ಸ್ವಾಮೀಜಿ, ಸೋಮೇಶ್ವರನಾಥ ಸ್ವಾಮೀಜಿ ಸೇರಿ, ವಿವಿಧ ಮಠಾಧೀಶರು ನಡುಹೊಳೆ ಬಸಪ್ಪನ ಸನ್ನಿಧಿಯಲ್ಲಿ 11.25ಕ್ಕೆ ಕುಂಭಸ್ನಾನ ಮಾಡಿ, ನಮಿಸಿದರು.



ಮೈಸೂರು ಜಿಲ್ಲೆ ತಿ.ನರಸೀಪುರದ ತ್ರಿವೇಣಿ ಸಂಗಮದಲ್ಲಿ ಬುಧವಾರ ಮುಕ್ತಾಯಗೊಂಡ ಕುಂಭಮೇಳದಲ್ಲಿ ಸಾವಿರಾರು ಭಕ್ತರು ‘ಮಾಘ ಹುಣ್ಣಿಮೆ’ಯ ಪುಣ್ಯಸ್ನಾನ ಮಾಡಿದರು ಪ್ರಜಾವಾಣಿ ಚಿತ್ರ/ಅನೂಪ್ ರಾಘ.ಟಿ.

ನೀರು ಕೇಸರುಮಯ: ಅಗಸ್ತ್ಯೇಶ್ವರ, ಗುಂಜಾ ನರಸಿಂಹಸ್ವಾಮಿ ಹಾಗೂ ಭಿಕ್ಷೇಶ್ವರ ಸ್ವಾಮಿ ದೇಗುಲಗಳ ಸ್ನಾನಘಟ್ಟಗಳು ಭಕ್ತರಿಂದ ಕಿಕ್ಕಿರಿದು ತುಂಬಿದ್ದವು. ಅಗಸ್ತ್ಯೇಶ್ವರ ಸ್ನಾನಘಟ್ಟದಲ್ಲಿ ಸಾವಿರಾರು ಮಂದಿ ನೀರಿಗಿಳಿದಿದ್ದರಿಂದ ನೀರು ಕೆಸರುಮಯವಾಗಿತ್ತು, ಮರದ ಕಂಬಗಳಿಂದ ಹಾಕಲಾಗಿದ್ದ ತಡೆಗಳನ್ನು ಯುವಕರು ತೆಗೆದರು. ಅವರನ್ನು ನಿಯಂತ್ರಿಸಲು ಪೊಲೀಸರು ಹೈರಾಣಾದರು.

ನೆರೆ ರಾಜ್ಯಗಳು ಹಾಗೂ ನಾಡಿನ ವಿವಿಧ ಮೂಲೆಗಳಿಂದ ಭಕ್ತರು ಸ್ನಾನಘಟ್ಟಗಳಲ್ಲದೇ ಸಂಗಮದ ನದಿ ತೀರಗಳುದ್ದಕ್ಕೂ ಸ್ನಾನ ಮಾಡಲು ಇಳಿದರು. 6 ದೋಣಿಗಳಲ್ಲಿ ಪೊಲೀಸರು, ಜನರು ಆಳವಿರುವ ಕಡೆಗೆ ಬರದಂತೆ ಗಸ್ತು ಹಾಕಿದರು. ಪಟ್ಟಣದಲ್ಲಿ ಸಂಚಾರ ದಟ್ಟಣೆ ಉಂಟಾಯಿತು.

ಗಾಯಕ ವಿಜಯಪ್ರಕಾಶ್, ಬಿಜೆಪಿ ಮುಖಂಡರಾದ ಡಿ.ವಿ.ಸದಾನಂದಗೌಡ, ಪ್ರತಾಪಸಿಂಹ ಸೇರಿದಂತೆ ವಿವಿಧ ಗಣ್ಯರು ಪುಣ್ಯಸ್ನಾನ ಮಾಡಿದರು.

ರೇಣುಕಾ ಎಲ್ಲಮ್ಮ ದೇವಿ ಮುತ್ತಿನ ಪಲ್ಲಕ್ಕಿ ಉತ್ಸವ

ಪ್ರಜಾವಾಣಿ ವಾರ್ತೆ

ಮದ್ದೂರು: ಪಟ್ಟಣದ ಹೊಳೇಬೀದಿಯಲ್ಲಿರುವ ರೇಣುಕಾ ಎಲ್ಲಮ್ಮ ದೇವಿಯವರ 53ನೇ ವರ್ಷದ ಜಾತ್ರಾ ಮಹೋತ್ಸವದ ಅಂಗವಾಗಿ ಬುಧವಾರ ರಾತ್ರಿ ನಡೆದ ಮುತ್ತಿನ ಪಲ್ಲಕ್ಕಿ ಉತ್ಸವ ಭಕ್ತರ ಕಣ್ಮನ ಸೆಳೆಯಿತು.

ರಾತ್ರಿ 9ಕ್ಕೆ ಪಟ್ಟಣದ ಪ್ರಸಿದ್ಧ ಹೊಳೆ ಆಂಜನೇಯಸ್ವಾಮಿ ದೇವಸ್ಥಾನದಿಂದ ಮುತ್ತಿನ ಪಲ್ಲಕ್ಕಿ ಉತ್ಸವ ಪ್ರಾರಂಭವಾಯಿತು. ತರಹೇವಾರಿ ಹೂವುಗಳಿಂದ ಹಾಗೂ ದೀಪಾಲಂಕಾರದಿಂದ ಉತ್ಸವ ಕೊಂಗೊಳಿಸಿತು.

ತಿರುಪತಿ ತಿರುಮಲ ದೇವಸ್ಥಾನದ ಮಂಜು ಬಾಲಾಜಿ ಅವರ ವಾದ್ಯಗೋಷ್ಠಿ, ಮಂಗಳೂರಿನ ಯಕ್ಷಗಾನ, ಕೇರಳದ ಚಂಡೆ ಮೇಳ, ತಮಿಳುನಾಡಿನ ಬ್ಯಾಂಡ್ ಸೆಟ್ ಸೇರಿದಂತೆ ಮದ್ದೂರಮ್ಮನವರ ಪೂಜಾ ಕುಣಿತ, ದಂಡಿನಮಾರಮ್ಮನ-ವರ ಪೂಜಾ ಕುಣಿತ, ಕಲಾವಿದರಿಂದ ತಮಟೆ, ನಗಾರಿ, ಜಾನಪದ ಮೇಳಗಳು ಮೆರವಣಿಗೆಗೆ ಮೆರುಗು ನೀಡಿದವು.

ಪಟ್ಟಣದ ಪ್ರಮುಖ ಹೊಳೆ ಬೀದಿ, ಒಕ್ಕಲಿಗರ ಬೀದಿ, ಸೋಮೇಗೌಡರ ಬೀದಿ, ಪೇಟೆ ಬೀದಿ, ದೊಡ್ಡಿ ಬೀದಿ, ಮೇಗಳ ಬೀದಿ, ಗಂಗಾ ಮತಸ್ಥರ ಬೀದಿ ಸೇರಿದಂತೆ ಹಲವು ಬೀದಿಗಳಲ್ಲಿ ಉತ್ಸವ ಸಡಗರದಿಂದ ಸಾಗಿತು. ಮಹಿಳೆಯರು ಆರತಿ ಬೆಳಗಿ ಪೂಜೆ ಸಲ್ಲಿಸಿದರು.



ಮದ್ದೂರಿನ ರೇಣುಕಾ ಎಲ್ಲಮ್ಮ ದೇವಿಯ ಮುತ್ತಿನ ಪಲ್ಲಕ್ಕಿ ಉತ್ಸವ ಬುಧವಾರ ರಾತ್ರಿ ವೈಭವದಿಂದ ಸಾಗಿತು

ಠಾಣೆಗೆ ಕಲ್ಲೆಸೆತ: 8 ಮಂದಿ ಸೆರೆ

ಮೊಬೈಲ್ ಫೋನ್ ಬಿಟ್ಟು ಪರಾರಿಯಾದ ಆರೋಪಿಗಳು

ಪ್ರಜಾವಾಣಿ ವಾರ್ತೆ

ಮೈಸೂರು: ಇಲ್ಲಿನ ಉದಯಗಿರಿ ಠಾಣೆಗೆ ಕಲ್ಲೆಸೆದು ಗಲಾಟೆ ಮಾಡಿದ ಆರೋಪದಲ್ಲಿ ಸಿಸಿಬಿ ಪೊಲೀಸರು ಎಂಟು ಮಂದಿಯನ್ನು ಬುಧವಾರ ಬಂಧಿಸಿದ್ದಾರೆ.

ಶಾಂತಿನಗರದ ಸುಹೇಲ್, ರಹೀಲ್, ಅಯಾನ್, ಗೌಸಿಯಾ ನಗರದ ಸೈಯದ್ ಸಾದಿಕ್, ಶೋಹೆಬ್ ಪಾಷಾ, ರಾಜೀವ್ ನಗರದ ಸಾದಿಕ್ ಪಾಷಾ, ಅರ್ಬಾಜ್ ಷರೀಫ್, ಸತ್ಯನಗರದ ಎಜಾಜ್ ಬಂಧಿತರು. ಠಾಣೆಯ ಸುತ್ತಲಿನ ಪ್ರದೇಶಗಳ ಸಿಸಿಟಿವಿ ಕ್ಯಾಮೆರಾಗಳ ಹತ್ತಕ್ಕೂ ಹೆಚ್ಚು ಡಿವಿಆರ್‌ಗಳನ್ನು ಪರಿಶೀಲಿಸಿ, ಆರೋಪಿಗಳನ್ನು ಪತ್ತೆ ಮಾಡಲಾಗಿದೆ. ನಗರ ಪೊಲೀಸ್ ಆಯುಕ್ತರ ನೇತೃತ್ವದಲ್ಲಿ ತಂಡಗಳನ್ನು ರಚಿಸಿ ಉಳಿದ ಆರೋಪಿಗಳ ಪತ್ತೆಗೆ ಬಲೆ ಬೀಸಲಾಗಿದೆ.

‘ಮುಸ್ಲಿಂ ಧರ್ಮದ ಬಗ್ಗೆ ಅವಹೇಳನ ಮಾಡಿದ ವ್ಯಕ್ತಿಯನ್ನು ನಮ್ಮ ಕೈಗೆ ಕೊಡಿ ನಾವು ನೋಡಿಕೊಳ್ಳುತ್ತೇವೆ ಎಂದು ಹೇಳಿಕೊಂಡು ಬಂದ ಒಂದು ಸಾವಿರ ಯುವಕರ ಗುಂಪು ರಸ್ತೆಯಲ್ಲಿ ಬೆಂಕಿ ಹಾಕಿ, ಪೊಲೀಸರು, ಠಾಣೆ ಹಾಗೂ ವಾಹನಗಳ ಮೇಲೆ ಮನಬಂದಂತೆ ಕಲ್ಲು ಎಸೆದಿದ್ದಾರೆ’ ಎಂದು ಸ್ವಯಂಪ್ರೇರಿತ ದೂರು ದಾಖಲಿಸಿಕೊಂಡ ಪೊಲೀಸರು, ಐವರು ಗಾಯಾಳು ಪೊಲೀಸರು ಹಾಗೂ ಆರು ವಾಹನಗಳನ್ನು ಸಾಕ್ಷಿಗಳನ್ನಾಗಿಸಿ ತನಿಖೆ ಮುಂದುವರೆಸಿದ್ದಾರೆ.

‘ಕಲ್ಲು ಬಿಸಾಡಿದವರಲ್ಲಿ 15 ರಿಂದ 20 ವರ್ಷದೊಳಗಿನ ಯುವಕರೇ ಹೆಚ್ಚಿದ್ದು, ತನಿಖೆ ಚುರುಕುಗೊಳ್ಳು-ತ್ತಿದ್ದಂತೆ ಮೊಬೈಲ್ ಫೋನ್‌ಗಳನ್ನು ಮನೆಯಲ್ಲೇ ಬಿಟ್ಟು ಪರಾರಿಯಾಗಿ-ದ್ದಾರೆ. ಘಟನೆ ನಡೆದ ದಿನ ಮುಷ್ತಿ ಮುಸ್ತಾಕ್ ಮಕ್ಬೋಲಿ ಎಂಬಾತ ಪ್ರ-ಚೋದನಕಾರಿಯಾಗಿ ಮಾತನಾಡಿರುವ ವಿಡಿಯೊ ಸಾಮಾಜಿಕ ಮಾಧ್ಯಮಗ-ಳಲ್ಲಿ ಹರಿದಾಡಿದ್ದು, ಆತನ ಪತ್ತೆಗೂ ಕಾರ್ಯಾಚರಣೆ ನಡೆದಿದೆ’ ಎಂದು ಮೂಲಗಳು ತಿಳಿಸಿವೆ.

ಭದ್ರತೆಯ ದೃಷ್ಟಿಯಿಂದ ಮಹದೇವಪುರ ರಸ್ತೆಯ ಜಂಕ್ಷನ್‌ಗಳಲ್ಲಿ ಅಳವಡಿಸಲಾಗಿದ್ದ ಬ್ಯಾರಿಕೇಡ್ ತೆರವು-ಗೊಳಿಸಲಾಗಿದ್ದು, ವಾಹನ ಓಡಾಟಕ್ಕೆ ಮುಕ್ತ ಅವಕಾಶ ಒದಗಿಸಲಾಗಿದೆ.

ಪೊಲೀಸರ ತಪ್ಪಿಲ್ಲ– ಡಿಕೆಶಿ ತಿರುಗೇಟು



ಶಿವಕುಮಾರ್

ಮೈಸೂರು: ‘ನಗರದ ಉದಯಗಿರಿಯಲ್ಲಿ ನಡೆದ ಕಲ್ಲು ತೂರಾಟದ ಘಟನೆಯಲ್ಲಿ ಪೊಲೀಸರದ್ದು ಯಾವ ತಪ್ಪೂ ಇಲ್ಲ, ಗಾಯಗೊಂಡರೂ ಸಮಯ ಪ್ರಜ್ಞೆಯಿಂದ ಕೆಲಸ ಮಾಡಿದ್ದಾರೆ.’ ಎಂದು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಸಮರ್ಥಿಸಿಕೊಂಡರು.

‘ಕರ್ತವ್ಯ ಲೋಪ ಎಸಗಿರುವ ಪೊಲೀಸರೇ ಗಲಾಟೆಗೆ ಕಾರಣ’ ಎಂಬ ಸಹಕಾರ ಸಚಿವ ಕೆ.ಎನ್.ರಾಜಣ್ಣ ಹೇಳಿಕೆಗೆ ಬುಧವಾರ ಇಲ್ಲಿ ಪ್ರತಿಕ್ರಿಯಿಸಿದ ಅವರು, ‘ಯಾರು ಏನು ಹೇಳಿದರೆಂಬುದು ಮುಖ್ಯವಲ್ಲ. ನಾನು ನಮ್ಮ ಪೊಲೀಸರ ಪರವಾಗಿಯೇ ಇದ್ದೇನೆ. ರಾಜಣ್ಣ ಅವರ ಹೇಳಿಕೆಗೆ ಮುಖ್ಯಮಂತ್ರಿಯೇ ಉತ್ತರಿಸುತ್ತಾರೆ. ಅವರು ಸದ್ಯಕ್ಕೆ ಮಾತನಾಡಲು ಆಗುತ್ತಿಲ್ಲ. 8ರಿಂದ 10 ದಿನಗಳಲ್ಲಿ ಮಾತನಾಡುತ್ತಾರೆ. ನಾನು ಮೈಸೂರಿನ ನೆಲದಲ್ಲೇ ನಿಂತು ಹೇಳುತ್ತಿದ್ದೇನೆ, ನಮ್ಮ ಪೊಲೀಸರದ್ದು ಯಾವ ತಪ್ಪೂ ಇಲ್ಲ’ ಎಂದರು.

> **ಮೈಸೂರಿನ ಉದಯಗಿರಿ ಗಲಭೆ ಪ್ರಕರಣಕ್ಕೆ ಸಂಬಂಧಿಸಿದಂತೆ ಪೊಲೀಸರು ಬುದ್ಧಿ ಉಪಯೋಗಿಸಿ ಕೆಲಸ ಮಾಡಿದ್ದರೆ ಗಲಭೆ ತಪ್ಪಿಸಬಹುದಿತ್ತು**
> **ಎಚ್.ಸಿ. ಬಾಲಕೃಷ್ಣ, ಶಾಸಕ,** ಮಾಗಡಿ

‘ಠಾಣೆ ಎದುರು ಕಲ್ಲು ಎಸೆದಿರುವವರೆಲ್ಲಾ 14, 15ನೇ ವಯಸ್ಸಿನ ಮುಸ್ಲಿಂ ಹುಡುಗರು. ಧಾರ್ಮಿಕ ಮುಖಂಡರ ಮಾತನ್ನೂ ಅವರು ಕೇಳಿಲ್ಲ. ಹಿರಿಯರು ಹಾಗೂ ಮುಖಂಡರು ಸೇರಿ ಗಲಾಟೆ ನಿಯಂತ್ರಿಸಿದ್ದಾರೆ. ಪೊಲೀಸರಿಗಾದರೆ ರಕ್ಷಣೆ ಇತ್ತು. ಪಾಪ, ಅಲ್ಲಿದ್ದ ಸಾರ್ವಜನಿಕರಿಗೆ ಅದೂ ಇರಲಿಲ್ಲ. ಗಲಭೆ ಮಾಡಿದವರನ್ನು ಪೊಲೀಸರು ಪತ್ತೆ ಹಚ್ಚುತ್ತಿದ್ದಾರೆ’ ಎಂದರು.

ಲಕ್ಷ್ಮಣ್ ವಿರುದ್ಧ ದೂರು

‘ಆರ್‌ಎಸ್‌ಎಸ್, ಬಿಜೆಪಿಯವರು ಠಾಣೆಗೆ ಕಲ್ಲು ತೂರಿದ್ದಾರೆ’ ಎಂದು ಸುಳ್ಳು ಹೇಳಿಕೆ ನೀಡಿದ ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ್ ವಿರುದ್ಧ ಪ್ರಕರಣ ದಾಖಲಿಸಬೇಕು’ ಎಂದು ಒತ್ತಾಯಿಸಿ ಬಿಜೆಪಿ ಜಿಲ್ಲಾ ಕಾನೂನು ಪ್ರಕೋಷ್ಠದ ಸದಸ್ಯರು ನಗರ ಪೊಲೀಸರಿಗೆ ದೂರು ನೀಡಿದರು.

ಬಡ್ಡಿ ದಂಧೆ: ₹4.90 ಕೋಟಿ ವಶ



ಗದಗ: ‘ಬಡ್ಡಿಗೆ ಸಾಲ ನೀಡಿ, ಕಿರುಕುಳ ನೀಡುತ್ತಿದ್ದಾರೆ’ ಎಂಬ ದೂರಿನ ಮೇರೆಗೆ ನಗರದ ಯಲ್ಲಪ್ಪ ಮಿಸ್ಕಿನ್ ಅವರಿಗೆ ಸೇರಿದ 13 ಸ್ಥಳಗಳ ಮೇಲೆ ಮಂಗಳವಾರ ರಾತ್ರಿ ಏಕಕಾಲಕ್ಕೆ ಪೊಲೀಸರು ದಾಳಿ ನಡೆಸಿದರು. ₹4.90 ಕೋಟಿ ನಗದು, ಚಿನ್ನ ವಶಪಡಿಸಿಕೊಂಡರು. ಯಲ್ಲಪ್ಪ ಮಿಸ್ಕಿನ್ ಸೇರಿ ಐವರನ್ನು ವಶಕ್ಕೆ ಪಡೆದು, ವಿಚಾರಣೆಗೆ ಒಳಪಡಿಸಿದ್ದಾರೆ.

‘ಅಶೋಕ ಗಣಾಚಾರಿ ಎಂಬುವರು ಯಲ್ಲಪ್ಪ ಅವರಿಂದ ₹1.93 ಕೋಟಿ ಹಣವನ್ನು ಬಡ್ಡಿ ಸಾಲ ಪಡೆದಿದ್ದರು. ಸಾಲ ಕೊಟ್ಟಾಗಿನಿಂದ ಈವರೆಗೆ ₹1.40 ಕೋಟಿ ಹಣ ವಸೂಲಿ ಮಾಡಿಕೊಂಡಿದ್ದರು. ಜತೆಗೆ ಸಾಲಗಾರನನ್ನು ಬೆದರಿಸಿ, ಕಿರುಕುಳ ನೀಡಿ ಕೋಟ್ಯಂತರ ರೂಪಾಯಿ ಮೌಲ್ಯದ ಕಲ್ಯಾಣ ಮಂಟಪವನ್ನು ತಮ್ಮ ಹೆಸರಿಗೆ ಬರೆಯಿಸಿಕೊಂಡಿದ್ದರು’ ಎಂದು ಪೊಲೀಸರು ತಿಳಿಸಿದ್ದಾರೆ.

‘ಅಶೋಕ ಗಣಾಚಾರಿ ಅವರ ದೂರು ಆಧರಿಸಿ ದಾಳಿ ನಡೆಸಿದಾಗ, ₹4.90 ಕೋಟಿ ನಗದು, 992 ಗ್ರಾಂ ಚಿನ್ನ, 600 ಚೆಕ್, 650 ಬಾಂಡ್ ಪೇಪರ್, 4 ಎಟಿಎಂ ಕಾರ್ಡ್, 9 ಪಾಸ್‌ಬುಕ್, 2 ಎಲ್‌ಐಸಿ ಬಾಂಡ್‌ಗಳು ಮತ್ತು 65 ಲೀಟರ್ ಮದ್ಯ ವಶಪಡಿಸಿಕೊಳ್ಳಲಾಗಿದೆ’ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಬಿ.ಎಸ್.ನೇಮಗೌಡ ತಿಳಿಸಿದ್ದಾರೆ.

‘ಯಲ್ಲಪ್ಪ ಮಿಸ್ಕಿನ್, ವಿಕಾಶ ಮಿಸ್ಕಿನ್, ಮಂಜು ಶ್ಯಾವಿ, ಈರಣ್ಣ ಬೂದಿಹಾಳ, ಮೋಹನ್ ಎಂಬುವರನ್ನು ವಶಕ್ಕೆ ಪಡೆಯಲಾಗಿದೆ’ ಎಂದು ಅವರು ತಿಳಿಸಿದ್ದಾರೆ.

‘ನೋಟಿಸ್‌ಗೂ ಉತ್ತರಿಸಲ್ಲ’

ವಿಜಯಪುರ: ‘ಬಿಜೆಪಿ ವರಿಷ್ಠರೂ ನನಗೆ ಯಾವುದೇ ನೋಟಿಸ್ ನೀಡಿಲ್ಲ. ಒಂದು ವೇಳೆ ನೋಟಿಸ್ ಬಂದರೂ ನಾನು ಯಾವುದಕ್ಕೂ ಉತ್ತರಿಸಲ್ಲ’ ಎಂದು ಶಾಸಕ ಬಸನಗೌಡ ಪಾಟೀಲ ಯತ್ನಾಳ ಹೇಳಿದರು.

ಆಲಮಟ್ಟಿಯಲ್ಲಿ ಸುದ್ದಿಗಾರರ ಜೊತೆ ಮಾತನಾಡಿದ ಅವರು, ‘ಇಂತಹ ನೂರಾರು ನೋಟಿಸ್ ಬರುತ್ತವೆ. ಅವುಗಳಿಗೆ ಉತ್ತರಿಸಲು ಆಗಲ್ಲ.ಇದಕ್ಕೆಲ್ಲ ಹೆದರುವ ಮಗ ನಾನಲ್ಲ...’ ಎಂದರು.

ಇಂದಿನಿಂದ ಸೇವಾಲಾಲ್ ಜಾತ್ರೆ

ದಾವಣಗೆರೆ: ಜಿಲ್ಲೆಯ ನ್ಯಾಮತಿ ತಾಲ್ಲೂಕಿನ ಸೂರಗೊಂಡನಕೊಪ್ಪದ ಭಾಯಾಗಡದಲ್ಲಿ ಸಂತ ಸೇವಾಲಾಲ್ ಅವರ 286ನೇ ಜನ್ಮ ದಿನಾಚರಣೆ ಪ್ರಯುಕ್ತ ಫೆ.13ರಿಂದ 15ರವರೆಗೆ ಜಾತ್ರಾ ಮಹೋತ್ಸವ ಹಮ್ಮಿಕೊಳ್ಳಲಾಗಿದೆ.

ಬಂಜಾರ ಸಮುದಾಯದ ಪವಿತ್ರ ಸ್ಥಳವಾದ ಭಾಯಾಗಡಕ್ಕೆ ರಾಜ್ಯದ ಹಲವೆಡೆಯಿಂದ ಭಕ್ತರು ಪಾದಯಾತ್ರೆಯಲ್ಲಿ ಬರುತ್ತಿದ್ದಾರೆ. ಸಮಾಜ ಕಲ್ಯಾಣ ಇಲಾಖೆ, ಜಿಲ್ಲಾಡಳಿತ, ರಾಜ್ಯ ತಾಂಡಾ ಅಭಿವೃದ್ಧಿ ನಿಗಮ, ಸಂತ ಸೇವಾಲಾಲ್ ಜನ್ಮಸ್ಥಾನ ಮಹಾಮಠ ಸಮಿತಿ ಅಗತ್ಯ ಸಿದ್ಧತೆಗಳನ್ನು ಮಾಡಿಕೊಂಡಿದೆ. ಮೂರು ದಿನ ಭಕ್ತರಿಗೆ ಊಟದ ವ್ಯವಸ್ಥೆ, ವಸತಿ, ಸಾರಿಗೆ ಸೌಲಭ್ಯ ಕಲ್ಪಿಸಲಾಗಿದೆ.

ಬಂಜಾರ ಸಂಸ್ಕೃತಿ ಮತ್ತು ಭಾಷಾ ಅಕಾಡೆಮಿ ಸಹಯೋಗದಲ್ಲಿ ಫೆ.13 ರಂದು ಸಂಜೆ 4.30ಕ್ಕೆ ರಾಜ್ಯ ಮಟ್ಟದ ವಿಚಾರ ಸಂಕಿರಣ ಹಮ್ಮಿಕೊಳ್ಳಲಾಗಿದೆ. ಫೆ.14ರಂದು ಸೇವಾಲಾಲ್ ಜಯಂತ್ಯುತ್ಸವ ಹಾಗೂ ವಿವಿಧ ಕಟ್ಟಡಗಳ ಉದ್ಘಾಟನಾ ಸಮಾರಂಭವಿದೆ.

₹4 ಲಕ್ಷ ಕೋಟಿ ಹೂಡಿಕೆಗೆ ಒಲವು

ಒಂದನೇ ಪುಟದಿಂದ...

ಬಹರೇನ್, ಕ್ಯೂಬಾ, ಇಟಲಿ, ನೇಪಾಳ, ಪೋಲೆಂಡ್, ಮಲೇಷ್ಯಾ, ಜಪಾನ್, ಕಾಂಗೋ, ಜಮೈಕಾ, ಫಿಜಿ, ಕಝಕಿಸ್ತಾನ, ಮೊರಾಕ್ಕೊ, ಜಿಂಬಾಬ್ವೆ, ತೈವಾನ್ ಸೇರಿದಂತೆ ಹಲವು ದೇಶಗಳ ರಾಯಭಾರಿಗಳು, ವಿವಿಧ ದೇಶಗಳ ಪ್ರತಿನಿಧಿಗಳು ಕರ್ನಾಟಕದ ಹೂಡಿಕೆಯ ಸೆಳೆತಕ್ಕೆ ಮಾರುಹೋದರು. ಸ್ಥಳೀಯ ಹೂಡಿಕೆದಾರರು, ದೇಸಿ ಉತ್ಪನ್ನಗಳ ತಯಾರಕರು, ತಂತ್ರಜ್ಞರು, ಇತರೆ ಪ್ರತಿನಿಧಿಗಳು ಸಮಾವೇಶಕ್ಕೆ ರಂಗು ತಂದರು.

‘ಕ್ವಿನ್‌ಸಿಟಿ’ ಯೋಜನೆಗೆ ಅತ್ಯುತ್ತಮ ಆರೋಗ್ಯ ಮತ್ತು ವೈದ್ಯಕೀಯ ಸಂಸ್ಥೆಗಳನ್ನು ಆಕರ್ಷಿಸಲು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್, ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ ನೇತೃತ್ವದಲ್ಲಿ ನಡೆದ ಪ್ರಮುಖ ದುಂಡು ಮೇಜಿನ ಸಭೆ, ರಾಜ್ಯದ ಆರೋಗ್ಯ ಕ್ಷೇತ್ರವನ್ನು ತಂತ್ರಜ್ಞಾನದ ಜತೆ ಬೆಸೆದು, ವಿಶ್ವ ದರ್ಜೆಯ ಆರೋಗ್ಯ ಸೌಲಭ್ಯಗಳನ್ನು ರಾಜ್ಯದ ಜನರಿಗೆ ದೊರಕಿಸುವ ಭರವಸೆ ಮೂಡಿಸಿದವು.

3 ಸಾವಿರ ಮೆಗಾವಾಟ್ ಪವನ ವಿದ್ಯುತ್: ಜಾಗತಿಕ ಬಂಡವಾಳ ಹೂಡಿಕೆದಾರರ ಸಮಾವೇಶದಲ್ಲಿ ದೊಡ್ಡ ಪ್ರಮಾಣದಲ್ಲಿ ಬಂಡವಾಳ ಆಕರ್ಷಿಸುವಲ್ಲಿ ವಿಜಯಪುರ ಜಿಲ್ಲೆಯು ಯಶಸ್ವಿಯಾಯಿತು. ಅತ್ಯಾಧುನಿಕ ವಿಂಡ್ ಟರ್ಬೈನ್ ಬ್ಲೇಡ್ ತಯಾರಿಕಾ ಘಟಕ ಸ್ಥಾಪಿಸಲು ಸುಜ್ಲಾನ್ ಕಂಪನಿ ರಾಜ್ಯ ಸರ್ಕಾರದ ಜತೆ ಒಪ್ಪಂದ ಮಾಡಿಕೊಂಡಿತು. ನವೀಕರಿಸಬಹುದಾದ ಇಂಧನ ಹಾಗೂ ಕೃಷಿ ಉತ್ಪನ್ನಗಳ ಸಂಸ್ಕರಣೆ ವಲಯದಲ್ಲಿನ ಎರಡು ಪ್ರಮುಖ ಯೋಜನೆಗಳು ವಿಜಯಪುರ ಜಿಲ್ಲೆಯಲ್ಲಿ ಕಾರ್ಯಗತಗೊಳ್ಳುವ ಮೂಲಕ ಆ ಭಾಗದ ಜಿಲ್ಲೆಗಳ ವಿದ್ಯುತ್ ಕೊರತೆಗೆ ಶಾಶ್ವತ ಪರಿಹಾರ ಕಲ್ಪಿಸುವ ದಾರಿಯನ್ನು ತೆರೆದವು.

ವಿಜಯಪುರ, ಕಲಬುರಗಿಯ-ಲ್ಲಿ ಪ್ರತಿದಿನ 800 ಟನ್ ಸಾಮರ್ಥ್ಯದ ಬಹುಬಗೆಯ ಬೇಳೆಕಾಳು ಸಂಸ್ಕರಣಾ ಘಟಕ ಸ್ಥಾಪಿಸಲು ವಿಂಗ್ಸ್- ವಿಟೆರಾ ಕಂಪನಿಯು ₹250 ಕೋಟಿ ಬಂಡವಾಳ ತೊಡಗಿಸಲಿದೆ. 2ನೇ ವರ್ಷದಿಂದ ₹800 ಕೋಟಿ ವಾರ್ಷಿಕ ವಹಿವಾಟು ನಡೆಸಲಿದೆ. ದಕ್ಷಿಣ ಭಾರತದಲ್ಲಿನ ಬೇಳೆಕಾಳುಗಳ ಅತಿದೊಡ್ಡ ಸಂಸ್ಕರಣಾ ಘಟಕ ಇದಾಗಲಿದ್ದು, ಕಲ್ಯಾಣ ಕರ್ನಾಟಕದ ರೈತರ ಭವಿಷ್ಯ ಉಜ್ವಲಗೊಳ್ಳಲಿದೆ ಎಂದು ಸಚಿವ ಎಂ.ಬಿ. ಪಾಟೀಲ ಹೇಳಿದ್ದಾರೆ.

ಕರ್ನಾಟಕದ ಶಕ್ತಿ ಪ್ರತಿಬಿಂಬಿಸಿದ ‘ಆವಿಷ್ಕಾರ’

ಭಾರತದ ತಂತ್ರಜ್ಞಾನವನ್ನು ವಿಸ್ತಾರಗೊಳಿಸುವ, ಕರ್ನಾಟಕ ಶಕ್ತಿ ಪ್ರತಿಬಿಂಬಿಸುವ ನಾವೀನ್ಯ ಆವಿಷ್ಕಾರಗಳ ಪ್ರದರ್ಶನ ಜಾಗತಿಕ ಹೂಡಿಕೆದಾರರ ಸಮಾವೇಶದ (ಇನ್ವೆಸ್ಟ್ ಕರ್ನಾಟಕ–2025) ಎರಡನೇ ದಿನ ವಿದೇಶಿ ಪ್ರತಿನಿಧಿಗಳ ಆಕರ್ಷಣೆಯ ಕೇಂದ್ರವಾಗಿತ್ತು.

ಜಗತ್ತಿನಲ್ಲಿ ವಿವಿಧ ಕ್ಷೇತ್ರಗಳಲ್ಲಿ ನಿರ್ಣಾಯಕ ಪಾತ್ರ ವಹಿಸಲಿರುವ, ನಾವೀನ್ಯ ಭವಿಷ್ಯದ ಭಾರತವನ್ನು ಗಮನದಲ್ಲಿ ಇಟ್ಟುಕೊಂಡು ಆಯೋಜಿಸಿದ್ದ ‘ಆವಿಷ್ಕಾರಗಳ ಭವಿಷ್ಯ’ ಪ್ರದರ್ಶನದಲ್ಲಿ 40ಕ್ಕೂ ಹೆಚ್ಚು ಕಂಪನಿಗಳು ನೂತನ ತಂತ್ರಜ್ಞಾನದ ಹಲವು ಮಾದರಿಗಳನ್ನು ಪ್ರದರ್ಶಿಸಿದವು.

ವಿದ್ಯುತ್ ಚಾಲಿತ ವಿಮಾನ, ಕಾರುಗಳು, ದ್ವಿಚಕ್ರವಾಹನಗಳು, ಡ್ರೋನ್ ತಂತ್ರಜ್ಞಾನ, ಬಾಂಬರ್ ವಿಮಾನ ಬೆರಗು ಮೂಡಿಸಿದವು. ವೈಮಾಂತರಿಕ್ಷ, ರಕ್ಷಣಾ ಸಾಮಗ್ರಿಗಳ ಜತೆಗೆ, ಕೃಷಿಕ್ಷೇತ್ರದಲ್ಲಿ ಮಹತ್ತರ ಬದಲಾವಣೆ ಹೊತ್ತು ತರಲಿರುವ ಅಗ್ರಿ-ಟೆಕ್ ಮತ್ತು ವೈದ್ಯಕೀಯ ಕ್ಷೇತ್ರದಲ್ಲಿ ರೋಗಪತ್ತೆ, ಚಿಕಿತ್ಸೆಗಳನ್ನು ಸುಲಭವಾಗಿಸುವ ಆರೋಗ್ಯಸೇವೆಗಳ ತಂತ್ರಜ್ಞಾನವೂ ಕೃಷಿ ಮತ್ತು ಆರೋಗ್ಯ ಕ್ಷೇತ್ರಗಳಲ್ಲಿ ಭವಿಷ್ಯದ ತಂತ್ರಜ್ಞಾನ ಬಳಕೆಯ ವಿವಿಧ ಮಜಲುಗಳನ್ನು ತೆರೆದಿಟ್ಟಿತು.

ಟೊಯೊಟ, ಎಂಬೆಸಿ ಗ್ರೂಪ್, ರಾಜ್ಯ ಪ್ರವಾಸೋದ್ಯಮ ಇಲಾಖೆ, ನಿಂಬಸ್, ಸರಳ ಏವಿಯೇಷನ್, ಜಿ.ಇ ಹೆಲ್ತ್‌ಕೇರ್, ಹೀರೊ ಫ್ಯೂಚರ್ ಎನರ್ಜೀಸ್, ರಿವರ್ ಮೊಬಿಲಿಟಿ, ಸರಳಾ ಏವಿಯೇಷನ್, ಗೆಲಾಕ್ಸಿ ಸ್ಪೇಸ್, ಲ್ಯಾಮ್ ರೀಸರ್ಚ್ ಕಂಪನಿಗಳು ಸೇರಿದಂತೆ ಮರುಬಳಕೆ ಇಂಧನ, ಸೆಮಿಕಂಡಕ್ಟರ್, ಸುಸ್ಥಿರ ತಯಾರಿಕೆಯ ಕಂಪನಿಗಳು ಭಾಗವಹಿಸಿದ್ದವು. ರಾಜ್ಯದ ಸಾಧನೆಗಳನ್ನು ಬಿಂಬಿಸುವ ಪ್ರತ್ಯೇಕ ‘ಕರ್ನಾಟಕ ಪೆವಿಲಿಯನ್’ನ ಕ್ವಿನ್‌ಸಿಟಿ, ಫ್ಲಯಿಂಗ್ ವೆಡ್ಜ್, ಬೆಲ್ಲಾಟ್ರಿಕ್ಸ್, ಸ್ಕೀಸರ್ವ್, ಫ್ಲಕ್ಸ್ ಆಟೊ ಉದ್ಯಮಗಳ ಪ್ರಾತ್ಯಕ್ಷಿಕೆಗಳು ಪ್ರೇಕ್ಷಕರ ಗಮನ ಸೆಳೆದವು.

‘ಆವಿಷ್ಕಾರಗಳ ಭವಿಷ್ಯ’ ಪ್ರದರ್ಶನವನ್ನು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ ಉದ್ಘಾಟಿಸಿದರು.

ಮೈಕ್ರೊ ಫೈನಾನ್ಸ್ ಕಂಪನಿಗಳಿಗೆ ಅಂಕುಶ • ಕೆಲ ಸಲಹೆ ನೀಡಿ ಅಂಕಿತ ಹಾಕಿದ ರಾಜ್ಯಪಾಲರು

ವಸೂಲಿ ದಬ್ಬಾಳಿಕೆ ತಡೆಗೆ ಸುಗ್ರೀವಾಜ್ಞೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಲವಂತದ ಸಾಲ ವಸೂಲಿ ಮತ್ತು ಕಿರುಕುಳ ತಪ್ಪಿಸುವ ಉದ್ದೇಶದಿಂದ ರೂಪಿಸಿದ 'ಕರ್ನಾಟಕ ಕಿರು ಸಾಲ ಮತ್ತು ಸಣ್ಣ ಸಾಲ (ಬಲವಂತದ ಕ್ರಮಗಳ ತಡೆ) ಸುಗ್ರೀವಾಜ್ಞೆ– 2025'ಕ್ಕೆ ರಾಜ್ಯಪಾಲ ಥಾವರ್‌ಚಂದ್ ಗೆಹಲೋತ್ ಅಂಕಿತ ಹಾಕಿದ ಬೆನ್ನಲ್ಲೆ ರಾಜ್ಯ ಸರ್ಕಾರ ಗೆಜೆಟ್ ಹೊರಡಿಸಿದೆ. ಈ ಮೂಲಕ, ಈ ಸುಗ್ರೀವಾಜ್ಞೆ ಜಾರಿಗೆ ಬಂದಿದೆ.

'ಸುಗ್ರೀವಾಜ್ಞೆಯ ಉದ್ದೇಶ ಅತ್ಯುತ್ತಮ ಆಗಿದ್ದರೂ ಕಾನೂನು ದೃಷ್ಟಿಯಿಂದ ಮತ್ತು ಅದು ಬೀರಬಹುದಾದ ಸಾಮಾಜಿಕ ಪರಿಣಾಮದ ಕುರಿತು ವಿಧಾನ ಮಂಡಲ ಅಧಿವೇಶನದಲ್ಲಿ ಚರ್ಚಿಸಬೇಕು' ಎಂಬುದೂ ಸೇರಿದಂತೆ ಕೆಲವು ಸಲಹೆಗಳನ್ನು ರಾಜ್ಯಪಾಲರು ನೀಡಿದ್ದಾರೆ.

'ಅನಿಯಂತ್ರಿತ, ನೋಂದಣಿರಹಿತ ಮೈಕ್ರೊ ಫೈನಾನ್ಸ್ ಕಂಪನಿಗಳು, ಲೇವಾದೇವಿದಾರರು, ಸಂಸ್ಥೆಗಳನ್ನು ನಿಯಂತ್ರಿಸುವ ದಿಸೆಯಲ್ಲಿ ಈ ಸುಗ್ರೀವಾಜ್ಞೆಯು ಉತ್ತಮ ಹೆಜ್ಜೆ. ಇದು ಆರ್ಥಿಕವಾಗಿ ದುರ್ಬಲ ವರ್ಗಗಳಿಂದ ಮತ್ತು ವ್ಯಕ್ತಿಗಳಿಂದ ಸುಸ್ತಿ ಬಡ್ಡಿ ದರ ಮತ್ತು ಬಲವಂತದ ವಸೂಲಿ ಮಾಡುವುದನ್ನು ತಡೆಯುತ್ತದೆ. ಹೀಗಾಗಿ, ಇದಕ್ಕೆ ನಾನು ಅನುಮೋದನೆ ನೀಡುತ್ತಿದ್ದೇನೆ. ಆದರೆ, ಸುಗ್ರೀವಾಜ್ಞೆ ಅನುಷ್ಠಾನದ ಸಂದರ್ಭದಲ್ಲಿ ಕೆಲವು ಅಂಶಗಳನ್ನು ರಾಜ್ಯ ಸರ್ಕಾರ ಖಚಿತಪಡಿಸಿಕೊಳ್ಳಬೇಕು' ಎಂದು ರಾಜ್ಯಪಾಲರು ಕಡತದಲ್ಲಿ ನಿರ್ದೇಶನ ನೀಡಿದ್ದಾರೆ.

ಸುಗ್ರೀವಾಜ್ಞೆಯನ್ನು ರಾಜ್ಯಪಾಲರ ಅಂಕಿತಕ್ಕಾಗಿ ರಾಜ್ಯ ಸರ್ಕಾರ ಫೆ. 4ರಂದು ಕಳುಹಿಸಿತ್ತು. ಈ ಸುಗ್ರೀವಾಜ್ಞೆ, 'ಸಹಜ ನ್ಯಾಯ ಹಾಗೂ ಸಾಲ ನೀಡುವವರ ಮೂಲಭೂತ ಹಕ್ಕುಗಳಿಗೆ ವಿರುದ್ಧವಾಗಿದೆ' ಎಂಬ ಆಕ್ಷೇಪ ವ್ಯಕ್ತಪಡಿಸಿ ಫೆ. 7ರಂದು ಅದನ್ನು ರಾಜ್ಯಪಾಲರು ವಾಪಸ್ ಕಳುಹಿಸಿದ್ದರು. ಅವರು ಎತ್ತಿದ್ದ ಆಕ್ಷೇಪಗಳಿಗೆ ವಿವರವಾದ ಸ್ಪಷ್ಟೀಕರಣ ಸಹಿತ ಸುಗ್ರೀವಾಜ್ಞೆಯನ್ನು ಫೆ. 11ರಂದು ಮತ್ತೊಮ್ಮೆ ರಾಜ್ಯಪಾಲರಿಗೆ ರವಾನಿಸಿತ್ತು.

ಸರ್ಕಾರಕ್ಕೆ ರಾಜ್ಯಪಾಲರ ಸಲಹೆಗಳೇನು?



- ಈ ಸುಗ್ರೀವಾಜ್ಞೆಯನ್ನು ತಪ್ಪು ಗ್ರಹಿಕೆ ಅಥವಾ ದುರ್ಬಳಕೆ ಮಾಡಿಕೊಂಡು ಆರ್‌ಬಿಐ ನೋಂದಾಯಿತ ಮತ್ತು ನಿಯಂತ್ರಿತ ಹಣಕಾಸು ಸಂಸ್ಥೆಗಳಿಗೆ ಕಿರುಕುಳ ನೀಡಬಾರದು
- ಕಾನೂನುಬದ್ಧ ಮತ್ತು ನಿಜವಾದ ಸಾಲದಾತರು ಬಡ್ಡಿ ಮತ್ತು ಅಸಲು ವಸೂಲಿ ಮಾಡಲು ತೊಂದರೆ ಆಗಬಾರದು. ಅಂತಹ ಸಾಲದಾತರು ನೀಡಿದ್ದ ಸಾಲವನ್ನು ಮರಳಿ ಪಡೆಯಲು ಯಾವುದೇ ಪರಿಹಾರ ಸುಗ್ರೀವಾಜ್ಞೆಯಲ್ಲಿ ಇಲ್ಲ. ಇದು ಕಾನೂನು ಹೋರಾಟಕ್ಕೆ ಕಾರಣ ಆಗಬಹುದು
- ಸಹಜ ನ್ಯಾಯದ ಭಾಗವಾಗಿ ಪ್ರತಿಯೊಬ್ಬ ವ್ಯಕ್ತಿಗೂ ತಮ್ಮ ಹಕ್ಕು ಮತ್ತು ಕಾನೂನು ಪರಿಹಾರಕ್ಕೆ ಹೋರಾಟ ನಡೆಸುವ ಅವಕಾಶವಿದೆ. ಯಾರೇ ಆದರೂ ಹೋರಾಟ ನಡೆಸದಂತೆ ತಡೆಯುವುದು ಮೂಲಭೂತ ಹಕ್ಕುಗಳ ಉಲ್ಲಂಘನೆಗೆ ಕಾರಣ ಆಗಬಹುದು. ಹೀಗಾಗಿ, ರಾಜ್ಯ ಸರ್ಕಾರ ಈ ಕುರಿತು ಮರುಚಿಂತನೆ ನಡೆಸಿ ಸೂಕ್ತ ಕ್ರಮಕೈಗೊಳ್ಳಬೇಕು
- ಸುಗ್ರೀವಾಜ್ಞೆಯನ್ನು ಮುಂದೆಯೂ ವಿಧಾನ ಮಂಡಲದ ಅಧಿವೇಶನದಲ್ಲಿ ಮಂಡಿಸುವ ಸಂದರ್ಭದಲ್ಲಿ ಈ ಮೇಲಿನ ಅಂಶಗಳನ್ನು ಸೇರಿಸಲು ಸೂಕ್ತ ಕ್ರಮ ತೆಗೆದುಕೊಳ್ಳಬೇಕು. ಈ ಎಲ್ಲ ಅಂಶಗಳ ಬಗ್ಗೆ ಅಧಿವೇಶನದಲ್ಲಿ ಸಮಗ್ರವಾಗಿ ಚರ್ಚೆ ನಡೆಸಬೇಕು.

ಫೆಲೋಷಿಪ್‌ಗೆ ಅರ್ಜಿ ಆಹ್ವಾನ

ಬೆಂಗಳೂರು: ಕುವೆಂಪು ಭಾಷಾ ಭಾರತಿ ಪ್ರಾಧಿಕಾರವು 'ಕುವೆಂಪು' ಅವರ ಹೆಸರಿನಲ್ಲಿ ನೀಡುವ ಫೆಲೋಷಿಪ್‌ಗೆ ಅರ್ಜಿ ಆಹ್ವಾನಿಸಿದೆ.

35 ವರ್ಷ ಮೇಲ್ಪಟ್ಟವರು ಹಿರಿಯ ವಿಭಾಗ ಹಾಗೂ 35 ವರ್ಷದೊಳಗಿನವರು ಕಿರಿಯ ವಿಭಾಗದ ಫೆಲೋಷಿಪ್‌ಗೆ ಅರ್ಜಿ ಸಲ್ಲಿಸಬಹುದಾಗಿದೆ. ಈ ಫೆಲೋಷಿಪ್‌ಗಳು ಕ್ರಮವಾಗಿ ₹3 ಲಕ್ಷ ಮತ್ತು ₹2 ಲಕ್ಷ ಒಳಗೊಂಡಿವೆ. ಹಿರಿಯ ವಿಭಾಗದಲ್ಲಿ ಇಬ್ಬರು ಹಾಗೂ ಕಿರಿಯ ವಿಭಾಗದಲ್ಲಿ ನಾಲ್ವರನ್ನು ಆಯ್ಕೆ ಮಾಡಲಾಗುತ್ತದೆ.

ನಿಯಮಗಳು ಹಾಗೂ ಅರ್ಜಿಯ ಪ್ರತಿಗಳಿಗೆ www.kuvempubhashabharathi.karnataka.gov.in ಭೇಟಿ ನೀಡಬಹುದಾಗಿದೆ. ಭರ್ತಿ ಮಾಡಿದ ಅರ್ಜಿಯ ಪ್ರತಿಯನ್ನು ಇದೇ 28ರೊಳಗೆ ಕಳುಹಿಸಬೇಕು ಎಂದು ಪ್ರಾಧಿಕಾರದ ರಿಜಿಸ್ಟ್ರಾರ್ ಈಶ್ವರ್ ಕು. ಮಿರ್ಜಿ ತಿಳಿಸಿದ್ದಾರೆ.

ಸುದ್ದಿ 2 ನಿಮಿಷ

ನಗರಕ್ಕೆ ಒಬ್ಬರೇ ಮೇಯರ್ ಸಾಧ್ಯವಿಲ್ಲ: ಶಾಸಕ ರಿಜ್ವಾನ್

ಬೆಂಗಳೂರು: 'ಬೃಹದಾಕಾರವಾಗಿ ಬೆಳೆಯುತ್ತಿರುವ ನಗರದಲ್ಲಿ ಒಬ್ಬರೇ ಮೇಯರ್ ಹಾಗೂ ಒಬ್ಬರೇ ಆಯುಕ್ತರಿಂದ ಕೆಲಸ ಮಾಡಲು ಸಾಧ್ಯವಿಲ್ಲ. ಹೆಚ್ಚು ನಗರ ಪಾಲಿಕೆಗಳನ್ನು ರಚಿಸಿದರೆ, ಸಮಸ್ಯೆಗಳನ್ನು ಸ್ಥಳೀಯವಾಗಿಯೇ ಚರ್ಚಿಸಿ, ಪರಿಹಾರ ಪಡೆದುಕೊಳ್ಳಬಹುದು' ಎಂದು ಶಾಸಕ ರಿಜ್ವಾನ್ ಅರ್ಷದ್ ಹೇಳಿದರು.

'ಗ್ರೇಟರ್ ಬೆಂಗಳೂರು ಆಡಳಿತ ಮಸೂದೆ- 2024' ಅನ್ನು ಪರಿಶೀಲಿಸಿ, ವರದಿ ಸಲ್ಲಿಸಲು ರಚಿಸಲಾಗಿರುವ ವಿಧಾನ ಮಂಡಲದ ಜಂಟಿ ಪರಿಶೀಲನಾ ಸಮಿತಿ ವತಿಯಿಂದ ಯಲಹಂಕ, ದಾಸರಹಳ್ಳಿ ವಲಯಗಳಲ್ಲಿ ಬುಧವಾರ ಆಯೋಜಿಸಲಾಗಿದ್ದ 'ಸಾರ್ವಜನಿಕರು, ಸಂಘ-ಸಂಸ್ಥೆಗಳಿಂದ ಸಲಹೆ ಸ್ವೀಕಾರ' ಸಭೆಗಳಲ್ಲಿ ಸಲಹೆಗಳನ್ನು ಪಡೆದು ಅವರು ಪ್ರತಿಕ್ರಿಯಿಸಿದರು.

'ಗ್ರೇಟರ್ ಬೆಂಗಳೂರು ಆಡಳಿತ ಮಸೂದೆ'ಯಲ್ಲಿರುವ ಅಂಶಗಳು ಅಂತಿಮವಾದದ್ದಲ್ಲ, ಕರಡು ಮಾತ್ರ. 3 ದಿನದಿಂದ ನಾಗರಿಕರ ಅಭಿಪ್ರಾಯಗಳನ್ನು ಸಂಗ್ರಹಿಸಲಾಗಿದ್ದು, ಅವುಗಳನ್ನು ಪರಿಶೀಲಿಸಿ ಮಸೂದೆಗೆ ಸೇರಿಸಲಾಗುತ್ತದೆ' ಎಂದರು.

'ಹೆಚ್ಚು ನಗರ ಪಾಲಿಕೆಗಳ ಬದಲು ಈಗಿರುವ ವಲಯಗಳ ಸಂಖ್ಯೆಯನ್ನೇ ಹೆಚ್ಚಿಸಿ, ಬೆಂಗಳೂರನ್ನು ಯಾವುದೇ ಕಾರಣಕ್ಕೂ ವಿಭಜನೆ ಮಾಡಬೇಡಿ, ಬಿಬಿಎಂಪಿ ಅಸ್ತಿತ್ವದಲ್ಲಿ ಉಳಿಸಿಕೊಳ್ಳಬೇಕು, ಆದಷ್ಟು ಬೇಗ ಬಿಬಿಎಂಪಿ ಚುನಾವಣೆ ನಡೆಸಿ' ಎಂದು ನಾಗರಿಕರು ಆಗ್ರಹಿಸಿದರು. ಬಿಬಿಎಂಪಿ ಆಡಳಿತಾಧಿಕಾರಿ ಎಸ್.ಆರ್. ಉಮಾಶಂಕರ್, ಮುಖ್ಯ ಆಯುಕ್ತ ತುಷಾರ್ ಗಿರಿನಾಥ್, ವಲಯ ಆಯುಕ್ತರಾದ ಸತೀಶ್, ಕರೀಗೌಡ ಉಪಸ್ಥಿತರಿದ್ದರು.



ಯುಪಿಎಸ್‌ಸಿ: ಅರ್ಜಿ ಸಲ್ಲಿಕೆ ಪ್ರಕ್ರಿಯೆಯಲ್ಲಿ ಬದಲಾವಣೆ

ನವದೆಹಲಿ (ಪಿಟಿಐ): ನಾಗರಿಕ ಸೇವಾ ಪೂರ್ವಭಾವಿ ಪರೀಕ್ಷೆಯ ಅರ್ಜಿ ಸಲ್ಲಿಕೆಗೆ ತಾಂತ್ರಿಕ ತೊಡಕುಗಳು ಎದುರಾಗುತ್ತಿರುವ ಕಾರಣ ಲೋಕಸೇವಾ ಆಯೋಗವು ಕೆಲವೊಂದು ಬದಲಾವಣೆಗಳನ್ನು ತಂದಿದೆ.

'ಅರ್ಜಿ ಸಲ್ಲಿಕೆಯ ವೇಳೆ ಎದುರಾಗುತ್ತಿರುವ ಸಮಸ್ಯೆಗಳ ಬಗ್ಗೆ ಆಕಾಂಕ್ಷಿಗಳು ನೀಡಿರುವ ದೂರನ್ನು ಪರಿಗಣಿಸಿ, ಒಂದೇ ಬಾರಿಗೆ ನೋಂದಣಿ ಮಾಡಿಕೊಳ್ಳುವ ವ್ಯವಸ್ಥೆಯಲ್ಲಿ ತಿದ್ದುಪಡಿಗೆ ಅವಕಾಶ ಕಲ್ಪಿಸಲಾಗಿದೆ' ಎಂದು ಆಯೋಗವು ಅಧಿಸೂಚನೆಯಲ್ಲಿ ತಿಳಿಸಿದೆ.

'ಹೆಸರು, ಜನ್ಮ ದಿನಾಂಕ, ತಂದೆಯ ಹೆಸರು, ತಾಯಿಯ ಹೆಸರು, ಮೊಬೈಲ್ ನಂಬರ್ ಮತ್ತು ಇ–ಮೇಲ್ ಅನ್ನು ತಿದ್ದುಪಡಿ ಮಾಡಲು ಅವಕಾಶಗಳಿಲ್ಲ. ಅಭ್ಯರ್ಥಿಯ ಮೊಬೈಲ್ ಸಂಖ್ಯೆ ಯಾವುದಾದರೂ ಕಾರಣದಿಂದ ಬದಲಾದಲ್ಲಿ, ಇ–ಮೇಲ್ ಮೂಲಕ ಅದನ್ನು ಬದಲಿಸಬಹುದಾಗಿದೆ. ಈ ವೇಳೆ ಇ–ಮೇಲ್‌ಗೆ ಒಟಿಪಿ ಬರುತ್ತದೆ' ಎಂದು ಆಯೋಗ ತಿಳಿಸಿದೆ.

ಅಭ್ಯರ್ಥಿಯ ಮೊಬೈಲ್ ಸಂಖ್ಯೆ ಮತ್ತು ಇಮೇಲ್ ಖಾತೆಗಳೆರಡೂ ಲಭ್ಯವಿಲ್ಲದಿದ್ದರೆ, ಅಂಕ ಪಟ್ಟಿ, ಆಧಾರ್ ಕಾರ್ಡ್ ಅಥವಾ ಪ್ಯಾನ್ ಕಾರ್ಡ್ ಅಥವಾ ಪಾಸ್‌ಪೋರ್ಟ್ ಅಥವಾ ವಾಹನ ಚಾಲನಾ ಪರವಾನಗಿ, ಭಾವಚಿತ್ರದೊಂದಿಗೆ ನಿಗದಿತ ನಮೂನೆಯಲ್ಲಿ ಆಯೋಗಕ್ಕೆ ಮನವಿ ಸಲ್ಲಿಸಬಹುದು.

ಅರ್ಜಿ ಸಲ್ಲಿಕೆಯ ಅವಧಿಯನ್ನು ಫೆ.18ರವರೆಗೆ ವಿಸ್ತರಿಸಲಾಗಿದೆ.

ಮಾಹಿತಿ ಆಯೋಗದ ಆಯುಕ್ತರ ನೇಮಕ ಪ್ರಶ್ನಿಸಿದ ಅರ್ಜಿ ವಿಚಾರಣೆ

'ಶೋಧನಾ ಸಮಿತಿ ರಚನೆಯಾಗಿಲ್ಲ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಜ್ಯ ಮುಖ್ಯ ಮಾಹಿತಿ ಆಯುಕ್ತ ಮತ್ತು ಮಾಹಿತಿ ಆಯುಕ್ತರನ್ನು ನೇಮಕ ಮಾಡುವ ಮುನ್ನ ರಾಜ್ಯ ಸರ್ಕಾರ ಶೋಧನಾ ಸಮಿತಿ ರಚಿಸದೆಯೇ ನೇಮಕಾತಿ ಮಾಡಿದ್ದು, ಈ ಮೂಲಕ ಸುಪ್ರೀಂ ಕೋರ್ಟ್ ತೀರ್ಪನ್ನು ಉಲ್ಲಂಘಿಸಿದೆ' ಎಂದು ನೇಮಕಾತಿ ಪ್ರಶ್ನಿಸಿದ ಅರ್ಜಿದಾರರ ಪರ ವಕೀಲರು ಹೈಕೋರ್ಟ್‌ಗೆ ಅರುಹಿದರು.

ಈ ಕುರಿತಂತೆ ಹುದ್ದೆಯ ಆಕಾಂಕ್ಷಿಯಾಗಿದ್ದ ಜೆ.ಪಿ.ನಗರ 7ನೇ ಹಂತದ ನಿವಾಸಿಯಾದ ಸಾಮಾಜಿಕ ಕಾರ್ಯಕರ್ತ ಕೆ.ಮಲ್ಲಿಕಾರ್ಜುನ ರಾಜು ಸಲ್ಲಿಸಿರುವ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಆರ್.ದೇವದಾಸ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಬುಧವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಅರ್ಜಿದಾರರ ಪರ ಹೈಕೋರ್ಟ್ ವಕೀಲ ಅಶೋಕ್ ಬಿ.ಪಾಟೀಲ ವಾದ ಮಂಡಿಸಿ, 'ಶೋಧನಾ ಸಮಿತಿ ರಚನೆ ಮಾಡಿರುವುದಕ್ಕೆ ಸಂಬಂಧಿಸಿದ ಅಧಿಸೂಚನೆಯನ್ನು ಸಲ್ಲಿಸುವಂತೆ ಸರ್ಕಾರಕ್ಕೆ ನಿರ್ದೇಶಿಸಬೇಕು ಮತ್ತು ನೇಮಕದ ಆದೇಶಕ್ಕೆ ತಡೆ ನೀಡಬೇಕು' ಎಂದು ಕೋರಿದರು.

ಇದನ್ನು ಅಲ್ಲಗಳೆದ ಅಡ್ವೊಕೇಟ್ ಜನರಲ್ ಕೆ.ಶಶಿಕಿರಣ ಶೆಟ್ಟಿ, 'ನೇಮಕಾತಿಗೆ ಸಂಬಂಧಿಸಿದಂತೆ ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ ಮತ್ತು ಡಿಪಿಎಆರ್ ಕಾರ್ಯದರ್ಶಿಗಳ ಸಮಿತಿ ರಚಿಸಲಾಗಿತ್ತು. ಆದರೆ, ಈ ಸಂಬಂಧ ಯಾವುದೇ ಸಾರ್ವಜನಿಕ ಪ್ರಕಟಣೆ ಹೊರಡಿಸಿರಲಿಲ್ಲ ಅಷ್ಟೇ. ಮಾಹಿತಿ ಆಯುಕ್ತರ ನೇಮಕದ ಬಗ್ಗೆ ಸುಪ್ರೀಂ ಕೋರ್ಟ್ ನಿಗಾ ವಹಿಸುತ್ತಿದ್ದು, ಈ ಸಂಬಂಧ ಸುಪ್ರೀಂ ಕೋರ್ಟ್‌ನಲ್ಲಿ ಮಾರ್ಚ್ 4ಕ್ಕೆ ವಿಚಾರಣೆ ನಿಗದಿಯಾಗಿದೆ. ಅಲ್ಲಿಯೇ ಪ್ರಮಾಣ ಪತ್ರ ಸಲ್ಲಿಸಲಾಗುವುದು' ಎಂದರು.


ಇದಕ್ಕೆ ಪ್ರತಿಕ್ರಿಯಿಸಿದ ನ್ಯಾಯಪೀಠ, 'ಸರ್ಕಾರ ಶೋಧನಾ ಸಮಿತಿ ರಚಿಸಿರುವ ಬಗ್ಗೆ ದಾಖಲೆಗಳಲ್ಲಿ ಉಲ್ಲೇಖವಿಲ್ಲ. ನೀವು ರಚಿಸಿರುವ ಸಮಿತಿಯನ್ನು ಶೋಧನಾ ಸಮಿತಿ ಎನ್ನಲಾಗದು. ಹಾಗಾಗಿ, ಶೋಧನಾ ಸಮಿತಿ ರಚಿಸಿರುವ ಕುರಿತ ಸಂಪೂರ್ಣ ವಿವರಗಳನ್ನು ಸಲ್ಲಿಸಿ' ಎಂದು ಅಡ್ವೊಕೇಟ್ ಜನರಲ್ ಅವರಿಗೆ ನಿರ್ದೇಶಿಸಿ ವಿಚಾರಣೆಯನ್ನು ಇದೇ 18ಕ್ಕೆ ಮುಂದೂಡಿತು.

ಕರ್ನಾಟಕ ಮಾಹಿತಿ ಹಕ್ಕು ಆಯೋಗದ ಮುಖ್ಯ ಆಯುಕ್ತರಾಗಿ ಎ.ಎಂ. ಪ್ರಸಾದ್ ಹಾಗೂ ಆಯುಕ್ತರಾಗಿ ಕೆ.ರಾಮನ್, ಡಾ.ಹರೀಶ್ ಕುಮಾರ್, ರುದ್ರಣ್ಣ ಹರ್ತಿಕೋಟೆ, ನಾರಾಯಣ ಜಿ.ಚನ್ನಾಳ, ಎಸ್.ರಾಜಶೇಖರ, ಕೆ.ಬದ್ರುದ್ದೀನ್ ಮತ್ತು ಬಿ.ಆರ್.ಮಮತಾ ಅವರನ್ನು ನೇಮಕ ಮಾಡಿ ರಾಜ್ಯ ಸರ್ಕಾರ 2025ರ ಜನವರಿ 30ರಂದು ಆದೇಶಿಸಿತ್ತು. ಈ ಆದೇಶವನ್ನು ರದ್ದುಪಡಿಸುವಂತೆ ಅರ್ಜಿದಾರರು ಕೋರಿದ್ದಾರೆ.

ನರೇಂದ್ರಸ್ವಾಮಿ ನೇಮಕ ಪ್ರಶ್ನಿಸಿ ಪಿಐಎಲ್

'ಶಾಸಕ ಪಿ.ಎಂ.ನರೇಂದ್ರಸ್ವಾಮಿ ಅವರನ್ನು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ (ಕೆಎಸ್‌ಪಿಸಿಬಿ) ಅಧ್ಯಕ್ಷರನ್ನಾಗಿ ನೇಮಕ ಮಾಡುವ ಮುನ್ನ ಸುಪ್ರೀ ಕೋರ್ಟ್ ಮಾರ್ಗಸೂಚಿ ಉಲ್ಲಂಘಿಸಲಾಗಿದೆ' ಎಂದು ಆಕ್ಷೇಪಿಸಿ ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಲಾಗಿದೆ.

ನರೇಂದ್ರಸ್ವಾಮಿ ನೇಮಕ ಪ್ರಶ್ನಿಸಿ ಚಿಕ್ಕಬಳ್ಳಾಪುರದ 'ಶಾಶ್ವತ ನೀರಾವರಿ ಹೋರಾಟ ಸಮಿತಿ' ಅಧ್ಯಕ್ಷ ಆರ್. ಆಂಜನೇಯ ರೆಡ್ಡಿ ಸಲ್ಲಿಸಿರುವ ಈ ಸಾರ್ವಜನಿಕ ಹಿತಾಸಕ್ತಿ ಅರ್ಜಿ (ಪಿಐಎಲ್) ಇನ್ನಷ್ಟೇ ವಿಚಾರಣೆಗೆ ಬರಬೇಕಿದೆ.



'ಪರಿಸರ ವಿಜ್ಞಾನ ಸೇರಿದಂತೆ ಯಾವುದೇ ನಿರ್ದಿಷ್ಟ ಅರ್ಹತೆ ಇಲ್ಲದ ನರೇಂದ್ರಸ್ವಾಮಿ ನೇಮಕವು ಕೇವಲ ರಾಜಕೀಯ ಕಾರಣಗಳನ್ನು ಒಳಗೊಂಡಿದೆ. ಆದ್ದರಿಂದ, ಅವರ ಅಧ್ಯಕ್ಷ ನೇಮಕಾತಿ ಆದೇಶವನ್ನು ರದ್ದುಪಡಿಸಬೇಕು' ಎಂದು ಅರ್ಜಿಯಲ್ಲಿ ಕೋರಲಾಗಿದೆ.

'ರೋರಿಚ್ ಎಸ್ಟೇಟ್‌ನಲ್ಲಿ ಪರಿಸರ ಪ್ರವಾಸೋದ್ಯಮ: ವರದಿ ಕೊಡಿ'

ಪ್ರಜಾವಾಣಿ ವಾರ್ತೆ

ನವದೆಹಲಿ: ಬೆಂಗಳೂರಿನ ದೇವಿಕಾರಾಣಿ– ರೋರಿಚ್ ಎಸ್ಟೇಟ್‌ನಲ್ಲಿ ನಿಯಮಬಾಹಿರವಾಗಿ ಪರಿಸರ ಪ್ರವಾಸೋದ್ಯಮ ಯೋಜನೆ ಕೈಗೆತ್ತಿಕೊಳ್ಳುತ್ತಿರುವ ಆರೋಪದ ಬಗ್ಗೆ ಪರಿಶೀಲನೆ ನಡೆಸಿ ಸೂಕ್ತ ಕ್ರಮ ಕೈಗೊಂಡು ವರದಿ ಸಲ್ಲಿಸುವಂತೆ ಅರಣ್ಯ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಗೆ ಕೇಂದ್ರ ಅರಣ್ಯ, ಪರಿಸರ ಹಾಗೂ ತಾಪಮಾನ ಬದಲಾವಣೆ ಸಚಿವಾಲಯ ನಿರ್ದೇಶನ ನೀಡಿದೆ.

ಅರಣ್ಯ ಸಂರಕ್ಷಣಾ ಕಾಯ್ದೆ– 1980 ಉಲ್ಲಂಘಿಸಿ ಈ ಯೋಜನೆ ಕೈಗೆತ್ತಿಕೊಳ್ಳಲಾಗುತ್ತಿದೆ ಎಂದು ಆರೋಪಿಸಿ ವನ್ಯಜೀವಿ ಸಂರಕ್ಷಣಾವಾದಿ ಗಿರಿಧರ್ ಕುಲಕರ್ಣಿ ಅವರು ಸಚಿವಾಲಯಕ್ಕೆ ದೂರು ನೀಡಿದ್ದರು.

'ರೋರಿಚ್ ಎಸ್ಟೇಟ್‌ನಲ್ಲಿ ಪರಿಸರ ಪ್ರವಾಸೋದ್ಯಮ ಯೋಜನೆ ಅನುಷ್ಠಾನಗೊಳಿಸಲು ಪ್ರವಾಸೋದ್ಯಮ ಇಲಾಖೆ ಸಿದ್ಧತೆ ನಡೆಸಿದೆ. ಇದಕ್ಕೆ ಕೇಂದ್ರ ಸರ್ಕಾರದಿಂದ ₹99 ಕೋಟಿ ಮಂಜೂರು ಮಾಡಿದೆ. ಈ ಯೋಜನೆಯಡಿ ಸಂದರ್ಶಕರ ಪಾರ್ಕಿಂಗ್, ಸಫಾರಿ ಪಾರ್ಕಿಂಗ್, ಕೆಫೆಟೇರಿಯಾ, ಮಾಹಿತಿ ಕೇಂದ್ರ, ಓವರ್ ಬ್ರಿಡ್ಜ್, ಕಾಟೇಜ್‌ಗಳು, ಗಾಲ್ಫ್ ಕೋರ್ಟ್, ಬಯಲು ರಂಗ ಮಂದಿರ, ಜಿಪ್ ಲೈನ್ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲು ಇಲಾಖೆ ಯೋಜಿಸಿದೆ. ತ್ವರಿತ ನಗರೀಕರಣದಿಂದ ಬೆಂಗಳೂರಿನಲ್ಲಿ ಹಸಿರು ಹೊದಿಕೆ ಕಡಿಮೆ ಆಗುತ್ತಿದೆ. ಈ ಯೋಜನೆಗೆ ಒಪ್ಪಿಗೆ ಕೊಟ್ಟರೆ ಇನ್ನಷ್ಟು ಹಸಿರು ನಾಶವಾಗಲಿದೆ' ಎಂದು ಅವರು ದೂರಿನಲ್ಲಿ ತಿಳಿಸಿದ್ದರು.

'ನಗರದ ದಕ್ಷಿಣ ಭಾಗದಲ್ಲಿ, ವಿಶೇಷವಾಗಿ ದೇವಿಕಾ ರಾಣಿ/ರೋರಿಚ್ ಎಸ್ಟೇಟ್ ಸುತ್ತಮುತ್ತ ಆನೆಗಳು ಇವೆ. ಈ ಯೋಜನೆ ಜಾರಿಗೊಳಿಸಿದರೆ ಮಾನವ–ಪ್ರಾಣಿ ಸಂಘರ್ಷ ಇನ್ನಷ್ಟು ಹೆಚ್ಚಲಿದೆ. ಹೀಗಾಗಿ, ಯೋಜನೆ ಅನುಷ್ಠಾನಗೊಳಿಸದಂತೆ ರಾಜ್ಯ ಸರ್ಕಾರಕ್ಕೆ ನಿರ್ದೇಶನ ನೀಡಬೇಕು' ಎಂದು ಅವರು ಕೋರಿದ್ದರು.

ಮನೋಜ್ ಜೈನ್ ಆಹಾರ ಇಲಾಖೆ ಕಾರ್ಯದರ್ಶಿ

ಬೆಂಗಳೂರು: ಐಎಎಸ್ ಅಧಿಕಾರಿ ಮನೋಜ್ ಜೈನ್ ಅವರನ್ನು ಆಹಾರ ಇಲಾಖೆ ಕಾರ್ಯದರ್ಶಿ ಹುದ್ದೆಗೆ ವರ್ಗಾಯಿಸಲಾಗಿದೆ.

ಅಲ್ಲದೇ, ಅವರಿಗೆ ಯೋಜನೆ, ಸಾಂಖ್ಯಿಕ ಇಲಾಖೆ ಕಾರ್ಯದರ್ಶಿ ಹುದ್ದೆಯನ್ನು ಹೆಚ್ಚುವರಿಯಾಗಿ ನೀಡಲಾಗಿದೆ.

ಪಿ.ಮಣಿವಣ್ಣನ್ ಅವರಿಗೆ ಸಹಕಾರ ಇಲಾಖೆ ಪ್ರಧಾನ ಕಾರ್ಯದರ್ಶಿ ಹುದ್ದೆಯನ್ನು ಹೆಚ್ಚುವರಿಯಾಗಿ ನೀಡಲಾಗಿದೆ. ಸಲ್ಮಾ ಕೆ.ಫಾಹಿಮ್ ಅವರಿಗೆ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ಕಾರ್ಯದರ್ಶಿ ಹುದ್ದೆಯನ್ನು ಹೆಚ್ಚುವರಿಯಾಗಿ ನೀಡಲಾಗಿದೆ.

ಕೆಎಚ್‌ಎಸ್‌ಎಲ್‌ಎ–2025 ರಾಷ್ಟ್ರೀಯ ಸಮ್ಮೇಳನದಲ್ಲಿ ಚರ್ಚೆ

ಗ್ರಂಥಾಲಯ ಸೇವೆಗಳಲ್ಲಿ ಕೃತಕ ಬುದ್ಧಿಮತ್ತೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜರಾಜೇಶ್ವರಿ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆ ಹಾಗೂ ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ ಸಹಯೋಗದಲ್ಲಿ ಕರ್ನಾಟಕ ಆರೋಗ್ಯ ವಿಜ್ಞಾನಗಳ ಗ್ರಂಥಾಲಯ ಸಂಘವು (ಕೆಎಚ್‌ಎಸ್‌ಎಲ್‌ಎ) ಇಲ್ಲಿ ಹಮ್ಮಿಕೊಂಡಿದ್ದ 'ಕೆಎಚ್‌ಎಸ್‌ಎಲ್‌ಎ-2025'ರಾಷ್ಟ್ರೀಯ ಸಮ್ಮೇಳನದಲ್ಲಿ ಗ್ರಂಥಾಲಯ ಸೇವೆಗಳಲ್ಲಿ ಕೃತಕ ಬುದ್ಧಿಮತ್ತೆ ತಂತ್ರಜ್ಞಾನ ಅಳವಡಿಕೆ ಬಗ್ಗೆ ಚರ್ಚಿಸಲಾಯಿತು.

ಇತ್ತೀಚೆಗೆ ನಗರದಲ್ಲಿ ನಡೆದ ಎರಡು ದಿನಗಳ ಈ ಸಮ್ಮೇಳನವನ್ನು ಬೆಂಗಳೂರು ವಿಶ್ವವಿದ್ಯಾಲಯದ ಕುಲಪತಿ ಜಯಕರ್ ಎಸ್.ಎಂ. ಹಾಗೂ ವೈದ್ಯಕೀಯ ಶಿಕ್ಷಣ ಇಲಾಖೆ ನಿರ್ದೇಶಕಿ ಡಾ. ಸುಜಾತಾ ರಾಥೋಡ್ ಉದ್ಘಾಟಿಸಿದರು.



ಸಮ್ಮೇಳನದಲ್ಲಿ ಡಾ. ಸುಜಾತಾ ರಾಥೋಡ್ ಅವರನ್ನು ಗೌರವಿಸಲಾಯಿತು. ಎಚ್‌.ಎಸ್‌. ಸಿದ್ಧಮಲ್ಲಯ್ಯ, ಡಾ.ಸತ್ಯಮೂರ್ತಿ ಬಿ., ಡಾ. ಪ್ರವೀಣ್ ಕುಮಾರ್, ಡಾ.ಕಿರಣ್ ಆರ್. ಉಪಸ್ಥಿತರಿದ್ದರು

ಈ ವೇಳೆ ಮಾತನಾಡಿದ ಡಾ. ಸುಜಾತಾ ರಾಥೋಡ್, 'ಇಂದಿನ ಸ್ಪರ್ಧಾತ್ಮಕ ಹಾಗೂ ತಂತ್ರಜ್ಞಾನದ ಯುಗದಲ್ಲಿ ಎಲ್ಲ ಕ್ಷೇತ್ರಗಳಲ್ಲಿಯೂ ಡಿಜಿಟಲೀಕರಣ ಆಗುತ್ತಿದೆ. ಗ್ರಂಥಾಲಯಗಳ ಭವಿಷ್ಯವನ್ನು ಮರುರೂಪಿಸಲು, ಗ್ರಂಥಾಲಯ ಸೇವೆಗಳಲ್ಲಿ ಕೃತಕ ಬುದ್ಧಿಮತ್ತೆ ತಂತ್ರಜ್ಞಾನದ ಪರಿಕಲ್ಪನೆ ಅಳವಡಿಸಿಕೊಳ್ಳುವುದು ಉತ್ತಮ ಆಯ್ಕೆ' ಎಂದರು.

ಜಯಕರ್ ಎಸ್.ಎಂ. ಅವರು, ಗ್ರಂಥಾಲಯಗಳ ಮಹತ್ವ ಮತ್ತು ಪ್ರಾಮುಖ್ಯತೆ ಹಾಗೂ ಕೃತಕ ಬುದ್ಧಿಮತ್ತೆ ತಂತ್ರಜ್ಞಾನದ ಬಗ್ಗೆ ವಿವರಿಸಿದರು.

ಕರ್ನಾಟಕ ಆರೋಗ್ಯ ವಿಜ್ಞಾನಗಳ ಗ್ರಂಥಾಲಯ ಸಂಘದ ಅಧ್ಯಕ್ಷ ಎಚ್.ಎಸ್. ಸಿದ್ಧಮಲ್ಲಯ್ಯ, 'ಗ್ರಂಥಾಲಯ ಸಂಘವು ಪ್ರತಿ ವರ್ಷ ವಿವಿಧ ವೈದ್ಯಕೀಯ ಕಾಲೇಜುಗಳಲ್ಲಿ ಸಮ್ಮೇಳನವನ್ನು ಆಯೋಜಿಸಿ, ಗ್ರಂಥಪಾಲಕರಿಗೆ ತರಬೇತಿ ನೀಡುತ್ತಿದೆ' ಎಂದರು.

ರಾಜೀವ ಗಾಂಧಿ ಆರೋಗ್ಯ ವಿಜ್ಞಾನಗಳ ವಿ.ವಿಯ ಸೆನೆಟ್ ಸದಸ್ಯ ಡಾ. ನವೀನ್ ಎಸ್. ಅವರು ಮಂಗಳೂರಿನ ಎ.ಬಿ.ಶೆಟ್ಟಿ ದಂತ ವೈದ್ಯಕೀಯ ಕಾಲೇಜಿನ ನಿವೃತ್ತ ಗ್ರಂಥಪಾಲಕಿ ಡಾ. ಶಶಿಕಲಾ ಕೊಹಿನೂರು ಹಾಗೂ ಇಲ್ಲಿನ ವಿ.ಎಸ್. ದಂತ ವೈದ್ಯಕೀಯ ಕಾಲೇಜಿನ ಡಾ. ಗೋವಿಂದ ರೆಡ್ಡಿ ವಿ.ಎಸ್. ಅವರನ್ನು ಸನ್ಮಾನಿಸಿದರು.

ರಾಜರಾಜೇಶ್ವರಿ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆಯ ಡೀನ್ ಡಾ. ಸತ್ಯಮೂರ್ತಿ ಬಿ. ಅಧ್ಯಕ್ಷತೆ ವಹಿಸಿದ್ದರು. ವೈದ್ಯಕೀಯ ಅಧೀಕ್ಷಕ ಡಾ. ಪ್ರವೀಣ್ ಕುಮಾರ್, ಮುಖ್ಯ ಗ್ರಂಥಪಾಲಕ ಡಾ.ಕಿರಣ್ ಆರ್. ಉಪಸ್ಥಿತರಿದ್ದರು.

ಸರ್ವೀಸ್ ರಸ್ತೆಯಲ್ಲಿ ವಾಹನ ಸಂಚಾರಕ್ಕೆ ಅವಕಾಶ

ಬೆಂಗಳೂರು: ಬಿಎಂಆರ್‌ಸಿಎಲ್‌ನ ಗರ್ಡರ್‌ನಲ್ಲಿ(ತೊಲೆ) ಸಮಸ್ಯೆ ಕಾಣಿಸಿಕೊಂಡಿದ್ದು, ಹೊರ ವರ್ತುಲ ರಸ್ತೆಯಲ್ಲಿರುವ ಮೇಲ್ಸೇತುವೆಯ ಎಚ್‌ಎಸ್‌ಆರ್ 14ನೇ ಮುಖ್ಯರಸ್ತೆಯಿಂದ19ನೇ ಮುಖ್ಯರಸ್ತೆಯ ಎರಡೂ ದಿಕ್ಕಿನಲ್ಲಿ ವಾಹನ ಸಂಚಾರ ನಿರ್ಬಂಧಿಸಲಾಗಿದೆ.

ಗರ್ಡರ್ ದುರಸ್ತಿ ಆಗುವವರೆಗೂ ಎರಡೂ ದಿಕ್ಕಿನ ಸರ್ವಿಸ್ ರಸ್ತೆಯಲ್ಲಿ ಮಾತ್ರ ವಾಹನಗಳ ಸಂಚಾರಕ್ಕೆ ಅವಕಾಶ ಕಲ್ಪಿಸಲಾಗುತ್ತಿದೆ. ಇದರಿಂದ ಈ ಭಾಗದಲ್ಲಿ ಸಂಚಾರ ದಟ್ಟಣೆ ಆಗುವ ಸಾಧ್ಯತೆಯಿದ್ದು, ವಾಹನ ಸವಾರರು ಸಹಕಾರ ನೀಡಬೇಕು ಎಂದು ಸಂಚಾರ ವಿಭಾಗದ ಪೊಲೀಸರು ಕೋರಿದ್ದಾರೆ.



ಬ್ರಹ್ಮರಥೋತ್ಸವ

ಬೆಂಗಳೂರಿನ ಗವಿಪುರ ಗುಟ್ಟಹಳ್ಳಿಯ ಗವಿಗಂಗಾಧರೇಶ್ವರ ಬ್ರಹ್ಮರಥೋತ್ಸವವು ಬುಧವಾರ ವಿಜೃಂಭಣೆಯಿಂದ ನಡೆಯಿತು ಪ್ರಜಾವಾಣಿ ಚಿತ್ರ

ಅಶ್ವಿನ್ ಬಾಳಿಗಾಗೆ 'ಆರ್.ವಿ.ಶೇಷಾದ್ರಿ ಗವಾಯಿ ಪುರಸ್ಕಾರ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸತೀಶ್ ಹಂಪಿಹೊಳಿ ಮ್ಯೂಸಿಕ್ ಫೌಂಡೇಷನ್ ಟ್ರಸ್ಟ್ ನೀಡುವ 'ಪಂಡಿತ್ ಆರ್.ವಿ. ಶೇಷಾದ್ರಿ ಗವಾಯಿ ಪುರಸ್ಕಾರ'ಕ್ಕೆ ಹಿಂದೂಸ್ತಾನಿ ಗಾಯಕ ಅಶ್ವಿನ್ ಬಾಳಿಗಾ ಆಯ್ಕೆ ಆಗಿದ್ದಾರೆ.



ಅಶ್ವಿನ್ ಬಾಳಿಗಾ

ಈ ಪುರಸ್ಕಾರವು ₹10 ಸಾವಿರ ಒಳಗೊಂಡಿದೆ. ಪಂಡಿತ್ ಆರ್.ವಿ. ಶೇಷಾದ್ರಿ ಗವಾಯಿ ಅವರ ಜನ್ಮಶತಮಾನೋತ್ಸವದ ಅಂಗವಾಗಿ ಟ್ರಸ್ಟ್ ಫೆ. 16ರಂದು ಮಧ್ಯಾಹ್ನ 3 ಗಂಟೆಗೆ ಚಾಮರಾಜ ಪೇಟೆಯಲ್ಲಿರುವ ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ಸ್ವರ ನಮನ ಕಾರ್ಯಕ್ರಮ ಹಮ್ಮಿಕೊಂಡಿದೆ.

ಸಂಗೀತ ಮತ್ತು ನೃತ್ಯ ವಿಮರ್ಶಕ ಎಂ.ಸೂರ್ಯಪ್ರಸಾದ್ ಅವರು ಈ ಕಾರ್ಯಕ್ರಮದ ಅಧ್ಯಕ್ಷತೆ ವಹಿಸುತ್ತಾರೆ. ನಿವೃತ್ತ ಲೋಕಾಯುಕ್ತ ಎನ್. ಸಂತೋಷ್ ಹೆಗ್ಡೆ ಅವರು ಪ್ರಶಸ್ತಿ ಪ್ರದಾನ ಮಾಡುತ್ತಾರೆ. ಬಳಿಕ ಸಂಗೀತ ಕಛೇರಿಯೂ ನಡೆಯಲಿದೆ ಎಂದು ಸಂಸ್ಥೆಯ ಸಂಸ್ಥಾಪಕ ಪಂಡಿತ್ ಸತೀಶ್ ಹಂಪಿಹೊಳಿ ತಿಳಿಸಿದ್ದಾರೆ.

ಕೆಪಿಸಿಸಿ ಅಧ್ಯಕ್ಷರ ಬದಲಾವಣೆ?

ಒಂದನೇ ಪುಟದಿಂದ...

ಕೆಪಿಸಿಸಿ ಅಧ್ಯಕ್ಷರ ಬದಲಾವಣೆ ಕುರಿತು ಸ್ಪಷ್ಟವಾಗಿ ಏನನ್ನೂ ಹೇಳದ ಖರ್ಗೆ, ಪಕ್ಷ ಸಂಘಟನೆಯಲ್ಲಿ ಶೀಘ್ರದಲ್ಲೇ ಬದಲಾವಣೆ ಆಗಲಿದೆ ಎಂಬ ಸುಳಿವನ್ನು ಪರೋಕ್ಷವಾಗಿ ನೀಡಿದರು.

ಮಲ್ಲಿಕಾರ್ಜುನ ಖರ್ಗೆ ಅವರನ್ನು ಸದಾಶಿವನಗರದಲ್ಲಿರುವ ನಿವಾಸದಲ್ಲಿ ಗೃಹ ಸಚಿವ ಜಿ. ಪರಮೇಶ್ವರ ಭಾನುವಾರ (ಫೆ.9) ಭೇಟಿ ಮಾಡಿ ಸುಮಾರು 45 ನಿಮಿಷ ಚರ್ಚೆ ನಡೆಸಿದ್ದರು. ಲೋಕೋಪಯೋಗಿ ಸಚಿವ ಸತೀಶ ಜಾರಕಿಹೊಳಿ ಅವರು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಪಕ್ಷದ ಪ್ರಧಾನ ಕಾರ್ಯದರ್ಶಿ (ಸಂಘಟನೆ) ಕೆ.ಸಿ. ವೇಣುಗೋಪಾಲ್ ಹಾಗೂ ಪಕ್ಷದ ರಾಜ್ಯ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ ಅವರನ್ನು ಭೇಟಿ ಮಾಡಿ ಚರ್ಚಿಸಿದ್ದರು. ಕೆಪಿಸಿಸಿ ಅಧ್ಯಕ್ಷರ ಬದಲಾವಣೆ ಹಾಗೂ ಪರಿಶಿಷ್ಟರ ಸಮಾವೇಶದ ಬಗ್ಗೆ ರಾಷ್ಟ್ರೀಯ ನಾಯಕರಲ್ಲಿ ಪ್ರಸ್ತಾಪಿಸಿದ್ದರು. ಆ ಬೆನ್ನಲ್ಲೆ ಖರ್ಗೆ ನೀಡಿರುವ ಹೇಳಿಕೆ ರಾಜ್ಯ ಕಾಂಗ್ರೆಸ್‌ನಲ್ಲಿ ಚಟುವಟಿಕೆ ಮತ್ತೆ ಗರಿಗೆದರುವಂತೆ ಮಾಡಿದೆ.

ಎರಡು ದಿನಗಳ ದೆಹಲಿ ಪ್ರವಾಸ ಮುಗಿಸಿ ಮರಳಿರುವ ಸತೀಶ ಜಾರಕಿಹೊಳಿ ಸುದ್ದಿಗಾರರ ಜೊತೆ ಬುಧವಾರ ಮಾತನಾಡಿ, 'ಎಐಸಿಸಿ ಅಧ್ಯಕ್ಷರು ಹೇಳಿದ ಮೇಲೆ ನಾವೇನು ಹೇಳುವುದು? ನಮ್ಮ ಪಾತ್ರ ಏನೂ ಇಲ್ಲ. ಯಾರನ್ನು ಅಧ್ಯಕ್ಷರನ್ನಾಗಿ ಮಾಡಬೇಕೆಂದು ಮುಖ್ಯಮಂತ್ರಿ, ಕೆಪಿಸಿಸಿ ಅಧ್ಯಕ್ಷರನ್ನು ಕರೆಸಿ ಮಾತನಾಡುತ್ತಾರೆ. ನಮಗೆ ಯಾವ ಅಧಿಕಾರವಿದೆ ಹೇಳಿ. ಅಧ್ಯಕ್ಷರ ಆಯ್ಕೆ ಹೇಗೆ ಆಗುತ್ತದೆ ಎನ್ನುವುದೂ ಗೊತ್ತಿಲ್ಲ' ಎಂದರು.

'ನಮ್ಮ ಇಲಾಖೆಯ ಕೆಲಸಕ್ಕಾಗಿ ನವದೆಹಲಿಗೆ ತೆರಳಿದ್ದೆ. ಇದೇ ವೇಳೆ ಎಐಸಿಸಿ ಅಧ್ಯಕ್ಷರು, ವೇಣುಗೋಪಾಲ್ ಮತ್ತು ರಣದೀಪ್ ಸಿಂಗ್ ಸುರ್ಜೇವಾಲಾ ಅವರನ್ನೂ ಭೇಟಿ ಮಾಡಿದ್ದೆ. ಅವರು ಏನು ಕೇಳಬೇಕೊ ಅದನ್ನು ಕೇಳುತ್ತಾರೆ. ಸರ್ಕಾರದ ಬಗ್ಗೆ ಸ್ವಾಭಾವಿಕವಾಗಿ ಅವರು ಯೋಚನೆ ಮಾಡುತ್ತಾರೆ. ಕೆಪಿಸಿಸಿ ಅಧ್ಯಕ್ಷರ ಬದಲಾವಣೆ ಬಗ್ಗೆಯೂ ಚರ್ಚೆ ಮಾಡುತ್ತಾರೆ' ಎಂದೂ ಹೇಳಿದರು.

'ಅಹಿಂದ' ವರ್ಗಕ್ಕೆ ಅಧ್ಯಕ್ಷ ಸ್ಥಾನದ ಬೇಡಿಕೆ ವಿಚಾರವಾಗಿ ಪ್ರತಿಕ್ರಿಯಿಸಿದ ಜಾರಕಿಹೊಳಿ, 'ಚರ್ಚೆ ಸಂದರ್ಭದಲ್ಲಿ ಈ ವಿಷಯ ಪ್ರಸ್ತಾಪ ಮಾಡುತ್ತೇವೆ. ನಾನೊಬ್ಬನೇ ತೀರ್ಮಾನ ಮಾಡಲು ಆಗುವುದಿಲ್ಲ. ಎಲ್ಲರೂ ಸೇರಿ ಚರ್ಚೆ ಮಾಡಬೇಕಾಗುತ್ತದೆ' ಎಂದರು.

ಸಚಿವರ ಪ್ರವಾಸ ರದ್ದು: ಜಿ.ಪರಮೇಶ್ವರ ಮತ್ತು ಸಮಾಜ ಕಲ್ಯಾಣ ಸಚಿವ ಡಾ.ಎಚ್.ಸಿ.ಮಹದೇವಪ್ಪ ಪ್ರವಾಸ ಕೊನೆಯ ಕ್ಷಣದಲ್ಲಿ ರದ್ದಾಗಿದೆ. ಅವರು ನವದೆಹಲಿಗೆ ಬುಧವಾರ ಸಂಜೆ ಹೋಗಬೇಕಿತ್ತು. ಪಕ್ಷದ ನಾಯಕರು ಹಾಗೂ ಕೇಂದ್ರ ಸಚಿವರನ್ನು ಭೇಟಿಯಾಗಬೇಕಿತ್ತು. ಹೈಕಮಾಂಡ್ ಸೂಚನೆ ಮೇರೆಗೆ ಸಚಿವರಿಬ್ಬರು ಪ್ರವಾಸ ಮುಂದೂಡಿದ್ದಾರೆ ಎಂದು ಮೂಲಗಳು ಹೇಳಿವೆ.

ಪರಿಶಿಷ್ಟರ ಸಮಾವೇಶಕ್ಕೆ ಒತ್ತಡ

ಒಂದನೇ ಪುಟದಿಂದ...

'2023ರ ವಿಧಾನಸಭಾ ಚುನಾವಣೆಯಲ್ಲಿ ಪಕ್ಷವು 136 ಸ್ಥಾನಗಳನ್ನು ಗಳಿಸಲು ಪರಿಶಿಷ್ಟರ ಮತಗಳೇ ಪ್ರಮುಖ ಕಾರಣ. ಲೋಕಸಭಾ ಚುನಾವಣೆಯಲ್ಲೂ ಈ ಸಮುದಾಯದವರು ನಮ್ಮ ಬೆನ್ನಿಗೆ ನಿಂತಿದ್ದಾರೆ. ಅವರಿಗೆ ಕೃತಜ್ಞತೆ ಸಲ್ಲಿಸಬೇಕು. ಜತೆಗೆ, 2028ರ ಚುನಾವಣೆಗೆ ಈಗಿನಿಂದಲೇ ಪಕ್ಷದ ಸಂಘಟನೆ ಮಾಡಬೇಕು. ಪಕ್ಷದ ಮತ ಬ್ಯಾಂಕ್ ಇನ್ನಷ್ಟು ಗಟ್ಟಿಯಾಗಲಿದೆ. ಇಲ್ಲದಿದ್ದರೆ, ಸಮುದಾಯದವರು ಪಕ್ಷದಿಂದ ದೂರ ಸರಿಯುವ ಸಂಭವ ಇದೆ' ಎಂದು ವೇಣುಗೋಪಾಲ್ ಅವರಿಗೆ ತಿಳಿಸಿದ್ದಾಗಿ ರಾಜಣ್ಣ ಹೇಳಿದರು.

'ಲೋಕಸಭಾ ಚುನಾವಣೆಯ ಬಳಿಕ ಕೆಪಿಸಿಸಿ ಅಧ್ಯಕ್ಷರ ಬದಲಾವಣೆ ಮಾಡುವುದಾಗಿ ಹೈಕಮಾಂಡ್ ನಾಯಕರು ಹೇಳಿದ್ದರು. ಲೋಕಸಭಾ ಚುನಾವಣೆ ಮುಗಿದು ಎಂಟು ತಿಂಗಳುಗಳು ಕಳೆದಿವೆ. ಡಿ.ಕೆ. ಶಿವಕುಮಾರ್ ಅವರು ಎರಡು ಖಾತೆಗಳ ಜತೆಗೆ ಅಧ್ಯಕ್ಷ ಸ್ಥಾನವನ್ನೂ ಹೊಂದಿದ್ದಾರೆ. ಎರಡು ಜವಾಬ್ದಾರಿಗಳನ್ನು ನಿಭಾಯಿಸುವುದು ಕಷ್ಟ. ಕೆಪಿಸಿಸಿ ಅಧ್ಯಕ್ಷ ಸ್ಥಾನ ನೀಡಿದರೆ ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡುತ್ತೇನೆ' ಎಂದೂ ಅವರು ಹೇಳಿದರು. ಅವರ ಮಾತುಗಳನ್ನು ವೇಣುಗೋಪಾಲ್ ಮೌನವಾಗಿ ಆಲಿಸಿದರು. ಯಾವುದೇ ಭರವಸೆ ನೀಡಲಿಲ್ಲ' ಎಂದು ಮೂಲಗಳು ತಿಳಿಸಿವೆ.

'ಮಾರ್ಚ್ 1ರಿಂದ ಅಂತರರಾಷ್ಟ್ರೀಯ ಚಿತ್ರೋತ್ಸವ'

ಪ್ರಜಾವಾಣಿ ವಾರ್ತೆ

ಬೆಂಗಳೂರು: '16ನೇ ಬೆಂಗಳೂರು ಅಂತರರಾಷ್ಟ್ರೀಯ ಚಲನಚಿತ್ರೋತ್ಸವವನ್ನು ಮಾರ್ಚ್ 1ರಂದು ಸಂಜೆ ವಿಧಾನಸೌಧದ ಮುಂಭಾಗದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಉದ್ಘಾಟಿಸಲಿದ್ದಾರೆ' ಎಂದು ಚಲನಚಿತ್ರೋತ್ಸವದ ಸಮನ್ವಯ ಸಮಿತಿಯ ಅಧ್ಯಕ್ಷರೂ ಆಗಿರುವ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಕಾರ್ಯದರ್ಶಿ ಬಿ.ಬಿ. ಕಾವೇರಿ ತಿಳಿಸಿದರು.

ರಾಜ್ಯ ಸರ್ಕಾರ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಮತ್ತು ಕರ್ನಾಟಕ ಚಲನಚಿತ್ರ ಅಕಾಡೆಮಿ ಜಂಟಿಯಾಗಿ ಆಯೋಜಿಸುತ್ತಿರುವ ಈ ಚಲನಚಿತ್ರೋತ್ಸವದ ಸಿದ್ಧತೆಗಳ ಕುರಿತು ಸುದ್ದಿಗೋಷ್ಠಿಯಲ್ಲಿ ಬುಧವಾರ ಮಾತನಾಡಿದ ಅವರು, 'ಸರ್ವ ಜನಾಂಗದ ಶಾಂತಿಯ ತೋಟ' ಎಂಬ ಪರಿಕಲ್ಪನೆಯಲ್ಲಿ ನಡೆಯಲಿರುವ ಈ ಚಿತ್ರೋತ್ಸವದಲ್ಲಿ 60 ದೇಶಗಳ ಸುಮಾರು 200 ಅತ್ಯುತ್ತಮ ಚಲನಚಿತ್ರಗಳು ಪ್ರದರ್ಶನಗೊಳ್ಳಲಿವೆ. 'ಬೆಂಗಳೂರಿನಲ್ಲಿ ಜಗತ್ತು' ಎಂಬ ಶೀರ್ಷಿಕೆಯಡಿ ವಿದೇಶಿ ಚಿತ್ರಗಳ ಪ್ರದರ್ಶನ ನಡೆಯಲಿದೆ' ಎಂದರು.

'ರಾಜಾಜಿನಗರದ ಒರಾಯನ್ ಮಾಲ್‌ನ 11 ಪರದೆಗಳಲ್ಲಿ ಮಾರ್ಚ್ 2ರಿಂದ ಸಾರ್ವಜನಿಕರಿಗೆ ಸಿನಿಮಾಗಳ ಪ್ರದರ್ಶನ ಆಯೋಜಿಸಲಾಗಿದೆ. ಚಿತ್ರೋತ್ಸವದಲ್ಲಿ ಏಷ್ಯಾ, ಭಾರತೀಯ ಮತ್ತು ಕನ್ನಡ ಚಲನಚಿತ್ರಗಳ ಸ್ಪರ್ಧಾ ವಿಭಾಗಗಳಿವೆ. ಈ ಮೂರೂ ವಿಭಾಗಗಳಲ್ಲಿ ತಲಾ ಮೂರು ಅತ್ಯುತ್ತಮ ಚಲನಚಿತ್ರಗಳಿಗೆ ಪ್ರಶಸ್ತಿ ನೀಡಲಾಗುವುದು. ಚಿತ್ರಗಳ ವೀಕ್ಷಣೆಗೆ ಸಾರ್ವಜನಿಕರಿಗೆ ₹800, ಚಿತ್ರೋದ್ಯಮದ ಸದಸ್ಯರು, ವಿದ್ಯಾರ್ಥಿಗಳು, ಹಿರಿಯ ನಾಗರಿಕರಿಗೆ ₹400 ಶುಲ್ಕ ಇರಲಿದೆ. ಚಿತ್ರೋತ್ಸವದ ಜಾಲತಾಣದಲ್ಲಿ (biffes.org) ನೋಂದಾಯಿಸಿಕೊಳ್ಳಬಹುದು' ಎಂದು ಮಾಹಿತಿ ನೀಡಿದರು.

'ಆನ್‌ಲೈನ್‌ನಲ್ಲಿ ನೋಂದಾಯಿಸಿಕೊಂಡವರು ಫೆ. 18ರಿಂದ ನಂದಿನಿ ಲೇಔಟ್‌ನಲ್ಲಿರುವ ಚಲನಚಿತ್ರ ಅಕಾಡೆಮಿ ಹಾಗೂ ಶಿವಾನಂದ ವೃತ್ತದ ಬಳಿ ಇರುವ ಚಲನಚಿತ್ರ ವಾಣಿಜ್ಯ ಮಂಡಳಿಯಲ್ಲಿ ಪ್ರತಿನಿಧಿ ಕಾರ್ಡ್‌ಗಳನ್ನು ಪಡೆಯಬಹುದು. ಮಾರ್ಚ್ 8ರಂದು ಸಂಜೆ ಸಮಾರೋಪ ಸಮಾರಂಭ ನಡೆಯಲಿದ್ದು, ರಾಜ್ಯಪಾಲ ಥಾವರಚಂದ್ ಗೆಹಲೋತ್ ಅಧ್ಯಕ್ಷತೆ ವಹಿಸಲಿದ್ದಾರೆ. ಏಷ್ಯಾ, ಭಾರತೀಯ ಮತ್ತು ಕನ್ನಡ ಚಲನಚಿತ್ರಗಳ ಸ್ಪರ್ಧಾ ವಿಭಾಗದಲ್ಲಿ ವಿಜೇತರಿಗೆ ಪ್ರಶಸ್ತಿ ಪ್ರದಾನ ನಡೆಯಲಿದೆ' ಎಂದು ಅವರು ತಿಳಿಸಿದರು.

ಚಲನಚಿತ್ರ ಅಕಾಡೆಮಿಯ ಅಧ್ಯಕ್ಷ ಸಾಧು ಕೋಕಿಲ ಮಾತನಾಡಿ, 'ಚಿತ್ರೋತ್ಸವದ ಭಾಗವಾಗಿ ಮಾರ್ಚ್ 3ರಂದು ಎಐ (ಕೃತಕ ಬುದ್ಧಿಮತ್ತೆ) ಕುರಿತ ವಿಶೇಷ ಕಾರ್ಯಾಗಾರ ಹಮ್ಮಿಕೊಳ್ಳಲಾಗಿದೆ. ಅಲ್ಲದೆ, ಹಿಂದಿನ ಕಾಲದಲ್ಲಿ ಇದ್ದ ಟೆಂಟ್ ಸಿನಿಮಾ ರೀತಿಯಲ್ಲಿ ಕೆಲವು ಸಿನಿಮಾಗಳ ಪ್ರದರ್ಶನವನ್ನೂ ಏರ್ಪಡಿಸಲಾಗಿದೆ. ನಟ ಕಿಶೋರ್ ಚಿತ್ರೋತ್ಸವದ ರಾಯಭಾರಿ ಆಗಿದ್ದಾರೆ' ಎಂದರು.

ಚಲನಚಿತ್ರೋತ್ಸವದ ಕಲಾತ್ಮಕ ನಿರ್ದೇಶಕ ಎನ್. ವಿದ್ಯಾಶಂಕರ್ ಮಾತನಾಡಿ, 'ಸ್ಪರ್ಧಾ ವಿಭಾಗಕ್ಕೆ 15 ದಿನಗಳ ಅವಧಿಯಲ್ಲಿ 411 ಸಿನಿಮಾಗಳು ಬಂದಿವೆ. ಭಾರತೀಯ ಮತ್ತು ಅಂತರರಾಷ್ಟ್ರೀಯ ಜ್ಯೂರಿಗಳು ತೀರ್ಪುಗಾರರಾಗಿರುತ್ತಾರೆ' ಎಂದರು.

ಆರ್. ಅಶೋಕ ಮತ್ತು ಛಲವಾದಿ ನಾರಾಯಣ ಸ್ವಾಮಿ ಪ್ರತಿಭಟನೆ

'ಮಹಿಳಾ ಅಧಿಕಾರಿಗಳಿಗೆ ಭದ್ರತೆ ನೀಡಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಮಾಫಿಯಾಗಳಿಂದಾಗಿ ಅಧಿಕಾರಿಗಳಿಗೆ ಅದರಲ್ಲೂ ಮಹಿಳಾ ಅಧಿಕಾರಿಗಳಿಗೆ ರಕ್ಷಣೆಯೇ ಇಲ್ಲ. ತಕ್ಷಣವೇ ಮಹಿಳಾ ಅಧಿಕಾರಿಗಳಿಗೆ ಭದ್ರತೆ ನೀಡಬೇಕು ಎಂದು ವಿರೋಧ ಪಕ್ಷದ ನಾಯಕರಾದ ಆರ್.ಅಶೋಕ ಮತ್ತು ಛಲವಾದಿ ನಾರಾಯಣ ಸ್ವಾಮಿ ಒತ್ತಾಯಿಸಿದರು.

ವಿಧಾನಸೌಧದ ಎದುರು ಇಬ್ಬರೇ ಫಲಕ ಹಿಡಿದು ಪ್ರತಿಭಟನೆ ನಡೆಸಿದರು. ಆ ಬಳಿಕ ಪೊಲೀಸ್ ಮಹಾ ನಿರ್ದೇಶಕರನ್ನು ಭೇಟಿ ಮಾಡಿ ಮನವಿ ಪತ್ರ ಸಲ್ಲಿಸಿದರು.

ನಂತರ ಸುದ್ದಿಗಾರರ ಜತೆ ಮಾತನಾಡಿದ ಅಶೋಕ, ಮೈಸೂರಿನ ಉದಯಗಿರಿ ಪೊಲೀಸ್ ಠಾಣೆ ಮೇಲೆ ಮುಸ್ಲಿಂ ಮತಾಂಧರು ದಾಳಿ ಮಾಡಿದರು. ಆ ಸಂದರ್ಭದಲ್ಲಿ ಪೊಲೀಸರಿಗೆ ರಕ್ಷಣೆ ಸಿಗಲಿಲ್ಲ. ಸಚಿವ ರಾಜಣ್ಣ ಅವರು ಪೊಲೀಸರ ಆತ್ಮಸ್ಥೈರ್ಯ ಕುಂದಿಸುವ ಮಾತನಾಡಿದ್ದಾರೆ. ಈ ಮೂಲಕ ಗಲಭೆಕೋರರಿಗೆ ಉತ್ತೇಜನ ನೀಡಿದ್ದಾರೆ ಎಂದರು.

ಪೊಲೀಸ್ ಅಧಿಕಾರಿಗೆ ಸ್ಟಾರ್ ಕೊಟ್ಟವರು ಯಾರು ಎಂದು ರಾಜಣ್ಣ ಪ್ರಶ್ನೆ ಮಾಡಿದ್ದಾರೆ. ಪೊಲೀಸರಿಗೆ ಜನರು ಸ್ಟಾರ್ ನೀಡಿದ್ದಾರೆ. ಅವರಿಗೆ ಜನರ ತೆರಿಗೆ ಹಣದಿಂದ ಸಂಬಳ ನೀಡಲಾಗುತ್ತಿದೆಯೇ ಹೊರತು, ಸಚಿವರ ಜೇಬಿನಿಂದ ನೀಡುತ್ತಿಲ್ಲ. ಪೊಲೀಸರನ್ನು ಸಾರ್ವಜನಿಕವಾಗಿ ನಿಂದಿಸಬಾರದು. ಹೀಗೆ ಮಾಡಿದರೆ ಪೊಲೀಸರು ಆತ್ಮವಿಶ್ವಾಸದಿಂದ ಕೆಲಸ ಮಾಡಲು ಸಾಧ್ಯವೇ ಎಂದು ಅಶೋಕ ಪ್ರಶ್ನಿಸಿದರು.



ವಿರೋಧ ಪಕ್ಷದ ನಾಯಕರಾದ ಆರ್.ಅಶೋಕ ಮತ್ತು ಛಲವಾದಿ ನಾರಾಯಣಸ್ವಾಮಿ ವಿಧಾನಸೌಧದ ಮೆಟ್ಟಿಲುಗಳ ಮೇಲೆ ಪ್ರತಿಭಟನೆ ನಡೆಸಿದರು.

ನಿಷ್ಠಾವಂತ ಅಧಿಕಾರಿಗಳನ್ನು ಕಾಪಾಡಬೇಕಾದ ವಿಧಾನಸೌಧ 'ಮೌನಸೌಧ'ವಾಗಿದೆ. ಭದ್ರಾವತಿಯಲ್ಲಿ ಮರಳು ಮಾಫಿಯಾ ತಡೆಯಲು ಹೋದ ಮಹಿಳಾ ಅಧಿಕಾರಿಯ ಮೇಲೆ ಲಾರಿ ಹತ್ತಿಸಿ ಕೊಲ್ಲುವುದಾಗಿ ಶಾಸಕರ ಮಗ ಬೆದರಿಕೆ ಹಾಕಿದ್ದಾನೆ. ಅವಾಚ್ಯ ಪದಗಳಿಂದ ನಿಂದಿಸಿದ್ದಾನೆ. ಮಾಫಿಯಾ ಕೈಯಲ್ಲಿ ಸರ್ಕಾರ ಸಿಲುಕಿರುವುದರಿಂದ ಅಧಿಕಾರಿಗಳಿಗೆ ಕೆಲಸ ಮಾಡಲು ಸಾಧ್ಯವಾಗುತ್ತಿಲ್ಲ. ಎಫ್‌ಐಆರ್‌ನಲ್ಲಿ ಶಾಸಕ ಸಂಗಮೇಶ್ವರ ಪುತ್ರನ ಹೆಸರಿಲ್ಲ. ಈ ಪ್ರಕರಣವನ್ನು ಮುಚ್ಚಿ ಹಾಕಲು ಯತ್ನಿಸಲಾಗುತ್ತಿದೆ. ಸರ್ಕಾರಿ ನೌಕರರ ಸಂಘದ ಅಧ್ಯಕ್ಷರು ಹೇಳಿಕೆ ನೀಡುವ ಬದಲು ಬೀದಿಗಿಳಿದು ಹೋರಾಟ ಮಾಡಬೇಕು ಎಂದು ಹೇಳಿದರು.

ಭದ್ರಾವತಿಯ ಮಹಿಳಾ ಅಧಿಕಾರಿಯ ಮೇಲೆ ಒತ್ತಡ ಹೇರಲಾಗಿದೆ. ಭಯದಿಂದಲೇ ಮಹಿಳಾ ಅಧಿಕಾರಿಗಳು ಯಾರ ಮೇಲೂ ದೂರು ನೀಡಿಲ್ಲ. ದೂರು ಕೊಟ್ಟರೂ ಅಧಿಕಾರಿಯ ಪರವಾಗಿ ಸರ್ಕಾರ ನಿಲ್ಲುವುದಿಲ್ಲ ಎಂದರು.

ಕೇಂದ್ರೀಯ ವಿದ್ಯಾಲಯಗಳಲ್ಲಿ ಕನ್ನಡ ಕಲಿಕೆಗೆ ಒತ್ತು: ಬಿಳಿಮಲೆ

ಪ್ರಜಾವಾಣಿ ವಾರ್ತೆ


ಪುರುಷೋತ್ತಮ ಬಿಳಿಮಲೆ

ಕೋಲಾರ: ರಾಜ್ಯದಲ್ಲಿರುವ ಕೇಂದ್ರೀಯ ವಿದ್ಯಾಲಯ ಮತ್ತು ಸಿಬಿಎಸ್‌ಇ ಶಾಲೆಗಳಲ್ಲಿ ಕನ್ನಡವನ್ನು ಒಂದು ಭಾಷೆಯಾಗಿ ಕಲಿಸಲು ಪ್ರಯತ್ನ ನಡೆಸಲಾಗುತ್ತಿದೆಯೆಂದು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಪುರುಷೋತ್ತಮ ಬಿಳಿಮಲೆ ತಿಳಿಸಿದರು.

ಬುಧವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, 'ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ಅವರನ್ನು ಭೇಟಿ ಮಾಡಿ ಈ ವಿಷಯವಾಗಿ ಚರ್ಚಿಸಿದ್ದೇವೆ. ಶಾಸ್ತ್ರೀಯ ಭಾಷಾ ಕನ್ನಡ ಕೇಂದ್ರಕ್ಕೆ ಸ್ವಾಯತ್ತತೆ ಕೊಡುವುದು ಹಾಗೂ ಸಿಬಿಎಸ್‌ಸಿ ಶಾಲೆಗಳಲ್ಲಿ ಸ್ಥಳೀಯ ಭಾಷೆಯನ್ನು ಅಳವಡಿಸುವ ಬಗ್ಗೆ ಅವರು ಸಕಾರಾತ್ಮಕವಾಗಿ ಸ್ಪಂದಿಸಿದ್ದಾರೆ' ಎಂದು ತಿಳಿಸಿದರು.

'ಬ್ಯಾಂಕ್‌ಗಳಲ್ಲೂ ಸ್ಥಳೀಯ ಭಾಷೆಯನ್ನು ಸರಾಗವಾಗಿ ಮಾತನಾಡುವ ಅಧಿಕಾರಿಗಳು ಮತ್ತು ಸಿಬ್ಬಂದಿ ಇರಬೇಕು. ಈ ಬಗ್ಗೆಯೂ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಒಪ್ಪಿದ್ದಾರೆ. ಈ ಸಂಬಂಧ ನಾವು ಸತತ ಸಂಪರ್ಕದಲ್ಲಿದ್ದೇವೆ' ಎಂದೂ ಹೇಳಿದರು.

'ಗಡಿ ಭಾಗದಲ್ಲಿ ಮಾತ್ರವಲ್ಲ, ಇಡೀ ರಾಜ್ಯದಲ್ಲಿ ಸರ್ಕಾರಿ ಶಾಲೆಗಳಲ್ಲಿ ಸಮಸ್ಯೆ ಇದೆ. ಕನ್ನಡ ಶಾಲೆಗಳ ಸಂಖ್ಯೆ ದಿನೇ ದಿನೇ ಕುಸಿಯುತ್ತಿದೆ. ಏಳು ಸಾವಿರ ಶಾಲೆಗಳಿಗೆ ಹಕ್ಕುಪತ್ರ ಇಲ್ಲ. ಒಂದು ಮಗುವಿದ್ದರೂ ಶಾಲೆ ಮುಚ್ಚುವಂತಿಲ್ಲ ಎಂದು ಅವರು ಹೇಳಿದರು.

'ಹೊರಗುತ್ತಿಗೆ ನೀತಿ ಅಗತ್ಯ'

'ಸಿ' ಹಾಗೂ 'ಡಿ' ದರ್ಜೆಯ ಹೊರಗುತ್ತಿಗೆ ನೌಕರರ ನೇಮಕ ವಿಚಾರವಾಗಿ ಸರ್ಕಾರ ನೀತಿ ರೂಪಿಸಬೇಕು. ಇಲ್ಲವೇ ಹೊರಗುತ್ತಿಗೆ ಪದ್ಧತಿಯನ್ನೇ ರದ್ದುಪಡಿಸಬೇಕು ಎಂದು ಬಿಳಿಮಲೆ ಅವರು ಒತ್ತಾಯಿಸಿದರು.

ಪೋಕ್ಸೊ: ಮುಖ್ಯ ಶಿಕ್ಷಕ ಬಂಧನ

ಪ್ರಜಾವಾಣಿ ವಾರ್ತೆ

ಕಾರವಾರ: ವಿದ್ಯಾರ್ಥಿನಿಗೆ ಲೈಂಗಿಕ ಕಿರುಕುಳ ನೀಡಿದ ಆರೋಪದಡಿ ಹಳಿಯಾಳ ತಾಲ್ಲೂಕಿನ ಗ್ರಾಮೀಣ ಭಾಗದ ಶಾಲೆಯೊಂದರ ಮುಖ್ಯ ಶಿಕ್ಷಕ ಮನೋಹರ ಶೆಟ್ಟಿ (59) ಎಂಬುವವರನ್ನು ಹಳಿಯಾಳ ಠಾಣೆ ಪೊಲೀಸರು ಬುಧವಾರ ಬಂಧಿಸಿದ್ದಾರೆ.

'ಕಿರುಕುಳ ಕುರಿತು ವಿದ್ಯಾರ್ಥಿನಿಯ ಪಾಲಕರು ನೀಡಿದ ದೂರು ಆಧಾರದ ಮೇಲೆ ಪೋಕ್ಸೊ ಪ್ರಕರಣ ದಾಖಲಿಸಿಕೊಂಡು, ಮನೋಹರ ಶೆಟ್ಟಿ ಅವರನ್ನು ಬಂಧಿಸಲಾಗಿದೆ' ಎಂದು ಪೊಲೀಸರು ತಿಳಿಸಿದ್ದಾರೆ.

ಪರಮೇಶ್ವರಗೆ 'ಗುರುಕಾರುಣ್ಯ' ಪ್ರಶಸ್ತಿ

ಪ್ರಜಾವಾಣಿ ವಾರ್ತೆ


ಜಿ. ಪರಮೇಶ್ವರ

ಮೊಳಕಾಲ್ಮುರು (ಚಿತ್ರದುರ್ಗ ಜಿಲ್ಲೆ): ತಾಲ್ಲೂಕಿನ ಸಿದ್ದಯ್ಯನಕೋಟೆ ವಿಜಯ ಮಹಾಂತೇಶ್ವರ ಮಠದಿಂದ ಹಮ್ಮಿಕೊಳ್ಳುವ ಗಡಿನಾಡ ಉತ್ಸವದ ಅಂಗವಾಗಿ ನೀಡಲಾಗುವ ಪ್ರಸಕ್ತ ಸಾಲಿನ 'ಚಿತ್ತರಗಿ ಮಹಾಂತ ಗುರುಕಾರುಣ್ಯ' ಪ್ರಶಸ್ತಿಗೆ ಗೃಹ ಸಚಿವ ಜಿ.ಪರಮೇಶ್ವರ ಅವರು ಭಾಜನರಾಗಿದ್ದಾರೆ.

ಶಿಕ್ಷಣ ಮತ್ತು ಸಾಮಾಜಿಕ ಕ್ಷೇತ್ರದಲ್ಲಿನ ಅವರ ಸೇವೆ ಪರಿಗಣಿಸಿ ಈ ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ. ಪ್ರಶಸ್ತಿಯು ₹10,000 ನಗದು, ನೆನಪಿನ ಕಾಣಿಕೆಯನ್ನು ಒಳಗೊಂಡಿದೆ. ಫೆಬ್ರುವರಿ 16ರಂದು ಮಠದಲ್ಲಿ ನಡೆಯಲಿರುವ ಗಡಿನಾಡ ಉತ್ಸವದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುವುದು ಎಂದು ಮಠದ ಬಸವಲಿಂಗ ಸ್ವಾಮೀಜಿ ತಿಳಿಸಿದ್ದಾರೆ.

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in

ಅಭಿಮತ



ಸುಭಾಷಿತ

ಒಬ್ಬ ವ್ಯಕ್ತಿಯ ಬಗೆಗಿನ ಗೌರವ ಅವನ ಗುಣಗಳ ಮೇಲೆ ನಿರ್ಧರಿತವಾಗಿರುತ್ತದೆಯೇ ವಿನಾ ಅವನ ಎತ್ತರ, ಸ್ಥಾನಮಾನ ಅಥವಾ ಸಿರಿವಂತಿಕೆಯ ಮೇಲಲ್ಲ. –ಚಾಣಕ್ಯ

ಮಂದಗತಿಯಲ್ಲಿ ಆರ್ಥಿಕ ಬೆಳವಣಿಗೆ ನೆರವಾದೀತೇ ರೆಪೊ ದರದ ಅಸ್ತ್ರ?

ದೇಶದ ಅರ್ಥವ್ಯವಸ್ಥೆಯ ಬೆಳವಣಿಗೆಯು ಮಂದಗತಿಗೆ ತಿರುಗಿದೆ ಎಂಬ ಕಳವಳ ವ್ಯಾಪಕವಾಗಿ ಇರುವ ಈ ಸಂದರ್ಭದಲ್ಲಿ ಭಾರತೀಯ ರಿಸರ್ವ್ ಬ್ಯಾಂಕ್‌ನ (ಆರ್‌ಬಿಐ) ಹಣಕಾಸು ನೀತಿ ಸಮಿತಿಯು (ಎಂಪಿಸಿ) ರೆಪೊ ದರವನ್ನು ಕಡಿತ ಮಾಡುವುದು ನಿರೀಕ್ಷಿತವೇ ಆಗಿತ್ತು. ರೆಪೊ ದರವು ಶೇಕಡ 6.5ರಷ್ಟು ಇದ್ದಿದ್ದನ್ನು ಶೇ 6.25ಕ್ಕೆ ಇಳಿಕೆ ಮಾಡುವ ತೀರ್ಮಾನವನ್ನು ಈಚೆಗೆ ನಡೆದ ಎಂಪಿಸಿ ಸಭೆಯು ಕೈಗೊಂಡಿದೆ. ಐದು ವರ್ಷಗಳಲ್ಲಿ ಇದೇ ಮೊದಲ ಬಾರಿಗೆ ರೆಪೊ ದರವನ್ನು ಆರ್‌ಬಿಐ ತಗ್ಗಿಸಿದೆ. ಸಂಜಯ್ ಮಲ್ಹೋತ್ರಾ ಅವರು ಆರ್‌ಬಿಐ ಗವರ್ನರ್ ಆಗಿ ಅಧಿಕಾರ ವಹಿಸಿಕೊಂಡ ನಂತರದ ಮೊದಲ ಎಂಪಿಸಿ ಸಭೆ ಇದಾಗಿತ್ತು. ಹಣಕಾಸಿನ ವಿಚಾರದಲ್ಲಿ ತಟಸ್ಥ ನಿಲುವನ್ನು ಮುಂದುವರಿಸಿಕೊಂಡು ಹೋಗಲು ಸಮಿತಿಯು ಸರ್ವಾನುಮತದಿಂದ ನಿರ್ಣಯಿಸಿದೆ. ದೇಶದ ಅರ್ಥವ್ಯವಸ್ಥೆಯ ಬೆಳವಣಿಗೆ ದರದ ಅಂದಾಜನ್ನು ತಗ್ಗಿಸಲಾಗಿದ್ದು, 2024–25ರಲ್ಲಿ ಬೆಳವಣಿಗೆ ದರವು ಶೇಕಡ 6.4ರಷ್ಟು ಇರಲಿದೆ ಎಂದು ಹೇಳಲಾಗಿದೆ. ಬೆಳವಣಿಗೆ ದರವು ಅಂದಾಜಿನಂತೆಯೇ ಇದ್ದರೆ, ಅದು ನಾಲ್ಕು ವರ್ಷಗಳ ಕನಿಷ್ಠ ಮಟ್ಟವಾಗಲಿದೆ. ಚಿಲ್ಲರೆ ಹಣದುಬ್ಬರ ಪ್ರಮಾಣವು ಕಳೆದ ಬಾರಿ ಎಂಪಿಸಿ ಸಭೆ ಸಂದರ್ಭದಲ್ಲಿ ಶೇ 6.2ರಷ್ಟು ಇದ್ದಿದ್ದು ಡಿಸೆಂಬರ್‌ನಲ್ಲಿ ಶೇ 5.2ಕ್ಕೆ ತಗ್ಗಿದೆ. ಸಮಿತಿಯು ರೆಪೊ ದರವನ್ನು ತುಸು ಕಡಿಮೆ ಮಾಡಿರುವುದನ್ನು ಗಮನಿಸಿದರೆ, ರೆಪೊ ಅಸ್ತ್ರವನ್ನು ಬಳಸಿ ಆರ್ಥಿಕ ಬೆಳವಣಿಗೆಯನ್ನು ಉತ್ತೇಜಿಸಲು ಆರ್‌ಬಿಐ ಯತ್ನಿಸುತ್ತಿದೆ ಎಂಬುದು ಸ್ಪಷ್ಟವಾಗುತ್ತದೆ.



ರೆಪೊ ದರ ತಗ್ಗಿಸುವ ತೀರ್ಮಾನ ಪೂರ್ಣ ಪ್ರಮಾಣದಲ್ಲಿ ಫಲ ನೀಡಬೇಕು ಎಂದಾದರೆ, ಈ ಸಂಬಂಧ ಆರ್‌ಬಿಐ ಮಾಡಿರುವ ಅಂದಾಜುಗಳೆಲ್ಲ ನಿಜವಾಗಬೇಕು

ಸಭೆಯ ನಂತರ ಗವರ್ನರ್ ಆಡಿರುವ ಮಾತುಗಳು ಆರ್ಥಿಕ ಬೆಳವಣಿಗೆ ಹಾಗೂ ಹಣದುಬ್ಬರದ ಕುರಿತಾಗಿ ಇವೆ. ಆದರೆ ಅವರು ಹಣದುಬ್ಬರವನ್ನು ಶೇ 4ಕ್ಕೆ ಮಿತಿಗೊಳಿಸುವ ಬಗ್ಗೆ ನಿರ್ದಿಷ್ಟವಾಗಿ ಉಲ್ಲೇಖಿಸಿಲ್ಲ. ಅಂದರೆ, ಹಣದುಬ್ಬರವನ್ನು ಆ ಮಟ್ಟದಲ್ಲಿ ಇರಿಸುವ ಬದಲು ಶೇ 2ರಿಂದ ಶೇ 6ರ ನಡುವಿನ ಮಟ್ಟದಲ್ಲಿ ಇರಿಸಲು ಆರ್‌ಬಿಐ ಯತ್ನಿಸಬಹುದು ಎಂಬುದನ್ನು ಅವರ ಮಾತುಗಳು ಸೂಚಿಸುತ್ತಿರಬಹುದು. ಬೆಳವಣಿಗೆ ಹಾಗೂ ಹಣದುಬ್ಬರ ನಿಯಂತ್ರಣ ಕುರಿತು ಪ್ರತಿಕ್ರಿಯಿಸುವಾಗ ಗವರ್ನರ್ ಮಲ್ಹೋತ್ರಾ ಅವರು, 'ಹಣದುಬ್ಬರ ನಿಯಂತ್ರಣದ ಚೌಕಟ್ಟಿನಲ್ಲಿ ಹೊಂದಾಣಿಕೆಗೆ ಇರುವ ಅವಕಾಶಗಳನ್ನು ಕೇಂದ್ರೀಯ ಬ್ಯಾಂಕ್ ಬಳಸಿಕೊಳ್ಳಲಿದೆ' ಎಂದು ಹೇಳಿದ್ದಾರೆ. ಚಿಲ್ಲರೆ ಹಣದುಬ್ಬರ ದರವು ಮುಂದಿನ ದಿನಗಳಲ್ಲಿ ಇನ್ನಷ್ಟು ಕಡಿಮೆ ಆಗುತ್ತದೆ, ಅದು 2025–26ರಲ್ಲಿ ಶೇ 4.2ರ ಮಟ್ಟಕ್ಕೆ ಬರಬಹುದು ಎಂದು ಸಮಿತಿಯು ನಿರೀಕ್ಷಿಸಿದೆ. ಮುಂಬರುವ ಮುಂಗಾರು ಹಂಗಾಮಿನಲ್ಲಿ ಮಳೆಯು ವಾಡಿಕೆಯಂತೆ ಸುರಿದರೆ, ಆಹಾರ ಧಾನ್ಯಗಳು ಹಾಗೂ ತರಕಾರಿಗಳ ಬೆಳೆಯು ಚೆನ್ನಾಗಿ ಆದರೆ ಈ ನಿರೀಕ್ಷೆ ಸತ್ಯವಾಗಬಹುದು. ಆಹಾರ ವಸ್ತುಗಳ ಬೆಲೆಯಲ್ಲಿ ಇಳಿಕೆ ಕಂಡುಬಂದರೆ ಒಟ್ಟಾರೆ ಹಣದುಬ್ಬರ ಪ್ರಮಾಣವು ಒಂದಿಷ್ಟು ತಗ್ಗಬಹುದು. ಇವೆಲ್ಲ ಅಂದಾಜುಗಳಿಗೆ ಒಂದಿಷ್ಟು ಆಧಾರಗಳು ಇವೆ. ಆದರೆ, ಅರ್ಥವ್ಯವಸ್ಥೆಯ ಬೆಳವಣಿಗೆ ದರವು ಪ್ರಸಕ್ತ ಹಣಕಾಸು ವರ್ಷದ ಎರಡನೆಯ ತ್ರೈಮಾಸಿಕದಲ್ಲಿ ಇಳಿಕೆ ಕಂಡಿದ್ದನ್ನು ಗಮನಿಸಿ, ಬೆಳವಣಿಗೆಗೆ ಇಂಬು ಕೊಡುವ ಉದ್ದೇಶದಿಂದ ರೆಪೊ ದರ ತಗ್ಗಿಸುವ ತೀರ್ಮಾನಕ್ಕೆ ಆರ್‌ಬಿಐ ಬಂದಿರಬಹುದು. ರೆಪೊ ದರ ತಗ್ಗಿಸಿದ ಪರಿಣಾಮವಾಗಿ ಜನರ ಕೈಯಲ್ಲಿ ತುಸು ಹೆಚ್ಚು ಹಣ ಉಳಿಯುತ್ತದೆ, ಅದು ಬೇಡಿಕೆ ಹೆಚ್ಚಿಸಲು ನೆರವಾಗುತ್ತದೆ, ವ್ಯವಸ್ಥೆಯಲ್ಲಿ ಹಣದ ಹರಿವು ತುಸುಮಟ್ಟಿಗೆ ಹೆಚ್ಚಾಗುತ್ತದೆ ಎಂಬ ನಿರೀಕ್ಷೆ ಈಗ ಇದೆ.

ಜಾಗತಿಕ ಆರ್ಥಿಕ ವ್ಯವಸ್ಥೆಯಲ್ಲಿನ ಅನಿಶ್ಚಿತತೆಗಳು, ಡಾಲರ್ ಬಲಗೊಳ್ಳುತ್ತಿರುವುದು ಮತ್ತು ರೂಪಾಯಿ ಮೌಲ್ಯವು ಡಾಲರ್ ಎದುರು ಕುಸಿಯುತ್ತಿರುವ ಸವಾಲುಗಳನ್ನು ಗವರ್ನರ್ ಉಲ್ಲೇಖಿಸಿದ್ದಾರೆ. ವಿದೇಶಿ ವಿನಿಮಯ ಮಾರುಕಟ್ಟೆಯಲ್ಲಿನ ಅಸ್ಥಿರತೆಯೂ ರೆಪೊ ದರ ಇಳಿಕೆಗೆ ಒಂದು ಕಾರಣವಾಗಿರಬಹುದು. ತಾನು ವಿದೇಶಿ ವಿನಿಮಯ ಮಾರುಕಟ್ಟೆಯಲ್ಲಿ ಮಧ್ಯಪ್ರವೇಶ ಮಾಡುವುದು ಸ್ಥಿರತೆಯನ್ನು ಕಾಯ್ದುಕೊಳ್ಳುವ ಉದ್ದೇಶದಿಂದ ಮತ್ತು ಭಾರತದ ರೂಪಾಯಿಯ ವಿನಿಮಯ ಮೌಲ್ಯವು ಮಾರುಕಟ್ಟೆ ಶಕ್ತಿಗಳಿಂದ ತೀರ್ಮಾನವಾಗುತ್ತದೆ ಎಂದು ಆರ್‌ಬಿಐ ಸ್ಪಷ್ಟಪಡಿಸಿದೆ. ರೂಪಾಯಿಯ ಮೌಲ್ಯವು ತಾನಾಗಿಯೇ ಒಂದು ಮಟ್ಟವನ್ನು ಕಂಡುಕೊಳ್ಳಲು ಆರ್‌ಬಿಐ ಅನುವು ಮಾಡಿಕೊಡಬಹುದು ಎಂಬ ಸೂಚನೆ ಇದೆ. ಹಲವು ಅಂದಾಜುಗಳನ್ನು ಆಧರಿಸಿ ಆರ್‌ಬಿಐ ರೆಪೊ ದರ ತಗ್ಗಿಸುವ ತೀರ್ಮಾನ ಮಾಡಿದೆ. ಈ ತೀರ್ಮಾನವು ಪೂರ್ಣ ಪ್ರಮಾಣದಲ್ಲಿ ಫಲ ನೀಡಬೇಕು ಎಂದಾದರೆ ಅಂದಾಜುಗಳೆಲ್ಲ ನಿಜವಾಗಬೇಕು.

ದಿನದ ಟ್ವೀಟ್

ಮಾದರಿ ನಡವಳಿಕೆ



ಮೊಣಕಾಲು ನೋವು ಅನುಭವಿಸುತ್ತಿರುವ ನಮ್ಮ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಕಂಡಾಗ, ರಕ್ಷಣಾ ಸಚಿವ ರಾಜನಾಥ ಸಿಂಗ್ ಅವರು ಅನುಕರಣೀಯವಾಗಿ ನಡೆದುಕೊಂಡ ರೀತಿ ಹೃದಯಸ್ಪರ್ಶಿಯಾಗಿತ್ತು. ರಾಜಕಾರಣದಲ್ಲಿ ಪ್ರತೀಕಾರ, ದ್ವೇಷ ಮತ್ತು ಹಗೆತನವೇ ತುಂಬಿರುವ ಇಂದಿನ ದಿನಗಳಲ್ಲಿ, ಮಾನವೀಯವಾಗಿ ವರ್ತಿಸುವವರನ್ನು ನಾವು ಶ್ಲಾಘಿಸಲೇಬೇಕು.

ದಿನೇಶ್ ಗುಂಡೂರಾವ್, ಆರೋಗ್ಯ ಸಚಿವ

ಕಿಡಿನುಡಿ

ಅಧಿಕಾರಿಗಳ ಸಿದ್ಧತೆಯ ಕೊರತೆಯನ್ನು ಇದು ಸ್ಪಷ್ಟವಾಗಿ ತೋರಿಸುತ್ತದೆ. ವೈಮಾನಿಕ ಪ್ರದರ್ಶನ ನಡೆಯುವ ದಿನ ಅಂತಿಮಗೊಂಡಿದ್ದಾಗಲೂ ಸಂಬಂಧಪಟ್ಟವರು ಸಿದ್ಧತೆ ಮಾಡಿಕೊಳ್ಳದಿರುವ ಕಾರಣದಿಂದ, ವಿಮಾನ ನಿಲ್ದಾಣಕ್ಕೆ ತೆರಳುವವರು ಕಷ್ಟಪಡಬೇಕ್ಯಾಕೆ?

(ಬೆಂಗಳೂರಿನ ಯಲಹಂಕದ ವಾಯುನೆಲೆಯಲ್ಲಿ ನಡೆಯುತ್ತಿರುವ ಏರೊ ಇಂಡಿಯಾ ವೈಮಾನಿಕ ಪ್ರದರ್ಶನದ ಕಾರಣದಿಂದ, ಬೆಂಗಳೂರು ವಿಮಾನ ನಿಲ್ದಾಣಕ್ಕೆ ತೆರಳುವ ಮಾರ್ಗದಲ್ಲಿ ಭಾರಿ ಸಂಚಾರ ದಟ್ಟಣೆ ಉಂಟಾಗಿದ್ದುದಕ್ಕೆ ಆಕ್ರೋಶ)

ವೇಣು ವಿ.

25 ವರ್ಷಗಳ ಹಿಂದೆ

ಭಾನುವಾರ, 13-2-2000

• '500 ರೂಪಾಯಿ ನೋಟು ನಿಷೇಧ ಇಲ್ಲ'

ಸಾಲ್ಬೊನಿ (ಪಶ್ಚಿಮ ಬಂಗಾಳ), ಫೆ. 12 (ಪಿಟಿಐ, ಯುಎನ್‌ಐ)– 500 ರೂಪಾಯಿ ಮೌಲ್ಯದ ನೋಟುಗಳನ್ನು ನಿಷೇಧಿಸುವ ಯಾವುದೇ ಯೋಜನೆ ಇಲ್ಲ ಎಂದು ಭಾರತೀಯ ರಿಸರ್ವ್ ಬ್ಯಾಂಕ್ ಇಂದು ಸ್ಪಷ್ಟವಾಗಿ ತಿಳಿಸಿದೆ.

'ಪಾಕಿಸ್ತಾನದ ಬೇಹುಗಾರಿಕೆ ಸಂಸ್ಥೆ ಐಎಸ್‌ಐ ಮತ್ತು ಇತರ ಸಮಾಜ ವಿರೋಧಿ ಸಂಘಟನೆಗಳು ಚಲಾವಣೆಗೆ ತಂದಿವೆ ಎನ್ನಲಾದ 500 ರೂಪಾಯಿ ಮೌಲ್ಯದ ಖೋಟಾ ನೋಟುಗಳಿಂದ ರಾಷ್ಟ್ರದ ಆರ್ಥಿಕ ಪರಿಸ್ಥಿತಿಯ ಮೇಲೆ ಯಾವುದೇ ರೀತಿಯ ಪ್ರತಿಕೂಲ ಪರಿಣಾಮ ಉಂಟಾಗದು' ಎಂದು ಆರ್‌ಬಿಐ ಗವರ್ನರ್ ಬಿಮಲ್ ಜಲನ್ ಅವರು ಹೇಳಿದರು.

'ಭಾರತೀಯ ರಿಸರ್ವ್ ಬ್ಯಾಂಕ್ ನೋಟ್ ಮುದ್ರಣ್ ಲಿಮಿಟೆಡ್' ಅನ್ನು ಅಧಿಕೃತವಾಗಿ ಉದ್ಘಾಟಿಸಿದ ನಂತರ ಅವರು ವರದಿಗಾರರ ಜತೆ ಮಾತನಾಡಿದರು.

• ಕೇಂದ್ರದಿಂದ ಹೆಚ್ಚುವರಿ ವಿದ್ಯುತ್‌ಗೆ ಒಪ್ಪಂದ

ಬೆಂಗಳೂರು, ಫೆ. 12– ರಾಜ್ಯಕ್ಕೆ ಕೇಂದ್ರದ ವಿದ್ಯುತ್ ಉತ್ಪಾದನಾ ಕೇಂದ್ರಗಳಿಂದ ಹೆಚ್ಚುವರಿಯಾಗಿ 180 ಮೆಗಾವಾಟ್ ವಿದ್ಯುತ್ ಸರಬರಾಜು ಹಾಗೂ ವಿತರಣಾ ವ್ಯವಸ್ಥೆ ಸುಧಾರಣೆಗೆ ಮುಂದಿನ ಐದಾರು ವರ್ಷಗಳಲ್ಲಿ 10 ಸಾವಿರ ಕೋಟಿ ರೂಪಾಯಿ ಸಾಲ ಸೌಲಭ್ಯ ಒದಗಿಸುವ ಒಪ್ಪಂದಕ್ಕೆ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಇಂದು ಸಹಿ ಹಾಕಿದವು.

ವಿದ್ಯುತ್ ಕ್ಷೇತ್ರದ ಸುಧಾರಣೆಗೆ ಸಂಬಂಧಿಸಿದಂತೆ ರಾಷ್ಟ್ರದಲ್ಲೇ ಮೊದಲ ಬಾರಿಗೆ ಕರ್ನಾಟಕ ಹಾಗೂ ಕೇಂದ್ರ ಸರ್ಕಾರಗಳು ಐತಿಹಾಸಿಕ ಒಪ್ಪಂದಕ್ಕೆ ಸಹಿ ಹಾಕಿವೆ

50 ವರ್ಷಗಳ ಹಿಂದೆ

ಗುರುವಾರ, 13-2-1975

• ಅರ್ಹತೆ ಮತ್ತು ತಾಂತ್ರಿಕ ದೃಷ್ಟಿಯಿಂದ ಟೆಂಡರ್ ನೀಡಿಕೆ: ಅರಸು ಸ್ಪಷ್ಟನೆ

ಬೆಂಗಳೂರು, ಫೆ. 12– ಹೇಮಾವತಿ ಯೋಜನೆ ಬಲದಂಡೆಯ ಮಣ್ಣಿನ ಅಣೆಕಟ್ಟಿನ ಕಾಮಗಾರಿಗಾಗಿ ಬಂದ ಒಂಬತ್ತು ಟೆಂಡರುಗಳ ಪೈಕಿ ಕೆಲಸ ಸಕಾಲದಲ್ಲಿ ಆಗಬೇಕೆನ್ನುವ ಹಾಗೂ ಅರ್ಹತೆ ದೃಷ್ಟಿಯಿಂದ ನೆಚುಪಾದಮ್ ನಿರ್ಮಾಣ ಸಂಸ್ಥೆಯ ಟೆಂಡರನ್ನು ಅಂಗೀಕರಿಸಲಾಯಿತೆಂದು ಮುಖ್ಯಮಂತ್ರಿ ಡಿ.ದೇವರಾಜ ಅರಸು ಅವರು ಇಂದು ವಿಧಾನಸಭೆಯಲ್ಲಿ ತಿಳಿಸಿದರು.

ಕಡಿಮೆ ಟೆಂಡರ್ ಕೊಟ್ಟಿದ್ದ ಸಂಸ್ಥೆಯನ್ನು ಕಡೆಗಣಿಸಿ ನೆಚುಪಾದಮ್ ಸಂಸ್ಥೆಗೆ ಕೊಡಲು ಕಾರಣವೇನು ಎಂಬ ವಿರೋಧ ಪಕ್ಷದ ನಾಯಕ ಎಚ್.ಡಿ.ದೇವೇಗೌಡ ಅವರ ಪ್ರಶ್ನೆಗೆ ಉತ್ತರಿಸಿದ ಅವರು, 'ಕಡಿಮೆ ಇದ್ದವರನ್ನು ಪರಿಗಣಿಸಬೇಕು. ಆದರೆ ಚರ್ಚೆ ಮಾಡಿದಾಗ, ಅದು ಇತ್ತೀಚಿನ ಸಂಸ್ಥೆ, ಸಾಕಷ್ಟು ಅನುಭವ ಇಲ್ಲದಿರುವುದು ತಾಂತ್ರಿಕವಾಗಿ ಕಂಡುಬಂದಿದ್ದರಿಂದ ಕೈಬಿಡಲಾಯಿತು' ಎಂದರು.

• ಹಿಂದುಳಿದ 'ತಾಲ್ಲೂಕು'ಗಳ ಘೋಷಣೆ: ಕೇಂದ್ರಕ್ಕೆ ಮನವಿ

ಬೆಂಗಳೂರು, ಫೆ. 12– ಕೈಗಾರಿಕಾ ಅಭಿವೃದ್ಧಿಗಾಗಿ ರಾಜ್ಯದ ಕೆಲವು ಜಿಲ್ಲೆಗಳನ್ನು ಹಿಂದುಳಿದ ಜಿಲ್ಲೆಗಳೆಂದು ಪರಿಗಣಿಸುವಂತೆ, ಹಲವು ತಾಲ್ಲೂಕುಗಳನ್ನು ಹಿಂದುಳಿದ ತಾಲ್ಲೂಕುಗಳೆಂದು ಘೋಷಿಸಲು ಕೋರಿ ರಾಜ್ಯ ಸರ್ಕಾರ, ಕೇಂದ್ರಕ್ಕೆ ಪತ್ರ ಬರೆದಿದೆ. ಮೈಸೂರು ಮತ್ತು ಧಾರವಾಡ ಜಿಲ್ಲೆಗಳನ್ನು ಕೈಗಾರಿಕಾ ಅಭಿವೃದ್ಧಿಗಾಗಿ ಕೇಂದ್ರ ಆರಿಸಿದೆ ಎಂದು ಕೈಗಾರಿಕಾ ಸಚಿವ ಎಸ್.ಎಂ.ಕೃಷ್ಣ ಅವರು ಇಂದು ವಿಧಾನಸಭೆಗೆ ತಿಳಿಸಿದರು.

ಸಾವನ್ನು ಮುಂದೂಡುವ, ಕೊನೆಯವರೆಗೂ ಸುಖಿಯಾಗಿ ಬದುಕುವ ದಾರಿಗಳೇನೇನು?

ಮುಪ್ಪಿನ ಮುಂಚಿನ ಸಮರಾಂಗಣ



ವಿಜ್ಞಾನ ವಿಶೇಷ

ನಾಗೇಶ ಹೆಗಡೆ

ಅನೇಕ ಹೈಟೆಕ್ ಆಸ್ಪತ್ರೆಗಳು ನತದೃಷ್ಟ ರೋಗಿಗಳನ್ನು ಬದುಕಿಸಲೂ ಆಗದೆ, ಸಾಯಲೂಬಿಡದೆ ಕುಟುಂಬದ ಮೇಲೂ ಲಕ್ಷಾಂತರ ರೂಪಾಯಿ ಸಾಲ ಬೀಳುವಂತೆ ಮಾಡುತ್ತಿವೆ. ಈಗ ಕೊಂಚ ನೆಮ್ಮದಿ ನೀಡುವ ಕೆಲಸವೊಂದು ಕರ್ನಾಟಕ ಸರ್ಕಾರದಿಂದ ಆಗಿದೆ. ನನ್ನ ಸಾವು ಹೇಗಿರಬೇಕು ಎಂಬುದರ ಕುರಿತು ನಾವು ಇಂದೇ ಮರಣಪತ್ರ ವನ್ನು ಬರೆದಿಡಬಹುದು. ಅದನ್ನು ನೋಂದಣಿ ಮಾಡಿಸಬಹುದು.

ನೊಬೆಲ್ ಪ್ರಶಸ್ತಿ ಪುರಸ್ಕೃತ ಜೀವವಿಜ್ಞಾನಿ ವೆಂಕಿ ರಾಮಕೃಷ್ಣನ್ ಬರೆದ 'ನಾವೇಕೆ ಸಾಯುತ್ತೇವೆ?' (ವೈ ವಿ ಡೈ?) ಹೆಸರಿನ ಪುಸ್ತಕ ಹೋದ ತಿಂಗಳು ಜಯಪುರ ಮತ್ತು ಕೋಲ್ಕತ್ತ ಸಾಹಿತ್ಯ ಸಮಾವೇಶಗಳಲ್ಲಿ ಬಹಳಷ್ಟು ಚರ್ಚೆಗೆ ಬಂತು. ಸಾಹಿತ್ಯ ಸಮಾವೇಶಗಳಲ್ಲಿ ಇಂಥ ವಿಷಯಗಳಿಗೂ ಆದ್ಯತೆ ಸಿಗುತ್ತಿದೆ ಎನ್ನುವುದೇ ವಿಶೇಷ.ವೆಂಕಿಯವರು ಇಲ್ಲಿಗೆ ಬಂದು, ಸಾವಿನ ನಾನಾ ಬಗೆಯ ವೈಚಿತ್ರ್ಯಗಳ ಕುರಿತು ಅನೇಕ ಸೊಗಸಾದ, ನಿಚ್ಚಳ ವಿಡಿಯೊ ಸಂದರ್ಶನ ನೀಡಿದ್ದಾರೆ. ಸಾವನ್ನು ಮುಂದೂಡುವ ಮತ್ತು ಅಷ್ಟೂ ವರ್ಷ ಆರೋಗ್ಯದ ಜೀವನ ನಡೆಸುವ ಬಗ್ಗೆ ಎಲ್ಲ ಹಿರಿಯರಿಗೂ ಆಸಕ್ತಿ ಇದೆ. ಜಗತ್ತಿನ ಎಲ್ಲ ಶ್ರೀಮಂತರೂ ಅದನ್ನೇ ಬಯಸುತ್ತಾರೆ. ಇಲಾನ್ ಮಸ್ಕ್ 'ನಾನು ಮಂಗಳ ಲೋಕದಲ್ಲೇ ಸಾಯಲು ಬಯಸುತ್ತೇನೆ, ಆದರೆ ಅಲ್ಲಿನ ನೆಲಕ್ಕೆ ಧೊಪ್ಪೆಂದು ಅಪ್ಪಳಿಸಿ ಅಲ್ಲ' ಎಂದು ಹೇಳಿದ್ದಾರೆ. ಅದು ಡಬಲ್ ಕನಸು. ಮಂಗಳ ಲೋಕಕ್ಕೆ ಹೋಗಬೇಕು; ಅಲ್ಲಿ ದೀರ್ಘ ವಾಸ್ತವ್ಯ ಹೂಡಬೇಕು ಎಂಬಂಥ ಜೋಡಿ ಕನಸನ್ನು ಜಗತ್ತಿನ ಅತಿ ಶ್ರೀಮಂತ ಮಾತ್ರ ಕಾಣಲು ಸಾಧ್ಯ. ಆದರೆ ಎಲ್ಲ ಶ್ರೀಮಂತರೂ ಸುದೀರ್ಘ, ಸುಖಮಯ ಜೀವನ ನಡೆಸಲು, ಆ ಕುರಿತು ಸಂಶೋಧನೆಗೆ ಹಣ ಹೂಡಲು ಬಯಸುತ್ತಾರೆ. ಅದು ಸಹಜವೇ ತಾನೆ? ಯುವಕರಾಗಿದ್ದಾಗ ಧನಿಕರಾಗಬೇಕು ಎಂಬ ಕನಸು; ಧನಿಕರಾದ ನಂತರ ಯುವಕರಾಗಬೇಕು ಎಂಬ ಯಯಾತಿಯ ಕನಸು!

ಅದೇ ಕಾರಣದಿಂದಲೇ ವಿವಿಧ ದೇಶಗಳಲ್ಲಿ ಇಂದು 700ಕ್ಕೂ ಹೆಚ್ಚು ಬಯೊಟೆಕ್ ಕಂಪನಿಗಳು ವೃದ್ಧಾಪ್ಯವನ್ನು ಮುಂದೂಡುವ ವಿಷಯದಲ್ಲಿ ಸಂಶೋಧನೆ ನಡೆಸುತ್ತಿವೆ. ಈ ಕ್ಷೇತ್ರದಲ್ಲಿ ಖ್ಯಾತಿ ಪಡೆದ ವಿಜ್ಞಾನಿಗಳೆಲ್ಲ ಕಂಪನಿಗಳ ಷೇರುದಾರರೇ ಆಗಿದ್ದಾರೆ. ಯಾರು ಏನು ಸಂಶೋಧನೆ ಮಾಡುತ್ತಿದ್ದಾರೆ, ಯಾವ ಕಂಪನಿ ಯಶಸ್ಸಿನತ್ತ ಹೆಜ್ಜೆ ಹಾಕುತ್ತಿದೆ ಎಂಬುದನ್ನು ಹುಡುಕುವುದು ಸುಲಭದ ಸಂಗತಿ ಅಲ್ಲ. ಪತ್ರಕರ್ತರಿಗಂತೂ ಸಾಧ್ಯವಿಲ್ಲ. ಈ ಕ್ಷೇತ್ರದಲ್ಲಿ ಪಳಗಿದವರನ್ನೇ ಕೇಳೋಣವೆಂದರೆ ಬಂಡವಾಳ ಹೂಡಿದವರು ಈಗಲೇ ಬಾಯಿ ಬಿಡುವುದಿಲ್ಲ. ಬಾಯಿ ಬಿಟ್ಟವರನ್ನು ನಂಬುವಂತಿಲ್ಲ. ಈ ಸಂದಿಗ್ಧದಲ್ಲಿ ನೆರವಿಗೆ ಬಂದವರು ವೆಂಕಿ ರಾಮಕೃಷ್ಣನ್. ಅವರು ಬಂಡವಾಳ ಹಾಕಿಲ್ಲ. ಆದರೆ ಈಗಿನ ಸಂಶೋಧನೆಗಳನ್ನು ತಜ್ಞದೃಷ್ಟಿಯಿಂದ ನೋಡಿ ಈ ಪುಸ್ತಕವನ್ನು ಬರೆದಿದ್ದಾರೆ. ಅದರ ಬಗ್ಗೆ ಅವರೊಂದಿಗೆ ನಡೆಸಿದ ಅನೇಕ ಸಂದರ್ಶನಗಳಲ್ಲಿ ಮಧ್ಯೆ ಮಧ್ಯೆ ವೆಂಕಿಯವರ ತಮಾಷೆಯ (ಪ್ರಾಯಶಃ ಪುಸ್ತಕದಲ್ಲಿ ಹೇಳಿಲ್ಲದ) ಮಾತುಗಳೂ ಬಂದಿವೆ. ಉದಾ: 100-150 ವರ್ಷ ಬದುಕುವ ಉಪಾಯ ಸಿಕ್ಕೇಬಿಟ್ಟಿತು ಅನ್ನಿ; ಅದು ಒಳ್ಳೆಯದೆಂದು ಹೇಳುತ್ತೀರಾ? 'ಟ್ರಂಪ್, ಪುಟಿನ್ ಅಂಥವರು ಆಗಲೂ ಆಳ್ವಿಕೆ ನಡೆಸುವುದನ್ನು ಜನರು ಬಯಸುತ್ತಾರಾ' ಎಂದು ಕೇಳಿದ್ದಾರೆ.

ಆರೋಗ್ಯಪೂರ್ಣ ದೀರ್ಘಾಯಸ್ಸಿನ ಬಗ್ಗೆ ಧನಿಕರ ಕಾತರ ಎಷ್ಟಿದೆ ಎಂದರೆ, ಆ ರಂಗದಲ್ಲಿ ಇನ್ನೂ ಪೂರ್ತಿ ಸಂಶೋಧನೆ ಆಗಿಲ್ಲದಿದ್ದರೂ ಸರ್ಕಾರಿ ಮಾನ್ಯತೆ ಸಿಕ್ಕಿಲ್ಲವಾದರೂ ಈಗಲೇ ಅಂಥ ಚಿಕಿತ್ಸೆಯನ್ನು ತಮ್ಮ ಮೇಲೆಯೇ ಪ್ರಯೋಗ ಮಾಡಿಕೊಳ್ಳಹೊರಟವರೂ ಇದ್ದಾರೆ; ಅವರಲ್ಲಿ ಸಂಶೋಧನಾನಿರತ ವಿಜ್ಞಾನಿಗಳೂ ಇದ್ದಾರೆ. ಉದಾಹರಣೆಗೆ, ನಮ್ಮ ಜೀವಕೋಶದಲ್ಲಿರುವ ವರ್ಣತಂತುವಿನ ತುದಿಯಲ್ಲಿ ಟೆಲೊಮೆರೇಸ್ ಎಂಬ ಬಾಲ ಇರುತ್ತದೆ. ಪ್ರತಿ ಬಾರಿ ಜೀವಕೋಶ ವಿಭಜನೆ ಆಗುವಾಗ ಟೆಲೊಮೆರೇಸ್ ಬಾಲದ ಒಂದು ಚೂರು ಭಗ್ನವಾಗುತ್ತದೆ. ಪದೇ ಪದೇ ಹೀಗೆ ಆಗುತ್ತ ವಯಸ್ಸಾದಂತೆಲ್ಲ ಟೆಲೊಮೆರೇಸ್ ಮೊಂಡಾಗಿ, ಸಾವು ಸಮೀಪಿಸುತ್ತದೆ. ಆ ಬಾಲಕ್ಕೆ ಇನ್ನಷ್ಟು ನ್ಯೂಕ್ಲಿಯೊಟೈಡ್‌ಗಳನ್ನು ಸೇರಿಸಿ ಅದನ್ನು ಮತ್ತೆ ಸುಸ್ಥಿತಿಗೆ ತರಬಲ್ಲ ಸಂಶೋಧನೆಗಳು ಬಹಳಷ್ಟು ಪ್ರಗತಿ ಸಾಧಿಸಿವೆ. ಲ್ಯಾಬಿನ ಇಲಿಗಳು ಅಂಥ ಚುಚ್ಚುಮದ್ದು ಪಡೆದು ಯೌವನ ಪಡೆಯುತ್ತಿವೆ ಎಂದು ಗೊತ್ತಾಗಿದ್ದೇ ತಡ, ಅದನ್ನು ಮನುಷ್ಯರ ಮೇಲೆ ಪ್ರಯೋಗಿಸಿ ಅದು ಸುರಕ್ಷಿತವೆಂದು ಸರ್ಕಾರಿ ಅನುಮತಿ ಸಿಗುವ ಮೊದಲೇ ಕಳ್ಳಮಾರ್ಗದಲ್ಲಿ ಮಾರುಕಟ್ಟೆಗೆ ಆಗಲೇ ಬಂದಾಗಿದೆ. 'ನಿಲ್ರೀಪ್ಪಾ, ಅದು ಕ್ಯಾನ್ಸರ್ ಕೋಶಗಳಿಗೂ ಬಲವರ್ಧನೆ ನೀಡುತ್ತದೆ' ಎಂಬ ಎಚ್ಚರಿಕೆಗೂ ಕ್ಯಾರೇ ಅನ್ನದೆ ಹಣ ಬಾಚಿಕೊಳ್ಳುವವರು ನುಗ್ಗುತ್ತಿದ್ದಾರೆ. ಉದಾಹರಣೆ 2: ಎಳೆಯರ ದೇಹದ ರಕ್ತವನ್ನು ಹಿರಿಯರಿಗೆ ಸೇರಿಸಿದರೆ ಹೊಸ ಚೈತನ್ಯ ಬರುತ್ತದೆಂಬುದು ಗೊತ್ತಾಗಿ ಥಾಮಸ್ ಪರ್ಲ್ಸ್ (Perls) ಹೆಸರಿನ ವಿಜ್ಞಾನಿಯೊಬ್ಬ ತನ್ನ ಮಗನ ರಕ್ತವನ್ನು ತನಗೂ ತನ್ನಪ್ಪನಿಗೂ ಸೇರಿಸಿದ ಕತೆ ಇದೆ. ಈತನ 'ಲಿವಿಂಗ್‌ಟು100 ಡಾಟ್‌ಕಾಮ್'ಗೆ ಹೋಗಿ ಅಲ್ಲಿರುವ ಪ್ರಶ್ನಾವಳಿಗಳನ್ನು ತುಂಬಿ ನೀವೇ ನಿಮ್ಮ ಆರೋಗ್ಯವಂತ ಆಯಸ್ಸಿನ ಲೆಕ್ಕ ಹಾಕಬಹುದು.

ನಿಸರ್ಗ ಸ್ಥೂಲ ನಿಯಮದ ಪ್ರಕಾರ ದೊಡ್ಡ ಗಾತ್ರದ ಜೀವಿಗಳು ದೀರ್ಘಕಾಲ ಬದುಕುತ್ತವೆ. ಹಣ್ಣಿನ ನೊಣಗಳ ಜೀವಿತಾವಧಿ ಆರು ಗಂಟೆ ಅಷ್ಟೇ. ಭಾರೀ ಗಾತ್ರದ ತಿಮಿಂಗಿಲಗಳು 180-200 ವರ್ಷ ಬದುಕುತ್ತವೆ. ಹಾಗೆಂದು ಈ ನಿಯಮವೂ ಸಾರ್ವತ್ರಿಕ ಏನಲ್ಲ. ಹೆಗ್ಗಣಗಳು 2-3 ವರ್ಷ ಬದುಕುತ್ತವೆ. ಆದರೆ ಅದೇ ಗಾತ್ರದ ಬಾವಲಿಗಳು 40 ವರ್ಷ ಬದುಕುತ್ತವೆ. ತಿಮಿಂಗಿಲಗಳಿಗೆ ಹೋಲಿಸಿದರೆ ಬುಟ್ಟಿಗಾತ್ರದ ಆಮೆಗಳು 400 ವರ್ಷ ಬದುಕುತ್ತವೆ. ವಿಜ್ಞಾನಿಗಳು ದೀರ್ಘಾಯಸ್ಸಿನ ಇಂಥ ಗುಟ್ಟನ್ನು ಬಗೆಯಲೆಂದು ಅತಿ ಚಿಕ್ಕ, ಅತಿಸೂಕ್ಷ್ಮ ಜೀವಿಗಳನ್ನೂ ತಿಮಿಂಗಿಲದ ಅತಿಸೂಕ್ಷ್ಮ ಜೀವಕೋಶವನ್ನೂ ನೋಡುತ್ತಿದ್ದರೆ ಇನ್ನು ಕೆಲವರು ಶತಾಯುಷಿ ಮನುಷ್ಯರ ಜೀವನಕ್ರಮಗಳನ್ನೂ ವಂಶಾವಳಿಗಳನ್ನೂ ವಿಶ್ಲೇಷಣೆ ಮಾಡುತ್ತಿದ್ದಾರೆ. ಇವರ ವರದಿಗಳನ್ನು ಆಧರಿಸಿ ಅಸಂಖ್ಯ ಪುಸ್ತಕಗಳು, ವಿಡಿಯೊ ಪಾಠಗಳು, ಜಾಲತಾಣಗಳು ಸೃಷ್ಟಿಯಾಗಿವೆ. ಮಿತಾಹಾರ, ಸಸ್ಯಾಹಾರ, ವೀಗನ್ ಆಹಾರ, ನಿತ್ಯನಡಿಗೆ, ದಿನದ 24 ಗಂಟೆಗಳಲ್ಲಿ ಐದು ಗಂಟೆಗಳ ಅವಧಿಯಲ್ಲಿ ಮಾತ್ರ ಆಹಾರ ಸೇವನೆ ಮಾಡಬೇಕೆಂಬ 'ಅರೆಬರೆ ಹಸಿವೆ' ತಂತ್ರ... ಸಲಹೆಗಳು ನೂರಲ್ಲ, ಇನ್ನೂರಲ್ಲ. ಸ್ವತಃ ವೆಂಕಿ (71) ಕೂಡ ತಮ್ಮ ತಂದೆ ಈ 98ರ ವಯಸ್ಸಿನಲ್ಲೂ ತಮ್ಮ ಬಟ್ಟೆಯನ್ನು ತಾವೇ ಒಗೆದುಕೊಳ್ಳುತ್ತ ದಿನವೂ ಮೂರು ಕಿಲೊಮೀಟರ್ ಕಾಲ್ನಡಿಗೆ ಮಾಡುವ ಬಗ್ಗೆ ಹೇಳಿಕೊಂಡಿದ್ದಾರೆ. ಟಿ.ವಿ, ಮೊಬೈಲ್ ಫೋನ್ ಮುಂದೆ ಒಂಟಿಯಾಗಿ ಜೀವಿಸಬೇಡಿ; ಜನರ ಮಧ್ಯೆ ಲವಲವಿಕೆಯಿಂದ ಇದ್ದರೆ ಸಾವನ್ನು ಮುಂದೂಡಬಹುದು ಎಂಬ ಸಲಹೆ ನೀಡಿದ್ದಾರೆ.

ಈ ಮಧ್ಯೆ ಇನ್ನೊಂದು ಹೊಸ ಸಂಗತಿ ಬೆಳಕಿಗೆ ಬಂದಿದೆ: ಕಳೆದ ವಾರದ 'ನ್ಯೂ ಸೈಂಟಿಸ್ಟ್' ಪತ್ರಿಕೆಯ ಮುಖ್ಯ ಲೇಖನದ ಪ್ರಕಾರ, ನಮ್ಮ ಕರುಳಿನಲ್ಲಿ ವಾಸಿಸುವ ಸೂಕ್ಷ್ಮಜೀವಿಗಳೇ ಕೊನೆಗೆ ನಮ್ಮ ಪ್ರಾಣ ಹೀರುತ್ತವೆ. ಬಾಲ್ಯದಿಂದ ದೊಡ್ಡ ಕರುಳಿನಲ್ಲಿ ಕೂತ ಮಿತ್ರಜೀವಿಗಳ ಸಂಖ್ಯೆ ವಯಸ್ಸಾಗುತ್ತ ಹೋದಂತೆ ಕಡಿಮೆಯಾಗುತ್ತ ಅವುಗಳ ಜಾಗದಲ್ಲಿ ಶತ್ರುಜೀವಿಗಳ ಸಂಖ್ಯೆ ಹೆಚ್ಚುತ್ತದೆ. ಕೊನೆಗೆ ನಮ್ಮ ಪ್ರಾಣ ಹೀರಿ, ದಿಢೀರ್ ರಕ್ತದ ಮೂಲಕ ದೇಹಕ್ಕೆಲ್ಲ ವ್ಯಾಪಿಸುತ್ತವೆ. ಮೃತದೇಹ ಊದಿಕೊಳ್ಳುತ್ತದೆ. ದೇಹದೊಳಗಿನ ಆ ಕ್ಷಣದ ಸಮರಾಂಗಣ ರೋಚಕವಾಗಿರುತ್ತದೆ. ಅದನ್ನೂ ಕೊನೆಗೊಳಿಸುವ ಔಷಧ ಸಿದ್ಧವಾಗುತ್ತಿದೆ.

ಏನೋ, ಅಂತೂ ಆರೋಗ್ಯವಂತರಾಗಿ ನೂರು ವರ್ಷ ಬದುಕಬಹುದೆಂದು ನೂರಕ್ಕೆ ನೂರು ಪಾಲು ಗ್ಯಾರಂಟಿ ಕೊಡುವ ಔಷಧ ಬಂತೆಂದು ಊಹಿಸಿಕೊಳ್ಳಿ. ಆಗ ಈಗಿನ ಈ ನರ್ಸಿಂಗ್ ಹೋಮ್‌ಗಳು, ಕ್ಯಾನ್ಸರ್ ಆಸ್ಪತ್ರೆಗಳು, ಹೈಟೆಕ್ ಐಸಿಯುಗಳು, ಹಾರ್ಮೋನ್‌ಪೂರಣ ಥೆರಪಿಗಳು, ಹೊಸ ಮೂಳೆ ಜೋಡಿಸುವ ರೋಬಾಟಿಕ್ ಸರ್ಜರಿಗಳು, ಗಾಲಿಕುರ್ಚಿ ಕಂಪನಿಗಳೂ 100% ಬಾಗಿಲು ಮುಚ್ಚಬೇಕಾದ ಪರಿಸ್ಥಿತಿ ಬಂದೀತು. ಇವು ತಮ್ಮ ಬಿಸಿನೆಸ್ಸನ್ನು ದೀರ್ಘಕಾಲ ಉಳಿಸಿಕೊಳ್ಳಲು ಇನ್ನೇನೇನು 'ಔಷಧ' ಹುಡುಕಿಕೊಳ್ಳುತ್ತವೊ? ಈ ಸಮರಾಂಗಣವೂ ರೋಚಕವೇ.



ಚುರುಮುರಿ



ಹಾರೋ ಇಂಡಿಯಾ!

• ತುರುವೇಕೆರೆ ಪ್ರಸಾದ್

ಕತ್ತಿಗೊಂದು ಕಾಲರ್ ಹಾಕ್ಕಂಡು ಬಂದ ಗುದ್ಲಿಂಗನನ್ನ ಕಟ್ಟೆ ಸದಸ್ಯ ಮಾಲಿಂಗ ಕೇಳ್ದ: 'ಏನೋ! ನಿನ್ ಪತ್ತೆ ಮಾಡಕ್ಕೆ ನಿನ್ ಹೆಂಡ್ತಿ ಕುತ್ತಿಗೆಗೆ ಕಾಲರ್ ಹಾಕಿರೋ ಹಾಗಿದೆ'.

'ಏಯ್ ಇದು ಅದಲ್ಲಲೇ, ಈ ತಿಂಗ್ಳೆಲ್ಲಾ ಆಕಾಶ ನೋಡಿ ನೋಡಿ ಕುತ್ತಿಗೆ ಕಳಕ್ ಅಂತ ಅಂಗೇ ಸ್ಟಕ್ ಆಗ್ಬುಟ್ಟದೆ' ಎಂದ ಗುದ್ಲಿಂಗ.

'ಅಂತಾದ್ದೇನಿತ್ತಪ್ಪ ಆಕಾಶದಲ್ಲಿ?!'

'ಮೊದ್ಲು ಆಕಾಶದಲ್ಲಿ ಏಳು ಗ್ರಹ ಲೈನಾಗೆ ಬಂದವೆ ಅಂತ ನೋಡಿದ್ದಾಯ್ತಾ. ಆಮೇಲೆ ದಿಲ್ಲಿ ಗಂಟ ಕತ್ತು ಚಾಚಿ ಕುಂತಿದ್ವಲ್ಲಪ್ಪ, ಕೇಜ್ರಿವಾಲು ಗಾಳಿಪಟ ಈ ಸಾರಿನೂ ಹಾರುತ್ತೆ ಅಂತ'.

'ಸೂತ್ರ, ಬಾಲಂಗೋಚಿ ಎರಡೂ ಕಿತ್ಕೊಂಡು ಅನಾಮತ್ತಾಗಿ ಕಳಚ್ಕಂಡ್ತು' ಎಂದ ಕಲ್ಲೇಶಿ.

'ಯಾಕಂಗಾಯ್ತು ಅಂತಿನ್ನಿ'.

'ಬಾರ್ ಬಾರಿಗೂ ನಾವೇ ಬತ್ತೀವಿ ಅಂತ ಊರ್ ತುಂಬಾ ಬಾರ್ ತೆಗುದ್ರಲ್ಲ ಎಣ್ಣೆ ಮೆತ್ಕಂಡು, ಆ ಭಾರಕ್ಕೆ ಗಾಳಿಪಟ ಮೇಲ್ ಏರ್ಲೇ ಇಲ್ಲ. ಸರಿ, ಕುತ್ತಿಗೆ ಹಿಡ್ಕಳಕ್ಕೆ ಇನ್ನೇನ್ ನೋಡ್ದೆ'.

'ಚಿನ್ನ, ಬೆಳ್ಳಿ ದರ ಮೇಲ್ ಓಗ್ತಾನೇ ಅದೆ. ಈಗ ಏರೊ ಇಂಡಿಯಾ ನಡೀತಿದ್ಯಲ್ಲ. ಕಣ್ಮನ ಸೆಳೆಯೋ ವಿಮಾನಗಳು ಹಾರ್ತಾವಲ್ಲಪ್ಪ, ನೋಡ್ದೆ ಸುಮ್ಕೆ ಕುಂತ್ಕಳಕ್ಕಾಗುತ್ತಾ? ಇವಾರಾ ಇವತ್ತು ಇರ್ತವೆ, ನಾಳೆ ಮುಗೀತವೆ. ಆದ್ರೆ ನಮ್ದು ಫಾರೆವರ್ ಹಾರೋ ಇಂಡಿಯಾ ಸರ್ಕಸ್ ನೋಡಿ ನೋಡಿ ಕುತ್ತಿಗೇನೇ ಮುದ್ರೋಗದೆ' ಎಂದ ಗುದ್ಲಿಂಗ.

'ಇದ್ಯಾವುದ್ಲಾ ಹಾರೋ ಇಂಡಿಯಾ?'

'ಅದೇ ಕಣಪ್ಪ ನಮ್ ತ್ರಿ-ಪಕ್ಷಗಳ ಭಿನ್ನಬಣಗಳದ್ದು. ಎಚ್‌ಎಎಲ್‌ದು ಹಗುರ ವಿಮಾನ ಆದ್ರೆ ಇವರು ಹಲ್ಲು ಕಡಿದು ಹಗುರವಾಗಿ ಮಾತಾಡಿ ತೆಕ್ಕತಾರೆ ಮಾನ. ಅದು ಕಣ್ಸೆಳೆವ ನೋಟ, ಇವರದ್ದು ಕಾಲೆಳೆವ ಆಟ. ಅಲ್ಲಿ ಸರಸ್ ಫ್ಲೈಟ್, ಇಲ್ಲಿ ಜಲಸ್ ಫೈಟ್. ಏನೇ ಸುಖ ಇದ್ರೂ ಕುಯ್ ಕುಯ್ ಅನ್ನೋ ಸು'ಕೊಯ್' ಜನ ಪಕ್ಷದಿಂದ ಪಕ್ಷಕ್ಕೆ, ದಿಲ್ಲಿಗೆ ವರ್ಷವೆಲ್ಲಾ ಹಾರ್ತಾನೇ ಇರ್ತಾರಲ್ಲ. ಅದೇನ್ ಜಗಳಬಂದಿ, ದಿಲ್ಲಿ ಮಂಜಲ್ಲಿ ಅದೇನು ರಂ-ಗೋಲಿ, ಇದೇ ಹಾರೋ ಇಂಡಿಯಾ! ಈ ಕಸರತ್ತಿಗೆ ಕರುನಾಡೇ ಸುಸ್ತಾಗದೆ ನೋಡು' ಎಂದ ಗುದ್ಲಿಂಗ.

ಎಲ್ಲಾ ಗೊಳ್ಳೆಂದು ನಕ್ಕರು.

ಸಂಗತ

ಪ್ರೀತಿ ಎಂದರೆ... ವ್ಯಾಖ್ಯಾನ ಸಿಕ್ಕಿತೇ?

ಪ್ರೀತಿಯ ವಿವಿಧ ಆಯಾಮಗಳನ್ನು ಕುತೂಹಲದಿಂದ ನೋಡಬೇಕೇ ವಿನಾ ಭಿನ್ನ ಚಿಂತನೆಯೆಡೆ ಅಸಹನೆ ಬೆಳೆಸಿಕೊಳ್ಳುವುದು ತರವಲ್ಲ

• ವೆಂಕಟೇಶ ಬಿ.ಎಂ.

ಮತ್ತೊಂದು ವ್ಯಾಲೆಂಟೈನ್ಸ್ ಡೇ (ಫೆ. 14) ಬಂದಿದೆ. ಜಗತ್ತಿನಾದ್ಯಂತ ಅಸಂಖ್ಯ ಜನ ಈ ದಿನವನ್ನು ತಮ್ಮದೇ ರೀತಿಯಲ್ಲಿ ಆಚರಿಸುತ್ತಾರೆ. ಅಷ್ಟಾದರೂ ಈ ದಿನ ಮುಗಿದ ನಂತರ 'ನಿಜಕ್ಕೂ ಪ್ರೀತಿ ಎಂದರೇನು' ಎನ್ನುವ ಪ್ರಶ್ನೆ ಮಾತ್ರ ಹಾಗೇ ಉಳಿದುಬಿಡುತ್ತದೆ. ಸಂಗಾತಿಗಳ ನಡುವಿನ ಪ್ರೀತಿಯೇ ಇರಲಿ, ಪೋಷಕರು ಹಾಗೂ ಮಕ್ಕಳ ನಡುವಿನ ಪ್ರೀತಿಯೇ ಇರಲಿ, ಯಾವ ಸಂಬಂಧವೇ ಆಗಲಿ ಪ್ರೀತಿಯ ನಿರ್ದಿಷ್ಟ ವ್ಯಾಖ್ಯಾನ ಬಹಳ ಕಷ್ಟ.

ಗ್ಯಾರಿ ಚಾಪ್ಮನ್ ಎನ್ನುವ ಲೇಖಕ 'ದಿ ಫೈವ್ ಲವ್ ಲ್ಯಾಂಗ್ವೇಜಸ್' ಎನ್ನುವ ಪುಸ್ತಕದಲ್ಲಿ ಪ್ರೀತಿ ಹಾಗೂ ಅದನ್ನು ವ್ಯಕ್ತಪಡಿಸುವ ರೀತಿಗಳ ಬಗ್ಗೆ ಬರೆದಿದ್ದಾನೆ. ಪ್ರತಿ ವ್ಯಕ್ತಿಯೂ ಪ್ರೀತಿಯನ್ನು ಭಾವಿಸುವ ರೀತಿ ವಿಭಿನ್ನವಾಗಿರುತ್ತದೆ. ಕೆಲವರಿಗೆ ತಾವು ಪ್ರೀತಿಸುವ ವ್ಯಕ್ತಿ ತಮಗೆ ಉಡುಗೊರೆಗಳನ್ನು ನೀಡುವುದೇ ಪ್ರೀತಿ ಅನ್ನಿಸಬಹುದು. ಕೆಲವರಿಗೆ ಎಷ್ಟೇ ಉಡುಗೊರೆಗಳನ್ನು ತಂದು ಸುರಿದರೂ ಪ್ರೀತಿಯ ಭಾವನೆ ಬರದೇ ಹೋಗಬಹುದು. ಒಂದು ಮೆಚ್ಚುಗೆಯ ಮಾತು ದೊರೆತಾಗ, ತನ್ನೊಂದಿಗೆ ಗುಣಮಟ್ಟದ ಸಮಯ ಕಳೆದಾಗ ಸಂಗಾತಿಯ ಬಗ್ಗೆ ಪ್ರೀತಿ ಹೆಚ್ಚಾಗಿ, ತಾವು ಪ್ರೀತಿಸಲ್ಪಡುತ್ತಿದ್ದೇವೆ ಎನ್ನುವ ಭಾವನೆ ಮೂಡಬಹುದು. ಹೀಗೆ ಪ್ರೀತಿಯ ವಿವಿಧ ಆಯಾಮಗಳ ಬಗ್ಗೆ ಚರ್ಚಿಸುತ್ತಾರೆ ಗ್ಯಾರಿ ಚಾಪ್ಮನ್. ಇಲ್ಲಿ ಉಡುಗೊರೆಗಳನ್ನು ಬಯಸುವುದು ನಿಜವಾದ ಪ್ರೀತಿಯಲ್ಲವೆಂದು, ದುರಾಸೆಯೆಂದು ಬಗೆಯುವುದು ಪೂರ್ವಗ್ರಹಪೀಡಿತ ಯೋಚನೆಯಾಗುತ್ತದೆ. ಪ್ರೇಮಿ ಬಯಸಿದ್ದನ್ನು ನೀಡಲು ಪ್ರಾಮಾಣಿಕವಾಗಿ ಪ್ರಯತ್ನಿಸುವುದನ್ನು ಪ್ರೀತಿ ಎನ್ನಬಹುದೇ?

ಪ್ರೀತಿಯಲ್ಲಿ ನಿರೀಕ್ಷೆಗಳಿರುವುದು ಸಹಜ. ಮಕ್ಕಳು ಚೆನ್ನಾಗಿ ಓದಲಿ ಎಂಬ ಪೋಷಕರ ನಿರೀಕ್ಷೆ, ಸಂಗಾತಿಗಳ ನಡುವಿನ ಪರಸ್ಪರ ನಿರೀಕ್ಷೆಗಳು ಅತ್ಯಂತ ಸಹಜ. ನಮ್ಮನ್ನು ಪ್ರೀತಿಸುವವರು ಬಯಸುವಂತೆ ಬದುಕಲು ಪ್ರಯತ್ನಿಸುವುದನ್ನು ಪ್ರೀತಿ ಅನ್ನೋಣವೇ? ಆದರೆ ಇದು ಎರಡು ಅಲಗಿನ ಕತ್ತಿಯಂತೆ. ಪ್ರೀತಿಸುವವರನ್ನು ನಿಯಂತ್ರಿಸಲು ಪ್ರಯತ್ನಿಸುವುದು, ತಮ್ಮ ತಾಳಕ್ಕೆ ತಕ್ಕಂತೆ ಕುಣಿದರೆ ಮಾತ್ರ ಪ್ರೀತಿ ಉಂಟು ಎಂದು ವಾದ ಮಾಡುವುದು ಪ್ರೀತಿಯೋ ಅಥವಾ ವಿಷಮಯ ಮನಃಸ್ಥಿತಿಯೋ?

ತನ್ನ ಸಂಗಾತಿ ಮಾತಿನ ಮೂಲಕ, ಉಡುಗೊರೆಗಳ ಮೂಲಕ ಎಷ್ಟೇ ಪ್ರೀತಿ ತೋರಿಸಲಿ ಹುಡುಗಿಗೆ ಸಂಪೂರ್ಣವಾಗಿ ಪ್ರೀತಿಸಲ್ಪಡುತ್ತಿರುವ ಭಾವ ಬರದೇ ಹೋಗಬಹುದು. ಒಟ್ಟಿಗೆ ಬದುಕುತ್ತಿರುವಾಗ ಸಂಗಾತಿ ಮನೆಗೆಲಸಗಳನ್ನು ಹಂಚಿಕೊಂಡು ಮಾಡಿದರೆ, ತನ್ನ ಹೊರೆಯನ್ನು ಕಡಿಮೆ ಮಾಡಿದರೆ ಅದು ಅವಳಿಗೆ ಉಡುಗೊರೆಗಿಂತಲೂ ಹೆಚ್ಚು ಆಪ್ಯಾಯಮಾನ ಅನ್ನಿಸಿ, ಪ್ರೀತಿಸಲ್ಪಡುತ್ತಿರುವ ಭಾವ ಬರಬಹುದು. ಇದು ಆಕೆಯ ಪ್ರೀತಿಯ ಭಾಷೆ. ಆ ಭಾಷೆಯನ್ನು ಅರ್ಥ ಮಾಡಿಕೊಂಡು ಸಂಗಾತಿಗೆ ಅರ್ಥವಾಗುವ ಪ್ರೀತಿಯ ಭಾಷೆಯ ಭಾವ ನೀಡುವುದು ಎಷ್ಟು ಹಿತ ಅಲ್ಲವೇ!

ಪ್ರೀತಿಸುವವರನ್ನು ಬದಲಾಯಿಸಲು ಪ್ರಯತ್ನಿಸುವುದು ಪ್ರೀತಿಯ ಒಂದು ಅಭಿವ್ಯಕ್ತಿಯೋ ಅಥವಾ ಅದನ್ನು ಭಾವನಾತ್ಮಕ ಬ್ಲ್ಯಾಕ್‌ಮೇಲ್ ಅನ್ನಬಹುದೋ? ಪ್ರೀತಿಸುವವರು ಬಯಸಿದಂತೆ ನಾವು ಬದಲಾಗಿ ಅದು ಅವರಿಗೆ ಹೆಚ್ಚು ಆಪ್ತ ಭಾವ ತಂದುಕೊಟ್ಟರೆ ಹಾಗೂ ಪ್ರೀತಿಯ ಭಾಷೆ ಹೆಚ್ಚು ಸ್ಪಷ್ಟವಾದರೆ ಎಲ್ಲ ಸರಾಗವಲ್ಲವೇ? ಇದು ಬರೀ ಸಂಗಾತಿಗಳ ನಡುವಿನ ಪ್ರೀತಿಗೇ ಅನ್ವಯವಾಗಬೇಕೆಂದೇನಿಲ್ಲ. ತಮ್ಮ ಮಗುವಿಗೆ ತಾವು ಎಲ್ಲ ಸೌಲಭ್ಯಗಳನ್ನು ನೀಡುತ್ತಿದ್ದರೂ ಅದು ತಮ್ಮ ಮಾತು ಕೇಳುತ್ತಿಲ್ಲ ಎಂದು ಅನೇಕ ಪೋಷಕರು ಕೊರಗುತ್ತಾರೆ. ಆದರೆ ಆ ಮಗು ಬಯಸುವ ಹಾಗೂ ಅದಕ್ಕೆ ಅರ್ಥವಾಗುವ ಪ್ರೀತಿಯ ಭಾಷೆ ಯಾವುದು ಎನ್ನುವ ಬಗ್ಗೆ ಪೋಷಕರು ಯೋಚಿಸಿದ್ದಾರೆಯೇ? ಮಗುವಿಗೆ ಸಮಯ ನೀಡುವುದು, ಮೆಚ್ಚುಗೆಯ ಮಾತುಗಳನ್ನಾಡುವುದು ಆ ಮಗುವಿಗೆ ಬೇಕಾದ ಪ್ರೀತಿಯ ಭಾಷೆ ಆಗಿರಬಹುದು ಅಲ್ಲವೇ?



ಪ್ರೀತಿ ಮಧುರ ಎನ್ನುತ್ತಾರೆ. ಒಲವೇ ಜೀವನ ಸಾಕ್ಷಾತ್ಕಾರ ಎನ್ನುವ ಹಾಡೇ ಇದೆ. ಆದರೆ ಅನಾದಿ ಕಾಲದಿಂದಲೂ ಪ್ರೀತಿಗೆ ಜಾತಿ, ಧರ್ಮಗಳ ಗೋಡೆ ಅಡ್ಡಿಯಾಗುತ್ತಲೇ ಬಂದಿದೆ. ಇಂತಹ ಸಾಮಾಜಿಕ ಕಟ್ಟಲೆಗಳು ಹೊಂದಿಕೆಯಾದರೆ ಮಾತ್ರ ಪ್ರೀತಿ ಮಧುರ, ಇಲ್ಲದಿದ್ದರೆ ಪ್ರೀತಿಸಿದವರ ಪಾಲಿಗೆ ಪ್ರೀತಿಯೇ ಭಯಂಕರವಾದ ಹತ್ತು ಹಲವು ಉದಾಹರಣೆಗಳಿವೆ.

ನಮ್ಮ ಒಲವಿನ ಕವಿ ಕೆ.ಎಸ್.ನರಸಿಂಹಸ್ವಾಮಿ 'ಒಂದು ಹೆಣ್ಣಿಗೊಂದು ಗಂಡು ಹೇಗೊ ಸೇರಿ ಹೊಂದಿಕೊಂಡು... ದುಃಖ ಹಗುರವೆನುತಿರೆ, ಪ್ರೇಮವೆನಲು ಹಾಸ್ಯವೇ' ಎಂದು ಬರೆದಿದ್ದಾರೆ. ಇದು 'ಓಲ್ಡ್ ಸ್ಕೂಲ್ ಪ್ರೀತಿ' ಎಂದು ಕೆಲವರಿಗೆ ಅನ್ನಿಸಬಹುದು. ಆದರೆ ಇಂದಿಗೂ ಇದು ಪ್ರಸ್ತುತವಾಗಿದೆ ಹಾಗೂ ಹಲವರ ಬದುಕಿನ ದಾರಿದೀಪವೂ ಆಗಿದೆ. ಕೆಲವರಿಗೆ ಮದುವೆ ಎನ್ನುವ ವ್ಯವಸ್ಥೆಯಲ್ಲಿ ನಂಬಿಕೆ ಇಲ್ಲದಿರಬಹುದು ಹಾಗೂ ಸಾಂಪ್ರದಾಯಿಕ ಎನ್ನಬಹುದಾದ ಪ್ರೀತಿಯ ರೀತಿ ರಿವಾಜುಗಳು ಅಪ್ರಸ್ತುತ ಅನ್ನಿಸಬಹುದು. 'ಅವರವರ ಭಾವಕ್ಕೆ, ಅವರವರ ಭಕುತಿಗೆ' ಎನ್ನುವಂತೆ ಚಿಂತನೆಯ ವಿವಿಧ ಹರಿವುಗಳನ್ನು ಕುತೂಹಲದಿಂದ ನೋಡಬೇಕೇ ವಿನಾ ಭಿನ್ನ ಚಿಂತನೆಯೆಡೆ ಅಸಹನೆ ಬೆಳೆಸಿಕೊಳ್ಳುವುದು ತರವಲ್ಲ.

ಪ್ರೀತಿಯ ಬಗ್ಗೆ ಇಷ್ಟೆಲ್ಲಾ ಚಿಂತನ– ಮಂಥನ ನಡೆಸಿದ ಬಳಿಕ ಕೊನೆಗೂ ಪ್ರೀತಿ ಎಂದರೇನು ಎನ್ನುವುದರ ಸ್ಪಷ್ಟ ವ್ಯಾಖ್ಯಾನ ಸಾಧ್ಯವಿಲ್ಲವೇನೊ. ಆದರೂ ನೋವಿರುವ ಹಲ್ಲಿನೆಡೆಗೆ ನಾಲಿಗೆ ಹೊರಳುವಂತೆ ಮನುಷ್ಯ ಮತ್ತೆ ಮತ್ತೆ ಪ್ರೀತಿಯೆಡೆಗೆ ಹೊರಳುವುದು ಅನಿವಾರ್ಯ!

ವಾಚಕರ ವಾಣಿ

ಕನ್ನಡದ ಗಿಡ: ಬೇರಿಗೆ ನೀರೆರೆಯಬೇಕಿದೆ

'ಭಾಷೆ ಬೆಳೆಯಲು ಬೇಕಿರುವುದು ಭಾವುಕ ಆವೇಶವಲ್ಲ, ಬೇಕಿರುವುದು ನಮ್ಮ ಬದುಕು, ಪರಂಪರೆ, ಸಂಸ್ಕೃತಿ ಎಂಬ ಅರಿವಿನ ಇಚ್ಛಾಶಕ್ತಿ' ಎಂದು ಪ್ರೊ. ಎಸ್.ಜಿ.ಸಿದ್ಧರಾಮಯ್ಯ ಅವರು ತಮ್ಮ ಲೇಖನದಲ್ಲಿ ಹೇಳಿರುವುದು (ಪ್ರ.ವಾ., ಫೆ. 10) ಅರ್ಥಪೂರ್ಣವಾಗಿದೆ. ಸಾಹಿತ್ಯ ಸಮ್ಮೇಳನಗಳು, ರಾಜ್ಯೋತ್ಸವ ಆಚರಣೆಯಂತಹ ಕಾರ್ಯಕ್ರಮಗಳು ಒಂದೆಡೆ ಜೋರಾಗಿ ನಡೆಯುತ್ತವೆ. ಮತ್ತೊಂದೆಡೆ, ಕನ್ನಡ ಮಾಧ್ಯಮ ಶಾಲೆಗಳಲ್ಲಿ ಮಕ್ಕಳ ಸಂಖ್ಯೆ ದಿನೇ ದಿನೇ ಕಡಿಮೆಯಾಗುತ್ತಲೇ ಇದೆ. ಬೆಂಗಳೂರಿನಲ್ಲಷ್ಟೇ ಅಲ್ಲ ತಾಲ್ಲೂಕು ಕೇಂದ್ರಗಳಲ್ಲಿಯೂ ಕನ್ನಡ ಮಾತನಾಡಿದರೆ ಅವಮಾನವೆನ್ನುವ ವಾತಾವರಣ ಸೃಷ್ಟಿಯಾಗಿ ಕನ್ನಡ ಕೂಸು ಬಡವಾಗುತ್ತಿರುವ ಸತ್ಯ ಮರೆಯಾಗಿದೆ. ಹಾಗಾಗಿ, ಕನ್ನಡವೆಂಬ ಗಿಡದ ಹೂವಿನ ದಳಗಳಿಗೆ ನೀರು ಸಿಂಪಡಿಸುತ್ತಾ, ಬೇರಿಗೆ ನೀರೆರೆಯುವುದನ್ನು ಮರೆಯುತ್ತಿದ್ದೇವೆ.

ಜಾಗತೀಕರಣವೆಂಬ ವಿದ್ಯಮಾನ ನಮ್ಮ ಶಿಕ್ಷಣ ಮತ್ತು ಸಂಸ್ಕೃತಿಯನ್ನು ಬದಲಾಯಿಸುತ್ತಿರುವಂತೆ ನಮ್ಮ ಮನೋಭಾವವನ್ನೂ ಬದಲಾಯಿಸಿರುವುದು ಇದಕ್ಕೆ ಕಾರಣವಿರಬಹುದು. ಯಾವ ಭಾಷೆಯನ್ನೂ ಸ್ಪಷ್ಟವಾಗಿ ಕಲಿಯದ ನವಪೀಳಿಗೆಯೊಂದು ನಮ್ಮ ಶಾಲೆ ಕಾಲೇಜುಗಳಲ್ಲಿ ತಯಾರಾಗುತ್ತಿರುವುದು ವಿಪರ್ಯಾಸ. ಜಾಗತೀಕರಣಕ್ಕೆ ಮುಖಾಮುಖಿಯಾಗಲು ಇಂಗ್ಲಿಷ್ ಕುದುರೆ ಏರುವುದು ಅನಿವಾರ್ಯ ಎಂಬ ಭ್ರಮೆಯಲ್ಲಿ ನಮ್ಮ ಸಂಸ್ಕೃತಿ, ಪರಂಪರೆ ಮತ್ತು ಭಾಷೆ ಅದರ ಕಾಲ್ತುಳಿತಕ್ಕೆ ಸಿಕ್ಕಿ ನರಳುತ್ತಿವೆ. ಆದರೂ ನಾವು ಸುಮ್ಮನಿರುವುದು ಆತ್ಮಘಾತುಕತನ. ಈ ಕುರಿತು ಸಾರ್ವಜನಿಕರ ಪ್ರಜ್ಞೆ ಜಾಗೃತವಾದಾಗ ಮಾತ್ರ ಕನ್ನಡ ಅಳಿಯದೆ ಉಳಿಯಬಲ್ಲದು.

ರೇವಣ್ಣ ಎಂ.ಜಿ., ಕೃಷ್ಣರಾಜಪೇಟೆ

ಗಾಯದ ಮೇಲೆ ಬರೆ...

ಬೆಲೆ ಏರಿಕೆಯ ಗಾಯಗಳ ಮೇಲೆ 'ನಮ್ಮ ಮೆಟ್ರೊ' ಪ್ರಯಾಣ ದರ ಏರಿಕೆಯು ಮತ್ತೊಂದು ಬರೆಯಂತೆ ಕಾಣುತ್ತಿದೆ. ಮೆಟ್ರೊ ಯೋಜನೆಯ ಹಿಂದೆ ನಗರದ ಟ್ರಾಫಿಕ್ ದಟ್ಟಣೆ ಮತ್ತು ಮಾಲಿನ್ಯವನ್ನು ಕಡಿಮೆ ಮಾಡುವ ಆಲೋಚನೆಗಳು ಇದ್ದವು. ಆದರೆ ಪ್ರಯಾಣದ ದರವನ್ನು ಈಗ ಏಕಾಏಕಿ ದುಪ್ಪಟ್ಟು ಮಾಡಿರುವುದರಿಂದ ಅಸಂಘಟಿತ ವಲಯದ ನೌಕರರು ಸೇರಿದಂತೆ ಶಾಲಾ ಕಾಲೇಜು ವಿದ್ಯಾರ್ಥಿಗಳಿಗೆ, ಜನಸಾಮಾನ್ಯರಿಗೆ ಸಮಸ್ಯೆ ಉಂಟಾಗಿದೆ. ಜನರ ಈ ಸಂಕಷ್ಟಕ್ಕೆ ಪೂರಕವಾಗಿ ಸ್ಪಂದಿಸಬೇಕಾಗಿದ್ದ ನಮ್ಮ ಜನಪ್ರತಿನಿಧಿಗಳು ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರದ ಹೆಸರಿನಲ್ಲಿ ಪರಸ್ಪರ ಕೆಸರೆರಚಾಟಕ್ಕೆ ಇಳಿದಿರುವುದು ದುರಂತ.

ಸಮೀರ ಗೌಡ ಎಂ.ಎನ್., ಮುತ್ತುಗದಹಳ್ಳಿ

ಬಾಲವನದಲ್ಲಿ ಇಲ್ಲ ಮಕ್ಕಳ ಕಲರವ

ಪುತ್ತೂರಿನಲ್ಲಿರುವ ಕೋಟ ಶಿವರಾಮ ಕಾರಂತರ ಬಾಲವನ ಇತ್ತೀಚೆಗೆ ಸಾಹಿತ್ಯ, ಸಂಗೀತ, ಯಕ್ಷಗಾನ, ನಾಟಕ, ಮಕ್ಕಳ ಚಟುವಟಿಕೆಗಳಿಲ್ಲದೆ ಸೊರಗಿದೆ. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸುಪರ್ದಿಯಲ್ಲಿರುವ ಬಾಲವನದಲ್ಲಿ ಪ್ರತಿವಾರವೂ ಸಾಹಿತ್ಯಾಸಕ್ತಿಯನ್ನು ಪ್ರೇರೇಪಿಸುವ, ಕಾರಂತರ ಕೃತಿಗಳ ಅವಲೋಕನ ಮಾಡುವ ಕಾರ್ಯಕ್ರಮಗಳನ್ನು ಏರ್ಪಡಿಸುತ್ತಿಲ್ಲ. ಬಾಲವನ ಪ್ರಶಸ್ತಿಯನ್ನು ಪ್ರಕಟಿಸಿಲ್ಲ. ಅಧಿಕಾರಿಗಳ ಅಸಡ್ಡೆ ಮತ್ತು ನಿರ್ಲಕ್ಷ್ಯ ಕಂಡುಬರುತ್ತಿದೆ. ಇಲಾಖೆಯು ಸಾಹಿತ್ಯಾಸಕ್ತರೊಂದಿಗೆ ಸಮಾಲೋಚಿಸಿ ವಾರ್ಷಿಕ ಚಟುವಟಿಕೆಗಳ ವೇಳಾಪಟ್ಟಿ ಸಿದ್ಧಪಡಿಸಬೇಕು. ಆಗ ಬಾಲವನದತ್ತ ಸಾರ್ವಜನಿಕರು, ಮಕ್ಕಳು ಬರುತ್ತಾರೆ.

ಎಸ್.ಎನ್.ಅಮೃತ, ಪುತ್ತೂರು

ನಮಗೆಲ್ಲರಿಗೂ ಬೇಕು ಪುಣ್ಯ!

ಪುಣ್ಯಸ್ನಾನ ಕುರಿತಾದ ವಿಷಯ ಈಗ ಎಲ್ಲೆಡೆ ಸದ್ದು ಮಾಡುತ್ತಿದೆ. ಒಟ್ಟಿನಲ್ಲಿ ನಾವೆಲ್ಲರೂ ಪುಣ್ಯವನ್ನು ಬಯಸುವವರೇ ಆಗಿದ್ದೇವೆ. ಪಾಪ- ಪುಣ್ಯದ ಬಗೆಗಿನ 12ನೇ ಶತಮಾನದ ವಚನಕಾರ ಸಿದ್ಧರಾಮೇಶ್ವರ ಅವರ ವಚನವೊಂದು ತುಂಬಾ ಮಾರ್ಮಿಕ ಮತ್ತು ವಿಡಂಬನಾತ್ಮಕವಾದ ಧಾಟಿಯಲ್ಲಿದೆ. ಈ ಎರಡರ ನಡುವಿನ ಅಂತರವನ್ನು ಅವರು ತುಂಬಾ ಸರಳವಾದ ಶೈಲಿಯಲ್ಲಿ ರಚಿಸಿದ್ದಾರೆ. ಅದು ಹೀಗಿದೆ: 'ಪುಣ್ಯವ ಮಾಡಬೇಕೆಂದು ಮರುಗಬೇಡ, ಪಾಪವ ಮಾಡದಿದ್ದಡೆ ಪುಣ್ಯ ದಿಟ...' ಸತ್ಯ-ಮಿಥ್ಯ, ನಂಬಿಕೆ-ಅಪನಂಬಿಕೆ, ಸ್ವರ್ಗ-ನರಕ, ಪಾಪ-ಪುಣ್ಯ ಇವುಗಳ ನಡುವಣ ಸಂಘರ್ಷ ದೀರ್ಘಕಾಲದಿಂದಲೂ ನಡೆದುಬಂದಿದೆ. ಉತ್ತರ ಕಾಣುವ ಸಂದರ್ಭದಲ್ಲಿ ನಾವಿದ್ದೇವೆ ಎಂದೆನಿಸುತ್ತದೆ. ಕಾರಣ, ನಾವೆಲ್ಲಾ ಜಾಣರು!

ರುದ್ರಮೂರ್ತಿ ಎಂ.ಜೆ., ಚಿತ್ರದುರ್ಗ

ಸೈಕಲ್ ಪಥ: ಬದಲಾಗಲಿ ಆದ್ಯತೆ

ದೇಶದಲ್ಲಿ ಸೈಕಲ್‌ಗಳಿಗೆ ಪ್ರತ್ಯೇಕವಾದ ಪಥ ಇರಬೇಕು ಎಂಬ ಅರ್ಜಿ ವಿಚಾರಣೆ ಸಂದರ್ಭದಲ್ಲಿ ಸುಪ್ರೀಂ ಕೋರ್ಟ್ 'ಕೈಗೆಟಕುವ ದರದಲ್ಲಿ ಮನೆ ಒದಗಿಸಲು ಸರ್ಕಾರಗಳ ಬಳಿ ಹಣವಿಲ್ಲ, ಜನರಿಗೆ ಕುಡಿಯಲು ಶುದ್ಧ ನೀರು ಸಿಗುತ್ತಿಲ್ಲ... ಹೀಗಿರುವಾಗ ನೀವು ಸೈಕಲ್‌ಗಳಿಗಾಗಿ ಪ್ರತ್ಯೇಕ ಪಥ ಹೊಂದುವ ಹಗಲುಗನಸು ಕಾಣುತ್ತಿದ್ದೀರಿ' ಎಂದು ಪ್ರತಿಕ್ರಿಯಿಸಿರುವುದು ಸಮಂಜಸವಾಗಿದೆ (ಪ್ರ.ವಾ., ಫೆ. 11).

ಸೈಕಲ್‌ಗಳಿಗೆ ಪ್ರತ್ಯೇಕ ಪಥ ನಿರ್ಮಾಣದ ಯೋಚನೆಯನ್ನು ಅಭಿವೃದ್ಧಿಯ ತುತ್ತತುದಿಯಲ್ಲಿರುವ ರಾಷ್ಟ್ರಗಳು ಮಾಡಿದರೆ ಚೆನ್ನಾಗಿರುತ್ತದೆ. ಮೂಲ ಸಮಸ್ಯೆಗಳಿಗೆ ಸೂಕ್ತ ಪರಿಹಾರ ಇಲ್ಲದ ದೇಶದಲ್ಲಿ ಅಂತಹ ಪಥ ನಿರ್ಮಿಸುವುದು, ಭದ್ರ ಬುನಾದಿಯೇ ಇಲ್ಲದ ಕಳಪೆ ಕಟ್ಟಡದ ಮೇಲೆ ಸುಂದರವಾದ ಬಣ್ಣ ಹಚ್ಚಿದಂತೆ. ಕಸದ ರಾಶಿ, ಶೌಚಾಲಯಗಳ ಕೊರತೆ, ಕುಡಿಯುವ ನೀರಿನ ಸಮಸ್ಯೆಯಂತಹ ಗಂಭೀರ ವಿಷಯಗಳಲ್ಲಿ ಪರಿಹಾರ ದೊರಕಿದರೆ ಮಾತ್ರ ಸಮಗ್ರ ಅಭಿವೃದ್ಧಿಯ ಸಂಕಲ್ಪ ಯಶಸ್ವಿಯಾಗುತ್ತದೆ. ಆಗ ಸೈಕಲ್‌ಗಳಿಗಷ್ಟೇ ಯಾಕೆ ಸಾಕುಪ್ರಾಣಿಗಳಿಗೂ ಪ್ರತ್ಯೇಕ ಪಥ ನಿರ್ಮಾಣ ಮಾಡಬಹುದು.

ಮಂಜುನಾಥ್ ಹಾಲವರ್ತಿ, ಕೊಪ್ಪಳ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. To know more about The Printers (Mysore) Private Ltd, visit www.printersmysore.com.

ನರೇಂದ್ರ ಮೋದಿ–ಡೊನಾಲ್ಡ್ ಟ್ರಂಪ್ ‘ಸುಂಕ’ದ ಮಾತುಕತೆ



ಅಮೆರಿಕ ಹಾಗೂ ಭಾರತ ಎರಡೂ ಪ್ರಬಲ ರಾಷ್ಟ್ರಗಳು. ಜಗತ್ತಿನ ದೊಡ್ಡಣ್ಣನಂತಿರುವ ಅಮೆರಿಕದೊಂದಿಗಿನ ಸಂಬಂಧ ಭಾರತಕ್ಕೆ ಮುಖ್ಯವಾಗಿದ್ದರೆ, ಜಗತ್ತಿನಲ್ಲೇ ಅತಿ ಹೆಚ್ಚು ಜನಸಂಖ್ಯೆ ಇರುವ ಭಾರತ, ಅಮೆರಿಕಕ್ಕೆ ಮುಖ್ಯ ಮಾರುಕಟ್ಟೆ. ವ್ಯಾಪಾರ ಸಂಘರ್ಷದ ನಡುವೆಯೂ ಎರಡು ದೇಶಗಳ ನಡುವೆ ಉತ್ತಮ ಸಂಬಂಧ ಇದೆ. ಇಷ್ಟಾದರೂ, ಹಟಮಾರಿ ಧೋರಣೆಯ ಟ್ರಂಪ್ ಅವರೊಂದಿಗೆ ಮೋದಿ ಅವರ ಮಾತುಕತೆಯಿಂದ ಸುಂಕ, ವಲಸೆ, ವ್ಯಾಪಾರ ಮುಂತಾದ ವಲಯಗಳಲ್ಲಿ ಭಾರತಕ್ಕೆ ಎಷ್ಟರಮಟ್ಟಿಗೆ ಅನುಕೂಲವಾಗಲಿದೆ ಎನ್ನುವ ಕುತೂಹಲ ಜನರಲ್ಲಿದೆ



2017ರಲ್ಲಿ ಶ್ವೇತಭವನದಲ್ಲಿ ಮೋದಿ ಮತ್ತು ಟ್ರಂಪ್ ಭೇಟಿಯಾದ ಸಂದರ್ಭ

ಪ್ರಜಾವಾಣಿ ವಾರ್ತೆ

ಪ್ರಧಾನಿ ನರೇಂದ್ರ ಮೋದಿ ಅವರು ಶ್ವೇತಭವನದಲ್ಲಿ ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರನ್ನು ಗುರುವಾರ (ಸ್ಥಳೀಯ ಕಾಲಮಾನ) ಭೇಟಿಯಾಗಲಿದ್ದಾರೆ. ಟ್ರಂಪ್ ಅವರೊಂದಿಗೆ ವ್ಯಾಪಾರ, ಸುಂಕ ಕಡಿತ, ಇಂಧನ ಮುಂತಾದ ವಿಚಾರಗಳ ಬಗ್ಗೆ ದ್ವಿಪಕ್ಷೀಯ ಮಾತುಕತೆ ನಡೆಸುವುದು ಭೇಟಿಯ ಪ್ರಮುಖ ಉದ್ದೇಶ. ಜತೆಗೆ, ಮೋದಿ ಅವರು ಟ್ರಂಪ್ ಸಂಪುಟದ ಕೆಲವು ಸಚಿವರು, ಉದ್ಯಮಿಗಳು ಮತ್ತು ಭಾರತೀಯ ಅಮೆರಿಕನ್ ಸಮುದಾಯದ ಪ್ರತಿನಿಧಿಗಳನ್ನೂ ಭೇಟಿಯಾಗಲಿದ್ದಾರೆ.

ಟ್ರಂಪ್ ಅಧಿಕಾರ ಸ್ವೀಕಾರ ಮಾಡಿದ ಮಾರನೇ ದಿನ (ಜ.21) ಭಾರತದ ವಿದೇಶಾಂಗ ಸಚಿವ ಜೈಶಂಕರ್ ಅವರು ಅಮೆರಿಕದ ವಿದೇಶಾಂಗ ಕಾರ್ಯದರ್ಶಿ ಮಾರ್ಕೊ ರುಬಿಯೊ ಅವರೊಂದಿಗೆ ದ್ವಿಪಕ್ಷೀಯ ಮಾತುಕತೆ ನಡೆಸಿದ್ದರು. ಅದೇ ದಿನ ಕ್ವಾಡ್ ರಾಷ್ಟ್ರಗಳ ಸಭೆಯೂ ನಡೆದಿತ್ತು. ಟ್ರಂಪ್ ಅವರು ಎರಡನೇ ಬಾರಿ ಅಮೆರಿಕ ಅಧ್ಯಕ್ಷರಾಗಿ ಅಧಿಕಾರ ಸ್ವೀಕರಿಸಿದ ತಿಂಗಳ ಒಳಗಾಗಿ ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು, ಜಪಾನ್ ಪ್ರಧಾನಿ ಶಿಗೆರು ಇಶಿಬಾ ಮತ್ತು ಜೋರ್ಡನ್ ದೊರೆ ಎರಡನೇ ಅಬ್ದುಲ್ಲಾ ಅವರು ಶ್ವೇತಭವನಕ್ಕೆ ಭೇಟಿ ನೀಡಿದ್ದರು. ಅಮೆರಿಕಕ್ಕೆ ಭೇಟಿ ನೀಡುತ್ತಿರುವ ಜಾಗತಿಕ ನಾಯಕರ ಪೈಕಿ ಮೋದಿ ನಾಲ್ಕನೆಯವರು.

‘ಇದು ಟ್ರಂಪ್ ಅವರು ಭಾರತಕ್ಕೆ ನೀಡುತ್ತಿರುವ ಮಹತ್ವವನ್ನು ತೋರಿಸುತ್ತದೆ’ ಎಂದು ಶ್ವೇತಭವನ ಮಾಜಿ ಅಧಿಕಾರಿ ಲೀಸಾ ಕರ್ಟಿಸ್ ಹೇಳಿದ್ದಾರೆ. ಹಿಂದೂ ಮಹಾಸಾಗರ–ಪೆಸಿಫಿಕ್ ಪ್ರದೇಶದಲ್ಲಿ ಭಾರತದ ಪಾತ್ರವು ಮಹತ್ವದ್ದಾಗಿದ್ದು, ಚೀನಾದೊಂದಿಗಿನ ಪೈಪೋಟಿಯಲ್ಲಿ ಅಮೆರಿಕದ ಪ್ರಮುಖ ಮಿತ್ರ ರಾಷ್ಟ್ರವಾಗಿದೆ ಎಂದೂ ಅವರು ಹೇಳಿದ್ದಾರೆ.

ಈ ಭೇಟಿ ಹಲವು ಕಾರಣಗಳಿಗೆ ಮಹತ್ವದ್ದಾಗಿದೆ. ಇದು ಎರಡೂ ರಾಷ್ಟ್ರಗಳ ನಡುವಿನ ದ್ವಿಪಕ್ಷೀಯ ಸಂಬಂಧಕ್ಕೆ ಹೊಸ ದಿಕ್ಕು ತೋರಲಿದೆ ಎಂದು ಹೇಳಲಾಗುತ್ತಿದೆ. ‘ಅಮೆರಿಕವೇ ಮೊದಲು’ ನೀತಿ ಪ್ರತಿಪಾದಕ ಡೊನಾಲ್ಡ್ ಟ್ರಂಪ್ ಅವರ ಸುಂಕ ಹೇರುವ ಬೆದರಿಕೆ ನಡುವೆ ಈ ಭೇಟಿ ನಡೆಯುತ್ತಿರುವುದು ಭಾರಿ ನಿರೀಕ್ಷೆ ಹುಟ್ಟುಹಾಕಿದೆ.

ಭಾರತವು ತನ್ನ ವಸ್ತುಗಳಿಗೆ ಹೆಚ್ಚು ಸುಂಕ ವಿಧಿಸುತ್ತದೆ ಎನ್ನುವುದು ಟ್ರಂಪ್ ಅವರ ಮುಖ್ಯ ತಕರಾರು. ಜೊತೆಗೆ ಭಾರತ ತನ್ನನ್ನು ಬಿಟ್ಟು ರಷ್ಯಾದಿಂದ ಕಚ್ಚಾ ತೈಲ ಖರೀದಿಸುತ್ತಿರುವುದು ಕೂಡ ಅದರ ಕಣ್ಣು ಕೆಂಪಾಗಿಸಿದೆ. ಈ ವಿಚಾರಗಳೇ ಮಾತುಕತೆ ಸಂದರ್ಭದಲ್ಲಿ ಪ್ರಮುಖವಾಗಿ ಚರ್ಚೆಗೆ ಬರಲಿವೆ ಎಂದು ಹೇಳಲಾಗುತ್ತಿದೆ.

ಚೀನಾ ವಿಚಾರವೂ ಮಾತುಕತೆಯಲ್ಲಿ ಪ್ರಸ್ತಾಪವಾಗಲಿದೆ. ಅಮೆರಿಕದೊಂದಿಗೆ ಹಲವು ಕ್ಷೇತ್ರಗಳಲ್ಲಿ ತೀವ್ರ ಪೈಪೋಟಿ ನಡೆಸುತ್ತಿರುವ ಚೀನಾದೊಂದಿಗೆ ಭಾರತದ ಸಂಬಂಧವೂ ಅಷ್ಟಕ್ಕಷ್ಟೇ. ಚೀನಾವನ್ನು ಸಮರ್ಥವಾಗಿ ಎದುರಿಸಲು ಭಾರತದೊಂದಿಗೆ ಉತ್ತಮ ಸಂಬಂಧ ಹೊಂದುವುದು ಅಗತ್ಯ ಎಂಬುದನ್ನು ಅಮೆರಿಕ ಮನಗಂಡಿದೆ. ಹೀಗಾಗಿ, ಚೀನಾವನ್ನು ಎದುರಿಸುವ ಮಾರ್ಗಗಳ ಬಗ್ಗೆ ಚರ್ಚೆ ನಡೆಯಲಿದೆ. ಜಗತ್ತಿನ ಹಲವು ರಾಷ್ಟ್ರಗಳ ಚೀನಾ ಮೇಲಿನ ಅವಲಂಬನೆ ಕಡಿಮೆ ಮಾಡುವ ನಿಟ್ಟಿನಲ್ಲಿಯೂ ಈ ಭೇಟಿ ಮಹತ್ವದ್ದು ಎನ್ನುವ ವಿಶ್ಲೇಷಣೆ ಇದೆ.

ಉಕ್ರೇನ್ ಹಾಗೂ ಗಾಜಾದಲ್ಲಿ ನಡೆಯುತ್ತಿರುವ ಯುದ್ಧಗಳನ್ನು ನಿಲ್ಲಿಸುವ ವಿಚಾರದಲ್ಲಿ ಭಾರತದ ಪಾತ್ರದ ಬಗ್ಗೆಯೂ ಮಾತುಕತೆಯಲ್ಲಿ ಪ್ರಸ್ತಾಪವಾಗುವ ಸಂಭವ ಇದೆ. ಮಧ್ಯ ಏಷ್ಯಾದೊಂದಿಗೆ ಉತ್ತಮ ಸಂಪರ್ಕ ವ್ಯವಸ್ಥೆ ರೂಪಿಸಿಕೊಳ್ಳುವುದರ ಭಾಗವಾಗಿ ಭಾರತವು ಇರಾನಿನ ಛಾಬಹಾರ್‌ನಲ್ಲಿ ಬಂದರು ನಿರ್ಮಾಣ ಮಾಡುತ್ತಿದೆ. ಆದರೆ, ಇದನ್ನು ಅಮೆರಿಕ ವಿರೋಧಿಸುತ್ತಿದ್ದು, ಭಾರತದ ವಿರುದ್ಧ ನಿರ್ಬಂಧ ಹೇರುವ ಬೆದರಿಕೆ ಹಾಕಿದೆ. ಈ ವಿಚಾರವೂ ಮೋದಿ–ಟ್ರಂಪ್ ಭೇಟಿಯಲ್ಲಿ ಚರ್ಚೆಯಾಗಬಹುದು.

ವ್ಯಾಪಾರ ಸಂಘರ್ಷದ ಹೊರತಾಗಿಯೂ ಎರಡೂ ದೇಶಗಳ ಸಂಬಂಧ ಉತ್ತಮವಾಗಿದೆ. ಆದರೆ, ಈ ಬಾರಿ ಟ್ರಂಪ್ ಅವರು ಭಾರತದಿಂದ ಹೆಚ್ಚಿನ ನಿರೀಕ್ಷೆಗಳನ್ನು ಹೊಂದಿದ್ದಾರೆ. ಭಾರತವು ಸುಂಕ ಕಡಿತಗೊಳಿಸಬೇಕು ಎನ್ನುವುದು ಟ್ರಂಪ್ ಅವರ ಬಯಕೆ ಆಗಿದೆ. ಅವರ ಇಂಥ ಬೇಡಿಕೆಗಳಿಗೆ ಮೋದಿ ಅವರು ಎಷ್ಟರಮಟ್ಟಿಗೆ ಸಮ್ಮತಿಸುತ್ತಾರೆ ಎನ್ನುವುದನ್ನು ನೋಡಬೇಕಿದೆ.

ಆಧಾರ: ಪಿಟಿಐ, ಬಿಬಿಸಿ, ದಿ ನ್ಯೂಯಾರ್ಕ್ ಟೈಮ್ಸ್, ದಿ ಡಿಪ್ಲೊಮಾಟ್

ಚರ್ಚೆಯ ಸಂಭಾವ್ಯ ವಿಷಯಗಳು

ವ್ಯಾಪಾರ, ಸುಂಕ: ಟ್ರಂಪ್ ಮತ್ತು ಮೋದಿ ಭೇಟಿ ವೇಳೆ ದ್ವಿಪಕ್ಷೀಯ ವ್ಯಾಪಾರ ಮತ್ತು ಸರಕುಗಳ ಮೇಲೆ ವಿಧಿಸಲಾಗುತ್ತಿರುವ ಸುಂಕದ ವಿಚಾರಗಳು ಪ್ರಮುಖವಾಗಿ ಚರ್ಚೆಗೆ ಬರುವ ಸಾಧ್ಯತೆ ಇದೆ.

ಉಭಯ ದೇಶಗಳ ನಡುವಣ ವ್ಯಾಪಾರ ಸಂಬಂಧ ಉತ್ತಮವಾಗಿದ್ದು, 2023–24ರಲ್ಲಿ ₹10 ಲಕ್ಷ ಕೋಟಿ ಮೌಲ್ಯದ ವಹಿವಾಟು ನಡೆದಿದೆ. ಭಾರತವು ಅಮೆರಿಕದಿಂದ ಖರೀದಿಸುವುದಕ್ಕಿಂತಲೂ ಹೆಚ್ಚು ಸರಕುಗಳನ್ನು ಅಮೆರಿಕವು ಭಾರತದಿಂದ ಆಮದು ಮಾಡಿಕೊಳ್ಳುತ್ತಿದೆ. ಭಾರತದೊಂದಿಗೆ ಅದರ ವ್ಯಾಪಾರ ಕೊರತೆ ₹3 ಲಕ್ಷ ಕೋಟಿಗೂ ಹೆಚ್ಚು ಇದೆ. ಬಹುತೇಕ ಎಲ್ಲ ರಾಷ್ಟ್ರಗಳಿಗೂ, ಆಮದು ಮಾಡುವ ಸರಕುಗಳ ಮೊತ್ತಕ್ಕಿಂತಲೂ ಹೆಚ್ಚು ಮೊತ್ತದ ಸರಕುಗಳನ್ನು ರಫ್ತು ಮಾಡುವ ಅಮೆರಿಕ ಭಾರತದೊಂದಿಗೆ ಮಾತ್ರ ವ್ಯಾಪಾರ ಕೊರತೆಯನ್ನು ಹೊಂದಿದ್ದು, ಟ್ರಂಪ್ ಅವರಿಗೆ ಇದು ಕಿರಿಕಿರಿ ತಂದಿದೆ ಎನ್ನಲಾಗುತ್ತಿದೆ. ಹಾಗಾಗಿ, ಅಮೆರಿಕದಿಂದ ಇನ್ನಷ್ಟು ಹೆಚ್ಚು ಸರಕುಗಳನ್ನು ಆಮದು ಮಾಡಿಕೊಳ್ಳುವಂತೆ ಭಾರತದ ಮೇಲೆ ಅವರು ಒತ್ತಡ ಹಾಕಬಹುದು.

ಭಾರತವು 2021ರವರೆಗೆ ಅಮೆರಿಕದಿಂದ ಹೆಚ್ಚು ಕಚ್ಚಾ ತೈಲವನ್ನು ಖರೀದಿ ಮಾಡುತ್ತಿತ್ತು. ರಷ್ಯಾವು ಉಕ್ರೇನ್ ಮೇಲೆ ಸಮರ ಸಾರಿದ ಕಾರಣಕ್ಕೆ ಅಮೆರಿಕವು ರಷ್ಯಾ ಮೇಲೆ ನಿರ್ಬಂಧ ಹೇರಿದ ನಂತರ ಭಾರತವು ರಷ್ಯಾದಿಂದ ಕಡಿಮೆ ಬೆಲೆಗೆ ತೈಲ ಖರೀದಿಸುತ್ತಿದೆ. ಇದು ಅಮೆರಿಕಕ್ಕೆ ಸಮಾಧಾನ ತಂದಿಲ್ಲ. ಮಾತುಕತೆ ಸಂದರ್ಭದಲ್ಲಿ ಟ್ರಂಪ್ ಅವರು ತೈಲ ಮತ್ತು ಅನಿಲವನ್ನು ಹೆಚ್ಚು ಖರೀದಿಸುವಂತೆ ಮೋದಿಯವರಿಗೆ ಹೇಳುವ ಸಾಧ್ಯತೆ ಇದೆ ಎನ್ನಲಾಗುತ್ತಿದೆ.

ಆಮದು ಮಾಡಿಕೊಳ್ಳುವ ಉತ್ಪನ್ನಗಳ ಮೇಲೆ ವಿಧಿಸಲಾಗುತ್ತಿರುವ ಸುಂಕದ ವಿಚಾರ ಇಬ್ಬರ ನಡುವೆ ಚರ್ಚೆಗೆ ಬರುವುದು ನಿಚ್ಚಳವಾಗಿದೆ. ಅಮೆರಿಕದ ಉತ್ಪನ್ನಗಳಿಗೆ ಭಾರತ ಹೆಚ್ಚು ಸುಂಕ ವಿಧಿಸುತ್ತಿದೆ ಎಂದು ಹೇಳುತ್ತಲೇ ಬಂದಿರುವ ಟ್ರಂಪ್, ಭಾರತವು ರಫ್ತು ಮಾಡುವ ಸರಕುಗಳ ಮೇಲೆ ಹೆಚ್ಚು ಸುಂಕ ವಿಧಿಸುವ ತನ್ನ ಉದ್ದೇಶವನ್ನು ಸದ್ಯಕ್ಕೆ ಮುಂದೂಡಿದ್ದಾರೆ. ಅಮೆರಿಕ ವಿಧಿಸಬಹುದಾದ ಹೆಚ್ಚುವರಿ ಸುಂಕದ ಹೊರೆಯನ್ನು ತಪ್ಪಿಸಲು ಭಾರತವೂ ಬಯಸುತ್ತಿದೆ. ಟ್ರಂಪ್ ಅವರು ಈ ಸುಂಕಗಳನ್ನು ಇನ್ನಷ್ಟು ಕಡಿತ ಮಾಡುವಂತೆ ಮೋದಿಯವರನ್ನು ಒತ್ತಾಯಿಸಬಹುದು ಎಂದೂ ಹೇಳಲಾಗುತ್ತಿದೆ.

ಅಕ್ರಮ ವಲಸಿಗರು, ಎಚ್‌1ಬಿ ವೀಸಾ: ಅಮೆರಿಕದಲ್ಲಿರುವ ಭಾರತದ ಅಕ್ರಮ ವಲಸಿಗರ ವಿಚಾರವೂ ಚರ್ಚೆಗೆ ಬರುವ ಸಾಧ್ಯತೆ ದಟ್ಟವಾಗಿದೆ. ಅಕ್ರಮ ವಲಸಿಗರನ್ನು ಅವರ ದೇಶಕ್ಕೆ ಕಳುಹಿಸುತ್ತಿರುವ ಟ್ರಂಪ್ ಸರ್ಕಾರ, ಭಾರತದಿಂದ ಅಮೆರಿಕಕ್ಕೆ ಹೋಗಿದ್ದ 104 ಅಕ್ರಮ ವಲಸಿಗರನ್ನು ಭಾರತಕ್ಕೆ ವಾರದ ಹಿಂದೆ ತಂದು ಬಿಟ್ಟಿತ್ತು. ಅಮೆರಿಕದಲ್ಲಿ ಭಾರತದ 7.25 ಲಕ್ಷ ಅಕ್ರಮ ವಲಸಿಗರು ಇದ್ದಾರೆ ಎಂದು ಹೇಳಲಾಗಿದ್ದು, ಮಾತುಕತೆಯ ವೇಳೆ ಟ್ರಂಪ್ ಈ ವಿಷಯವನ್ನು ಪ್ರಸ್ತಾಪಿಸಿ, ಅಕ್ರಮ ವಲಸಿಗರನ್ನು ವಾಪಸ್ ಕರೆಸಿಕೊಳ್ಳಿ ಎಂದು ಕೇಳಿಕೊಳ್ಳುವ ಸಾಧ್ಯತೆ ಇದೆ.

ಎಚ್‌1ಬಿ ವೀಸಾ ನಿಯಮಗಳನ್ನು ಬಿಗಿಗೊಳಿಸಲು ಟ್ರಂಪ್ ಆಡಳಿತ ಮುಂದಾಗಿದ್ದು, ಇದರಿಂದಾಗಿ ಅತಿ ಹೆಚ್ಚಿನ ಸಂಖ್ಯೆಯಲ್ಲಿ ಈ ವೀಸಾ ಪಡೆಯುತ್ತಿರುವ ಭಾರತೀಯರಿಗೆ ತೊಂದರೆಯಾಗಲಿದೆ. ಮೋದಿ ಅವರು ಈ ವಿಷಯವನ್ನು ಚರ್ಚೆಯ ಸಂದರ್ಭದಲ್ಲಿ ಪ್ರಸ್ತಾಪಿಸುವ ನಿರೀಕ್ಷೆ ಇದೆ.

ರಕ್ಷಣಾ ಕ್ಷೇತ್ರ: ರಕ್ಷಣಾ ಕ್ಷೇತ್ರದಲ್ಲಿ ಪಾಲುದಾರಿಕೆಗೆ ಸಂಬಂಧಿಸಿದಂತೆಯೂ ಇಬ್ಬರೂ ನಾಯಕರು ಚರ್ಚೆ ನಡೆಸುವ ಸಾಧ್ಯತೆ ಇದೆ. ಇಬ್ಬರೂ ನಾಯಕರು ರಕ್ಷಣಾ ಒಪ್ಪಂದಕ್ಕೆ ಸಹಿ ಹಾಕುವ ನಿರೀಕ್ಷೆಯೂ ಇದೆ. ಭಾರತವು ಅಮೆರಿಕದಿಂದ ರಕ್ಷಣಾ ಸಲಕರಣೆಗಳನ್ನು ಖರೀದಿ ಮಾಡುತ್ತಿದೆಯಾದರೂ, ಯುದ್ಧವಿಮಾನಗಳು ಸೇರಿದಂತೆ, ಪ್ರಮುಖ ರಕ್ಷಣಾ ಉತ್ಪನ್ನಗಳನ್ನು ಫ್ರಾನ್ಸ್, ರಷ್ಯಾದಿಂದಲೂ ಖರೀದಿಸುತ್ತಿದೆ.

ಇಂಧನ, ತಂತ್ರಜ್ಞಾನ: ಭಾರತವು ಪರಮಾಣು ಶಕ್ತಿಯಿಂದ ಹೆಚ್ಚು ವಿದ್ಯುತ್ ಉತ್ಪಾದನೆ ಮಾಡಲು ಬಯಸುತ್ತಿದ್ದು, ಈ ಕ್ಷೇತ್ರದಲ್ಲಿ ಖಾಸಗಿಯವರನ್ನೂ ತೊಡಗಿಸಿಕೊಳ್ಳಲು ಮುಂದಾಗಿದೆ. ಅದಕ್ಕೆ ಪೂರಕವಾಗಿ ಕಾನೂನುಗಳಿಗೆ ತಿದ್ದುಪಡಿ ತರುವ ನಿರ್ಧಾರವನ್ನೂ ಮಾಡಿದೆ. ಈ ಕ್ಷೇತ್ರದಲ್ಲಿ ಬಂಡವಾಳ ಹೂಡುವಂತೆ ಅಮೆರಿಕವನ್ನು ಕೇಳಿಕೊಳ್ಳುವ ಸಾಧ್ಯತೆ ಇದೆ. 2022ರಲ್ಲಿ ಜೋ ಬೈಡನ್ ಆಡಳಿತದಲ್ಲಿ ಎರಡೂ ರಾಷ್ಟ್ರಗಳು ಸಂಕೀರ್ಣ ಮತ್ತು ಪ್ರವರ್ಧಮಾನಕ್ಕೆ ಬರುತ್ತಿರುವ ತಂತ್ರಜ್ಞಾನಗಳಿಗೆ ಸಂಬಂಧಿಸಿದ ಯೋಜನೆಯನ್ನು (ಐಸಿಇಟಿ) ಜಾರಿಗೊಳಿಸಿದ್ದವು. ಇದನ್ನು ಮುಂದುವರಿಸುವ ಬಗ್ಗೆ ಭಾರತ ಮನವಿ ಮಾಡುವ ನಿರೀಕ್ಷೆ ಇದೆ.



ಟ್ರಂಪ್–ಮೋದಿ ಸ್ನೇಹ

ನರೇಂದ್ರ ಮೋದಿ ಅವರು ಗುಜರಾತ್ ಮುಖ್ಯಮಂತ್ರಿ ಆಗಿದ್ದ ಅವಧಿಯಲ್ಲಿ ಅವರ ವಿರುದ್ಧ ಗೋಧ್ರಾ ಸಂಬಂಧಿ ಗಲಭೆಗಳ ಆರೋಪಗಳು ಕೇಳಿಬಂದಿದ್ದವು. ಈ ಹಿನ್ನೆಲೆಯಲ್ಲಿ ಅಮೆರಿಕ 2005ರಲ್ಲಿ ಅವರಿಗೆ ವೀಸಾ ನೀಡಲು ನಿರಾಕರಿಸಿತ್ತು. ಆದರೆ, ಮೋದಿ ಪ್ರಧಾನಿ ಆದ ನಂತರ ಪರಿಸ್ಥಿತಿ ಬದಲಾಯಿತು.

ಮೋದಿ ಮತ್ತು ಟ್ರಂಪ್ ಮೊದಲು ಭೇಟಿಯಾಗಿದ್ದು ವಾಷಿಂಗ್ಟನ್‌ನಲ್ಲಿ, 2017ರಲ್ಲಿ. ನಂತರ ಹಲವು ಬಾರಿ ಇಬ್ಬರು ಭೇಟಿ ಮಾಡಿ ಮಾತುಕತೆ ನಡೆಸಿದ್ದಲ್ಲದೇ, ಅಮೆರಿಕದ ಹ್ಯೂಸ್ಟನ್ ಮತ್ತು ಭಾರತದ ಅಹಮದಾಬಾದ್‌ನಲ್ಲಿ ಜಂಟಿಯಾಗಿ ರ‍್ಯಾಲಿಗಳನ್ನೂ ನಡೆಸಿದ್ದರು. ಇಬ್ಬರ ನಡುವೆ ಉತ್ತಮ ಸಂಬಂಧ ಇದೆ. ಟ್ರಂಪ್ ಹಲವು ಬಾರಿ ಭಾರತವನ್ನು ಟೀಕಿಸಿದ್ದಾರೆ. ಆದರೆ, ಅವರು ಮೋದಿಯನ್ನು ಮಾತ್ರ ಎಂದೂ ಟೀಕಿಸಿಲ್ಲ. ಟ್ರಂಪ್ ಅವರ ಮೊದಲ ಅವಧಿಯಲ್ಲೇ ವ್ಯಾಪಾರ ಒಪ್ಪಂದ ಮಾಡಿಕೊಳ್ಳುವ ಬಗ್ಗೆ ಚಿಂತನೆ ನಡೆದಿತ್ತಾದರೂ ಅದು ಸಾಧ್ಯವಾಗಿರಲಿಲ್ಲ.

ಬೆದರಿಕೆಗೆ ಜಗ್ಗಿತೇ ಭಾರತ?

ಟ್ರಂಪ್–ಮೋದಿ ಭೇಟಿ ಸಂದರ್ಭದಲ್ಲಿ ಯಾವುದೇ ಮುಜುಗರದ ಸನ್ನಿವೇಶ ಸೃಷ್ಟಿಯಾಗಬಾರದು ಎಂಬ ಕಾರಣಕ್ಕೆ ಭಾರತವು ಅಮೆರಿಕದ ವಿಚಾರದಲ್ಲಿ ಮೃದು ಧೋರಣೆ ತಳೆದಿದೆ ಎಂದು ವಿಶ್ಲೇಷಿಸಲಾಗುತ್ತಿದೆ. ಕೇಂದ್ರ ಸರ್ಕಾರವು ಈ ಬಾರಿಯ ಬಜೆಟ್‌ನಲ್ಲಿ ವಿದೇಶದಿಂದ ಆಮದು ಮಾಡುವ ಹೆಚ್ಚು ಎಂಜಿನ್ ಸಾಮರ್ಥ್ಯದ ವಿಲಾಸಿ ಬೈಕ್, ಐಷಾರಾಮಿ ಕಾರುಗಳ ಮೇಲೆ ವಿಧಿಸಲಾಗುತ್ತಿದ್ದ ಸುಂಕವನ್ನು ಕಡಿಮೆಗೊಳಿಸುವ ಘೋಷಣೆ ಮಾಡಿತ್ತು. ಇದು ಅಮೆರಿಕವನ್ನು ಗುರಿಯಾಗಿಸಿಕೊಂಡು ಸರ್ಕಾರ ಕೈಗೊಂಡ ನಿರ್ಧಾರ ಎಂದೇ ಹೇಳಲಾಗುತ್ತಿದೆ.

ಭಾರತದಿಂದ ಬಂದಿರುವ ಅಕ್ರಮ ವಲಸಿಗರನ್ನು ದೇಶಕ್ಕೆ ವಾಪಸ್ ಕಳುಹಿಸುವುದಾಗಿ ಅಮೆರಿಕ ಹೇಳಿದಾಗ, ಅವರನ್ನು ವಾಪಸ್ ಕರೆಸಿಕೊಳ್ಳಲು ಸಿದ್ಧವಿರುವುದಾಗಿ ಎಂದು ಭಾರತ ಹೇಳಿತ್ತು. ಅಮೆರಿಕವು ಕಳೆದ ವಾರ 104 ವಲಸಿಗರನ್ನು ಅವರ ಕಾಲು, ಕೈಗಳಿಗೆ ಕೋಳ ಹಾಕಿ ಪಂಜಾಬ್‌ನ ಅಮೃತಸರಕ್ಕೆ ತಂದು ಇಳಿಸಿತ್ತು. ವಲಸಿಗರನ್ನು ಅಮಾನವೀಯವಾಗಿ ನಡೆಸಿಕೊಳ್ಳಲಾಗಿದೆ ಎಂದು ದೇಶದಲ್ಲಿ ಚರ್ಚೆ ನಡೆದಿತ್ತು. ವಿರೋಧ ಪಕ್ಷಗಳು ಸರ್ಕಾರವನ್ನು ಟೀಕಿಸಿದ್ದವು. ಆ ಸಂದರ್ಭದಲ್ಲೂ ಸರ್ಕಾರ ಅಮೆರಿಕದ ನಡೆಯ ಬಗ್ಗೆ ತೀಕ್ಷ್ಣವಾಗಿ ಪ್ರತಿಕ್ರಿಯಿಸಲಿಲ್ಲ. ಈ ಬಗ್ಗೆ ಅಮೆರಿಕದೊಂದಿಗೆ ಮಾತನಾಡುವುದಾಗಿ ಹೇಳಿತು.

ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು ಅಮೆರಿಕ ಭೇಟಿ ಸಂದರ್ಭದಲ್ಲಿ ಟ್ರಂಪ್, ಗಾಜಾ ಪಟ್ಟಿಯನ್ನು ವಶಕ್ಕೆ ಪಡೆದುಕೊಂಡು ಅಭಿವೃದ್ಧಿ ಪಡಿಸುವುದಾಗಿ ಹೇಳಿದಾಗ, ಭಾರತ ಈ ಬಗ್ಗೆ ಪ್ರತಿಕ್ರಿಯಿಸಲಿಲ್ಲ. ಸಂಸತ್ತಿನಲ್ಲಿ ಈ ಬಗ್ಗೆ ಪ್ರಶ್ನಿಸಿದಾಗ ವಿದೇಶಾಂಗ ಸಚಿವ ಜೈಶಂಕರ್ ಉತ್ತರಿಸಲಿಲ್ಲ. ನಂತರ ಸಚಿವಾಲಯದ ಅಧಿಕಾರಿ, ‘ಪ್ಯಾಲೆಸ್ಟೀನ್ ವಿಷಯದಲ್ಲಿ ಭಾರತದ ನಿಲುವು ಬದಲಾಗಿಲ್ಲ’ ಎಂದಷ್ಟೇ ಹೇಳಿದ್ದರು.


ಸುಂಕ ಹೇರುವ ಬೆದರಿಕೆ ಒಡ್ಡಿರುವ ಟ್ರಂಪ್ ಅವರನ್ನು ಸಮಾಧಾನ ಪಡಿಸುವ ಉದ್ದೇಶದಿಂದ ಭಾರತ ಈ ವಿಚಾರಗಳಲ್ಲಿ ಕಠಿಣ ನಡೆಗಳನ್ನು ತೋರಿಲ್ಲ ಎಂದು ಹೇಳಲಾಗುತ್ತಿದೆ.

‘ಐ ಆ್ಯಮ್ ಗಾಡ್’ ಎಂದ ರವಿ ಗೌಡ

‘ಧ್ವಜ’ ಸಿನಿಮಾ ಮೂಲಕ ನಾಯಕನಾಗಿ ಚಂದನವನದಲ್ಲಿ ಮೊದಲ ಹೆಜ್ಜೆ ಇಟ್ಟಿದ್ದ ರವಿ ಗೌಡ, ‘ಐ ಆ್ಯಮ್ ಗಾಡ್’ ಎಂಬ ಸಿನಿಮಾ ಮೂಲಕ ನಿರ್ದೇಶಕರಾಗುತ್ತಿದ್ದಾರೆ.

ಈ ಚಿತ್ರದಲ್ಲಿ ನಾಯಕನಾಗಿಯೂ ಅವರು ನಟಿಸುತ್ತಿದ್ದು, ನಿರ್ಮಾಣದ ಜವಾಬ್ದಾರಿಯನ್ನೂ ಹೊತ್ತಿದ್ದಾರೆ. ನಾಯಕಿಯಾಗಿ ವಿಜೇತ ಪರೀಕ್ ಜೋಡಿಯಾಗಿದ್ದಾರೆ. ಇತ್ತೀಚೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಚಿತ್ರದ ಫಸ್ಟ್‌ಲುಕ್ ಹಾಗೂ ಶೀರ್ಷಿಕೆ ಬಿಡುಗಡೆಗೊಳಿಸಿದರು. ‘ಐ ಆ್ಯಮ್ ಗಾಡ್’ ರೊಮ್ಯಾಂಟಿಕ್ ಥ್ರಿಲ್ಲರ್ ಕಥಾಹಂದರ ಹೊಂದಿದ್ದು, ಈಗಾಗಲೇ ಚಿತ್ರದ ಚಿತ್ರೀಕರಣ ಪೂರ್ಣಗೊಂಡಿದೆ. ಬೆಂಗಳೂರು ಹಾಗೂ ಕೇರಳದಲ್ಲಿ ಶೂಟಿಂಗ್ ನಡೆಸಲಾಗಿದೆ. ಸದ್ಯ ಪೋಸ್ಟ್ ಪ್ರೊಡಕ್ಷನ್ ಕೆಲಸದಲ್ಲಿ ಚಿತ್ರತಂಡ ತೊಡಗಿಸಿಕೊಂಡಿದೆ.

ಸಿಬಿಜಿ ಪ್ರೊಡಕ್ಷನ್ಸ್‌ನಡಿ ಮೂಡಿಬರುತ್ತಿರುವ ಈ ಚಿತ್ರಕ್ಕೆ ಅಜನೀಶ್ ಲೋಕನಾಥ್ ಸಂಗೀತವಿದೆ. ರವಿವರ್ಮಾ ಸಾಹಸ ನಿರ್ದೇಶನ ಹಾಗೂ ಜಿತಿನ್ ದಾಸ್ ಛಾಯಾಚಿತ್ರಗ್ರಹಣ, ಸುರೇಶ್ ಆರುಮುಗಂ ಸಂಕಲನ ಚಿತ್ರಕ್ಕಿದೆ.



ರವಿ ಗೌಡ, ವಿಜೇತ ಪರೀಕ್

ಯೋಗರಾಜ್ ಭಟ್ ಹೇಳಿದ್ರು ‘ನಮ್ ಪೈಕಿ ಒಬ್ಬ ಹೋಗ್ಬುಟ’

ಕೆ.ರಾಮನಾರಾಯಣ್ ನಿರ್ದೇಶನದಲ್ಲಿ ‘ಕಾಮಿಡಿ ಕಿಲಾಡಿಗಳು’ ಖ್ಯಾತಿಯ ಮಡೆನೂರ್ ಮನು ನಟಿಸುತ್ತಿರುವ ‘ಕುಲದಲ್ಲಿ ಕೀಳ್ಯಾವುದೋ’ ಚಿತ್ರದ ಮೊದಲ ಹಾಡು ಬಿಡುಗಡೆಯಾಗಿದೆ. ನಿರ್ದೇಶಕ ಯೋಗರಾಜ್ ಭಟ್ ಬರೆದಿರುವ ‘ನಮ್ ಪೈಕಿ ಒಬ್ಬ ಹೋಗ್ಬುಟ’ ಎಂಬ ಹಾಡಿಗೆ ಮನೋಮೂರ್ತಿ ಸಂಗೀತ ನೀಡಿದ್ದಾರೆ.

ಗಾಯಕ ಆಂಥೋನಿ ದಾಸ್ ಅವರ ಧ್ವನಿಯಲ್ಲಿ ಈ ಹಾಡು ಮೂಡಿಬಂದಿದೆ. ಯೋಗರಾಜ್ ಸಿನಿಮಾಸ್ ಈ ಚಿತ್ರವನ್ನು ಅರ್ಪಿಸುತ್ತಿದ್ದು, ಸಂತೋಷ್ ಕುಮಾರ್ ಎ. ಕೆ ಮತ್ತು ವಿದ್ಯಾ ಅವರು ಈ ಸಿನಿಮಾ ನಿರ್ಮಿಸುತ್ತಿದ್ದಾರೆ. ಮೌನ ಗುಡ್ಡೆಮನೆ ಚಿತ್ರದ ನಾಯಕಿ. ಇತ್ತೀಚೆಗೆ ನಡೆದ ಸಮಾರಂಭದಲ್ಲಿ ಮಡೆನೂರ್ ಮನು ಬ್ಯಾಂಡ್ ಬಾರಿಸಿಕೊಂಡು ಬ್ಯಾಂಡ್ ಸೆಟ್ ಹಾಗೂ ಆರ್ಕೆಸ್ಟ್ರಾ ಕಲಾವಿದರ ಜೊತೆಗೆ ವೇದಿಕೆಗೆ ಬಂದು ಹಾಡು ಬಿಡುಗಡೆ ಮಾಡಿದ್ದು ವಿಶೇಷವಾಗಿತ್ತು. ಚಿತ್ರದಲ್ಲಿ ಆರ್ಕೆಸ್ಟ್ರಾ ಕಲಾವಿದನ ಪಾತ್ರದಲ್ಲಿ ಮನು ನಟಿಸಿದ್ದಾರೆ.

‘ಈ ಹಾಡನ್ನು ನಾನು ಬರೆಯಲು ಮನೋಮೂರ್ತಿ ಅವರ ಕಾರು ಚಾಲಕ ಸ್ಫೂರ್ತಿ. ಆತ ಇಂದು ನಮ್ಮೊಂದಿಗಿಲ್ಲ. ಆತನ ಸಾವು ಹಾಗೂ ಆನಂತರ ನಡೆದ ಸನ್ನಿವೇಶಗಳೇ ನಾನು ಈ ಹಾಡು ಬರೆಯಲು ಕಾರಣ’ ಎಂದಿದ್ದಾರೆ ಯೋಗರಾಜ್ ಭಟ್. ‘ನಾನು ನನ್ನ ಜಾನರ್ ಹೊರತುಪಡಿಸಿ ಸಂಗೀತ ನೀಡಿರುವ ಎರಡನೇ ಚಿತ್ರವಿದು. ಬಿಡುಗಡೆಯಾಗಿರುವ ಹಾಡನ್ನು ಯೋಗರಾಜ್ ಭಟ್ ಮನಮುಟ್ಟುವ ಹಾಗೆ ಬರೆದಿದ್ದಾರೆ’ ಎಂದು ಮನೋಮೂರ್ತಿ ಹೇಳಿದರು. ತಬಲ ನಾಣಿ, ಶರತ್ ಲೋಹಿತಾಶ್ವ, ಸೋನಲ್ ಮೊಂತೆರೋ, ಕರಿಸುಬ್ಬು, ಡ್ರ್ಯಾಗನ್ ಮಂಜು, ಸೀನ ಮುಂತಾದವರು ಚಿತ್ರದ ತಾರಾಬಳಗದಲ್ಲಿದ್ದಾರೆ.



ಮಡೆನೂರ್ ಮನು

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಗುಂಡಣ್ಣ



ದ್ವೇಷ ಬಿಡಬೇಕು ಮನುಷ್ಯ

ನುಡಿ ಬೆಳಗು



ಗವಿಸಿದ್ಧೇಶ್ವರ ಸ್ವಾಮೀಜಿ, ಗವಿಮಠ, ಕೊಪ್ಪಳ

131

ಮನುಷ್ಯ ಭೂಮಿಯ ಮೇಲೆ ಸಂವೇದನಾಶೀಲನಾಗಿ ಬದುಕಬೇಕು. ಮನುಷ್ಯ ಭೂಮಿಯ ಮೇಲೆ ಇಡುವ ಪ್ರತಿಯೊಂದು ಹೆಜ್ಜೆ ಹ್ಯಾಗಿರಬೇಕು ಎಂದರೆ ಹಡೆದ ತಾಯಿಗೆ ಮುತ್ತು ಕೊಟ್ಟಂತೆ ಇರಬೇಕು. ಭೂಮಿಯನ್ನು ಪ್ರೀತಿಸಬೇಕು, ಗೌರವಿಸಬೇಕು ಅಂತೀವಿ. ಆದರೆ ಹಿಂಸೆಯ ಗುಣ ಮನುಷ್ಯನಲ್ಲಿ ಬೆಳೆಯುತ್ತದಲ್ಲ ಯಾಕೆ? ಇದನ್ನು ಸ್ವಲ್ಪ ಕೆಡಿಸಬೇಕು ಅನ್ನಿಸುತ್ತದೆಯಲ್ಲ ಯಾಕೆ? ಯಾಕೆಂದರೆ ನಮ್ಮ ಎದೆಯಲ್ಲಿ ಒಂದು ದೋಷ ಐತಿ. ಅದು ಯಾವ ದೋಷ ಎಂದರೆ ನಮ್ಮ ಎದೆಯಲ್ಲಿರುವ ದ್ವೇಷ . ದ್ವೇಷ ಇರೋದಕ್ಕೆ ಮನುಷ್ಯ ಹಿಂಸೆ ಮಾಡುತ್ತಾನೆ. ದ್ವೇಷ ಎಂದರೆ ಇಷ್ಟಪಡದೇ ಇರುವುದು. ನನಗೆ ಹಿಡಿಸಲಾರದ ವಸ್ತು ಈ ಜಗತ್ತಿನಲ್ಲೇ ಇರಬಾರದು ಅಂತ ಅಂದುಕೊಂಡೇವಿ. ಆದರೆ ಅದು ನಡೀತೈತೇನು?

ಉದಾಹರಣೆಗೆ ನಿಮಗೆ ಮಧುಮೇಹ ಬಂದಿದೆ. ಅಂದ್ರೆ ನೀವು ಮಾತ್ರ ಸಿಹಿ ಬಿಡಬೇಕು. ನನಗೆ ಶುಗರ್ ಬಂದೈತಿ ಅಂತ ಜಗತ್ತಿನಲ್ಲೇ ಶುಗರ್ ಇರಬಾರದು ಅಂದ್ರೆ ನಡೀತೈತೇನು? ನಮಗೆ ಆಗಲಾರದ್ದು ಜಗತ್ತಿನಲ್ಲಿ ಬಹಳ ಐತಿ. ನಾವು ತಡಕೋಬೇಕು ಅಷ್ಟೆ. ಕೆಲವು ಮಂದಿಗೆ ತಮಗೆ ಹೆಣ್ಣು ಹುಟ್ಟಬಾರದು ಅಂತ ಇರತೈತಿ. ಆದರೆ ಮಕ್ಕಳು ಯಾವುದು ಹುಟ್ಟಬೇಕು ಎಂದು ನಾವೇ ತೀರ್ಮಾನ ಮಾಡಲು ಆಗತೈತೇನು? ಮಕ್ಕಳಿಗೆ ಹೆಣ್ಣು ಗಂಡು ಅಂತ ಭೇದ ಮಾಡಬಾರದು. ಅವರು ಮಕ್ಕಳು ಅಷ್ಟೆ. ಹೆಣ್ಣಾದರೂ ಸೈ ಗಂಡಾದರು ಸೈ. ಮಕ್ಕಳು ದೀಪ ಇದ್ದ ಹಾಗೆ. ದೀಪಕ್ಕೆ ಹೆಣ್ಣು ಗಂಡು ಎಂಬ ಭೇದ ಐತೇನು? ಮಕ್ಕಳು ಅಂದರೆ ದೇವರು ಹಚ್ಚಿದ ಜೀವಂತ ದೀಪಗಳು. ಜಗತ್ತಿನಲ್ಲಿ ನಮಗೆ ಆಗಲಾರದ್ದು ಬಹಳ ಇರುತ್ತವೆ. ಅವುಗಳನ್ನು ದ್ವೇಷ ಮಾಡಬಾರದು.

ನಾರಾಯಣ ರೆಡ್ಡಿ ಅಂತ ಒಬ್ಬರು ಪ್ರಗತಿಪರ ಕೃಷಿಕರಿದ್ದರು. ಅವರು ತಮ್ಮ ಮಗನಿಗೆ ಕನ್ಯೆ ನೋಡುತ್ತಿದ್ದರು. ಕನ್ಯೆ ಹುಡುಕಲು ಅವರು ಕಲಾತ್ಮಕ ಮಾರ್ಗ ಕಂಡುಕೊಂಡರು. ನಾರಾಯಣ ರೆಡ್ಡಿ ಊರು ಊರು ತಿರುಗುತ್ತಿದ್ದರು. ಒಂದಿನ ಅವರಿಗೆ ಒಬ್ಬಳು ಹುಡುಗಿ ಕಂಡಳು. ಅವಳು ದಾರಿಯಲ್ಲಿ ಬಿದ್ದ ಸಗಣಿಯನ್ನು ಹೆಕ್ಕಿ ಹೆಕ್ಕಿ ಹೊಲಕ್ಕೆ ತೆಗೆದುಕೊಂಡು ಹೋಗಿ ಹಾಕುತ್ತಿದ್ದಳು. ಇವರು ಅವಳನ್ನೇ ಹಿಂಬಾಲಿಸಿ ಹೋಗಿ ಅವಳ ತಂದೆಗೆ ‘ನಿನ್ನ ಮಗಳನ್ನು ನನ್ನ ಮಗನಿಗೆ ಮದುವೆ ಮಾಡಿಕೊಡು’ ಎಂದರು. ಅದಕ್ಕೆ ಆ ತಂದೆ ‘ನನ್ನ ಮಗಳು ಓದಿಲ್ಲ. ಒಕ್ಕಲುತನ ಮಾಡ್ತಾಳ. ನಿಮ್ಮ ಮಗನಿಗೆ ಹಿಡಿಸತೈತೋ ಇಲ್ಲೋ’ ಅಂದು ಅನುಮಾನ ವ್ಯಕ್ತಪಡಿಸಿದ. ಅದಕ್ಕೆ ನಾರಾಯಣ ರೆಡ್ಡಿ ‘ನಿನ್ನ ಮಗಳು ಒಕ್ಕಲುತನ ಮಾಡಲಿ. ಸಗಣಿ ಬಾಚಲಿ. ವಿದ್ಯಾವಂತೆ ಅಲ್ಲದಿದ್ದರೂ ಪರವಾಗಿಲ್ಲ. ಯಾವ ಕೈಗಳು ಸಗಣಿ ಬಾಚುತಾವಲ್ಲ ಆ ಕೈಗಳು ನಮ್ಮ ಮನೆಯ ಅನ್ನದ ಬೋಗುಣಿ ತುಂಬಿಸುತ್ತವೆ ಎಂಬ ಭರವಸೆ ನನಗೆ ಐತಿ’ ಎಂದರಂತೆ. ಇಂತಹ ಭರವಸೆ ಇರಬೇಕು ಮನುಷ್ಯನಿಗೆ.

ಬ್ಯಾಡಗಿ ಊರು ಮೆಣಸಿನಕಾಯಿಗೆ ಬಹಳ ಫೇಮಸ್. ಅಲ್ಲಿನ ಜನ ಮೆಣಸಿನಕಾಯಿ ಬಹಳ ಘಾಟು ಐತಿ ಅಂತ ತಿರಸ್ಕಾರ ಮಾಡಿದ್ದರೆ ಅದು ಮೆಣಸಿನಕಾಯಿ ರಾಜಧಾನಿ ಆಗುತ್ತಿತ್ತೇನು? ಮನೆಮನೆಯಲ್ಲಿ ಸಂಪತ್ತು ತುಂಬುತ್ತಿತ್ತೇನು? ಅದಕ್ಕೆ ಜಗತ್ತಿನಲ್ಲಿ ನಮಗೆ ಇಷ್ಟವಾಗದ್ದು ಇದೆ ಎಂದು ತಿರಸ್ಕಾರ ಮಾಡಬಾರದು. ಸಹಿಸಿಕೊಳ್ಳಬೇಕು. ದ್ವೇಷ ಮಾಡಬಾರದು.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಗುರುವಾರ ಫೆಬ್ರುವರಿ 13, 2025

ಶ್ರೀ ಕ್ರೋಧಿ ನಾಮ ಸಂವತ್ಸರ ಉತ್ತರಾಯಣ ಶಿಶಿರ ಋತು ತಿಥಿ: ಮಾಘ ಕೃಷ್ಣಪ್ರತಿಪದ್ ಗಂ. 20-22 **ನಕ್ಷತ್ರ:** ಮಘ ಗಂ. 21-07 **ಯೋಗ:** ಶೋಭನ ಗಂ. 07-31 **ಕರಣ:** ಬಾಲವ ಗಂ. 07-49, ಕುಂಭ ಮಾಸದ 01 ನೇ ದಿನ, **ಮಳೆನಕ್ಷತ್ರ:** ಧನಿಷ್ಠಾ 3.
ರಾಹುಕಾಲ: ಮಧ್ಯಾಹ್ನ 01-30 – 03-00
ಸೂರ್ಯೋದಯ: 06-57 **ಸೂರ್ಯಾಸ್ತ:** 06-32
ಮುಸ್ಲಿಂ ದಿನಾಂಕ: 14 ಶಬನ್
ಅದೃಷ್ಟ ಸಂಖ್ಯೆ: 5, 10

ಮೇಷ: ಆರೋಗ್ಯ ಸ್ಥಿತಿ ಉತ್ತಮವಾಗಿ ದಾಂಪತ್ಯ ಜೀವನ ಸುಖಮಯವಾಗಿರುವುದು. ಪ್ರತಿಭೆಯನ್ನು ಗುರುತಿಸಿಲ್ಲ ಎಂಬ ನೋವು ಕೊನೆಯಾಗುವುದು. ಆತಂಕದ ಸ್ಥಿತಿಯಾದರೂ ಧೈರ್ಯಗೆಡದಿರಿ.

ವೃಷಭ: ಮೇಲಧಿಕಾರಿಗಳು ನಿಮ್ಮೊಂದಿಗಿದ್ದಾರೆ ಎಂಬ ಭರವಸೆಯಿಂದ ಯಾವ ಕೆಲಸವನ್ನು ಮಾಡದಿರಿ. ಅವರು ಕೈ ಕೊಡುವ ಸಾಧ್ಯತೆ ಇದೆ. ಮಾನಸಿಕವಾಗಿ ಗೊಂದಲಗಳಿರುವುದು. ಹಿರಿಯರ ಮಾರ್ಗದರ್ಶನ ಪಡೆದುಕೊಳ್ಳಿ.

ಮಿಥುನ: ಕಾರ್ಯಕ್ಷೇತ್ರದಲ್ಲಿ ಶಾಂತ ಚಿತ್ತದಿಂದ ಕಾರ್ಮಿಕರ ಮಾತುಗಳನ್ನು ಆಲಿಸಿ, ಕ್ರಮ ಕೈಗೊಳ್ಳಿರಿ. ಇದರಿಂದಾಗಿ ನಿಮಗೆ ಬೇಕಾದ ಸಮಯದಲ್ಲಿ ಅವರ ಸಹಾಯ ದೊರೆಯುವುದು. ಕಾರ್ಯಸಾಧನೆಗಾಗಿ ವಾಮಮಾರ್ಗ ಬಳಸಬೇಡಿ.

ಕರ್ಕಾಟಕ: ಹೀಯಾಳಿಸುವವರೇ, ಅನುಮಾನಿಸುತ್ತಿರುವವರೇ ಸಹಾಯ ಕೋರಿ ಬರಲಿದ್ದಾರೆ. ವಿವಾದ ಗೊಡವೆಗಳಿಂದ ದೂರ ಉಳಿಯುವುದರಿಂದ ಗೌರವವನ್ನು ಕಾಪಾಡಿಕೊಳ್ಳಬಹುದು.

ಸಿಂಹ: ಸಹೋದರರಲ್ಲಿನ ಸಂಬಂಧಗಳು ಗಟ್ಟಿಗೊಂಡು ಸುರಕ್ಷತೆಯ ಭಾವ ಉಂಟಾಗುವುದು. ಆರಂಭ ಮಾಡಿದ ಯೋಜನೆಗಳನ್ನು ಪೂರ್ಣಗೊಳಿಸಲು ಪ್ರಯತ್ನಿಸಿ. ಕಬ್ಬಿಣದ ಮತ್ತು ತಾಮ್ರದ ವ್ಯಾಪಾರಿಗಳಿಗೆ ಲಾಭ ಸಿಗಲಿದೆ.

ಕನ್ಯಾ: ಹತ್ತಾರು ವರ್ಷಗಳ ಸತತ ಪ್ರಯತ್ನದ ಫಲವಾಗಿ ಕುಟುಂಬದಲ್ಲಿನ ಸ್ಥಾನ ಭದ್ರವಾಗುವುದು. ಹೊಸ ಮನೆಗೆ ಒಪ್ಪುವಂಥ ಹೊಸ ಪೀಠೋಪಕರಣಗಳ ಖರೀದಿ ಎಂಬ ವಿಚಾರವಾಗಿ ಇಂದು ಧನವ್ಯಯವಾಗಲಿದೆ.

ತುಲಾ: ಜರುಗಲಿರುವ ಸಂಗತಿಯೊಂದು ಗಾಢ ಪರಿಣಾಮ ಬೀರಿ, ವೃತ್ತಿಗೆ ಸಂಬಂಧಿಸಿದ ವಿಷಯದಲ್ಲಿ ಉತ್ತಮ ನಿರ್ಧಾರ ಕೈಗೊಳ್ಳಲು ಸಹಾಯವಾಗಲಿದೆ. ಅನಿರೀಕ್ಷಿತ ಪ್ರಯಾಣ ಹೊಸ ದಾರಿಗೆ ಕಾರಣವಾಗಲಿದೆ. \

ವೃಶ್ಚಿಕ: ಹಿರಿಯ ಮಗನ ಸಹಾಯದಿಂದ ಗಣ್ಯರ ಪರಿಚಯ, ಸಹಾಯ ದೊರೆತು ಹೊಸ ಯೋಜನೆಗಳಿಗೆ ಅನುಕೂಲ ತೋರಿಬರಲಿದೆ. ಊರಿನ ಅಥವಾ ಸುತ್ತಮುತ್ತಲಿನ ಕುತೂಹಲಕಾರಿ ವಿಷಯ ತಿಳಿದು ಅಚ್ಚರಿಗೊಳ್ಳುವಿರಿ.

ಧನು: ಕಚೇರಿಯ ಕೆಲಸಗಳನ್ನು ಶೀಘ್ರವಾಗಿ ಮುಗಿಸಿ. ಮನೆಯಲ್ಲಿ ತಂಗಿಯ ಅಥವಾ ತಮ್ಮನ ಮದುವೆಯ ಕೆಲಸದ ಒತ್ತಡ ಹಾಗೂ ಜವಾಬ್ದಾರಿ ಹೆಚ್ಚಲಿದೆ. ವಾಹನ ಚಾಲನೆಯಲ್ಲಿ ಮುತುವರ್ಜಿ ವಹಿಸಬೇಕಾಗುತ್ತದೆ.

ಮಕರ: ಶೈಕ್ಷಣಿಕವಾಗಿ ಎಲ್ಲಾ ಪ್ರಾಮಾಣಿಕ ಪ್ರಯತ್ನಗಳು ಯಶಸ್ಸು ಕಾಣುವ ಹಾದಿಯಲ್ಲಿರುವುದು. ಕುಟುಂಬದ ಆಂತರಿಕ ಸಮಸ್ಯೆಯೊಂದು ಸಮಾಧಾನದ ಮಾತಿನಿಂದ ಬಗೆಹರಿಯಲಿದೆ.

ಕುಂಭ: ಕೆಲಸ ಪ್ರಾರಂಭಕ್ಕೆ ಆತ್ಮಸ್ಥೈರ್ಯ ಬಹಳ ಮುಖ್ಯ. ಯಾವುದೇ ತರದ ಒತ್ತಡಕ್ಕೆ ಮಣಿಯದೆ ಮುನ್ನುಗ್ಗಿ, ಎಲ್ಲವು ಜಯ ತರಲಿದೆ. ಕೆಲಸ ಕಾರ್ಯಗಳಲ್ಲಿ ಹೆಚ್ಚಿನ ಏಕಾಗ್ರತೆ ಅನಿವಾರ್ಯವಾಗುತ್ತದೆ.

ಮೀನ: ಹವ್ಯಾಸಿ ಲೇಖಕರು ಕತೆ, ಕವನಗಳ ಬರವಣಿಗೆಯಲ್ಲಿ ಸಮಯ ಕಳೆಯುವಿರಿ. ಪ್ರತಿಭೆಯ ತೀಕ್ಷ್ಣತೆಯು ಸಂಬಂಧಪಟ್ಟವರ ಗಮನ ಸೆಳೆಯಲಿದೆ. ಮಕ್ಕಳು ಸಂತಸ ತರಲಿದ್ದಾರೆ.

ಪದಬಂಧ 5952


– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಅಯ್ಯೋ ಇದು ಕಷ್ಟವೇ ಅಲ್ಲ! (3)
3.ನರಕಾಧಿಪತಿ ಕೊಟ್ಟ ಸಹಿಸಲಾರದ ನೋವು! (5)
5.ಮೆಟ್ಟಿಲುಗಳಿರುವ ಚೌಕಾಕಾರದ ಕೊಳ (3)
6.ನಾಡಾದಿಯ ಧಮನಿ (2)
7.ಹೆಣವನ್ನು ಹೂತಿರುವ ಗೋರಿ (3)
9.ಸರ ಹಿಡಿದ ವರನು ನೋಡಿದ ಕೊಳ (4)
10.ಅತ್ತೆಯ ಗಂಡನೇ ಆನೆಯನ್ನು ಹತೋಟಿಯಲ್ಲಿರಿಸಿದ್ದಾನಲ್ಲಾ (4)
12.ಸರದ ಜೊತೆ ತಂದಿರುವ ಸಾಮಾನು (3)
14.ತೊಡಕು ಹೀಗೆ ಬಂದಿದೆ (2)
15.ದರ ಹೇಳಿದ್ದಕ್ಕೇ ಇಷ್ಟು ಸಲಿಗೆಯೇ? (3)
16.ಇದು ನೆತ್ತರಿನ ಹರಿದಾಟ (5)
17. ಕನಸು ಬೀಳುತ್ತಿರುವಾಗಲೇ ಆಯಿತು ಬೆಳಗಿನ ಜಾವ! (3)

ಮೇಲಿಂದ ಕೆಳಕ್ಕೆ

2.ಕರಂಡಕ ಇಲ್ಲಿದೆ (3)
3.ಮನುಷ್ಯನಿಗೆ ಸಂಬಂಧಪಟ್ಟಿದ್ದು ಉಲ್ಟಾ ಆಗಿದೆ (4)
4.ಗಡಿಯ ಬಳಿ ತಲೆದೋರಿದ ಶೀತ (3)
5.ದೇವಾಲಯದ ಮೇಲಿನ ಗೋಪುರದ ತುದಿ (3)
7.ವಿರಸದ ವಿರುದ್ಧ ಪದ (3)
8.ಸೊಕ್ಕು ಹೀಗೆ ಬಂದಿದೆ (3)
11.ಟಾರ್ ರಸ್ತೆಯ ಪಕ್ಕದಲ್ಲೇ ಮೋರಿ ಇದೆ (3)
13. ಸೂಟಿಯಿರುವ ಈ ದಿನವೆಂದರೆ ಎಲ್ಲರಿಗೂ ಇಷ್ಟ (4)
14.ಹೆಂಡತಿಯನ್ನು ಕಳೆದುಕೊಂಡವನು (3)
15.ಮಾನ ಇದ್ದವನಿಗೇ ಈ ಮನ್ನಣೆ! (3)



5951ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಮಹಾಪೂರ
3.ಪರಾಭವ 5.ಸದರ
6.ಜರಾಯು 8.ಪ್ರಸಂಗ
10.ಆಸರೆ 11.ವಾಯಸ
13.ಅಳುಕು 15.ಯಥಾಸ್ಥಿತಿ
16.ರಣಭೇರಿ

ಮೇಲಿಂದ ಕೆಳಕ್ಕೆ:
1.ಮಹಾರಾಜ 2.ರಭಸ
3.ಪದರ 4.ವನ್ಯಮೃಗ
7.ರಾಜಸ 9.ಸಂದಾಯ
10.ಆಯವ್ಯಯ 12.ಸದಾಚಾರಿ
13.ಅದಿತಿ 14.ಕುಬೇರ

ಸುಡೊಕು 6337

				7			4	
		4	6		8			9
7				1				
						6	7	
6		1	7		2			4
								1
9				6		5		
	3	6	2		5			7
8		5		4			6	3


ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6336 ಸುಡೊಕು

4	8	1	6	9	7	5	2	3
6	7	5	3	2	4	9	1	8
3	9	2	1	8	5	4	7	6
9	6	4	8	1	3	2	5	7
7	5	3	4	6	2	1	8	9
2	1	8	7	5	9	3	6	4
1	2	7	9	4	6	8	3	5
5	3	9	2	7	8	6	4	1
8	4	6	5	3	1	7	9	2


ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	23,071
ಇಂದಿನ ಅಂತ್ಯ	23,045
▼	26
ದಿನದ ಕನಿಷ್ಠ	22,798

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ



ಬೆಂಗಳೂರು	
100ಕ್ಕೆ	₹495
12 ಕ್ಕೆ	₹66
ಮೈಸೂರು	
100ಕ್ಕೆ	₹497

ರಾಮನಗರ ರೇಷ್ಮೆಗೂಡು



ಮಿಶ್ರತಳಿ (ಸಿ.ಬಿ)	₹352-669
ದ್ವಿತಳಿ (ಬಿ.ವಿ)	₹256-821

ಎನ್.ಆರ್.ಪುರ ರಬ್ಬರ್



ಆರ್‌ಎಸ್‌ಎಸ್-4	₹186.50
ಆರ್‌ಎಸ್‌ಎಸ್-5	₹181.50
ಗುಡ್ ಲಾಟ್	₹176.50

(ಪ್ರತಿ ಕೆ.ಜಿಗೆ)

ಅಡಿಕೆ ಧಾರಣೆ (₹ಗಳಲ್ಲಿ)

ಬಂಟ್ವಾಳ	
ಕೋಕ	20000-27500
ಹೊಸತು	30000-36000
ಹಳತು	45500-49500
ಕುಮಟ	
ಚಾಲಿ	32569-36599
ಚಿಪ್ಪು	15569-26099
ಕೋಕ	6569-13099
ಫ್ಯಾಕ್ಟರಿ	3099-23399
ಹೊಸಚಾಲಿ	30869-33599
ಶಿವಮೊಗ್ಗ	
ಬೆಟ್ಟೆ	42009-56700
ಗೊರಬಲು	18019-26109
ರಾಶಿ	30899-52259
ಸರಕು	50109-89896
ಸಿದ್ದಾಪುರ	
ಬಿಳಿಗೋಟು	19699-25209
ಚಾಲಿ	31599-37649
ಕೋಕ	13699-18189
ಹೊಸಚಾಲಿ	24609-33649
ಕೆಂಪುಗೋಟು	20009-21109
ರಾಶಿ	42099-48699
ತಟ್ಟಿಬೆಟ್ಟೆ	28889-35499
ಶಿರಸಿ	
ಬೆಟ್ಟೆ	18009-35018
ಬಿಳಿಗೋಟು	14139-28293
ಚಾಲಿ	28509-39381
ರಾಶಿ	40099-48389

ಕೊಬ್ಬರಿ ಧಾರಣೆ



(ಕ್ವಿಂಟಲ್‌ಗೆ)

ಅರಸೀಕೆರೆ	₹14250-14250
ದಾವಣಗೆರೆ	₹11000-11000
ಮಧುಗಿರಿ	₹10000-14200

ಮುದ್ರೆಮನೆ ಕಾಫಿ



(50 ಕೆಜಿಗೆ)

ಎಪಿ	₹29400
ಎಸಿ	₹15400
ಆರ್‌ಪಿ	₹24000
ಆರ್‌ಸಿ	₹13015

ಶೇ 4.31ರಷ್ಟು ದಾಖಲು: ತರಕಾರಿ, ಮೊಟ್ಟೆ ದರ ಇಳಿಕೆ

ತಗ್ಗಿದ ಚಿಲ್ಲರೆ ಹಣದುಬ್ಬರ

ನವದೆಹಲಿ (ಪಿಟಿಐ): ದೇಶದ ಚಿಲ್ಲರೆ ಹಣದುಬ್ಬರವು ಜನವರಿ ತಿಂಗಳಿನಲ್ಲಿ ಐದು ತಿಂಗಳ ಕನಿಷ್ಠ ಮಟ್ಟವಾದ ಶೇ 4.31ಕ್ಕೆ ಇಳಿಕೆಯಾಗಿದೆ. ತರಕಾರಿ, ಮೊಟ್ಟೆ ಮತ್ತು ಬೇಳೆಕಾಳು ದರ ಕಡಿಮೆಯಾಗಿರುವುದೇ ಹಣದುಬ್ಬರದ ಇಳಿಕೆಗೆ ಕಾರಣ ಎಂದು ರಾಷ್ಟ್ರೀಯ ಸಾಂಖ್ಯಿಕ ಕಚೇರಿಯು ಬುಧವಾರ ತಿಳಿಸಿದೆ.

ಕಳೆದ ವರ್ಷದ ಅಕ್ಟೋಬರ್‌ನಿಂದಲೂ ಗ್ರಾಹಕ ಬೆಲೆ ಸೂಚ್ಯಂಕ ಆಧರಿತ ಹಣದುಬ್ಬರವು ಇಳಿಕೆಯ ಪಥದಲ್ಲಿಯೇ ಸಾಗಿದೆ. ಕಳೆದ ವರ್ಷದ ಡಿಸೆಂಬರ್‌ನಲ್ಲಿ ಶೇ 5.22ರಷ್ಟು ದಾಖಲಾಗಿತ್ತು.

ಜನವರಿಯಲ್ಲಿ ಆಹಾರದ ಹಣದುಬ್ಬರವು ಶೇ 6.02ರಷ್ಟು ದಾಖಲಾಗಿದೆ. ಕಳೆದ ಆರು ತಿಂಗಳ ಅವಧಿಯಲ್ಲಿ ದಾಖಲಾಗಿರುವ ಕನಿಷ್ಠ ಮಟ್ಟ ಇದಾಗಿದೆ. ಇಂಧನ ಹಾಗೂ ಇತರೆ ಸರಕುಗಳ ಬೆಲೆಯಲ್ಲಿಯೂ ಗಣನೀಯ ಇಳಿಕೆಯಾಗಿದೆ.

ಕಳೆದ ವಾರ ನಡೆದ ಭಾರತೀಯ ರಿಸರ್ವ್ ಬ್ಯಾಂಕ್‌ನ ಹಣಕಾಸು ನೀತಿ ಸಮಿತಿ ಸಭೆಯು (ಎಂಪಿಸಿ) ರೆಪೊ ದರದಲ್ಲಿ ಶೇ 0.25ರಷ್ಟು ಕಡಿತಗೊಳಿಸಿದೆ. ಹಣದುಬ್ಬರವು ಆರ್‌ಬಿಐನ ನಿರೀಕ್ಷಿತ ಮಟ್ಟದಲ್ಲಿಯೇ ಇರುವುದರಿಂದ ಈ ನಿರ್ಧಾರ ಕೈಗೊಂಡಿದೆ ಎಂದು ಆರ್ಥಿಕ ತಜ್ಞರು ಹೇಳಿದ್ದಾರೆ.

ಗ್ರಾಮೀಣ ಪ್ರದೇಶದಲ್ಲೂ ಹಣದುಬ್ಬರದ ಪ್ರಮಾಣ ಇಳಿಕೆಯಾಗಿದೆ. ಡಿಸೆಂಬರ್‌ನಲ್ಲಿ ಶೇ 5.76ರಷ್ಟು ಇದ್ದಿದ್ದು, ಜನವರಿಯಲ್ಲಿ ಶೇ 4.64ಕ್ಕೆ ತಗ್ಗಿದೆ. ಆಹಾರ ಪದಾರ್ಥಗಳ ಬೆಲೆಯು ಶೇ 8.65ರಿಂದ ಶೇ 6.31ಕ್ಕೆ ಇಳಿದಿದೆ.

ನಗರ ಪ್ರದೇಶದ ವ್ಯಾಪ್ತಿಯಲ್ಲೂ ಹಣದುಬ್ಬರ ಪ್ರಮಾಣ ಇಳಿಕೆಯಾಗಿದೆ. ಡಿಸೆಂಬರ್‌ನಲ್ಲಿ ಶೇ 4.58ರಷ್ಟು ಇದ್ದಿದ್ದು, ಜನವರಿಯಲ್ಲಿ ಶೇ 3.87ಕ್ಕೆ ಇಳಿದಿದೆ. ಆಹಾರ ಪದಾರ್ಥಗಳ ಬೆಲೆಯು ಶೇ 7.95ರಿಂದ ಶೇ 5.53ಕ್ಕೆ ಇಳಿಕೆಯಾಗಿದೆ.



ಆದರೆ, ಮನೆಗಳ ಬೆಲೆಯಲ್ಲಿ ಶೇ 2.76ರಷ್ಟು ಹೆಚ್ಚಳವಾಗಿದೆ ಎಂದು ವರದಿ ತಿಳಿಸಿದೆ.

ರಾಜ್ಯಗಳ ಸರಾಸರಿಗಿಂತಲೂ ಕೇರಳ (ಶೇ 6.76), ಒಡಿಶಾ (ಶೇ 6.05), ಛತ್ತೀಸಗಢ (ಶೇ 5.85), ಹರಿಯಾಣ (ಶೇ 5.1) ಹಾಗೂ ಬಿಹಾರದಲ್ಲಿ (ಶೇ 5.06) ಹಣದುಬ್ಬರವು ಹೆಚ್ಚು ದಾಖಲಾಗಿದೆ. ದೆಹಲಿಯಲ್ಲಿ ಶೇ 2.02ರಷ್ಟು ಅತಿ ಕಡಿಮೆ ದಾಖಲಾಗಿದೆ.

'ಹಣದುಬ್ಬರ ಇಳಿಕೆಯು ರೆಪೊ ದರ ಕಡಿತವನ್ನು ಸಮರ್ಥಿಸುವಂತಿದೆ.ಏಪ್ರಿಲ್ ಅಥವಾ ಜೂನ್‌ನಲ್ಲಿ ಮತ್ತೆ ಆರ್‌ಬಿಐನಿಂದ ಶೇ 0.25ರಷ್ಟು ಬಡ್ಡಿದರ ಕಡಿತವಾಗುವ ಸಾಧ್ಯತೆಯಿದೆ' ಎಂದು ಐಸಿಆರ್‌ಎ ಮುಖ್ಯ ಅರ್ಥಶಾಸ್ತ್ರಜ್ಞೆ ಅದಿತಿ ನಾಯರ್ ತಿಳಿಸಿದ್ದಾರೆ.

ಆಲೂಗೆಡ್ಡೆ, ತೆಂಗಿನಕಾಯಿ ದುಬಾರಿ

ತೆಂಗಿನ ಎಣ್ಣೆ ಶೇ 54.2, ಆಲೂಗೆಡ್ಡೆ ಶೇ 49.61, ತೆಂಗಿನಕಾಯಿ ಶೇ 38.71, ಬೆಳ್ಳುಳ್ಳಿ ಶೇ 30.65 ಹಾಗೂ ಬಟಾಣಿ ಬೆಲೆಯಲ್ಲಿ ಶೇ 30.17ರಷ್ಟು ಹೆಚ್ಚಳವಾಗಿದೆ.

ಈ ಪದಾರ್ಥಗಳಿಗೆ ಹೋಲಿಸಿದರೆ ಜೀರಿಗೆ ಶೇ 32.25, ಶುಂಠಿ ಶೇ 30.92, ಒಣ ಮೆಣಸಿನಕಾಯಿ ಶೇ 11.27, ಬದನೆಕಾಯಿ ಶೇ 9.94 ಹಾಗೂ ಎಲ್‌ಪಿಜಿ (ನಿರ್ವಹಣೆ ವೆಚ್ಚ ಹೊರತುಪಡಿಸಿ) ದರದಲ್ಲಿ ಶೇ 9.29ರಷ್ಟು ಇಳಿಕೆಯಾಗಿದೆ.

ಕೈಗಾರಿಕಾ ಉತ್ಪಾದನೆ ಇಳಿಕೆ



ನವದೆಹಲಿ (ಪಿಟಿಐ): ಕಳೆದ ವರ್ಷದ ಡಿಸೆಂಬರ್‌ನಲ್ಲಿ ದೇಶದ ಕೈಗಾರಿಕಾ ಉತ್ಪಾದನೆ ಬೆಳವಣಿಗೆಯು ಮೂರು ತಿಂಗಳ ಕನಿಷ್ಠ ಮಟ್ಟವಾದ ಶೇ 3.2ರಷ್ಟು ದಾಖಲಾಗಿದೆ.

ಗಣಿಗಾರಿಕೆ ಮತ್ತು ತಯಾರಿಕಾ ವಲಯದ ಬೆಳವಣಿಗೆಯು ಇಳಿಕೆ ಆಗಿದೆ. ಇದೇ ಉತ್ಪಾದನೆ ಕುಸಿತಕ್ಕೆ ಕಾರಣ ಎಂದು ರಾಷ್ಟ್ರೀಯ ಸಾಂಖ್ಯಿಕ ಕಚೇರಿ (ಎನ್‌ಎಸ್‌ಒ) ಬುಧವಾರ ತಿಳಿಸಿದೆ.

2023ರ ಡಿಸೆಂಬರ್‌ನಲ್ಲಿ ಬೆಳವಣಿಗೆಯು ಶೇ 4.4ರಷ್ಟಿತ್ತು.

ಕೈಗಾರಿಕಾ ಉತ್ಪಾದನಾ ಸೂಚ್ಯಂಕ (ಐಐಪಿ) ಆಧಾರದ ಮೇಲೆ ಬೆಳವಣಿಗೆಯನ್ನು ಲೆಕ್ಕ ಹಾಕಲಾಗುತ್ತದೆ.

ಡಿಸೆಂಬರ್‌ನಲ್ಲಿ ತಯಾರಿಕಾ ವಲಯ ಶೇ 3 ಮತ್ತು ಗಣಿಗಾರಿಕೆ ಶೇ 2.6ರಷ್ಟು ಪ್ರಗತಿ ಕಂಡಿದೆ. ಪ್ರಸಕ್ತ ಆರ್ಥಿಕ ವರ್ಷದ ಏಪ್ರಿಲ್–ಡಿಸೆಂಬರ್ ಅವಧಿಯಲ್ಲಿ ಐಐಪಿ ಬೆಳವಣಿಗೆ ಶೇ 4ರಷ್ಟಾಗಿದೆ. 2023–24ರ ಇದೇ ಅವಧಿಯಲ್ಲಿ ಶೇ 6.3ರಷ್ಟಿತ್ತು ಎಂದು ತಿಳಿಸಿದೆ.

ಸಂಕ್ಷಿಪ್ತ ಸುದ್ದಿ

ಒಂದು ಕೆ.ಜಿ ಬೆಳ್ಳಿ ದರ ₹97,200



ನವದೆಹಲಿ (ಪಿಟಿಐ): ಇಲ್ಲಿನ ಚಿನಿವಾರ ಪೇಟೆಯಲ್ಲಿ ಬುಧವಾರ ಚಿನ್ನದ ಧಾರಣೆಯಲ್ಲಿ ಇಳಿಕೆ ಆಗಿದ್ದರೆ, ಬೆಳ್ಳಿ ದರ ಏರಿಕೆಯಾಗಿದೆ.

ಬೆಳ್ಳಿ ಧಾರಣೆಯು ಕೆ.ಜಿಗೆ ₹600 ಹೆಚ್ಚಳವಾಗಿ, ₹97,200ಕ್ಕೆ ಮಾರಾಟವಾಗಿದೆ. 10 ಗ್ರಾಂ ಚಿನ್ನದ (ಶೇ 99.9 ಪರಿಶುದ್ಧತೆ) ದರವು ₹340 ಇಳಿಕೆಯಾಗಿ, ₹87,960 ಆಗಿದೆ. ಆಭರಣ ಚಿನ್ನದ (ಶೇ 99.5 ಪರಿಶುದ್ಧತೆ) ದರವು ಇಷ್ಟೇ ಪ್ರಮಾಣದಲ್ಲಿ ಕಡಿಮೆಯಾಗಿ ₹87,560 ಆಗಿದೆ.

ಜಾಗತಿಕ ಮಾರುಕಟ್ಟೆಯಲ್ಲಿ ಚಿನ್ನದ ದರ ಇಳಿದಿದೆ. ಇದರಿಂದ ದೇಶೀಯ ಮಾರುಕಟ್ಟೆಯಲ್ಲೂ ಹಳದಿ ಲೋಹದ ಬೆಲೆ ಇಳಿದಿದೆ ಎಂದು ಅಖಿಲ ಭಾರತ ಸರಾಫ್ ಅಸೋಸಿಯೇಷನ್ ತಿಳಿಸಿದೆ.

₹50 ಮುಖಬೆಲೆಯ ಹೊಸ ನೋಟು ಬಿಡುಗಡೆ ಶೀಘ್ರ

ಮುಂಬೈ (ಪಿಟಿಐ): ಗವರ್ನರ್ ಸಂಜಯ್ ಮಲ್ಹೋತ್ರಾ ಅವರ ಸಹಿ ಇರುವ ₹50 ಮುಖಬೆಲೆಯ ಹೊಸ ನೋಟುಗಳನ್ನು ಶೀಘ್ರವೇ ಬಿಡುಗಡೆ ಮಾಡಲಾಗುವುದು ಎಂದು ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ಬುಧವಾರ ತಿಳಿಸಿದೆ.

ಗವರ್ನರ್ ಆಗಿದ್ದ ಶಕ್ತಿಕಾಂತ ದಾಸ್ ಅವರ ಅಧಿಕಾರಾವಧಿ ಪೂರ್ಣಗೊಂಡ ಬಳಿಕ ಕಳೆದ ವರ್ಷದ ಡಿಸೆಂಬರ್‌ನಲ್ಲಿ ಮಲ್ಹೋತ್ರಾ ಅಧಿಕಾರವಹಿಸಿ ಕೊಂಡಿದ್ದಾರೆ. ಮಹಾತ್ಮ ಗಾಂಧಿ ಅವರ ಭಾವಚಿತ್ರ ಇರುವ ನೋಟುಗಳ ಸರಣಿಯಂತೆಯೇ ಈ ಹೊಸ ನೋಟುಗಳನ್ನು ವಿನ್ಯಾಸಗೊಳಿಸಲಾಗಿದೆ. ಹಳೆಯ ನೋಟುಗಳಿಗೆ ಅನ್ವಯಿಸುವ ನಿಯಮಾವಳಿಗಳು ಇವುಗಳಿಗೂ ಅನ್ವಯವಾಗಲಿವೆ ಎಂದು ತಿಳಿಸಿದೆ.

ರೂಪಾಯಿ ಮೌಲ್ಯ 16 ಪೈಸೆ ಇಳಿಕೆ

ಮುಂಬೈ (ಪಿಟಿಐ): ದಾಖಲೆ ಮಟ್ಟದಲ್ಲಿ ಏರಿಕೆ ಕಂಡಿದ್ದ ರೂಪಾಯಿ ಮೌಲ್ಯವು ಬುಧವಾರದ ವಹಿವಾಟಿನಲ್ಲಿ ಅಮೆರಿಕದ ಡಾಲರ್ ಎದುರು 16 ಪೈಸೆ ಇಳಿಕೆಯಾಗಿದೆ. ಪ್ರತೀ ಡಾಲರ್ ಮೌಲ್ಯ ₹86.95 ಆಗಿದೆ.

ಕರೆನ್ಸಿ ವಿನಿಮಯ ಮಾರುಕಟ್ಟೆಯಲ್ಲಿ ಆರಂಭಿಕ ವಹಿವಾಟಿನಲ್ಲಿ ಏರಿಕೆ ಕಂಡಿದ್ದ ರೂಪಾಯಿ ಮೌಲ್ಯವು, ವಹಿವಾಟಿನ ಅಂತ್ಯದಲ್ಲಿ ಈ ಸ್ಥಿರತೆ ಕಾಯ್ದುಕೊಳ್ಳುವಲ್ಲಿ ವಿಫಲವಾಯಿತು ಎಂದು ಮಾರುಕಟ್ಟೆ ತಜ್ಞರು ತಿಳಿಸಿದ್ದಾರೆ.

ಕಚ್ಚಾ ತೈಲದ ಬೆಲೆ ಇಳಿಕೆಯು ರೂಪಾಯಿಗೆ ಬಲ ನೀಡಿತ್ತು. ಆದರೆ, ದೇಶೀಯ ಷೇರುಪೇಟೆಯ ಕುಸಿತ ಹಾಗೂ ವಿದೇಶಿ ಬಂಡವಾಳದ ಹೊರಹರಿವಿನ ಪ್ರಮಾಣದ ಹೆಚ್ಚಳದಿಂದಾಗಿ ಇಳಿಕೆ ಕಂಡಿತು ಎಂದು ಹೇಳಿದ್ದಾರೆ.

6ನೇ ದಿನವೂ ಸೆನ್ಸೆಕ್ಸ್ ಕುಸಿತ ₹18 ಲಕ್ಷ ಕೋಟಿ ನಷ್ಟ



ಮುಂಬೈ (ಪಿಟಿಐ): ಸತತ ಆರನೇ ದಿನವಾದ ಬುಧವಾರವೂ ದೇಶದ ಷೇರುಪೇಟೆಯಲ್ಲಿ ನಕಾರಾತ್ಮಕ ವಹಿವಾಟು ನಡೆಯಿತು.

ವಿದೇಶಿ ಬಂಡವಾಳದ ಹೊರಹರಿವಿನ ಪ್ರಮಾಣ ಹೆಚ್ಚಳ ಹಾಗೂ ಅಮೆರಿಕದ ಸುಂಕ ನೀತಿಯಿಂದಾಗಿ ಸೂಚ್ಯಂಕಗಳು ಇಳಿಕೆ ಕಂಡಿವೆ.

ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್ 122 ಅಂಶ ಇಳಿಕೆ ಕಂಡು 76,171 ಅಂಶಗಳಲ್ಲಿ ಸ್ಥಿರಗೊಂಡಿತು. ವಹಿವಾಟಿನ ಒಂದು ಸಂದರ್ಭದಲ್ಲಿ 900 ಅಂಶ ಇಳಿಕೆ ಕಂಡಿತ್ತು.

ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 26 ಅಂಶ ಇಳಿಕೆಯಾಗಿ, 23,045 ಅಂಶಗಳಲ್ಲಿ ವಹಿವಾಟು ಮುಕ್ತಾಯಗೊಂಡಿತು.

ಫೆಬ್ರುವರಿ 4ರಿಂದ ಸೆನ್ಸೆಕ್ಸ್ 2,412 ಅಂಶ ಹಾಗೂ ನಿಫ್ಟಿ 694 ಅಂಶ ಇಳಿಕೆ ಕಂಡಿದೆ.

ಸೆನ್ಸೆಕ್ಸ್ ಗುಚ್ಛದಲ್ಲಿನ ಮಹೀಂದ್ರ ಆ್ಯಂಡ್ ಮಹೀಂದ್ರ, ಐಟಿಸಿ, ಪವರ್ ಗ್ರಿಡ್, ರಿಲಯನ್ಸ್ ಇಂಡಸ್ಟ್ರೀಸ್, ಇಂಡಸ್ ಇಂಡ್ ಬ್ಯಾಂಕ್, ಅದಾನಿ ಪೋರ್ಟ್ಸ್, ಟೈಟನ್ ಮತ್ತು ಇನ್ಫೊಸಿಸ್ ಷೇರಿನ ಮೌಲ್ಯದಲ್ಲಿ ಇಳಿಕೆಯಾಗಿದೆ.

ಆರು ದಿನಗಳಿಂದ ಹೂಡಿಕೆದಾರರ ಸಂಪತ್ತು ₹18 ಲಕ್ಷ ಕೋಟಿ ಕರಗಿದೆ.

ಪ್ರಶ್ನೋತ್ತರ



ಪ್ರಮೋದ ಶ್ರೀಕಾಂತ ದೈತೋಟ
ತೆರಿಗೆ ಮತ್ತು ವೈಯಕ್ತಿಕ ಹಣಕಾಸು ತಜ್ಞ

ವೇದಾಂತ ಪ್ರಕಾಶ್, ಬೆಂಗಳೂರು.

● **ಪ್ರಶ್ನೆ:** ನಾನು ಇತ್ತೀಚೆಗೆ ನಮ್ಮ ಹುಟ್ಟೂರಿನ ದೇವಸ್ಥಾನದ ಅಭಿವೃದ್ಧಿ ಕಾಮಗಾರಿಗಾಗಿ ನಗದು ರೂಪದಲ್ಲಿ ದೇಣಿಗೆ ನೀಡಿದ್ದೆ. ಅವರಲ್ಲಿ ಅಧಿಕೃತ ಬ್ಯಾಂಕ್ ಖಾತೆ ಇಲ್ಲದ ಕಾರಣ ನಗದು ಮೊತ್ತ ಕೊಡಬೇಕಾಯಿತು. ಆಡಳಿತ ಮಂಡಳಿಯ ಹೆಸರಿನಲ್ಲಿ ಪ್ಯಾನ್ ಕೂಡ ಇಲ್ಲ. ಆದರೆ, ನನ್ನಲ್ಲಿ ಅವರು ನೀಡಿದ ದೇಣಿಗೆ ರಸೀದಿ ಇದೆ. ಇದರ ಆಧಾರದ ಮೇಲೆ ನಾನು ಆದಾಯ ತೆರಿಗೆ ರಿಯಾಯಿತಿ ಪಡೆಯಬಹುದೇ?

ಉತ್ತರ: ಮೊದಲನೆಯದಾಗಿ ಆದಾಯ ತೆರಿಗೆಯ ಸೆಕ್ಷನ್ 80ಜಿ ಅಡಿ ತೆರಿಗೆ ರಿಯಾಯಿತಿ ಪಡೆಯಬೇಕಾದರೆ ದೇಣಿಗೆ ಸ್ವೀಕರಿಸುವ ಸಂಸ್ಥೆಯು ಆದಾಯ ತೆರಿಗೆ ಇಲಾಖೆಯಡಿ ನೋಂದಾಯಿಸಲ್ಪಟ್ಟಿರಬೇಕು. ಸ್ವೀಕರಿಸಿದ ದೇಣಿಗೆಯ ಮಾಹಿತಿಯನ್ನು ಅವರು ಹಿಂದಿನ ಆರ್ಥಿಕ ವರ್ಷಕ್ಕೆ ಸಂಬಂಧಿಸಿ ದೇಣಿಗೆ ನೀಡಿದವರ ಹೆಸರು, ಪ್ಯಾನ್, ವಿಳಾಸ, ಮೊತ್ತ ಇತ್ಯಾದಿ ಮಾಹಿತಿಗಳೊಂದಿಗೆ ನಿಗದಿತ ಫಾರಂನಲ್ಲಿ (ಫಾರಂ 10ಬಿಡಿ) ಆದಾಯ ತೆರಿಗೆ ಇಲಾಖೆಗೆ ಮೇ 31ರೊಳಗೆ ಸಲ್ಲಿಸಬೇಕಾಗಿರುತ್ತದೆ.

ದೇಣಿಗೆ ನೀಡಿದವರಿಗೆ 'ಫಾರಂ 10 ಬಿ ಇ' ಕೂಡ ನೀಡಬೇಕಾಗಿರುತ್ತದೆ. ನಿಮ್ಮ ಬಳಿ ಇರುವ ರಸೀದಿ ಆಧಾರದಲ್ಲಿ ತೆರಿಗೆ ರಿಯಾಯಿತಿ ಪಡೆಯಲು ಯತ್ನಿಸಿದರೂ ಆದಾಯ ತೆರಿಗೆ ಇಲಾಖೆಯಿಂದ ನೋಟಿಸ್ ಬರುವ ಸಾಧ್ಯತೆಯೇ ಹೆಚ್ಚು.

ನೀವು ತಿಳಿಸಿರುವ ಮಾಹಿತಿಯಂತೆ ಈ ಹಂತದಲ್ಲಿ ಅವನ್ನು ಪಡೆಯುವುದು ಸಾಧ್ಯವಿಲ್ಲದ ಕಾರಣ ಯಾವುದೇ ತೆರಿಗೆ ರಿಯಾಯಿತಿ ಪಡೆಯುವುದು ಸಾಧ್ಯವಿಲ್ಲ. ಅಲ್ಲದೆ, ₹2,000ಕ್ಕಿಂತ ಅಧಿಕ ದೇಣಿಗೆಯನ್ನು ಮಾನ್ಯತೆ ಇರುವ ಸಂಸ್ಥೆಗೆ ನಗದು ರೂಪದಲ್ಲಿ ಕೊಟ್ಟರೂ ತೆರಿಗೆ ರಿಯಾಯಿತಿ ಸಿಗುವುದಿಲ್ಲ. ನೀವು ಹೊಸ ತೆರಿಗೆ ಪದ್ಧತಿ ಅನುಸರಿಸುತ್ತಿದ್ದರೆ ಸೆಕ್ಷನ್ 80ಜಿ ಅಡಿ ತೆರಿಗೆ ರಿಯಾಯಿತಿ ಪಡೆಯುವ ಅವಕಾಶ ಇಲ್ಲ.

ರಜನಿ, ಮೈಸೂರು.

● **ಪ್ರಶ್ನೆ:** ನನ್ನ ಪುತ್ರಿಯ ಮದುವೆ ಖರ್ಚಿಗಾಗಿ ನಾನು ₹12 ಲಕ್ಷ ಮೊತ್ತವನ್ನು ಕಾರ್ಪೊರೇಟ್ ಬಾಂಡ್ ರೆಗ್ಯುಲರ್ ಗ್ರೋಥ್ ಯೋಜನೆಯಡಿ ಹೂಡಿಕೆ ಮಾಡಿದ್ದೇನೆ. ಮದುವೆ ಬಗ್ಗೆ ಹಾಗೂ ಹಣ ಪಡೆಯುವ ಸಂದರ್ಭದ ಬಗ್ಗೆ ನಿಖರವಾಗಿ ಈಗಲೇ ಊಹಿಸುವುದು ಸಾಧ್ಯವಿಲ್ಲ. ಈ ಫಂಡ್‌ನಲ್ಲಿ ಯಾವುದೇ ಎಕ್ಸಿಟ್ ಲೋಡ್ ಹಾಗೂ ಲಾಕ್ ಇನ್ ಅವಧಿ ಇಲ್ಲದ ಕಾರಣ ಈ ಫಂಡ್‌ನಲ್ಲಿ ಹಣ ತೊಡಗಿಸಿದ್ದೇನೆ.

ನನ್ನ ಪ್ರಶ್ನೆ ಏನೆಂದರೆ ಕಾರ್ಪೊರೇಟ್ ಬಾಂಡ್ ರೆಗ್ಯುಲರ್ ಗ್ರೋಥ್ ಪ್ಲಾನ್ ಉತ್ತಮವಾದುದೇ? ನಾನು ಇದರಲ್ಲೇ ಮುಂದುವರಿಯಲೇ? ಅಥವಾ ಈ ಫಂಡ್‌ನಿಂದ ಬೇರೆ ಫಂಡ್‌ಗೆ ಈ ಮೊತ್ತ ವರ್ಗಾಯಿಸಲೇ? ಅಲ್ಲದೆ ನನ್ನ ಬಳಿ ₹1.50 ಲಕ್ಷ ಹೆಚ್ಚುವರಿ ಇದೆ. ಈ ಮೊತ್ತವನ್ನು ಪ್ರಸ್ತುತ ಇರುವ ಕಾರ್ಪೊರೇಟ್ ಬಾಂಡ್ ರೆಗ್ಯುಲರ್ ಗ್ರೋಥ್ ಯೋಜನೆಯಲ್ಲೇ ಹೂಡಿಕೆ ಮಾಡಲೇ ಅಥವಾ ಇತರ ಸ್ಕೀಂನಲ್ಲಿ ತೊಡಗಿಸಲೇ. ಈ ಬಗ್ಗೆ ಸಲಹೆ ನೀಡಿ.

ಉತ್ತರ: ನಿಮ್ಮ ಪ್ರಶ್ನೆಗೆ ನೇರ ಉತ್ತರಿಸುವ ಮೊದಲು ಈ ಕಾರ್ಪೊರೇಟ್ ಬಾಂಡ್ ಸ್ಕೀಂ ಹೇಗೆ ಕಾರ್ಯ ನಿರ್ವಹಿಸಲ್ಪಡುತ್ತದೆ ಎಂಬ ಬಗ್ಗೆ ಮಾಹಿತಿ ಪಡೆದುಕೊಳ್ಳಿ. ಬಂಡವಾಳ ಅಗತ್ಯ ಇರುವ ಕಾರ್ಪೊರೇಟ್ ಸಂಸ್ಥೆಗಳು ತಮ್ಮ ಸಂಸ್ಥೆಯ ಹಣಕಾಸು ಸ್ಥಿರತೆಯ ಅರ್ಹತೆ (ಕ್ರೆಡಿಟ್ ರೇಟಿಂಗ್) ಮೇಲೆ ಸಾಲ ಪತ್ರ ವಿತರಿಸಿ ದೀರ್ಘಾವಧಿ ಉದ್ದೇಶಿತ ಪ್ರಾಜೆಕ್ಟ್‌ಗಳಿಗೆ (ಉದಾಹರಣೆಗೆ: ರಸ್ತೆ ನಿರ್ಮಾಣ, ಗೃಹ ನಿರ್ಮಾಣ, ಗ್ರಾಮೀಣ ವಿದ್ಯುತ್ ಸರಬರಾಜು ಇತ್ಯಾದಿ) ಹಣ ಸಂಗ್ರಹಿಸುತ್ತವೆ.

ಇಂತಹ ಸಾಲಪತ್ರಗಳನ್ನು ನೀವು ತಿಳಿಸಿರುವ ಕಾರ್ಪೊರೇಟ್ ಬಾಂಡ್‌ನಂತಹ ನಿರ್ದಿಷ್ಟ ವಿಭಾಗದ ಹೂಡಿಕೆಗಳಿರುವ ಫಂಡ್ ಹೌಸ್‌ಗಳು ಖರೀದಿಸುತ್ತವೆ. ಈ ಖರೀದಿಗೆ ಎನ್‌ಎಫ್‌ಒ ಮೂಲಕ ಆದ್ಯ ಹಂತದಲ್ಲಿ ಹಣ ಸಂಗ್ರಹಿಸಿ ಕಾರ್ಪೊರೇಟ್ ಬಾಂಡ್‌ಗಳನ್ನು ಖರೀದಿಸುತ್ತವೆ. ಇದಕ್ಕೆ ಪ್ರತಿಯಾಗಿ ಅವು ನಿಗದಿ ಮಾಡಿರುವ ಬಡ್ಡಿ ಮೊತ್ತವನ್ನು ಸಮಯಾನುಸಾರ ಗಳಿಸುತ್ತವೆ. ಈ ಆದಾಯ ಸಾಮಾನ್ಯವಾಗಿ ಶೇ 6ರಿಂದ ಶೇ 8 ಮಾತ್ರ ಇರುತ್ತದೆ. ಈ ವರ್ಗದಲ್ಲಿ ಬರುವ ಶೇ 70ಕ್ಕಿಂತ ಅಧಿಕ ಮೊತ್ತ ಬಾಂಡ್ ಹಾಗೂ ಡಿಬೆಂಚರ್‌ಗಳಲ್ಲೇ ತೊಡಗಿಸಲಾಗುತ್ತದೆ. ಉಳಿದ ಮೊತ್ತವನ್ನು ಸರ್ಕಾರಿ ಭದ್ರತೆ ಇರುವ ಬಾಂಡ್‌ಗಳಲ್ಲಿ ಹೂಡಲಾಗುತ್ತದೆ.

ಬಾಂಡ್ ಹಾಗೂ ಡಿಬೆಂಚರ್‌ಗಳಲ್ಲಿ ಹೂಡಿಕೆ ಮಾಡುವಾಗ ಫಂಡ್ ಹೌಸ್‌ಗಳು ವಿವಿಧ ಕಂಪನಿಯಲ್ಲಿ ನಿಗದಿತ ಮಿತಿಯೊಳಗೆ ಹೂಡಿಕೆ ಮಾಡುತ್ತವೆ. ಹೀಗಾಗಿ, ಒಂದು ಕಂಪನಿ ಅನಿರೀಕ್ಷಿತವಾಗಿ ಅಪಾಯದ ಹಂತಕ್ಕೆ ಬಂದರೂ ಒಟ್ಟಾರೆ ದೊಡ್ಡ ಅಪಾಯವಾಗುವುದಿಲ್ಲ.

ನಿಮ್ಮ ಮಾಹಿತಿಯಂತೆ ನಿಮಗೆ ಯಾವುದೇ ಸಂದರ್ಭದಲ್ಲಿ ಹಣ ಬೇಕೆಂದಾಗ ಸುಲಭದಲ್ಲಿ ಹಿಂಪಡೆಯುವ ಏಕೈಕ ಉದ್ದೇಶಕ್ಕಾಗಿಯಾದರೆ ಹಾಗೂ ಆದಾಯದ ಮೇಲೆ ನಿರ್ದಿಷ್ಟ ನಿರೀಕ್ಷೆ ಇಲ್ಲದಿದ್ದರೆ ಈ ಹೂಡಿಕೆಯಲ್ಲಿ ಮುಂದುವರಿಯುವುದರಲ್ಲಿ ತೊಂದರೆ ಇಲ್ಲ. ಆದರೆ, ಮಾಹಿತಿ ದೃಷ್ಟಿಯಿಂದ ಹೇಳುವುದಾದರೆ ಅತಿ ವಿರಳ ಹಾಗೂ ಅಪರೂಪದ ಸಂದರ್ಭದಲ್ಲಿ ಪರಿಗಣಿಸಬೇಕಾದ ಭದ್ರತೆಯ ದೃಷ್ಟಿಯಲ್ಲಿ ಈ ಹೂಡಿಕೆ ಬ್ಯಾಂಕ್‌ನಲ್ಲಿ ಮಾಡುವ ಹೂಡಿಕೆಗಳಿಗಿಂತ ನಂತರದ ಸ್ಥಾನದಲ್ಲಿ ಬರುತ್ತವೆ.

₹5 ಲಕ್ಷದ ತನಕದ ಠೇವಣಿಗೆ ಬ್ಯಾಂಕ್‌ಗಳಲ್ಲಿ ಠೇವಣಿ ನಷ್ಟ ವಿಮಾ ಸೌಲಭ್ಯ ಇದೆ ಹಾಗೂ ಬಡ್ಡಿದರ ಮೊದಲೇ ನಿಶ್ಚಿತ ಆಗಿರುತ್ತದೆ. ಆದರೆ, ಬಾಂಡ್‌ಗಳಲ್ಲಿ ಮಾರುಕಟ್ಟೆ ದರದ ಆಧಾರದ ಮೇಲೆ ಇದು ಅಲ್ಪ ಪ್ರಮಾಣದ ವ್ಯತ್ಯಾಸ ಆಗಬಹುದು. ನಿಮ್ಮ ಹೆಚ್ಚುವರಿ ಹಣವನ್ನು ಪ್ರತ್ಯೇಕವಾಗಿ ಬ್ಯಾಂಕ್ ಎಫ್.ಡಿಯಲ್ಲಿ ಹೂಡಿಕೆ ಮಾಡಿ. ಒಂದು ವೇಳೆ ಈ ಮೊತ್ತ 3 ರಿಂದ 5 ವರ್ಷ ಯಾವುದೇ ಅಗತ್ಯ ಇಲ್ಲ ಎಂದಾದರೆ ಮಾತ್ರ ಹಂತ ಹಂತದಲ್ಲಿ ಇತರೆ ಬ್ಯಾಲೆನ್ಸ್ಡ್ ಫಂಡ್, ಫ್ಲೆಕ್ಸಿ ಫಂಡ್ ಇತ್ಯಾದಿಗಳಲ್ಲಿ ತೊಡಗಿಸಬಹುದು.

ಹಣಕಾಸು, ತೆರಿಗೆ ಸಮಸ್ಯೆಗೆ ಪರಿಹಾರ

ಹಣಕಾಸಿಗೆ ಸಂಬಂಧಿಸಿದ ಪ್ರಶ್ನೆಗಳನ್ನು ಪತ್ರದಲ್ಲಿ (ದೂರವಾಣಿ ಸಂಖ್ಯೆ ಸಹಿತ) ಬರೆದು ಕಳುಹಿಸಿ.
ವಿಳಾಸ: ಪ್ರಶ್ನೋತ್ತರ, ವಾಣಿಜ್ಯ ವಿಭಾಗ, ಪ್ರಜಾವಾಣಿ, ನಂ.75, ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು–560001.
ಇ–ಮೇಲ್: businessdesk@prajavani.co.in

ರ‍್ಯಾಗಿಂಗ್: ಕೊಟ್ಟಾಯಂನಲ್ಲಿ ಐವರು ವಿದ್ಯಾರ್ಥಿಗಳ ಸೆರೆ

ಕೊಟ್ಟಾಯಂ (ಕೇರಳ) (ಪಿಟಿಐ): ಇಲ್ಲಿನ ಸರ್ಕಾರಿ ನರ್ಸಿಂಗ್ ಕಾಲೇಜಿನಲ್ಲಿ ನಡೆದಿರುವ ರ‍್ಯಾಗಿಂಗ್ ಪ್ರಕರಣಕ್ಕೆ ಸಂಬಂಧಿಸಿದಂತೆ ಐವರು ವಿದ್ಯಾರ್ಥಿಗಳನ್ನು ಬಂಧಿಸಲಾಗಿದೆ.

ಮೊದಲ ವರ್ಷದ ವಿದ್ಯಾರ್ಥಿಗಳಿಗೆ ಮೂರನೇ ವರ್ಷದ ವಿದ್ಯಾರ್ಥಿಗಳು ರ‍್ಯಾಗಿಂಗ್ ಮೂಲಕ ಕಿರುಕುಳ ನೀಡಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ವಿದ್ಯಾರ್ಥಿಗಳನ್ನು ಬೆತ್ತಲೆಗೊಳಿಸಿ, ಅವರ ಮರ್ಮಾಂಗಗಳಿಗೆ 'ಡಂಬಲ್'ಗಳನ್ನು ನೇತುಬಿಟ್ಟಿದ್ದರು. ಕೈವಾರಗಳಿಂದ ಚುಚ್ಚಿ ಗಾಯ ಮಾಡಿದ್ದರು. ಆ ಗಾಯಗಳಿಗೆ ಉರಿ ತರಿಸುವ ಕ್ರೀಮ್ ಹಚ್ಚಲಾಗಿತ್ತು. ನೋವಿನಿಂದ ಚೀರಿಕೊಂಡಾಗ ಬಾಯಿಗೂ ಬಲವಂತವಾಗಿ ಕ್ರೀಮ್ ಹಚ್ಚಿದ್ದರು ಎಂದು ನೊಂದ ವಿದ್ಯಾರ್ಥಿಯೊಬ್ಬರು ದೂರಿನಲ್ಲಿ ತಿಳಿಸಿದ್ದಾರೆ. ರಜಾದಿನಗಳಂದು ಮದ್ಯ ಖರೀದಿಸಲು ಕಿರಿಯ ವಿದ್ಯಾರ್ಥಿಗಳನ್ನು ಹೆದರಿಸಿ, ಹಣ ವಸೂಲಿ ಮಾಡುತ್ತಿದ್ದರು ಎಂದು ದೂರಿನಲ್ಲಿ ಉಲ್ಲೇಖಿಸಲಾಗಿದೆ.

ಮಾರ್ಸೇಲ್ ನಗರಕ್ಕೆ ಭೇಟಿ: ಸಾವರ್ಕರ್ ಸ್ಮರಿಸಿದ ಪ್ರಧಾನಿ

ಹುತಾತ್ಮ ಯೋಧರಿಗೆ ಮೋದಿ ನಮನ

ಪ್ಯಾರಿಸ್ (ಪಿಟಿಐ): ಫ್ರಾನ್ಸ್ ಪ್ರವಾಸದಲ್ಲಿರುವ ಪ್ರಧಾನಿ ನರೇಂದ್ರ ಮೋದಿ ಅವರು ಬುಧವಾರ ಮಾರ್ಸೇಲ್ ನಗರದಲ್ಲಿರುವ ಐತಿಹಾಸಿಕ ಮಜರ್ಗೆಸ್ ಸಮಾಧಿ ಸ್ಥಳಕ್ಕೆ ಭೇಟಿ ನೀಡಿ, ಭಾರತೀಯ ಹುತಾತ್ಮ ಸೈನಿಕರಿಗೆ ಗೌರವ ಸಲ್ಲಿಸಿದರು. ಫ್ರಾನ್ಸ್ ಅಧ್ಯಕ್ಷ ಇಮಾನ್ಯುಯೆಲ್ ಮ್ಯಾಕ್ರನ್ ಅವರು ಈ ವೇಳೆ ಜತೆಯಲ್ಲಿದ್ದರು.

ಹುತಾತ್ಮರ ಸ್ಮಾರಕಕ್ಕೆ ಮೋದಿ ಅವರು ತ್ರಿವರ್ಣದ ಹೂಗುಚ್ಛ ಅರ್ಪಿಸಿದರು. ಈ ಯುದ್ಧ ಸ್ಮಾರಕ ಮತ್ತು ಸಮಾಧಿ ಸ್ಥಳವನ್ನು 'ಕಾಮನ್‌ವೆಲ್ತ್ ವಾರ್ ಗ್ರೇವ್ಸ್ ಕಮಿಷನ್' (ಸಿಡಬ್ಲ್ಯುಜಿಸಿ) ನಿರ್ವಹಿಸುತ್ತಿದೆ.

1914–18ರವರೆಗೆ ನಡೆದ ಮೊದಲ ವಿಶ್ವ ಸಮರದಲ್ಲಿ ಮಡಿದ 1,487 ಸೈನಿಕರನ್ನು ಹಾಗೂ 1939–45ರವರೆಗಿನ ಎರಡನೇ ವಿಶ್ವ ಸಮರದಲ್ಲಿ ಮಡಿದ 267 ಸೈನಿಕರನ್ನು ಇಲ್ಲಿ ಸಮಾಧಿ ಮಾಡಲಾಗಿದೆ. ಇದರಲ್ಲಿ ಒಟ್ಟು 205 ಭಾರತೀಯ ಸೈನಿಕರ ಸಮಾಧಿಗಳಿವೆ ಎಂದು ಸಿಡಬ್ಲ್ಯುಜಿಸಿ ವೆಬ್‌ಸೈಟ್‌ನಲ್ಲಿ ತಿಳಿಸಿದೆ.

ಸಾವರ್ಕರ್ ಸ್ಮರಿಸಿದ ಮೋದಿ: ಮಾರ್ಸೇಲ್ ನಗರಕ್ಕೆ ಮ್ಯಾಕ್ರನ್ ಜತೆಗೆ ಮಂಗಳವಾರವೇ ಬಂದಿಳಿದಿದ್ದ ಪ್ರಧಾನಿ ಮೋದಿ, ಸ್ವಾತಂತ್ರ್ಯ ಹೋರಾಟಗಾರ ವಿ.ಡಿ.ಸಾವರ್ಕರ್ ಅವರನ್ನು ಸ್ಮರಿಸಿ 'ಎಕ್ಸ್'ನಲ್ಲಿ ಪೋಸ್ಟ್ ಮಾಡಿದ್ದರು.

'ಭಾರತದ ಸ್ವಾತಂತ್ರ್ಯ ಹೋರಾಟದ ಸಂದರ್ಭದಲ್ಲಿ ಈ ನಗರವೂ ವಿಶೇಷ ಪ್ರಾಮುಖ್ಯ ಪಡೆದಿದೆ. ಸಾರ್ವಕರ್ ಅವರು ಬ್ರಿಟಿಷರಿಂದ ತಪ್ಪಿಸಿಕೊಳ್ಳಲು ಯತ್ನಿಸಿದ್ದು ಇಲ್ಲಿಯೇ' ಎಂದು ಅವರು ಪೋಸ್ಟ್‌ನಲ್ಲಿ ಸ್ಮರಿಸಿದ್ದರು.

ಐಟಿಇಆರ್‌ಗೆ ಭೇಟಿ: ವಿಶ್ವದ ಅತಿದೊಡ್ಡ ವೈಜ್ಞಾನಿಕ ಸಂಶೋಧನಾ ಕೇಂದ್ರ ಕೆಡರಾಶ್‌ನಲ್ಲಿ ನಿರ್ಮಿಸಲಾಗುತ್ತಿರುವ ಅಂತರರಾಷ್ಟ್ರೀಯ ಥರ್ಮೋ ನ್ಯೂಕ್ಲಿಯರ್ ಪ್ರಾಯೋಗಿಕ ರಿಯಾಕ್ಟರ್ (ಐಟಿಇಆರ್) ಕಾಮಗಾರಿಯನ್ನು ಮೋದಿ ಹಾಗೂ ಮ್ಯಾಕ್ರನ್ ವೀಕ್ಷಿಸಿದರು.



ಮಾರ್ಸೇಲ್‌ನಲ್ಲಿರುವ ಮಜರ್ಗೆಸ್ ಸಮಾಧಿ ಸ್ಥಳಕ್ಕೆ ಬುಧವಾರ ಭೇಟಿ ನೀಡಿದ್ದ ಪ್ರಧಾನಿ ಮೋದಿ ಹಾಗೂ ಮ್ಯಾಕ್ರನ್ ಅವರು ಹುತಾತ್ಮ ಯೋಧರಿಗೆ ನಮನ ಸಲ್ಲಿಸಿದರು —ಪಿಟಿಐ ಚಿತ್ರ

ಪರಮಾಣು ಸಮ್ಮಿಳನ ಪ್ರಕ್ರಿಯೆ ಮೂಲಕ ವಿದ್ಯುತ್ ಉತ್ಪಾದಿಸುವ ಉದ್ದೇಶದಿಂದ ಐಟಿಇಆರ್ ಸ್ಥಾಪಿಸಲಾಗುತ್ತಿದೆ.

ಭಾರತ ಸೇರಿದಂತೆ 7 ರಾಷ್ಟ್ರಗಳು ಈ ಯೋಜನೆಯನ್ನು ಅನುಷ್ಠಾನಗೊಳಿಸುತ್ತಿವೆ. ಎಲ್‌ಆ್ಯಂಡ್ ಟಿ, ಐನಾಕ್ಸ್ ಇಂಡಿಯಾ, ಟಿಸಿಎಸ್, ಟಿಸಿಇ, ಎಚ್‌ಸಿಎಲ್ ಟೆಕ್ನಾಲಜೀಸ್ ಸೇರಿದಂತೆ ವಿವಿಧ ಕಂಪನಿಗಳಿಗೆ ಸೇರಿದ ಭಾರತದ 200 ವಿಜ್ಞಾನಿಗಳು ಈ ಪ್ರಾಜೆಕ್ಟ್‌ನಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾರೆ.

ಫ್ರಾನ್ಸ್ ಬೆಂಬಲ: ವಿಶ್ವಸಂಸ್ಥೆಯ ಭದ್ರತಾ ಮಂಡಳಿಯಲ್ಲಿ (ಯುಎನ್‌ಎಸ್‌ಸಿ) ಭಾರತಕ್ಕೆ ಕಾಯಂ ಸದಸ್ಯ ಸ್ಥಾನ ದೊರೆಯಬೇಕೆಂಬ ಆಗ್ರಹವನ್ನು ಫ್ರಾನ್ಸ್ ಬೆಂಬಲಿಸುತ್ತದೆ ಎಂದು ಮ್ಯಾಕ್ರನ್ ಪುನರುಚ್ಚರಿಸಿದರು.

ಇದೇ ವೇಳೆಮಾರ್ಸೇಲ್‌ನಲ್ಲಿ ಭಾರತದ ಹೊಸ ಕಾನ್ಸುಲೇಟ್ ಜನರಲ್ ಕಚೇರಿಯನ್ನು ಮೋದಿ ಮತ್ತು ಮ್ಯಾಕ್ರನ್ ಉದ್ಘಾಟಿಸಿದರು.

> **ಮೋದಿ ಅವರು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರಲ್ಲಿ ಎರಡು 'ಟಿ' ಕುರಿತು ಪ್ರಶ್ನಿಸಬೇಕು. ಒಂದು 'ಟಿ'- ಟ್ಯಾರಿಫ್ (ದರ), ಇನ್ನೊಂದು 'ಟಿ'- ಟ್ರಾಮ್ಯಾಟಿಕ್ ಡಿಪೋರ್ಷನ್ (ಆಘಾತಕಾರಿ ರೀತಿಯಲ್ಲಿ ಗಡೀಪಾರು ಮಾಡುವುದು)**
> **ಮಲ್ಲಿಕಾರ್ಜುನ ಖರ್ಗೆ** ಎಐಸಿಸಿ ಅಧ್ಯಕ್ಷ

ಪಶ್ಚಿಮ ಏಷ್ಯಾ ಮತ್ತು ಉಕ್ರೇನ್‌ನಲ್ಲಿನ ಯುದ್ಧ ಸೇರಿ ಅಂತರರಾಷ್ಟ್ರೀಯ ವಿಷಯಗಳ ಕುರಿತು ವಿಸ್ತೃತ ಮಾತುಕತೆ ನಡೆಸಿದ ಉಭಯ ನಾಯಕರು, ಮುಕ್ತ, ಎಲ್ಲರನ್ನೂ ಒಳಗೊಂಡ, ಸುರಕ್ಷಿತ ಮತ್ತು ಶಾಂತಿಯುತ ಇಂಡೋ-ಪೆಸಿಫಿಕ್ ಪ್ರದೇಶದ ಬಗ್ಗೆ ತಾವು ಹೊಂದಿರುವ ಬದ್ಧತೆಯ ಬಗ್ಗೆಯೂ ಒತ್ತಿ ಹೇಳಿದರು ಎಂದು ವಿದೇಶಾಂಗ ಕಾರ್ಯದರ್ಶಿ ವಿಕ್ರಮ್ ಮಿಶ್ರಿ ತಿಳಿಸಿದರು.

'ರಕ್ಷಣಾ ಸಹಕಾರ'

ಉಭಯ ರಾಷ್ಟ್ರಗಳ ನಡುವಿನ ದೀರ್ಘಕಾಲೀನ ರಕ್ಷಣಾ ಸಹಕಾರವನ್ನು ಮತ್ತಷ್ಟು ಗಾಢವಾಗಿಸುವ ಮಾರ್ಗಗಳ ಕುರಿತು ಮೋದಿ ಮತ್ತು ಮ್ಯಾಕ್ರನ್ ಅವರು ಬುಧವಾರ ಮಾತುಕತೆ ನಡೆಸಿದರು.

ಭಾರತದಲ್ಲಿ ಸ್ಕಾರ್ಪೀನ್ ಜಲಾಂತರ್ಗಾಮಿ ನೌಕೆಗಳ ನಿರ್ಮಾಣದಲ್ಲಿ ಆಗಿರುವ ಪ್ರಗತಿಯ ಬಗ್ಗೆ ಇಬ್ಬರೂ ಮೆಚ್ಚುಗೆ ವ್ಯಕ್ತಪಡಿಸಿದರು. ಅಲ್ಲದೆ, ಕ್ಷಿಪಣಿಗಳು, ಹೆಲಿಕಾಪ್ಟರ್ ಎಂಜಿನ್‌ಗಳು ಮತ್ತು ಯುದ್ಧ ವಿಮಾನಗಳ ಎಂಜಿನ್‌ಗಳ ತಯಾರಿಕೆ ಸಂಬಂಧ ಉಭಯ ದೇಶಗಳ ನಡುವೆ ನಡೆಯುತ್ತಿರುವ ಮಹತ್ವದ ಮಾತುಕತೆಗಳನ್ನು ಸ್ವಾಗತಿಸಿದರು.

ಪಿನಾಕಾ ಮಲ್ಟಿ-ಬ್ಯಾರೆಲ್ ರಾಕೆಟ್ ಲಾಂಚ್ (ಎಂಬಿಆರ್‌ಎಲ್) ವ್ಯವಸ್ಥೆಯನ್ನು ಹತ್ತಿರದಿಂದ ನೋಡಲು ಫ್ರಾನ್ಸ್ ಸೇನೆಗೆ ಆಹ್ವಾನ ನೀಡಿದ ಮೋದಿ, ಎಂಬಿಆರ್‌ಎಲ್ ಅನ್ನು ಫ್ರಾನ್ಸ್ ಖರೀದಿ ಮಾಡುತ್ತಿರುವುದು ಇಂಡೋ-ಫ್ರೆಂಚ್ ರಕ್ಷಣಾ ಸಂಬಂಧಗಳಲ್ಲಿ ಮತ್ತೊಂದು ಮೈಲಿಗಲ್ಲು ಆಗಿದೆ ಎಂದು ಬಣ್ಣಿಸಿದರು.

'ರಕ್ಷಣಾ ಕ್ಷೇತ್ರದಲ್ಲಿ ಸಂಶೋಧನೆ ಮತ್ತು ಅಭಿವೃದ್ಧಿ ಪಾಲುದಾರಿಕೆಗಳನ್ನು ಮತ್ತಷ್ಟು ಹೆಚ್ಚಿಸಲು, ಫ್ರಾನ್ಸ್‌ನ ಡಿಜಿಎ ಮತ್ತು ಭಾರತದ ಡಿಆರ್‌ಡಿಒ ನಡುವೆ ರಕ್ಷಣಾ ತಂತ್ರಜ್ಞಾನಗಳಲ್ಲಿನ ಸಹಕಾರಕ್ಕಾಗಿ, ತಾಂತ್ರಿಕ ವ್ಯವಸ್ಥೆಯ ಮೂಲಕ ಆರ್ ಆ್ಯಂಡ್ ಡಿ ಚೌಕಟ್ಟನ್ನು ಶೀಘ್ರದಲ್ಲೇ ಪ್ರಾರಂಭಿಸುವ ಬಗ್ಗೆಯೂ ಉಭಯ ನಾಯಕರು ಒತ್ತಿ ಹೇಳಿದರು' ಎಂದು ಜಂಟಿ ಹೇಳಿಕೆಯಲ್ಲಿ ತಿಳಿಸಿದೆ.

ಸುನಿತಾ, ಬುಚ್ ಮಾರ್ಚ್ ಮೊದಲ ವಾರ ಭೂಮಿಗೆ?


ವಾಷಿಂಗ್ಟನ್ (ಎಎಫ್‌ಪಿ): ಅಂತರರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣದಲ್ಲಿ (ಐಎಸ್‌ಎಸ್) ಸಿಲುಕಿರುವ, ಗಗನಯಾನಿಗಳಾದ ಸುನಿತಾ ವಿಲಿಯಮ್ಸ್ ಹಾಗೂ ಬುಚ್ ವಿಲ್ಮೋರ್ ಮಾರ್ಚ್ ಮೊದಲ ವಾರ ಅಥವಾ ಮಧ್ಯಭಾಗದಲ್ಲಿ ಭೂಮಿಗೆ ಮರಳುವ ಸಾಧ್ಯತೆಯಿದೆ ಎಂದು ನಾಸಾ ತಿಳಿಸಿದೆ. ಈ ಹಿಂದೆ ಏಪ್ರಿಲ್‌ನಲ್ಲಿ ಹಿಂತಿರುಗಲಿದ್ದಾರೆ ಎಂದು ತಿಳಿಸಿತ್ತು.

ಕಳೆದ ವರ್ಷ ಜೂನ್ 5ರಂದು, ಬೋಯಿಂಗ್ ಸಂಸ್ಥೆಯ ಸ್ಟಾರ್‌ಲೈನರ್ ಗಗನನೌಕೆಯಲ್ಲಿ ಸುನಿತಾ ಹಾಗೂ ವಿಲ್ಮೋರ್ ಅವರು ಐಎಸ್‌ಎಸ್‌ನತ್ತ ಪ್ರಯಾಣ ಬೆಳೆಸಿದ್ದರು. 8 ದಿನಗಳ ನಂತರ ಅವರು ಭೂಮಿಗೆ ಮರಳಬೇಕಿತ್ತು. ಆದರೆ, ಗಗನ-ನೌಕೆಯಲ್ಲಿ ಕಂಡುಬಂದ ತಾಂತ್ರಿಕ ದೋಷದಿಂದಾಗಿ ಸಾಧ್ಯವಾಗಿಲ್ಲ.

ಸ್ಟಾರ್‌ಲೈನರ್ ಗಗನನೌಕೆಯು ಈ ಇಬ್ಬರು ಗಗನಯಾತ್ರಿಗಳು ಇಲ್ಲದೆಯೇ ಭೂಮಿಗೆ ಮರಳುವುದು. ಗಗನಯಾತ್ರಿಗಳನ್ನು ಕರೆತರುವುದಕ್ಕೆ ಇಲಾನ್ ಮಸ್ಕ್ ಅವರ ಸ್ಪೇಸ್‌ಎಕ್ಸ್‌ನ ಗಗನನೌಕೆಯೊಂದನ್ನು ಬಳಸಿಕೊಳ್ಳುವುದಾಗಿ ನಾಸಾ ಆಗಸ್ಟ್‌ನಲ್ಲಿ ಪ್ರಕಟಿಸಿತ್ತು.

ಈಗ, ಇಬ್ಬರು ಗಗನಯಾನಿಗಳನ್ನು ಸ್ಪೇಸ್‌ಎಕ್ಸ್‌ನ ಕ್ರ್ಯೂ–9 ಕ್ಯಾಪ್ಸ್ಯುಲ್‌ನಲ್ಲಿ ಮರಳಿ ಭೂಮಿಗೆ ಕರೆತರಲು ನಾಸಾ ಸಿದ್ಧತೆ ನಡೆಸಿದೆ.

ಠಾಕ್ರೆಯಿಂದ ದೂರ ಸರಿದ ರಾಜನ್ ಸಾಳ್ವಿ



ರಾಜನ್ ಸಾಳ್ವಿ

ಮುಂಬೈ: ಶಿವಸೇನಾ ಮುಖ್ಯಸ್ಥ (ಯುಬಿಟಿ ಬಣ) ಉದ್ಧವ್ ಠಾಕ್ರೆ ಬಣದ ಪ್ರಮುಖ ನಾಯಕ, ಮಾಜಿ ಶಾಸಕ ರಾಜನ್ ಸಾಳ್ವಿ ಅರು ಶುಕ್ರವಾರ ಪಕ್ಷದ ಉಪಾಧ್ಯಕ್ಷ ಸ್ಥಾನಕ್ಕೆ ಬುಧವಾರ ರಾಜೀನಾಮೆ ಸಲ್ಲಿಸಿದ್ದಾರೆ. ಗುರುವಾರ ಠಾಣೆ ಜಿಲ್ಲೆಯಲ್ಲಿ ನಡೆಯಲಿರುವ ಕಾರ್ಯಕ್ರಮದಲ್ಲಿ ಮಹಾರಾಷ್ಟ್ರದ ಉಪಮುಖ್ಯಮಂತ್ರಿ ಏಕನಾಥ ಶಿಂದೆ ನೇತೃತ್ವದ ಶಿವಸೇನಾ ಪಕ್ಷವನ್ನು ಸೇರ್ಪಡೆಯಾಗುವ ಸಾಧ್ಯತೆ ಇದೆ.

ರಾಜನ್ ಸಾಳ್ವಿ (59) ಅವರು ರತ್ನಗಿರಿ ಜಿಲ್ಲೆಯ ರಾಜಾಪುರ್ ಕ್ಷೇತ್ರದಿಂದ 2009, 2014 ಹಾಗೂ 2019ರಲ್ಲಿ ಅವಿಭಜಿತ ಶಿವಸೇನಾ ಪಕ್ಷದಿಂದ ಗೆದ್ದಿದ್ದರು. 2022ರ ಜುಲೈನಲ್ಲಿ ಪಕ್ಷ ಇಬ್ಭಾಗಗೊಂಡ ಬಳಿಕ ಉದ್ಧವ್ ಠಾಕ್ರೆ ಜೊತೆಗೆ ಗುರುತಿಸಿಕೊಂಡಿದ್ದರು.

2024ರ ವಿಧಾನಸಭಾ ಚುನಾವಣೆಯಲ್ಲಿ ಶಿವಸೇನಾದ ಕಿರಣ್ ಸಾಮಂತ್ ವಿರುದ್ಧ ಸ್ಪರ್ಧಿಸಿ ಸೋಲುಂಡಿದ್ದರು. ಕಿರಣ್ ಅವರು ಮಹಾರಾಷ್ಟ್ರದ ಕೈಗಾರಿಕಾ ಸಚಿವ ಉದಯ್ ಸಾಮಂತ್ ಅವರ ಸಹೋದರ. ಶಿಂದೆ ಅವರ ಆತ್ಮೀಯ ಬಳಗದಲ್ಲಿ ಗುರುತಿಸಿಕೊಂಡಿದ್ದಾರೆ.

ಕಳೆದ ಚುನಾವಣೆಯಲ್ಲಿ ಪಕ್ಷದ ನಾಯಕರೇ ತಮ್ಮ ವಿರುದ್ಧ ಕೆಲಸ ಮಾಡಿದ್ದರಿಂದ ಸೋತಿದ್ದು, ಈ ಕುರಿತು ಉದ್ಧವ್ ಠಾಕ್ರೆ ಅವರನ್ನು ಭೇಟಿಯಾಗಿ ಅಸಮಾಧಾನ ತೋಡಿಕೊಂಡಿದ್ದರು. ಇದಾದ ಬಳಿಕ ಶಿಂದೆ ಅವರೊಂದಿಗೆ ಸಾಳ್ವಿ ಸಂಪರ್ಕದಲ್ಲಿದ್ದರು ಎನ್ನಲಾಗಿದೆ.

ಇದಲ್ಲದೇ, ಅಕ್ರಮ ಆಸ್ತಿ ಹೊಂದಿದ ಆರೋಪದ ಮೇಲೆ ರಾಜ್ಯದ ಭ್ರಷ್ಟಾಚಾರ ನಿಗ್ರಹ ದಳವು ಸಾಳ್ವಿ ವಿರುದ್ಧ ಈಗಾಗಲೇ ತನಿಖೆ ಆರಂಭಿಸಿದೆ.

ಶಿಂದೆ ಹೊಗಳಿದ ಪವಾರ್: ಉದ್ಧವ್ ಬಣ ಅಸಮಾಧಾನ



ಶರದ್ ಪವಾರ್

ಮುಂಬೈ (ಪಿಟಿಐ): ಎನ್‌ಸಿಪಿ (ಎಸ್‌ಪಿ) ಮುಖ್ಯಸ್ಥ ಶರದ್ ಪವಾರ್ ಅವರು ಮಹಾರಾಷ್ಟ್ರ ಉಪಮುಖ್ಯಮಂತ್ರಿ ಏಕನಾಥ ಶಿಂದೆಯವರ ಬಗ್ಗೆ ಹೊಗಳಿಕೆಯ ಮಾತುಗಳನ್ನಾಡಿರುವುದರಿಂದ 'ಮಹಾ ವಿಕಾಸ ಆಘಾಡಿ' (ಎಮ್‌ವಿಎ) ಮೈತ್ರಿಕೂಟದಲ್ಲಿ ಅಸಮಾಧಾನಕ್ಕೆ ಕಾರಣವಾಗಿದೆ.

ಸುದ್ದಿಗಾರರೊಂದಿಗೆ ದೆಹಲಿಯಲ್ಲಿ ಬುಧವಾರ ಮಾತನಾಡಿದ ಶಿವಸೇನಾ (ಉದ್ಧವ್ ಬಣ) ವಕ್ತಾರ ಸಂಜಯ್ ರಾವುತ್, 'ಅಮಿತ್ ಶಾ ಅವರ ನೆರವಿನಿಂದ, ಮಹಾರಾಷ್ಟ್ರದ ಎಂವಿಎ ಸರ್ಕಾರವನ್ನು ಉರುಳಿಸಿದ ಹಾಗೂ ಶಿವಸೇನಾ ಪಕ್ಷವನ್ನು ಒಡೆದ 'ದೇಶದ್ರೋಹಿ' ಏಕನಾಥ ಶಿಂದೆ ಅವರನ್ನು ಪವಾರ್ ಅವರು ಪ್ರಶಂಸಿಸಿದ್ದಾರೆ. ಪವಾರ್ ಅವರಿಂದ ಇಂಥದ್ದನ್ನು ನಾವು ನಿರೀಕ್ಷಿಸಿರಲಿಲ್ಲ' ಎಂದು ಬುಧವಾರ ಹೇಳಿದ್ದಾರೆ.

'ಪವಾರ್ ಅವರು ಶಿಂದೆಯವರನ್ನು ಹೊಗಳಿದ್ದರೂ, ಅದು ಪರೋಕ್ಷವಾಗಿ ಅಮಿತ್ ಶಾ ಅವರನ್ನು ಹೊಗಳಿದಂತಿದೆ. ಪವಾರರ ಈ ನಡೆಯಿಂದಾಗಿ ನಾವು ತಲೆ ತಗ್ಗಿಸುವಂತಾಗಿದೆ' ಎಂದು ರಾವುತ್ ಅವರು ಹೇಳಿದ್ದಾರೆ.

'ಶರದ್ ಪವಾರ್ ಅವರು ದೆಹಲಿಯಲ್ಲಿ ನಡೆಯಲಿರುವ 'ಅಖಿಲ ಭಾರತೀಯ ಮರಾಠಿ ಸಾಹಿತ್ಯ ಸಮ್ಮೇಳನ'ದ ಭಾಗವಾಗಿ ಈ ಮಾತುಗಳನ್ನಾಡಿದ್ದಾರೆ. ಇದರಲ್ಲಿ ತಪ್ಪೇನೂ ಇಲ್ಲ. ರಾವುತ್ ಅವರು ತಮ್ಮ ಅಭಿಪ್ರಾಯವನ್ನು ಹೇಳಿರಬಹುದು' ಎಂದು ಎನ್‌ಸಿಪಿ (ಎಸ್‌ಪಿ) ಸಂಸದ ಅಮೋಲ್ ಕೊಲ್ಹೆ ಪ್ರತಿಕ್ರಿಯಿಸಿದ್ದಾರೆ.

ಏಕನಾಥ ಶಿಂದೆ ಅವರು 'ಮಹಾದಜಿ ಶಿಂದೆ ರಾಷ್ಟ್ರ ಗೌರವ ಪುರಸ್ಕಾರ'ಕ್ಕೆ ಭಾಜನರಾಗಿದ್ದು, ದೆಹಲಿಯಲ್ಲಿ ಮಂಗಳವಾರ ನಡೆದ ಕಾರ್ಯಕ್ರಮದಲ್ಲಿ ಶರದ್ ಪವಾರ್ ಅವರು ಪ್ರಶಸ್ತಿ ಪ್ರದಾನ ಮಾಡಿ, ಪ್ರಶಂಸೆಯ ಮಾತುಗಳನ್ನಾಡಿದ್ದರು.

ಪರಾವಲಂಬಿ ವರ್ಗ ಸೃಷ್ಟಿಸುವ ಕೆಲಸವಾಗುತ್ತಿದೆ – ಆತಂಕ ವ್ಯಕ್ತಪಡಿಸಿದ ಸುಪ್ರೀಂ ಕೋರ್ಟ್

‘ಉಚಿತ ಕೊಡುಗೆ: ಜನ ಕೆಲಸ ಮಾಡುತ್ತಿಲ್ಲ’

ನವದೆಹಲಿ (ಪಿಟಿಐ): ಚುನಾವಣೆಗೆ ಮೊದಲು ‘ಉಚಿತ ಕೊಡುಗೆಗಳನ್ನು’ ಘೋಷಿಸುವ ರಾಜಕೀಯ ಪಕ್ಷಗಳ ಬಗ್ಗೆ ಸುಪ್ರೀಂ ಕೋರ್ಟ್ ಬುಧವಾರ ಅಸಮಾಧಾನ ವ್ಯಕ್ತಪಡಿಸಿದೆ. ದೇಶದ ಅಭಿವೃದ್ಧಿಗಾಗಿ ಜನರನ್ನು ಮುಖ್ಯವಾಹಿನಿಗೆ ತರುವ ಬದಲು, ‘ಪರಾವಲಂಬಿ ವರ್ಗವೊಂದನ್ನು ಸೃಷ್ಟಿಸುವ ಕೆಲಸ ಆಗುತ್ತಿದೆಯಲ್ಲವೇ’ ಎಂದು ಕೋರ್ಟ್ ಪ್ರಶ್ನಿಸಿದೆ.

ಜನರನ್ನು ಸಮಾಜದ ಮುಖ್ಯವಾಹಿನಿಗೆ ತಂದು, ಅವರು ದೇಶದ ಅಭಿವೃದ್ಧಿಗೆ ಕೊಡುಗೆ ನೀಡುವಂತೆ ಮಾಡುವುದು ಹೆಚ್ಚು ಉತ್ತಮ ಎಂದು ನ್ಯಾಯಮೂರ್ತಿಗಳಾದ ಬಿ.ಆರ್. ಗವಾಯಿ ಮತ್ತು ಆಗಸ್ಟೀನ್ ಜಾರ್ಜ್ ಮಸೀಹ್ ಅವರು ಇರುವ ವಿಭಾಗೀಯ ಪೀಠವು ಹೇಳಿದೆ.

‘ದೇಶದ ಅಭಿವೃದ್ಧಿಗೆ ಕೊಡುಗೆ ನೀಡುವ ಮೂಲಕ ಅವರು ಸಮಾಜದ ಮುಖ್ಯವಾಹಿನಿಯ ಭಾಗವಾಗುವಂತೆ ಮಾಡುವ ಬದಲು ನಾವು ಪರಾವಲಂಬಿ ವರ್ಗವೊಂದನ್ನು ಸೃಷ್ಟಿಸುತ್ತಿಲ್ಲವೇ’ ಎಂದು ಪೀಠ ಪ್ರಶ್ನಿಸಿದೆ.

‘ದುರದೃಷ್ಟದ ಸಂಗತಿಯೆಂದರೆ, ಚುನಾವಣೆಯ ಮಾತುಗಳು ನಡೆಯುತ್ತಿರುವಾಗ ಘೋಷಣೆಯಾಗುವ ‘ಲಾಡ್ಲಿ ಬಹೀಣ್’ನಂತಹ ಉಚಿತ ಕೊಡುಗೆಗಳ ಕಾರಣದಿಂದಾಗಿ ಜನರು ಕೆಲಸ ಮಾಡಲು ಮನಸ್ಸು ಮಾಡುತ್ತಿಲ್ಲ’ ಎಂದು ನ್ಯಾಯಮೂರ್ತಿ ಗವಾಯಿ ಹೇಳಿದರು.

ನಗರ ಪ್ರದೇಶಗಳಲ್ಲಿ ಮನೆ ಇಲ್ಲದವರಿಗೆ ಸೂರಿನ ಹಕ್ಕು ಕುರಿತ ಅರ್ಜಿಯ ವಿಚಾರಣೆ ನಡೆಸುವ ಸಂದರ್ಭದಲ್ಲಿ ಪೀಠವು ಈ ಮಾತು ಹೇಳಿದೆ.

ಅರ್ಜಿದಾರರಲ್ಲಿ ಒಬ್ಬರ ಪರವಾಗಿ ಹಾಜರಿದ್ದ ಹಿರಿಯ ವಕೀಲ ಪ್ರಶಾಂತ್ ಭೂಷಣ್, ಕೆಲಸ ಇದೆ ಎಂದಾದರೆ ಕೆಲಸ ಮಾಡಲು ಮನಸ್ಸು ಇಲ್ಲದವರ ಸಂಖ್ಯೆ ಈ ದೇಶದಲ್ಲಿ ಬಹಳ ಕಡಿಮೆ ಎಂದರು.

‘ನಿಮಗೆ ಒಂದು ಬದಿಯ ಮಾಹಿತಿ ಮಾತ್ರ ಇದ್ದಿರಬೇಕು. ನಾನು ಕೃಷಿ ಕುಟುಂಬದಿಂದ ಬಂದವನು. ಮಹಾರಾಷ್ಟ್ರದಲ್ಲಿ ಚುನಾವಣೆಗೆ ತುಸು ಮೊದಲು ಘೋಷಿಸಿದ ಉಚಿತ ಕೊಡುಗೆಗಳ ಕಾರಣದಿಂದಾಗಿ ಕೃಷಿಕರಿಗೆ ಕೂಲಿ ಕಾರ್ಮಿಕರು ಸಿಗುತ್ತಿಲ್ಲ’ ಎಂದು ನ್ಯಾಯಮೂರ್ತಿ ಗವಾಯಿ ಹೇಳಿದರು. ಆದರೆ ಈ ವಿಚಾರವಾಗಿ ಚರ್ಚೆಗೆ ತಾನು ಇಳಿಯುವುದಿಲ್ಲ ಎಂದು ಪೀಠ ಹೇಳಿತು.

ಕೋರ್ಟ್ ಸುದ್ದಿಗಳು

ಉಚಿತ ಕೊಡುಗೆ ವಿಚಾರಣೆಗೆ ನಕಾರ

ಉಚಿತ ಕೊಡುಗೆಗಳು ಹಾಗೂ ನಗದು ಕೊಡುವ ಯೋಜನೆಗಳ ಭರವಸೆಯನ್ನು ರಾಜಕೀಯ ಪಕ್ಷಗಳು ಚುನಾವಣೆಯ ಸಂದರ್ಭದಲ್ಲಿ ನೀಡುವುದನ್ನು ಪ್ರಶ್ನಿಸಿ ಸಲ್ಲಿಸಿದ್ದ ಅರ್ಜಿಯ ವಿಚಾರಣೆ ನಡೆಸಲು ದೆಹಲಿ ಹೈಕೋರ್ಟ್ ಬುಧವಾರ ನಿರಾಕರಿಸಿದೆ.

ಇದೇ ವಿಷಯಕ್ಕೆ ಸಂಬಂಧಿಸಿದ ಅರ್ಜಿಯನ್ನು ಸುಪ್ರೀಂ ಕೋರ್ಟ್ ಈಗಾಗಲೇ ವಿಚಾರಣೆಗೆ ಕೈಗೆತ್ತಿಕೊಂಡಿದೆ, ಅರ್ಜಿದಾರರು ಸುಪ್ರೀಂ ಕೋರ್ಟ್‌ಗೆ ಅರ್ಜಿ ಸಲ್ಲಿಸಬಹುದು ಎಂದು ಹೈಕೋರ್ಟ್ ಹೇಳಿದೆ. ದೆಹಲಿ ಹೈಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ಎಸ್.ಎನ್. ಧಿಂಗ್ರಾ ಈ ಅರ್ಜಿ ಸಲ್ಲಿಸಿದ್ದರು.

ಆದರೆ, ಅರ್ಜಿಯಲ್ಲಿ ಬಹಳ ಮುಖ್ಯವಾದ ಸಂಗತಿಗಳನ್ನು ಪ್ರಸ್ತಾಪಿಸಲಾಗಿದೆ ಎಂದು ಹೇಳಿದೆ. ಈ ಅರ್ಜಿಯನ್ನು ದೆಹಲಿ ಚುನಾವಣೆಗೂ ಮೊದಲು ಸಲ್ಲಿಸಲಾಗಿತ್ತು. ಆದರೆ ಅದು ಈಗ ವಿಚಾರಣೆಗೆ ಬಂದಿತ್ತು.

‘ಪ್ಲಾಸ್ಟಿಕ್ ಹೂವು: ನಿಷೇಧಿತ ವಸ್ತುಗಳ ಪಟ್ಟಿಗೆ ಏಕಿಲ್ಲ?’



ಮುಂಬೈ (ಪಿಟಿಐ): ಕೇಂದ್ರ ಸರ್ಕಾರ ಪ್ರಕಟಿಸಿರುವ ಏಕಬಳಕೆ ಪ್ಲಾಸ್ಟಿಕ್‌ನ ನಿಷೇಧಿತ ಪಟ್ಟಿಯಲ್ಲಿ ಪ್ಲಾಸ್ಟಿಕ್ ಹೂಗಳು ಸೇರ್ಪಡೆಗೊಂಡಿವೆಯೇ ಎಂಬುದರ ಕುರಿತು ವಿವರಣೆ ನೀಡುವಂತೆ ದೆಹಲಿ ಹೈಕೋರ್ಟ್ ಬುಧವಾರ ಕೇಂದ್ರ ಸರ್ಕಾರಕ್ಕೆ ಸೂಚಿಸಿದೆ.

ಪ್ಲಾಸ್ಟಿಕ್ ಹೂವುಗಳ ಬಳಕೆ ನಿಷೇಧಿಸುವಂತೆ ಕೋರಿ ಅಖಿಲ ಭಾರತ ಹೂ ಬೆಳೆಗಾರರ ಒಕ್ಕೂಟ (ಜಿಎಫ್‌ಸಿಐ) ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ ಮುಖ್ಯ ನ್ಯಾಯಮೂರ್ತಿ ಅಲೋಕ್ ಅರಾಧೆ ಹಾಗೂ ಭಾರತಿ ಡಾಂಗ್ರೆ ಅವರನ್ನು ಒಳಗೊಂಡ ವಿಭಾಗೀಯ ಪೀಠವು, ‘ಪ್ಲಾಸ್ಟಿಕ್ ಹೂಗಳನ್ನು ಮರುಬಳಕೆ ಮಾಡಲು ಅಥವಾ ಮಣ್ಣಿನಲ್ಲಿ ಸಹಜವಾಗಿ ಕರಗಿಹೋಗುವಂತೆ ಮಾಡಲು ಸಾಧ್ಯವೇ? ಏಕೆ ಇದನ್ನು ನಿಷೇಧಿತ ಪಟ್ಟಿಗೆ ಸೇರಿಸಿಲ್ಲ’ ಎಂದು ಪ್ರಶ್ನಿಸಿತು.

ಈ ಕುರಿತು ಎರಡು ವಾರಗಳ ಒಳಗಾಗಿ ಸೂಕ್ತ ಉತ್ತರ ಸಲ್ಲಿಸುವಂತೆ ಕೇಂದ್ರ ಸರ್ಕಾರಕ್ಕೆ ನಿರ್ದೇಶನ ನೀಡಿತು.

‘ಪ್ಲಾಸ್ಟಿಕ್ ಹೂಗಳ ಗರಿಷ್ಠ ದಪ್ಪವು 30 ಮೈಕ್ರಾನ್‌ನಷ್ಟಿರುತ್ತದೆ. 100 ಮೈಕ್ರಾನ್‌ಗಿಂತ ಕೆಳಗಿನ ಏಕಬಳಕೆಯ ಪ್ಲಾಸ್ಟಿಕ್ ಬಳಕೆಯನ್ನು ಈಗಾಗಲೇ ನಿಷೇಧಿಸಿ, ಸುತ್ತೋಲೆ ಹೊರಡಿಸಲಾಗಿದೆ. ಇದರಲ್ಲಿ ಪ್ಲಾಸ್ಟಿಕ್ ಹೂಗಳನ್ನು ಸೇರಿಸಿಲ್ಲ. ಈ ಕಾರಣದಿಂದ ಅವುಗಳನ್ನು ನಿಷೇಧಿಸಬೇಕು’ ಎಂದು ಕೋರಿ ಜಿಎಫ್‌ಸಿಐ ಅರ್ಜಿ ಸಲ್ಲಿಸಿತ್ತು.

‘ಶಾಲಾ ಕಟ್ಟಡ: ಸ್ಥಳೀಯ ನಿಯಮ ಪಾಲಿಸಬೇಕು’

ನವದೆಹಲಿ (ಪಿಟಿಐ): ದೇಶದಲ್ಲಿ ನರ್ಸರಿ ಮತ್ತು ಪ್ರಾಥಮಿಕ ಶಾಲೆಗಳ ಕಟ್ಟಡಗಳ ನಿರ್ಮಾಣ ಕಾರ್ಯವು ಸ್ಥಳೀಯ ನಿಯಮಗಳನ್ನು ಪಾಲಿಸಬೇಕು ಎಂದು ಸುಪ್ರೀಂ ಕೋರ್ಟ್ ಬುಧವಾರ ಸ್ಪಷ್ಟಪಡಿಸಿದೆ.

ಸುಪ್ರೀಂ ಕೋರ್ಟ್ 2009ರ ಏಪ್ರಿಲ್ 13ರಂದು ನೀಡಿದ್ದ ತೀರ್ಪಿನಲ್ಲಿದ್ದ ಕೆಲ ನಿರ್ದೇಶನಗಳ ಬಗ್ಗೆ ಸ್ಪಷ್ಟೀಕರಣ ಕೋರಿ ಕೇಂದ್ರೀಯ ಮಾಧ್ಯಮಿಕ ಶಿಕ್ಷಣ ಮಂಡಳಿ (ಸಿಬಿಎಸ್‌ಇ) ಅರ್ಜಿ ಸಲ್ಲಿಸಿತ್ತು.

ನ್ಯಾಯಮೂರ್ತಿಗಳಾದ ಬಿ.ಆರ್.ಗವಾಯಿ ಮತ್ತು ಆಗಸ್ಟೀನ್ ಜಾರ್ಜ್ ಮಸೀಹ್ ಅವರ ಪೀಠವು ಈ ಅರ್ಜಿಯ ವಿಚಾರಣೆ ನಡೆಸಿ ತೀರ್ಪು ನೀಡಿತು.



‘ವಿಚ್ಛೇದನ: ‘ಇಟ್ಟುಕೊಂಡವಳು’ ಎನ್ನುವಂತಿಲ್ಲ’

ಪ್ರಜಾವಾಣಿ ವಾರ್ತೆ

ನವದೆಹಲಿ: ‘ವಿಚ್ಛೇದನ ಪ್ರಕರಣಗಳಲ್ಲಿ ನ್ಯಾಯಾಲಯವು ಮಹಿಳೆಯನ್ನು ಉದ್ದೇಶಿಸಿ ‘ಇಟ್ಟುಕೊಂಡವಳು’ ಎಂಬಂತಹ ಬೈಗುಳದ ಪದಗಳನ್ನು ಬಳಸುವುದು ಸ್ತ್ರೀದ್ವೇಷದ ಮನಃಸ್ಥಿತಿ. ಇದು 21ನೇ ವಿಧಿಯಲ್ಲಿ ಹೇಳಿರುವ ಮೂಲಭೂತ ಹಕ್ಕುಗಳ ಉಲ್ಲಂಘನೆ ಮತ್ತು ಸಂವಿಧಾನದ ಆಶಯಕ್ಕೂ ವಿರುದ್ಧವಾದುದು’ ಎಂದು ಸುಪ್ರೀಂ ಕೋರ್ಟ್ ಬುಧವಾರ ಅಭಿಪ್ರಾಯಪಟ್ಟಿದೆ.

ಹಿಂದೂ ವಿವಾಹ ಕಾಯ್ದೆ ಅಡಿಯಲ್ಲಿ ವಿಚ್ಛೇದನ ಪಡೆದು, ಪತಿಯಿಂದ ಜೀವನಾಂಶ ಪಡೆದುಕೊಳ್ಳುವ ಸಂಬಂಧ ಪತ್ನಿಯು ಸಲ್ಲಿಸಿದ್ದ ಅರ್ಜಿಯ ವಿಚಾರಣೆಯ ವೇಳೆ ನ್ಯಾಯಮೂರ್ತಿಗಳಾದ ಅಭಯ್ ಎಸ್. ಓಕಾ, ಅಹ್ಸಾನುದ್ದೀನ್ ಅಮಾನುಲ್ಲಾ ಮತ್ತು ಆಗಸ್ಟೀನ್ ಜಾರ್ಜ್ ಮಸೀಹ್ ಅವರ ಪೀಠ ಈ ಅಭಿಪ್ರಾಯ ವ್ಯಕ್ತಪಡಿಸಿದೆ.

‘2004ರಲ್ಲಿ ಪ್ರಕರಣವೊಂದರ ತೀರ್ಪಿನಲ್ಲಿ ಬಾಂಬೆ ಹೈಕೋರ್ಟ್, ‘ಇಟ್ಟುಕೊಂಡವಳು’ ಎಂಬ ಉಲ್ಲೇಖವನ್ನು ಮಾಡಿದೆ. ಇದು ತಪ್ಪು. ಇದು ಮಹಿಳೆಯ ಘನತೆಗೆ ಧಕ್ಕೆ ತರುವಂಥ ಮಾತುಗಳಾಗಿವೆ. ಹೈಕೋರ್ಟ್‌ವೊಂದು ಇಂಥ ಪದಗಳನ್ನು ಬಳಸಿರುವುದು ಆಶ್ಚರ್ಯ ತಂದಿದೆ. ವಿಚ್ಛೇದನಕ್ಕೆ ಸಂಬಂಧಿಸಿ ಪತಿಯ ಕುರಿತು ಇದೇ ಹೈಕೋರ್ಟ್ ಇಂಥದ್ದೇ ಪದಗಳನ್ನು ಬಳಸುತ್ತದೆಯೇ’ ಎಂದು ಪೀಠ ಪ್ರಶ್ನಿಸಿದೆ.

ರೋಹಿಂಗ್ಯಾ ನಿರಾಶ್ರಿತರ ಮಕ್ಕಳಿಗೆ ಶಾಲಾ ಪ್ರವೇಶ: ವರದಿಗೆ ಸೂಚನೆ

ಪ್ರಜಾವಾಣಿ ವಾರ್ತೆ

ನವದೆಹಲಿ: ‘ಶಿಕ್ಷಣವು ಪ್ರತಿ ಮಗುವಿನ ಹಕ್ಕು. ಈ ವಿಷಯದಲ್ಲಿ ತಾರತಮ್ಯದ ಪ್ರಶ್ನೆಯೇ ಉದ್ಭವಿಸುವುದಿಲ್ಲ’ ಎಂದು ಸುಪ್ರೀಂ ಕೋರ್ಟ್ ಬುಧವಾರ ಅಭಿಪ್ರಾಯಪಟ್ಟಿದೆ.

ರೋಹಿಂಗ್ಯಾ ನಿರಾಶ್ರಿತರ ಮಕ್ಕಳಿಗೆ ದೆಹಲಿಯ ಶಾಲೆಗಳಿಗೆ ಪ್ರವೇಶ ಕುರಿತ ಅರ್ಜಿಗೆ ಸಂಬಂಧಿಸಿದ ವಿಚಾರಣೆಯ ವೇಳೆ ನ್ಯಾಯಮೂರ್ತಿಗಳಾದ ಸೂರ್ಯಕಾಂತ್ ಮತ್ತು ಎನ್. ಕೋಟೀಶ್ವರ ಸಿಂಗ್ ಅವರಿದ್ದ ಪೀಠ ಈ ಮಾತು ಹೇಳಿತು.

‘ಶಿಕ್ಷಣ ಕುರಿತು ತಾರತಮ್ಯದ ಪ್ರಶ್ನೆಯೇ ಇಲ್ಲ. ರೋಹಿಂಗ್ಯಾಗಳು ಎಲ್ಲಿ ವಾಸವಿದ್ದಾರೆ, ಅವರ ವಾಸಸ್ಥಳದ ಹಕ್ಕುಗಳೇನು ಎಂದು ತಿಳಿಸಿ’ ಎಂದು ರೋಹಿಂಗ್ಯಾ ನಿರಾಶ್ರಿತರ ಮಾನವಹಕ್ಕುಗಳ ರಕ್ಷಣೆ ಕುರಿತು ಎನ್‌ಜಿಒ ಪರ ವಕೀಲರಿಗೆ ತಿಳಿಸಿತು.

‘ರೋಹಿಂಗ್ಯಾ ನಿರಾಶ್ರಿತರಿಗೆ ವಿಶ್ವಸಂಸ್ಥೆಯ ಹೈಕಮಿಷನರ್ ನೀಡಿರುವ (ಯುಎನ್‌ಎಚ್‌ಸಿಆರ್) ಗುರುತಿನ ಚೀಟಿಗಳಿವೆ. ಈ ನಿರಾಶ್ರಿತರ ನೋಂದಣಿ ಬಳಿಕ ವಿಶ್ವಸಂಸ್ಥೆಯು ಇವರ ವಿವರಗಳನ್ನು ಪೊಲೀಸರಿಗೂ ನೀಡಲಿದ್ದು, ಪೊಲೀಸರು ಆಗಾಗ್ಗೆ ವಸ್ತುಸ್ಥಿತಿ ಪರಿಶೀಲನೆ ನಡೆಸಲಿದ್ದಾರೆ’ ಎಂದು ಎನ್‌ಜಿಒ ಪರ ವಕೀಲರು ಪೀಠದ ಗಮನಕ್ಕೆ ತಂದರು.

ಒಂದು ವೇಳೆ ರೋಹಿಂಗ್ಯಾಗಳು ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ತೆರಳಿದ್ದರೆ ಅದಕ್ಕೆ ಪೂರಕ ವರದಿಯ ಅಗತ್ಯವಿದೆ ಎಂದು ತಿಳಿಸಿದರು. ಈ ಸಂದರ್ಭದಲ್ಲಿ ಪೀಠವು ರೋಹಿಂಗ್ಯಾ ನಿರಾಶ್ರಿತರನ್ನು ಕುರಿತು ವರದಿ ಸಲ್ಲಿಸಲು ಸೂಚಿಸಿತು.

‘ಮಕ್ಕಳ ಪಟ್ಟಿ ಇರಲಿ. ಮೊದಲು ಇವರ ಪೋಷಕರ ವಿವರ ನೀಡಿ. ಅವರು ಹೇಗೆ, ಎಲ್ಲಿ ವಾಸವಿದ್ದಾರೆ. ವಾಸವಿರಲು ಅನುಮತಿ ಕೊಟ್ಟವರಾರು..’ ಇತ್ಯಾದಿ ಮಾಹಿತಿಗಳನ್ನು 10 ದಿನದಲ್ಲಿ ಒದಗಿಸಿ ಎಂದು ಸೂಚಿಸಿ, ವಿಚಾರಣೆಯನ್ನು ಮುಂದೂಡಿತು.

ಸಿಖ್ ವಿರೋಧಿ ದಂಗೆ: ಹತ್ಯೆ ಪ್ರಕರಣದಲ್ಲಿ ಸಜ್ಜನ್ ಅಪರಾಧಿ



ಸಜ್ಜನ್ ಕುಮಾರ್

ನವದೆಹಲಿ (ಪಿಟಿಐ): 1984ರ ಸಿಖ್ ವಿರೋಧಿ ದಂಗೆಗೆ ಸಂಬಂಧಿಸಿದ ಕೊಲೆ ಪ್ರಕರಣವೊಂದರಲ್ಲಿ ಕಾಂಗ್ರೆಸ್ಸಿನ ಮಾಜಿ ಸಂಸದ ಸಜ್ಜನ್ ಕುಮಾರ್ ಅವರನ್ನು ದೆಹಲಿಯ ನ್ಯಾಯಾಲಯವೊಂದು ಅಪರಾಧಿ ಎಂದು ಬುಧವಾರ ಘೋಷಿಸಿದೆ.

ಈ ಅಪರಾಧಕ್ಕಾಗಿ ಸಜ್ಜನ್ ಅವರಿಗೆ ಗರಿಷ್ಠ ಪ್ರಮಾಣದ ಶಿಕ್ಷೆಯಾಗಿ ಮರಣ ದಂಡನೆ ವಿಧಿಸಲು ಕೂಡ ಕಾನೂನಿನಲ್ಲಿ ಅವಕಾಶ ಇದೆ. ಅವರಿಗೆ ಕನಿಷ್ಠಪಕ್ಷ ಜೀವಾವಧಿ ಶಿಕ್ಷೆ ವಿಧಿಸಲಿಕ್ಕೂ ಅವಕಾಶ ಇದೆ. ಸಜ್ಜನ್ ಅವರು ಅಪರಾಧಿ ಎಂದು ಘೋಷಿಸಿದ ವಿಶೇಷ ನ್ಯಾಯಾಲಯದ ನ್ಯಾಯಾಧೀಶೆ ಕಾವೇರಿ ಬವೇಜಾ ಅವರು, ಶಿಕ್ಷೆಯ ಪ್ರಮಾಣ ಕುರಿತ ವಾದ–ಪ್ರತಿವಾದವನ್ನು ಫೆಬ್ರುವರಿ 18ಕ್ಕೆ ನಿಗದಿ ಮಾಡಿದ್ದಾರೆ.

ಆದೇಶದ ವಿಸ್ತೃತ ಪ್ರತಿ ಇನ್ನಷ್ಟೇ ಸಿಗಬೇಕಿದೆ. ಅಪರಾಧಿ ಎಂದು ಘೋಷಿಸುವ ಸಂದರ್ಭದಲ್ಲಿ ಸಜ್ಜನ್ ಅವರನ್ನು ತಿಹಾರ್ ಜೈಲಿನಿಂದ ನ್ಯಾಯಾಲಯಕ್ಕೆ ಕರೆತರಲಾಗಿತ್ತು. ದೆಹಲಿಯ ಪಾಲಂ ಕಾಲನಿಯಲ್ಲಿ ನಡೆದ ಐವರ ಹತ್ಯೆ ಪ್ರಕರಣದಲ್ಲಿ ಸಜ್ಜನ್ ಅವರಿಗೆ ದೆಹಲಿ ಹೈಕೋರ್ಟ್ ಜೀವಾವಧಿ ಶಿಕ್ಷೆ ವಿಧಿಸಿದೆ. ಈ ಶಿಕ್ಷೆಯನ್ನು ಪ್ರಶ್ನಿಸಿ ಅವರು ಸಲ್ಲಿಸಿರುವ ಅರ್ಜಿಯು ಸುಪ್ರೀಂ ಕೋರ್ಟ್‌ನಲ್ಲಿ ಬಾಕಿ ಇದೆ.

ಗುಂಪಿನ ನೇತೃತ್ವ ವಹಿಸಿದ್ದ ಸಜ್ಜನ್

ಜಸ್ವಂತ್ ಸಿಂಗ್ ಮತ್ತು ಅವರ ಪುತ್ರ ತರುಣ್‌ದೀಪ್ ಸಿಂಗ್ ಅವರನ್ನು 1984ರ ನವೆಂಬರ್ 1ರಂದು ಹತ್ಯೆ ಮಾಡಲಾಯಿತು. ಆರಂಭದಲ್ಲಿ ಈ ಪ್ರಕರಣ ತನಿಖೆಯನ್ನು ಪಂಜಾಬಿ ಬಾಗ್ ಪೊಲೀಸರು ನಡೆಸಿದರಾದರೂ, ನಂತರ ವಿಶೇಷ ತಂಡವೊಂದು (ಎಸ್‌ಐಟಿ) ತನಿಖೆ ನಡೆಸಿತು.

ಮಾಜಿ ಪ್ರಧಾನಿ ಇಂದಿರಾ ಗಾಂಧಿ ಅವರ ಹತ್ಯೆಗೆ ಸೇಡು ತೀರಿಸಿಕೊಳ್ಳುವ ಉದ್ದೇಶದಿಂದ ಮಾರಕ ಆಯುಧಗಳನ್ನು ಹೊಂದಿದ್ದ ಜನರ ಗುಂಪೊಂದು ಭಾರಿ ಪ್ರಮಾಣದಲ್ಲಿ ಲೂಟಿಗೆ, ಸಿಖ್ ಸಮುದಾಯದವರ ಆಸ್ತಿ ನಾಶಕ್ಕೆ ಇಳಿದಿತ್ತು. ಜಸ್ವಂತ್ ಅವರ ಮನೆಯ ಮೇಲೆ ದಾಳಿ ನಡೆಸಿದ ಗುಂಪು, ಅವರನ್ನು ಮತ್ತು ಅವರ ಮಗನನ್ನು ಕೊಂದು ಮನೆಯಲ್ಲಿದ್ದ ವಸ್ತುಗಳನ್ನು ಲೂಟಿ ಮಾಡಿತು ಎಂದು ಪ್ರಾಸಿಕ್ಯೂಷನ್ ಆರೋಪಿಸಿತ್ತು.

ಸಜ್ಜನ್ ಅವರು ಈ ಗುಂಪಿನ ನೇತೃತ್ವ ವಹಿಸಿದ್ದರು ಎಂದು ಮೇಲ್ನೋಟಕ್ಕೆ ಹೇಳಲು ಸಾಕಷ್ಟು ಆಧಾರಗಳಿವೆ ಎಂದು ವಿಚಾರಣೆ ವೇಳೆ ಕೋರ್ಟ್ ಹೇಳಿತ್ತು. ಗಲಭೆ ನಡೆದ ಸಂದರ್ಭದಲ್ಲಿ ಸಜ್ಜನ್ ಅವರು ಕಾಂಗ್ರೆಸ್ಸಿನ ಪ್ರಭಾವಿ ನಾಯಕ ಆಗಿದ್ದರು, ಸಂಸದರೂ ಆಗಿದ್ದರು.

ಅಯೋಧ್ಯೆ: ರಾಮಮಂದಿರದ ಪ್ರಧಾನ ಅರ್ಚಕ ನಿಧನ



ಸತ್ಯೇಂದ್ರ ದಾಸ್

ಲಖನೌ (ಪಿಟಿಐ): ಅಯೋಧ್ಯೆ ರಾಮಮಂದಿರದ ಪ್ರಧಾನ ಅರ್ಚಕ ಆಚಾರ್ಯ ಸತ್ಯೇಂದ್ರ ದಾಸ್ (85) ಅವರು ಬುಧವಾರ ನಿಧನರಾದರು.

ಮಿದುಳು ನಿಷ್ಕ್ರಿಯಗೊಂಡಿದ್ದ ಕಾರಣ ಫೆ.3ರಿಂದ ಸಂಜಯ್ ಗಾಂಧಿ ವೈದ್ಯಕೀಯ ಕಾಲೇಜು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದ ಸತ್ಯೇಂದ್ರ ದಾಸ್ ಅವರು ಆಸ್ಪತ್ರೆಯಲ್ಲೇ ನಿಧನರಾಗಿದ್ದಾರೆ ಎಂದು ವೈದ್ಯರು ತಿಳಿಸಿದರು.

ತಮ್ಮ 20ನೇ ವಯಸ್ಸಿಗೆ ದೀಕ್ಷೆ ಪಡೆದಿದ್ದ ಸತ್ಯೇಂದ್ರ ಅವರು 1992ರಲ್ಲಿ ಬಾಬ್ರಿ ಮಸೀದಿ ಧ್ವಂಸದ ಸಂದರ್ಭದಲ್ಲಿ ಶ್ರೀ ರಾಮನ ತಾತ್ಕಾಲಿಕ ದೇಗುಲದ ಅರ್ಚಕರಾಗಿದ್ದರು. ರಾಮಜನ್ಮಭೂಮಿಯು ಸರ್ಕಾರದ ಆಡಳಿತಕ್ಕೆ ಒಳಪಟ್ಟ ಬಳಿಕ ಅವರನ್ನು ಪ್ರಧಾನ ಅರ್ಚಕರನ್ನಾಗಿ ನೇಮಕ ಮಾಡಲಾಗಿತ್ತು.

ಮಣಿಪುರ: ರಾಜ್ಯಪಾಲರ ಭೇಟಿ ಮಾಡಿದ ಸಂಬಿತ್ ಪಾತ್ರಾ



ಸಂಬಿತ್ ಪಾತ್ರಾ

ಇಂಫಾಲ್ (ಪಿಟಿಐ): ಎನ್. ಬಿರೇನ್ ಸಿಂಗ್ ಅವರು ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ಸಲ್ಲಿಸಿದ್ದ ನಂತರ ಮಣಿಪುರದ ರಾಜಕೀಯದಲ್ಲಿ ಉಂಟಾಗಿರುವ ನಾಯಕತ್ವ ಬಿಕ್ಕಟ್ಟು ಮುಂದುವರಿದಿದ್ದು, ಬಿಜೆಪಿ ಮುಖಂಡ ಸಂಬಿತ್ ಪಾತ್ರಾ ಅವರು ರಾಜ್ಯಪಾಲ ಅಜಯ್ ಕುಮಾರ್ ಭಲ್ಲಾ ಅವರನ್ನು ಬುಧವಾರ ಭೇಟಿ ಮಾಡಿ ಚರ್ಚಿಸಿದರು. ಆದರೆ, ಚರ್ಚೆಯ ವಿವರಗಳು ಗೊತ್ತಾಗಿಲ್ಲ.

ಪಾತ್ರಾ ಅವರು ಬಿಜೆಪಿಯ ಈಶಾನ್ಯ ರಾಜ್ಯಗಳ ಉಸ್ತುವಾರಿಯೂ ಹೌದು. ಪಾತ್ರಾ ನೇತೃತ್ವದ ನಿಯೋಗವು ರಾಜ್ಯಪಾಲರನ್ನು ಮಂಗಳವಾರವೂ ಭೇಟಿ ಮಾಡಿತ್ತು.

ಮಣಿಪುರದಲ್ಲಿ ಹೊಸದಾಗಿ ಸರ್ಕಾರ ರಚಿಸಲು ಯಾರೂ ಹಕ್ಕು ಮಂಡಿಸುತ್ತಿಲ್ಲವಾದ ಕಾರಣ, ರಾಜ್ಯದಲ್ಲಿ ಸಾಂವಿಧಾನಿಕ ಬಿಕ್ಕಟ್ಟು ಸೃಷ್ಟಿಯಾಗಬಹುದು ಎಂದು ತಜ್ಞರು ಎಚ್ಚರಿಸಿದ್ದಾರೆ. ಪರಿಸ್ಥಿತಿ ಇದೇ ರೀತಿ ಮುಂದುವರಿದರೆ ರಾಜ್ಯದಲ್ಲಿ ರಾಷ್ಟ್ರಪತಿ ಆಡಳಿತ ಜಾರಿಗೆ ಬರಬಹುದು ಎಂದು ಅವರು ಎಚ್ಚರಿಸಿದ್ದಾರೆ.

ಪ್ರತಿ ಆರು ತಿಂಗಳಿಗೆ ಒಮ್ಮೆ ರಾಜ್ಯಪಾಲರು ವಿಧಾನಸಭೆಯ ಅಧಿವೇಶನವನ್ನು ಕರೆಯಬೇಕು ಎಂದು ಸಂವಿಧಾನದಲ್ಲಿ ಹೇಳಲಾಗಿದೆ. ಆರು ತಿಂಗಳ ಅವಧಿಯನ್ನು ವಿಸ್ತರಿಸಲು ಅವಕಾಶ ಇಲ್ಲ. ಆರು ತಿಂಗಳು ಪೂರ್ಣಗೊಂಡ ನಂತರದಲ್ಲಿ ರಾಜ್ಯದಲ್ಲಿ ಸಾಂವಿಧಾನಿಕ ಬಿಕ್ಕಟ್ಟು ಸೃಷ್ಟಿಯಾಗುತ್ತದೆ, ಸಂವಿಧಾನದ 356ನೆಯ ವಿಧಿಯ ಅಡಿಯಲ್ಲಿ ರಾಷ್ಟ್ರಪತಿ ಆಡಳಿತ ಹೇರುವ ಆಯ್ಕೆ ಮಾತ್ರವೇ ಉಳಿದಿರುತ್ತದೆ ಎಂದು ಸುಪ್ರೀಂ ಕೋರ್ಟ್‌ನ ಹಿರಿಯ ವಕೀಲ ಅರುಣಭ್ ಚೌಧರಿ ಅಭಿಪ್ರಾಯಪಟ್ಟಿದ್ದಾರೆ.

ಮಣಿಪುರದಲ್ಲಿ ಫೆ.10ರಿಂದ ವಿಧಾನಸಭೆಯ ಅಧಿವೇಶನ ಆರಂಭವಾಗಬೇಕಿತ್ತು. ಆದರೆ ಸಿಂಗ್ ರಾಜೀನಾಮೆಯ ನಂತರ ರಾಜ್ಯಪಾಲರು ಅಧಿವೇಶನವನ್ನು ರದ್ದುಪಡಿಸಿದ್ದಾರೆ.

ಸಂಕ್ಷಿಪ್ತ ಸುದ್ದಿ

ಮೊಮ್ಮಗನ ನಿರೀಕ್ಷೆ: ನಟ ಚಿರಂಜೀವಿ ಹೇಳಿಕೆಗೆ ಟೀಕೆ



ಚಿರಂಜೀವಿ

ಹೈದರಾಬಾದ್ (ಪಿಟಿಐ): ಮೊಮ್ಮಗನನ್ನು ಹೊಂದುವ ಬಯಕೆ ಕುರಿತು ನಟ ಚಿರಂಜೀವಿ ನೀಡಿದ್ದ ಹೇಳಿಕೆಗೆ ಸಾಮಾಜಿಕ ಜಾಲತಾಣಗಳಲ್ಲಿ ಟೀಕೆ ವ್ಯಕ್ತವಾಗಿದೆ.

ಮಂಗಳವಾರ ಕಾರ್ಯಕ್ರಮವೊಂದರಲ್ಲಿ ಚಿರಂಜೀವಿ ಭಾಗಿಯಾಗಿದ್ದರು. ಈ ವೇಳೆ ಚಿರಂಜೀವಿ ಅವರು ತಮ್ಮ ಮೊಮ್ಮಕ್ಕಳೊಂದಿಗೆ ಇರುವ ಚಿತ್ರವನ್ನು ಪ್ರದರ್ಶಿಸಲಾಯಿತು.

ಆಗ ಚಿರಂಜೀವಿ, ‘ನಾನು ಹುಡುಗಿಯರ ಹಾಸ್ಟಲ್‌ನ ವಾರ್ಡನ್ ಎಂಬಂತೆ ಭಾಸವಾಗುತ್ತದೆ. ಮನೆ ಪೂರ್ತಿ ಹೆಣ್ಣುಮಕ್ಕಳಿದ್ದಾರೆ. ಈ ಬಾರಿ ನನ್ನ ಮಗ ಚರಣ್ (ನಟ ರಾಮ್ ಚರಣ್) ನಮ್ಮ ಕುಟುಂಬದ ಘನತೆ ಕಾಪಾಡಲು ಗಂಡುಮಗುವನ್ನು ಹೊಂದುತ್ತಾನೆ ಎಂದು ನಂಬಿದ್ದೇನೆ’ ಎಂದು ಮಾತನಾಡಿದ್ದರು.

‘ತಮ್ಮ ಪುತ್ರ ಮತ್ತೆ ಹೆಣ್ಣುಮಗುವನ್ನೇ ಹೊಂದಿದರೆ ಏನು ಗತಿ’ ಎಂದೂ ಹೇಳಿದ್ದರು.

ಚಿರಂಜೀವಿ ಅವರ ಈ ಹೇಳಿಕೆಗೆ ಹಲವರು ವಿರೋಧ ವ್ಯಕ್ತಪಡಿಸಿದ್ದಾರೆ. ಈ ಬಗ್ಗೆ ನಟ ತಕ್ಷಣಕ್ಕೆ ಯಾವುದೇ ಪ್ರತಿಕ್ರಿಯೆ ನೀಡಿಲ್ಲ.

ನಾಯಿಗಳು ಕಚ್ಚಿ ಎಳೆದಾಡಿದ್ದ ನವಜಾತ ಶಿಶುವಿನ ಶವ ಪತ್ತೆ

ಜಾಲೌನ್ (ಉತ್ತರ ಪ್ರದೇಶ), (ಪಿಟಿಐ): ಬೀದಿ ನಾಯಿಗಳು ಕಚ್ಚಿ ಎಳೆದಾಡಿದ್ದ ನವಜಾತ ಶಿಶುವಿನ ಭಾಗಶಃ ದೇಹವು ಉತ್ತರ ಪ್ರದೇಶದ ಲಲಿತ್‌ಪುರ್ ಜಿಲ್ಲಾ ಮಹಿಳಾ ಆಸ್ಪತ್ರೆ ಸಮೀಪದ ಕಸದ ತೊಟ್ಟಿಯಲ್ಲಿ ಬುಧವಾರ ಪತ್ತೆಯಾಗಿದೆ.

‘ಫೆ. 9ರಂದು ಸಂಗೀತಾ ಹೆಸರಿನ ಮಹಿಳೆಯು ಅಸಹಜ ಬೆಳವಣಿಗೆ ಇದ್ದ ಶಿಶುವಿಗೆ ಜನ್ಮ ನೀಡಿದ್ದರು. ಶಿಶುವನ್ನು ನಿಗಾ ಘಟಕದಲ್ಲಿ ಇರಿಲಾಗಿತ್ತು. ಚಿಕಿತ್ಸೆಗೆ ಸ್ಪಂದಿಸದೆ ಮೃತಪಟ್ಟಿತ್ತು. ಆಗ ಶವವನ್ನು ಕುಟುಂಬವರಿಗೆ ನೀಡಲಾಗಿತ್ತು’ ಎಂದು ಆಸ್ಪತ್ರೆ ವೈದ್ಯಾಧಿಕಾರಿ ಮೀನಾಕ್ಷಿ ದೇವಿ ಹೇಳಿದರು.

‘ಈಗ ಕಸದ ತೊಟ್ಟಿಯಲ್ಲಿ ಪತ್ತೆಯಾದ ಶಿಶುವಿನ ದೇಹದಲ್ಲಿ ಟ್ಯಾಗ್ ಒಂದು ಸಿಕ್ಕಿದೆ. ಅದರ ಪ್ರಕಾರ, ಪತ್ತೆಯಾಗಿರುವ ಭಾಗಶಃ ದೇಹ ಸಂಗೀತಾ ಅವರ ಶಿಶುವಿನದ್ದೇ ಆಗಿದೆ. ದೇಹದ ಉಳಿದ ಭಾಗವನ್ನು ಪರೀಕ್ಷೆಗಾಗಿ ಶವಾಗಾರಕ್ಕೆ ಕಳುಹಿಸಲಾಗಿದೆ’ ಎಂದು ತಿಳಿಸಿದರು.

‘ವ್ಯಕ್ತಿಯೊಬ್ಬರಿಗೆ ₹200 ಕೊಟ್ಟರೆ ಅವರೇ ಶವದ ಅಂತ್ಯಕ್ರಿಯೆ ನಡೆಸುತ್ತಾರೆ ಎಂದು ಶುಶ್ರೂಷಕಿ ತಿಳಿಸಿದ್ದರು. ಅದರಂತೆ, ಒಬ್ಬರಿಗೆ ಶವ ನೀಡಿದ್ದೆವು’ ಎಂದು ಮಹಿಳೆಯ ಪತಿ ಅಖಿಲೇಶ್ ಹೇಳಿಕೆ ನೀಡಿದರು.

ಬಹುಶಃ ಹಣ ಮತ್ತು ಶವವನ್ನು ಪಡೆದಿದ್ದ ವ್ಯಕ್ತಿಯು, ಅಂತ್ಯಕ್ರಿಯೆ ನಡೆಸದೆ ಕಸದ ತೊಟ್ಟಿಗೆ ಎಸೆದಿರುವಂತೆ ಕಾಣುತ್ತದೆ ಎಂದು ಹೇಳಿದ್ದಾರೆ.

ಪ್ರತ್ಯೇಕ ಕಾರ್ಯಾಚರಣೆ: ಮೂವರು ಉಗ್ರರ ಬಂಧನ

ಇಂಫಾಲ್ (ಪಿಟಿಐ): ಪ್ರತ್ಯೇಕ ಕಾರ್ಯಾಚರಣೆಯಲ್ಲಿ ಮಣಿಪುರದ ಇಂಫಾಲ್ ಪಶ್ಚಿಮ ಜಿಲ್ಲೆಯಲ್ಲಿ ಸುಲಿಗೆ ಕೃತ್ಯದಲ್ಲಿ ತೊಡಗಿದ್ದ ಮೂವರು ಉಗ್ರರನ್ನು ಪೊಲೀಸರು ಬಂಧಿಸಿದ್ದಾರೆ.

ಬಂಧಿತರು ನಿಷೇಧಿತ ಪ್ರಿಪಾಕ್ ಪ್ರೊ ಸಂಘಟನೆಯ ಸದಸ್ಯರು. ಇವರನ್ನು ನಾಮ್‌ದುಲೊಂಗ್ ಖುಮಾನ್ ಲಂಪಕ್ ಕ್ರೀಡಾಂಗಣದ ರಸ್ತೆಯಲ್ಲಿ ಬಂಧಿಸಲಾಯಿತು ಎಂದು ಪೊಲೀಸರು ತಿಳಿಸಿದ್ದಾರೆ.

ನಿಷೇಧಿತ ಪ್ರಿಪಾಕ್ ಪ್ರೊ ಸಂಘಟನೆಯ ಕರಪತ್ರ ಮತ್ತು ಇತರೆ ಪರಿಕರಗಳನ್ನು ಬಂಧಿತರಿಂದ ವಶಕ್ಕೆ ಪಡೆಯಲಾಗಿದೆ. ಇನ್ನೊಂದು ಪ್ರಕರಣದಲ್ಲಿ ನಿಷೇಧಿತ ಕಾಂಗ್ಲೀಪಾಕ್ ಕಮ್ಯುನಿಸ್ಟ್ ಪಾರ್ಟಿ ಸದಸ್ಯನೊಬ್ಬನನ್ನು ಲಾಂಗೋಲ್ ಗೇಮ್ ಗ್ರಾಮದಲ್ಲಿ ಬಂಧಿಸಲಾಗಿದೆ.

ಬಂಧಿತನಿಂದ ಎರಡು ರೇಡಿಯೊ ಸೆಟ್, ನಾಲ್ಕು ಚಾರ್ಜರ್‌ಗಳು, ಬ್ಯಾಗ್, 58 ಖಾಲಿ ಶೆಲ್‌ಗಳಿದ್ದ ಎರಡು ಅಶ್ರುವಾಯು ಶೆಲ್‌ಗಳ ಬಾಕ್ಸ್‌ಗಳನ್ನು ವಶಕ್ಕೆ ಪಡೆಯಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಪುಣ್ಯಸ್ನಾನ...




ಮಾಘ ಹುಣ್ಣಿಮೆ ದಿನವಾದ ಬುಧವಾರ ಪ್ರಯಾಗರಾಜ್‌ನ ಸಂಗಮದಲ್ಲಿ ಸುಮಾರು 2.50 ಕೋಟಿ ಜನರು ಪುಣ್ಯಸ್ನಾನ ಮಾಡಿ ಪುಳಕಿತರಾದರು. ಸ್ನಾನದಲ್ಲಿ ಭಾಗಿಯಾದ ಭಕ್ತರ ಮೇಲೆ ಹೆಲಿಕಾಪ್ಟರ್ ಮೂಲಕ ಪುಷ್ಪವೃಷ್ಟಿ ಮಾಡಲಾಯಿತು. ಕ್ರಿಕೆಟಿಗ ಅನಿಲ್ ಕುಂಬ್ಳೆ ಹಾಗೂ ಪತ್ನಿ ಚೇತನಾ ರಾಮತೀರ್ಥ ಅವರು ಸಾಮಾನ್ಯ ಭಕ್ತರಂತೆ ಸಂಗಮಕ್ಕೆ ಭೇಟಿ ನೀಡಿ ಪುಣ್ಯಸ್ನಾನದಲ್ಲಿ ಭಾಗಿಯಾಗಿ, ಧಾರ್ಮಿಕ ವಿಧಿವಿಧಾನಗಳನ್ನು ನೆರವೇರಿಸಿದರು.

– ಚಿತ್ರ: ತಾಜುದ್ದೀನ್ ಆಜಾದ್

– ಪಿಟಿಐ ಚಿತ್ರಗಳು

ಆರ್‌ಎಸ್‌ಎಸ್ ಕಚೇರಿ ಪುನರ್‌ನಿರ್ಮಾಣ



ಮೋಹನ್ ಭಾಗವತ್

ನವದೆಹಲಿ (ಪಿಟಿಐ): ರಾಷ್ಟ್ರೀಯ ಸ್ವಯಂಸೇವಕ ಸಂಘವು (ಆರ್‌ಎಸ್‌ಎಸ್) ರಾಷ್ಟ್ರ ರಾಜಧಾನಿಯಲ್ಲಿ ಈ ಹಿಂದಿದ್ದ ತನ್ನ ಕಚೇರಿ ಸ್ಥಳದಲ್ಲೇ ಹೊಸ ಕಚೇರಿ ಸಂಕೀರ್ಣವನ್ನು ನಿರ್ಮಿಸಿದೆ.

3.75 ಎಕರೆ ಜಾಗದಲ್ಲಿ ತಲಾ ಹದಿಮೂರು ಅಂತಸ್ತಿನ ಮೂರು ಕಟ್ಟಡಗಳು ಆಧುನಿಕ ತಂತ್ರಜ್ಞಾನದ ಸ್ಪರ್ಶದೊಂದಿಗೆ ಪ್ರಾಚೀನ ವಾಸ್ತುಶಿಲ್ಪ ಶೈಲಿಯಲ್ಲಿ ನಿರ್ಮಾಣಗೊಂಡಿದ್ದು, 300 ಕೊಠಡಿಗಳನ್ನು ಒಳಗೊಂಡಿವೆ.

ಹಿಂದುತ್ವದ ಬಗ್ಗೆ ಒಲವು ಹೊಂದಿರುವ 75 ಸಾವಿರಕ್ಕೂ ಹೆಚ್ಚು ಜನರಿಂದ ಸಂಗ್ರಹಿಸಲಾದ ₹150 ಕೋಟಿ ದೇಣಿಗೆ ಮೊತ್ತದಲ್ಲಿ, ಎಂಟು ವರ್ಷಗಳಲ್ಲಿ ಈ ಸಂಕೀರ್ಣವನ್ನು ನಿರ್ಮಿಸಲಾಗಿದೆ. ಕೋವಿಡ್–19 ಪಿಡುಗಿನಿಂದ ನಿರ್ಮಾಣ ವಿಳಂಬವಾಯಿತು ಎಂದು ಮೂಲಗಳು ತಿಳಿಸಿವೆ.

ದೆಹಲಿ ಘಟಕವು ಫೆ. 19ರಂದು ಸಂಘಟಿಸಿರುವ ‘ಕಾರ್ಯಕರ್ತರ ಸಮ್ಮೇಳನ’ದಲ್ಲಿ ಸರಸಂಘ ಚಾಲಕ ಮೋಹನ್ ಭಾಗವತ್ ಹಾಗೂ ಸರಕಾರ್ಯವಾಹ ದತ್ತಾತ್ರೇಯ ಹೊಸಬಾಳೆ ಪಾಲ್ಗೊಳ್ಳಲಿದ್ದಾರೆ. ಅಖಿಲ ಭಾರತೀಯ ಪ್ರತಿನಿಧಿ ಸಭಾ ಮಾರ್ಚ್ 21ರಿಂದ 23ರವರೆಗೆ ಬೆಂಗಳೂರಿನಲ್ಲಿ ನಡೆಯಲಿದೆ ಎನ್ನಲಾಗಿದೆ.

ರೈತ ಮುಖಂಡ ಬಲದೇವ್ ಆಸ್ಪತ್ರೆಗೆ ದಾಖಲು



ಬಲದೇವ್

ಚಂಡೀಗಢ (ಪಿಟಿಐ): ಎಂಎಸ್‌ಪಿಗೆ ಕಾನೂನು ಖಾತರಿ ಸೇರಿದಂತೆ ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಪ್ರತಿಭಟನೆ ನಡೆಸುತ್ತಿದ್ದ ಹಿರಿಯ ರೈತ ಮುಖಂಡ ಬಲದೇವ್ ಸಿಂಗ್ ಸಿರ್ಸಾ ಅವರಿಗೆ ಹೃದಯ ಸಂಬಂಧಿ ಸಮಸ್ಯೆ ಉಂಟಾದ ಕಾರಣ ಅವರನ್ನು ಬುಧವಾರ ಆಸ್ಪತ್ರೆಗೆ ದಾಖಲಿಸಲಾಗಿದೆ.

ಖನೌರಿಯಲ್ಲಿ ನಡೆಯುತ್ತಿದ್ದ ಪ್ರತಿಭಟನೆಯಲ್ಲಿ ಹಲವು ತಿಂಗಳುಗಳಿಂದ ಭಾಗಿಯಾಗಿದ್ದ ಬಲದೇವ್ ಅವರು ಇಂದು ಬೆಳಿಗ್ಗೆ ಅಸ್ವಸ್ಥರಾಗಿದ್ದರು. ಬಳಿಕ ಆಂಬುಲೆನ್ಸ್ ಮೂಲಕ ಅವರನ್ನು ಪಟಿಯಾಲದ ಸರ್ಕಾರಿ ಆಸ್ಪತ್ರೆಗೆ ಕರೆದೊಯ್ಯಲಾಯಿತು.

‘ಬಲದೇವ್ ಅವರಿಗೆ ಹೃದಯ ಸಂಬಂಧಿ ಸಮಸ್ಯೆ ಇರುವುದು ದೃಢಪಟ್ಟಿದ್ದು, ಅವರನ್ನು ತುರ್ತು ನಿಗಾ ಘಟಕದಲ್ಲಿ ಇರಿಸಲಾಗಿದೆ’ ಎಂದು ವೈದ್ಯರು ಹೇಳಿದ್ದಾರೆ. ಖನೌರಿಯಲ್ಲಿ ಪ್ರತಿಭಟನೆ ಆರಂಭವಾಗಿ ಒಂದು ವರ್ಷ ಪೂರ್ಣಗೊಂಡಿರುವ ಕಾರಣ ರೈತರು ಬುಧವಾರ ‘ಕಿಸಾನ್ ಮಹಾಪಂಚಾಯತ್’ ಅನ್ನು ಆಯೋಜಿಸಿದ್ದರು.

ಮಾನಸಿಕ ಒತ್ತಡದ ಕಾರಣ ಚರ್ಚಿಸಿ, ನಿರಾಳರಾಗಿ: ನಟಿ ದೀಪಿಕಾ ಸಲಹೆ



ದೀಪಿಕಾ

ನವದೆಹಲಿ (ಪಿಟಿಐ): ‘ವಿದ್ಯಾರ್ಥಿಗಳು ತಮಗಿರುವ ಮಾನಸಿಕ ಒತ್ತಡದ ಕಾರಣಗಳನ್ನು ಗುರುತಿಸಿ, ತಂದೆ–ತಾಯಿ ಅಥವಾ ತಾವು ವಿಶ್ವಾಸವುಳ್ಳ ವ್ಯಕ್ತಿಗಳ ಜೊತೆಗೆ ಚರ್ಚಿಸಬೇಕು’ ಎಂದು ನಟಿ ದೀಪಿಕಾ ಪಡುಕೋಣೆ ಸಲಹೆ ಮಾಡಿದ್ದಾರೆ.

ಪ್ರಧಾನ ಮಂತ್ರಿಯವರ ‘ಪರೀಕ್ಷಾ ಪೇ ಚರ್ಚಾ’ ಕಾರ್ಯಕ್ರಮದಲ್ಲಿ ಸಂವಾದದಲ್ಲಿ ಭಾಗವಹಿಸಿದ್ದ ನಟಿ, ಮಾನಸಿಕ ಆರೋಗ್ಯದ ಮಹತ್ವ, ಅದರ ನಿರ್ವಹಣೆ, ಪರೀಕ್ಷಾ ಸಂದರ್ಭದಲ್ಲಿ ನಿರಾಳವಾಗುವ ಕ್ರಮಗಳನ್ನು ಕುರಿತು ಅನಿಸಿಕೆಗಳನ್ನು ಹಂಚಿಕೊಂಡರು.

‘ಸ್ಪರ್ಧೆ ಮತ್ತು ಹೋಲಿಕೆ ಬದುಕಿನ ಭಾಗವೇ ಆಗಿದೆ. ಸ್ಪರ್ಧೆ ಕೆಟ್ಟದ್ದಲ್ಲ. ಸಾಮರ್ಥ್ಯ ಮತ್ತು ದೌರ್ಬಲ್ಯಗಳನ್ನು ಗುರುತಿಸಬೇಕು. ದೌರ್ಬಲ್ಯದಿಂದ ಹೊರಬರಲು ಯತ್ನಿಸಬೇಕು’ ಎಂದರು.

‘ಮಾನಸಿಕ ಒತ್ತಡವಿದ್ದರೆ ಪರೀಕ್ಷೆಯ ಮುನ್ನಾದಿನ ಪೋಷಕರ ಜೊತೆಗೆ ಮುಕ್ತವಾಗಿ ಮಾತನಾಡಿ’ ಎಂದು ಬುಧವಾರ ಪ್ರಸಾರವಾದ ಕಾರ್ಯಕ್ರಮದಲ್ಲಿ ದೀಪಿಕಾ ಅವರು ಅಭಿಪ್ರಾಯ ಹಂಚಿಕೊಂಡಿದ್ದಾರೆ.

‘ಮಾನಸಿಕ ಆರೋಗ್ಯ ಸರಿಯಿಲ್ಲ ಎಂದು ಹೇಳಿಕೊಳ್ಳುವುದು ನಮ್ಮ ದೇಶದಲ್ಲಿ ಅಪಮಾನ ಎಂಬ ಭಾವನೆ ಇದೆ. ವಾಸ್ತವದಲ್ಲಿ, ಅದರ ಬಗ್ಗೆ ಚರ್ಚಿಸಿದಷ್ಟೂ ನಾವು ನಿರಾಳರಾಗುತ್ತೇವೆ. 2015ರಲ್ಲಿ ನಾನೂ ಮಾನಸಿಕ ಆರೋಗ್ಯ ಸಮಸ್ಯೆ ಎದುರಿಸಿದ್ದೆ. ಆಗಿನಿಂದಲೇ ಈ ಬಗ್ಗೆ ಜಾಗೃತಿ ಮೂಡಿಸಲು ಮುಂದಾದೆ. ಖಿನ್ನತೆ, ಆತಂಕ, ಒತ್ತಡ ಯಾರಿಗೇ, ಯಾವುದೇ ಸಂದರ್ಭದಲ್ಲಿ ಎದುರಾಗಬಹುದಾಗಿದೆ’ ಎಂದು ಅಭಿಪ್ರಾಯಪಟ್ಟರು.

ಹಿಂದಿನ ಆವೃತ್ತಿಗಳಲ್ಲಿ ಬಾಕ್ಸರ್ ಮೇರಿ ಕೋಮ್ ಮತ್ತು ಅಧ್ಯಾತ್ಮ ಚಿಂತಕ ಜಗ್ಗಿ ವಾಸುದೇವ್ ತಮ್ಮ ಅನಿಸಿಕೆಗಳನ್ನು ಹಂಚಿಕೊಂಡಿದ್ದರು.

ಆಲ್‌ರೌಂಡ್ ಆಟಕ್ಕೆ ಒಲಿದ ಜಯ

ಸರಣಿ ಕ್ಲೀನ್‌ಸ್ವೀಪ್ ಮಾಡಿದ ಭಾರತ • ಇಂಗ್ಲೆಂಡ್‌ಗೆ 142 ರನ್ ಸೋಲು • ಗಿಲ್ ಏಳನೇ ಶತಕ

ಅಹಮದಾಬಾದ್ (ಪಿಟಿಐ): ಆರಂಭ ಆಟಗಾರ ಶುಭಮನ್ ಗಿಲ್ ಅವರ ಆಕರ್ಷಕ ಶತಕ ಸೇರಿದಂತೆ ಬ್ಯಾಟರ್‌ಗಳ ಉತ್ತಮ ಪ್ರದರ್ಶನದ ನೆರವಿನಿಂದ ಭಾರತ ತಂಡ ಮೂರನೇ ಹಾಗೂ ಅಂತಿಮ ಏಕದಿನ ಪಂದ್ಯದಲ್ಲಿ ಬುಧವಾರ ಇಂಗ್ಲೆಂಡ್ ತಂಡವನ್ನು 142 ರನ್‌ಗಳಿಂದ ಸದೆಬಡಿಯಿತು. ಸರಣಿಯನ್ನು 3-0 ಯಿಂದ ಕ್ಲೀನ್‌ಸ್ವೀಪ್ ಮಾಡಿತು.

ಭಾರತ ಆಟದ ಎಲ್ಲ ವಿಭಾಗಗಳಲ್ಲಿ ವಿಜೃಂಭಿಸಿತು. ಸರಣಿಯಲ್ಲಿ ಎರಡು ಅರ್ಧಶತಕಗಳನ್ನು ಗಳಿಸಿ ಮಿಂಚಿದ್ದ ಉಪ ನಾಯಕ ಗಿಲ್ (112) ಅವರು ಏಕದಿನ ಮಾದರಿಯಲ್ಲಿ ಏಳನೇ ಶತಕ ದಾಖಲಿಸಿದರು. ಲಯಕ್ಕೆ ಮರಳಿದ ಪ್ರಮುಖ ಬ್ಯಾಟರ್ ವಿರಾಟ್ ಕೊಹ್ಲಿ (52, 55 ಎಸೆತ) ಲಗುಬಗನೇ ಅರ್ಧಶತಕ ಬಾರಿಸಿದರೆ, ಶ್ರೇಯಸ್ ಅಯ್ಯರ್ (78, 64ಎ) ಮತ್ತೊಮ್ಮೆ ಮಿಂಚಿನ ಆಟವಾಡಿದರು. ಭಾರತ ಕೊನೆಯ ಎಸೆತದಲ್ಲಿ ಆಲ್‌ಔಟ್ ಆದ ಭಾರತ 356 ರನ್‌ಗಳ ಭಾರಿ ಮೊತ್ತ ಗಳಿಸಿತು.

ಬ್ಯಾಟರ್‌ಗಳ ಅಬ್ಬರದ ನಂತರ ಬೌಲರ್‌ಗಳು ಸಾಂಘಿಕ ಪ್ರದರ್ಶನ ನೀಡಿ ಪ್ರವಾಸಿ ತಂಡವನ್ನು 34.2 ಓವರುಗಳಲ್ಲಿ 214 ರನ್‌ಗಳಿಗೆ ಉರುಳಿಸಿ ಅಧಿಕಾರಯುತವಾಗಿ ಪಂದ್ಯ ಗೆಲ್ಲಲು ನೆರವಾದರು. ರನ್‌ಗಳ ಆಧಾರದಲ್ಲಿ ಇದು ಇಂಗ್ಲೆಂಡ್ ವಿರುದ್ಧ ಭಾರತಕ್ಕೆ ಎರಡನೇ ಅತಿ ದೊಡ್ಡ ಜಯ.

'ಇಂಗ್ಲೆಂಡ್ ಕಥೆ ಇಲ್ಲೂ ಭಿನ್ನವಾಗಿರಲಿಲ್ಲ. ಬೆನ್ ಡಕೆಟ್ (34) ಮತ್ತು ಫಿಲ್ ಸಾಲ್ಟ್ (24) ಅವರಿಂದ ಪ್ರವಾಸಿ ತಂಡ ಬಿರುಸಿನ ಆರಂಭ ಪಡೆಯಿತು. 6.2 ಓವರುಗಳಲ್ಲಿ 60 ರನ್‌ಗಳು ಹರಿದುಬಂದಿದ್ದವು. ಆದರೆ ನಂತರ ನಿಯಮಿತವಾಗಿ ವಿಕೆಟ್‌ಗಳು ಪತನಗೊಂಡವು. ಪಂದ್ಯ ಮುಂದುವರಿದಂತೆ ಪಿಚ್‌ನಲ್ಲಿ ಸ್ಪಿನ್ನರ್‌ಗಳನ್ನು ಆಡುವುದೂ ಸುಲಭವಾಗಿರಲಿಲ್ಲ. ಭಾರತದ ಎದುರು ಮೊದಲ ಪಂದ್ಯ ಆಡಿದ ಟಾಮ್ ಬ್ಯಾಂಟನ್ 41 ಎಸೆತ ಗಳಲ್ಲಿ 38 ರನ್ ಗಳಿಸಿದರು. 10 ಓವರುಗಳಲ್ಲಿ 2 ವಿಕೆಟ್‌ಗೆ 84 ರನ್ ಗಳಿಸಿದ್ದ ಇಂಗ್ಲೆಂಡ್ ಹೋರಾಟ ನಂತರ ಕ್ಷೀಣಿಸತೊಡಗಿತು.

ಎಡಗೈ ವೇಗಿ ಅರ್ಷದೀಪ್ ಸಿಂಗ್ (33ಕ್ಕೆ2) ಆರಂಭ ಆಟಗಾರರ ವಿಕೆಟ್ ಪಡೆದರು. ಹರ್ಷಿತ್ ರಾಣಾ, ಹಾರ್ದಿಕ್ ಪಾಂಡ್ಯ, ಅಕ್ಷರ್ ಪಟೇಲ್ ತಲಾ ಎರಡು ವಿಕೆಟ್ ಪಡೆದರು.

ಗಿಲ್ ಸೊಬಗಿನಾಟ: ಉತ್ತಮ ಲಯದಲ್ಲಿರುವ ಗಿಲ್, ಇದಕ್ಕೆ ಮೊದಲು ಭಾರತ ತಂಡದ ಇನಿಂಗ್ಸ್‌ಗೆ ಬಲ ತುಂಬಿದರು. ಅವರಿಗೆ ಕೊಹ್ಲಿ ಮತ್ತು ಅಯ್ಯರ್ ಉತ್ತಮ ಬೆಂಬಲ ನೀಡಿದರು. ಕೊಹ್ಲಿ ಜೊತೆ 116 ರನ್ ಸೇರಿಸಿದರೆ, ಶ್ರೇಯಸ್ ಅಯ್ಯರ್ ಜೊತೆ 104 ರನ್ ಜೊತೆಯಾಟವಾಡಿದರು. ನರೇಂದ್ರ ಮೋದಿ ಕ್ರೀಡಾಂಗಣದಲ್ಲಿ ಭಾರತ ತಂಡದ ಉಪನಾಯಕ, ಮೂರೂ ಮಾದರಿಯ ಅಂತರರಾಷ್ಟ್ರೀಯ ಪಂದ್ಯಗಳಲ್ಲಿ ಶತಕ ಬಾರಿಸಿದ ಅಪರೂಪದ ದಾಖಲೆಗೆ ಪಾತ್ರರಾದರು.

ವೇಗಿಗಳನ್ನು ಮತ್ತು ಸ್ಪಿನ್ನರ್‌ಗಳನ್ನು ದಂಡಿಸುವಲ್ಲಿ ಗಿಲ್ ಭೇದ ತೋರಲಿಲ್ಲ. ಅವರ ಫುಟ್‌ವರ್ಕ್ ಪರಿಪೂರ್ಣವಾಗಿದ್ದಂತೆ ಕಂಡಿತು. ಅಂತಿಮವಾಗಿ ಅವರು ಅದಿಲ್ ರಶೀದ್ (64ಕ್ಕೆ4) ಬೌಲಿಂಗ್‌ನಲ್ಲಿ ಸ್ವೀಪ್ ಮಾಡಲು ಯತ್ನಿಸಿ ಬೌಲ್ಡ್ ಆದರು. ಅವರ ಆಟದಲ್ಲಿ 14 ಬೌಂಡರಿ, ಮೂರು ಸಿಕ್ಸರ್‌ಗಳಿದ್ದವು.



ಶತಕದ ಸಂಭ್ರಮದಲ್ಲಿ ಶುಭಮನ್ ಗಿಲ್ — ಪಿಟಿಐ ಚಿತ್ರ

ಕೊಹ್ಲಿ ಬೇರೂರಲು ಕೊಂಚ ಸಮಯ ತೆಗೆದುಕೊಂಡ ನಂತರ ಸರಾಗವಾಗಿ ಆಡತೊಡಗಿದರು. 73ನೇ ಅರ್ಧಶತಕದ ಹಾದಿಯಲ್ಲಿ ಆಕರ್ಷಕ ಡ್ರೈವ್‌ಗಳನ್ನು ಪ್ರದರ್ಶಿಸಿದರು. ಅದಿಲ್ ರಶೀದ್ ಅವರ ಲೆಗ್‌ಬ್ರೇಕ್ ಎಸೆತದಲ್ಲಿ ಕೊಹ್ಲಿ ವಿಕೆಟ್‌ಕೀಪರ್‌ಗೆ ಕ್ಯಾಚ್ ನೀಡಿದರು. ಅವರು ಏಕದಿನ ಪಂದ್ಯಗಳಲ್ಲಿ ಕೊಹ್ಲಿ ಅವರ ವಿಕೆಟ್ ಅನ್ನು ಐದನೇ ಬಾರಿ ಪಡೆದಂತಾಯಿತು. ಅವರು ಏಕದಿನ ಮಾದರಿಯಲ್ಲಿ 14,000 ರನ್ ದಾಟಲು 37 ರನ್ ದೂರವಿದ್ದಾರೆ. ಈ ಹಿಂದಿನ ಪಂದ್ಯದಲ್ಲಿ ಶತಕ ಬಾರಿಸಿದ್ದ ನಾಯಕ ರೋಹಿತ್ ಶರ್ಮಾ ಇಲ್ಲಿ ಬೇಗನೇ ನಿರ್ಗಮಿಸಿದರು.

ವಿಶ್ರಾಂತಿ: ಈ ಪಂದ್ಯಕ್ಕೆ ಮೊಹಮ್ಮದ್ ಶಮಿ ಮತ್ತು ರವೀಂದ್ರ ಜಡೇಜ ಅವರಿಗೆ ವಿಶ್ರಾಂತಿ ನೀಡಿತು. ಮೀನಖಂಡದ ಗಾಯದಿಂದ ಸ್ಪಿನ್ನರ್ ವರುಣ್ ಚಕ್ರವರ್ತಿ ಆಡಲಿಲ್ಲ. ಹೀಗಾಗಿ ಸ್ಪಿನ್ನರ್‌ಗಳಾದ ವಾಷಿಂಗ್ಟನ್ ಸುಂದರ್ ಮತ್ತು ಕುಲದೀಪ್ ಯಾದವ್ ಅವಕಾಶ ಪಡೆದರು.

ಸ್ಕೋರ್ ಕಾರ್ಡ್

ಭಾರತ: 356 (50 ಓವರುಗಳಲ್ಲಿ)
ರೋಹಿತ್ ಸಿ ಸಾಲ್ಟ್ ಬಿ ವುಡ್ 1 (2ಎ)
ಗಿಲ್ ಬಿ ರಶೀದ್ 112 (102, 4x14, 6x3)
ಕೊಹ್ಲಿ ಸಿ ಸಾಲ್ಟ್ ಬಿ ರಶೀದ್ 52 (55ಎ, 4x7, 6x1)
ಶ್ರೇಯಸ್ ಸಿ ಸಾಲ್ಟ್ ಬಿ ರಶೀದ್ 78 (64ಎ, 4x8, 6x2)
ರಾಹುಲ್ ಎಲ್‌ಬಿಡಬ್ಲ್ಯು ಬಿ ಮಹಮೂದ್ 40 (29ಎ, 4x3, 6x1)
ಹಾರ್ದಿಕ್ ಬಿ ರಶೀದ್ 17 (9ಎ, 6x2)
ಅಕ್ಷರ್ ಸಿ ಬ್ಯಾಂಟನ್ ಬಿ ರೂಟ್ 13 (12, 4x2)
ಸುಂದರ್ ಸಿ ಬಟ್ಲರ್ ಬಿ ವುಡ್ 14 (14ಎ, 4x1)
ಹರ್ಷಿತ್ ಸಿ ಬಟ್ಲರ್ ಬಿ ಅಟ್ಕಿನ್ಸನ್ 13 (10ಎ, 4x1, 6x1)
ಅರ್ಷದೀಪ್ ರನೌಟ್ (ಸಾಲ್ಟ್) 2 (2ಎ)
ಕುಲದೀಪ್ ಔಟಾಗದೆ 1 (1ಎ)
ಇತರೆ: 13 (ಲೆಗ್‌ಬೈ 1, ವೈಡ್ 12)
ವಿಕೆಟ್ ಪತನ: 1-6 (ರೋಹಿತ್ ಶರ್ಮಾ, 1.1), 2-122 (ವಿರಾಟ್ ಕೊಹ್ಲಿ, 18.6), 3-226 (ಶುಭಮನ್ ಗಿಲ್, 34.3), 4-259 (ಶ್ರೇಯಸ್ ಅಯ್ಯರ್, 38.2), 5-289 (ಹಾರ್ದಿಕ್ ಪಾಂಡ್ಯ, 40.6), 6-307 (ಅಕ್ಷರ್ ಪಟೇಲ್, 43.5), 7-333 (ಕೆ.ಎಲ್.ರಾಹುಲ್, 46.4), 8-353 (ಹರ್ಷಿತ್ ರಾಣಾ, 48.6), 9-353 (ವಾಷಿಂಗ್ಟನ್ ಸುಂದರ್, 49.3), 10-356 (ಅರ್ಷದೀಪ್ ಸಿಂಗ್, 49.6)
ಬೌಲಿಂಗ್: ಸಕಿಬ್ ಮಹಮೂದ್ 10-0-68-1; ಮಾರ್ಕ್ ವುಡ್ 9-1-45-2; ಗಸ್ ಅಟ್ಕಿನ್ಸನ್ 8-0-74-1; ಜೋ ರೂಟ್ 5-0-47-1; ಆದಿಲ್ ರಶೀದ್ 10-0-64-4; ಲಿಯಾಮ್ ಲಿವಿಂಗ್‌ಸ್ಟೋನ್ 8-0-57-0.

ಇಂಗ್ಲೆಂಡ್: 214 (34.2 ಓವರುಗಳಲ್ಲಿ)
ಸಾಲ್ಟ್ ಸಿ ಅಕ್ಷರ್ ಬಿ ಅರ್ಷದೀಪ್ 23 (21ಎ, 4x4)
ಡಕೆಟ್ ಸಿ ಶರ್ಮಾ ಬಿ ಅರ್ಷದೀಪ್ 34 (22ಎ, 4x8)
ಬ್ಯಾಂಟನ್ ಸಿ ರಾಹುಲ್ ಬಿ ಕುಲದೀಪ್ 38 (41ಎ, 4x4, 6x2)
ರೂಟ್ ಬಿ ಪಟೇಲ್ 24 (29ಎ, 4x2)
ಬ್ರೂಕ್ ಬಿ ಹರ್ಷಿತ್ 19 (26ಎ, 4x1, 6x1)
ಬಟ್ಲರ್ ಬಿ ಹರ್ಷಿತ್ 6 (9ಎ)
ಲಿವಿಂಗ್‌ಸ್ಟೋನ್ ಸ್ಟಂ ರಾಹುಲ್ ಬಿ ಸುಂದರ್ 9 (23ಎ, 4x1)
ಅಟ್ಕಿನ್ಸನ್ ಬಿ ಪಟೇಲ್ 38 (19ಎ, 4x6, 6x1)
ರಶೀದ್ ಬಿ ಪಾಂಡ್ಯ 0 (5)
ವುಡ್ ಸಿ ಅಯ್ಯರ್ ಬಿ ಪಾಂಡ್ಯ 9 (7ಎ, 4x2)
ಸಕಿಬ್ ಔಟಾಗದೆ 2 (4ಎ)
ಇತರೆ: 12 (ಬೈ 5, ಲೆಗ್‌ಬೈ 4, ವೈಡ್ 3)
ವಿಕೆಟ್ ಪತನ: 1-60 (ಬೆನ್ ಡಕೆಟ್, 6.2), 2-80 (ಫಿಲ್ ಸಾಲ್ಟ್, 8.4), 3-126 (ಟಾಮ್ ಬ್ಯಾಂಟನ್, 17.6), 4-134 (ಜೋ ರೂಟ್, 20.2), 5-154 (ಜೋಸ್ ಬಟ್ಲರ್, 24.1), 6-161 (ಹ್ಯಾರಿ ಬ್ರೂಕ್, 26.6), 7-174 (ಲಿಯಾಮ್ ಲಿವಿಂಗ್‌ಸ್ಟೋನ್, 29.3), 8-175 (ಆದಿಲ್ ರಶೀದ್, 30.3), 9-192 (ಮಾರ್ಕ್ ವುಡ್, 32.1), 10-214 (ಗಸ್ ಅಟ್ಕಿನ್ಸನ್ 34.2)
ಬೌಲಿಂಗ್: ಅರ್ಷದೀಪ್ ಸಿಂಗ್ 5-0-33-2; ಹರ್ಷಿತ್ ರಾಣಾ 5-1-31-2; ವಾಷಿಂಗ್ಟನ್ ಸುಂದರ್ 5-0-43-1; ಅಕ್ಷರ್ ಪಟೇಲ್ 6.2-1-22-1; ಹಾರ್ದಿಕ್ ಪಾಂಡ್ಯ 5-0-38-2; ಕುಲದೀಪ್ ಯಾದವ್ 8-0-38-1
ಪಂದ್ಯದ ಆಟಗಾರ: ಶುಭಮನ್ ಗಿಲ್

ಫಲಿತಾಂಶ: ಭಾರತಕ್ಕೆ 142 ರನ್ ಜಯ, ಸರಣಿಯಲ್ಲಿ 3-0 ಗೆಲುವು

ರಾಹುಲ್ ಪ್ರಥಮ ಆಯ್ಕೆ: ಗಂಭೀರ್



ಅಹಮದಾಬಾದ್ (ಪಿಟಿಐ): ಚಾಂಪಿಯನ್ಸ್ ಟ್ರೋಫಿ ಕ್ರಿಕೆಟ್ ಟೂರ್ನಿಯಲ್ಲಿ ಕೆ.ಎಲ್. ರಾಹುಲ್ ಅವರೇ ತಂಡದ ಮೊದಲ ವಿಕೆಟ್‌ಕೀಪರ್ ಆಗಿ ಅವಕಾಶ ಪಡೆಯಲಿದ್ದಾರೆ ಎಂದು ಭಾರತ ತಂಡದ ಮುಖ್ಯ ಕೋಚ್ ಗೌತಮ್ ಗಂಭೀರ್ ಸ್ಪಷ್ಟಪಡಿಸಿದ್ದಾರೆ.

ಬುಧವಾರ ಇಂಗ್ಲೆಂಡ್ ವಿರುದ್ಧದ ಪಂದ್ಯದ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ವಿಕೆಟ್‌ಕೀಪಿಂಗ್‌ಗೆ ರಾಹುಲ್ ನಮ್ಮ ಮೊದಲ ಆಯ್ಕೆ. ಅದರಿಂದಾಗಿಯೇ ಇಂಗ್ಲೆಂಡ್ ಎದುರಿನ ಸರಣಿಯ 3 ಪಂದ್ಯಗಳಲ್ಲಿಯೂ ರಿಷಭ್ ಪಂತ್ ಅವರಿಗೆ ಅವಕಾಶ ನೀಡಿಲ್ಲ. ರಾಹುಲ್ ಅವರನ್ನೇ ಕಣಕ್ಕಿಳಿಸಲಾಗಿತ್ತು. 11ರ ಬಳಗದಲ್ಲಿ ನಾವು ಇಬ್ಬರು ವಿಕೆಟ್‌ಕೀಪರ್– ಬ್ಯಾಟರ್‌ಗಳನ್ನು ಕಣಕ್ಕಿಳಿಸುವ ಪರಿಸ್ಥಿತಿ ಇಲ್ಲ' ಎಂದರು.

ಮುಂಬರುವ ಚಾಂಪಿಯನ್ಸ್ ಟ್ರೋಫಿ ಟೂರ್ನಿಯಲ್ಲಿ ಆಡುವ ಭಾರತ ತಂಡದಿಂದ ಯುವ ಬ್ಯಾಟರ್ ಯಶಸ್ವಿ ಜೈಸ್ವಾಲ್ ಅವರನ್ನು ಕೈಬಿಟ್ಟಿರುವ ಕುರಿತು ಮಾತನಾಡಿದ ಗೌತಮ್, 'ವಿಕೆಟ್ ಪಡೆಯುವ ಬೌಲರ್‌ಗಳಿಗೆ ಸ್ಥಾನ ನೀಡುವ ಉದ್ದೇಶ ನಮ್ಮದು. ಆದ್ದರಿಂದ ವರುಣ್ ಚಕ್ರವರ್ತಿ ಅವರನ್ನು ಆಯ್ಕೆ ಮಾಡಿದ್ದೇವೆ. ಜೈಸ್ವಾಲ್ ಅವರಿಗೆ ಇನ್ನೂ ದೀರ್ಘ ಭವಿಷ್ಯವಿದೆ. ಅವರಿಗೆ ಮತ್ತೆ ಅವಕಾಶ ಸಿಗಲಿವೆ. ನಮಗೆ 15 ಆಟಗಾರರನ್ನು ಆಯ್ಕೆ ಮಾಡುವ ಅವಕಾಶವಷ್ಟೇ ಇದೆ' ಎಂದರು.

'ವೇಗಿ ಜಸ್‌ಪ್ರೀತ್ ಬೂಮ್ರಾ ಅವರನ್ನು ತಂಡದಿಂದ ಕೈಬಿಡಲಾಗಿದೆ. ಅವರ ಗಾಯದ ಸ್ಥಿತಿ ಕುರಿತು ನಾನೇನೂ ಹೇಳಲು ಸಾಧ್ಯವಿಲ್ಲ. ಎನ್‌ಸಿಎ (ರಾಷ್ಟ್ರೀಯ ಕ್ರಿಕೆಟ್ ಅಕಾಡೆಮಿ) ವೈದ್ಯಕೀಯ ತಂಡವು ನಿಗಾ ವಹಿಸಿದ್ದು, ಅವರೇ ಬೂಮ್ರಾ ಕುರಿತು ನಿರ್ಧರಿಸುವರು' ಎಂದು ಹೇಳಿದರು.

ಭಾರತ ತಂಡಕ್ಕಿಲ್ಲ ಅಭ್ಯಾಸ ಪಂದ್ಯ

ದುಬೈ (ಪಿಟಿಐ): ಚಾಂಪಿಯನ್ಸ್ ಟ್ರೋಫಿ ಕ್ರಿಕೆಟ್ ಟೂರ್ನಿಯಲ್ಲಿ ಕಣಕ್ಕಿಳಿಯುವ ಮುನ್ನ ಭಾರತ ತಂಡವು ಯಾವುದೇ ಅಭ್ಯಾಸ ಪಂದ್ಯದಲ್ಲಿ ಆಡುವುದಿಲ್ಲ.

ಆತಿಥೇಯ ಪಾಕಿಸ್ತಾನವು ಮೂರು ಶಾಹೀನ್ಸ್ ಬಳಗಗಳನ್ನು (ಪಾಕ್ ಎ ತಂಡಗಳು) ರಚಿಸಿದೆ. ಈ ಮೂರು ತಂಡಗಳು ಅಭ್ಯಾಸ ಪಂದ್ಯಗಳಲ್ಲಿ ಆಡಲಿವೆ. ಕ್ರಮವಾಗಿ ಬಾಂಗ್ಲಾದೇಶ, ದಕ್ಷಿಣ ಆಫ್ರಿಕಾ ಮತ್ತು ಅಫ್ಗಾನಿಸ್ತಾನ ತಂಡಗಳನ್ನು ಎದುರಿಸಲಿವೆ. ಅಫ್ಗನ್ ತಂಡವು ಫೆ. 16ರಂದು ನ್ಯೂಜಿಲೆಂಡ್ ವಿರುದ್ಧವೂ ಅಭ್ಯಾಸ ಪಂದ್ಯ ಆಡಲಿದೆ. ಅಭ್ಯಾಸ ಪಂದ್ಯಗಳು ಇದೇ 14 ರಿಂದ 17ರವರೆಗೆ ನಡೆಯಲಿವೆ. ಟೂರ್ನಿಯು ಫೆ. 19ರಿಂದ ಮಾರ್ಚ್ 9ರವರೆಗೆ ಪಾಕಿಸ್ತಾನ ಮತ್ತು ದುಬೈನಲ್ಲಿ ನಡೆಯಲಿದೆ.

ದಕ್ಷಿಣ ಆಫ್ರಿಕಾ ಮತ್ತು ನ್ಯೂಜಿಲೆಂಡ್ ತಂಡಗಳು ಈಗಾಗಲೇ ಪಾಕಿಸ್ತಾನದಲ್ಲಿವೆ. ತ್ರಿಕೋನ ಸರಣಿಯಲ್ಲಿ ಆಡುತ್ತಿವೆ. ಭಾರತ ತಂಡವು ತವರಿನಲ್ಲಿ ಇಂಗ್ಲೆಂಡ್ ವಿರುದ್ಧ 3 ಏಕದಿನ ಪಂದ್ಯಗಳ ಸರಣಿಯಲ್ಲಿ ಆಡಿದೆ. ಅದರಿಂದಾಗಿ ಅಭ್ಯಾಸ ಪಂದ್ಯಗಳಿಗೆ ಒತ್ತು ನೀಡಿಲ್ಲವೆನ್ನಲಾಗಿದೆ.

ಸ್ಟೀವ್ ಸ್ಮಿತ್‌ಗೆ ನಾಯಕತ್ವ




ಸಿಡ್ನಿ (ಎಎಫ್‌ಪಿ): ಚಾಂಪಿಯನ್ಸ್ ಟ್ರೋಫಿ ಗೆಲ್ಲುವ ಆಸ್ಟ್ರೇಲಿಯಾ ತಂಡದ ಪ್ರಯತ್ನಕ್ಕೆ ಟೂರ್ನಿಗೆ ಮೊದಲೇ ಹಿನ್ನಡೆಯಾಗಿದೆ. ಪ್ಯಾಟ್ ಕಮಿನ್ಸ್, ಮಿಚೆಲ್ ಸ್ಟಾರ್ಕ್ ಗಾಯಾಳಾಗಿ ತಂಡದಿಂದ ಹೊರಬಿದ್ದ ನಂತರ ಇದೀಗ ಇನ್ನೊಬ್ಬ ಅನುಭವಿ ವೇಗದ ಬೌಲರ್ ಮಿಚೆಲ್ ಸ್ಟಾರ್ಕ್ ಅವರು ವೈಯಕ್ತಿಕ ಕಾರಣ ನೀಡಿ ತಂಡದಿಂದ ಹಿಂದೆಸರಿದಿದ್ದಾರೆ.

ಕಮಿನ್ಸ್ ಪಾದದ ನೋವಿನಿಂದ ಬಳಲುತ್ತಿದ್ದರೆ, ಹ್ಯಾಜಲ್‌ವುಡ್ ಪಕ್ಕೆಲುಬು ಮತ್ತು ಮೀನಖಂಡದ ನೋವಿಗೆ ಒಳಗಾಗಿ ಲಂಕಾ ಪ್ರವಾಸದಿಂದಲೂ ಹಿಂದೆ ಸರಿದಿದ್ದರು. ಆಲ್‌ರೌಂಡರ್ ಮಾರ್ಕಸ್ ಸ್ಟೊಯಿನಿಸ್ ಏಕದಿನ ಕ್ರಿಕೆಟ್‌ಗೆ ವಿದಾಯ ಹೇಳಿದ್ದಾರೆ. ಮಿಚೆಲ್ ಮಾರ್ಷ್ ಬೆನ್ನುನೋವಿನಿಂದ ಬಳಲುತ್ತಿದ್ದಾರೆ. ಅನುಭವಿ ಬ್ಯಾಟರ್ ಸ್ಟೀವ್ ಸ್ಮಿತ್ ತಂಡಕ್ಕೆ ನಾಯಕರಾಗಿದ್ದಾರೆ.

ಆಸ್ಟ್ರೇಲಿಯಾ ತಂಡ: ಸ್ಟೀವ್ ಸ್ಮಿತ್ (ನಾಯಕ), ಸೀನ್ ಅಬಾಟ್, ಅಲೆಕ್ಸ್ ಕ್ಯಾರಿ, ಬೆನ್ ದ್ವಾರ್ಷಿಯಸ್, ನೇಥನ್ ಎಲ್ಲಿಸ್, ಜೇಕ್ ಫ್ರೇಸರ್–ಮೆಕ್‌ಗುರ್ಕ್, ಆರನ್ ಹಾರ್ಡಿ, ಟ್ರಾವಿಸ್ ಹೆಡ್, ಜೋಶ್ ಇಂಗ್ಲಿಸ್, ಸ್ಪೆನ್ಸರ್ ಜಾನ್ಸನ್, ಮಾರ್ನಸ್ ಲಾಬುಷೇನ್, ಗ್ಲೆನ್ ಮ್ಯಾಕ್ಸ್‌ವೆಲ್, ತನ್ವೀರ್ ಸಂಗಾ, ಮ್ಯಾಥ್ಯೂ ಶಾರ್ಟ್ ಮತ್ತು ಆ್ಯಡಂ ಜಂಪಾ.

ಶಿಖರ್ ಧವನ್ ರಾಯಭಾರಿ



ದುಬೈ (ಪಿಟಿಐ): ಭಾರತ ಕ್ರಿಕೆಟ್ ತಂಡದ ಮಾಜಿ ಆಟಗಾರ ಶಿಖರ್ ಧವನ್ ಅವರನ್ನು ಐಸಿಸಿ ಚಾಂಪಿಯನ್ಸ್ ಟ್ರೋಫಿ ಕ್ರಿಕೆಟ್ ಟೂರ್ನಿಯ ರಾಯಭಾರಿಯಾಗಿ ಆಯ್ಕೆ ಮಾಡಲಾಗಿದೆ. ಬುಧವಾರ ಐಸಿಸಿಯು ಪ್ರಕಟಿಸಿರುವ ನಾಲ್ವರು ರಾಯಭಾರಿಗಳಲ್ಲಿ ಶಿಖರ್ ಕೂಡ ಒಬ್ಬರಾಗಿದ್ದಾರೆ.

ಫೆ. 19ರಿಂದ 9ರವರೆಗೆ ಟೂರ್ನಿಯು ಪಾಕಿಸ್ತಾನ ಮತ್ತು ದುಬೈನಲ್ಲಿ ನಡೆಯಲಿದೆ. ಟೂರ್ನಿಯಲ್ಲಿ ವಿಶ್ವಶ್ರೇಷ್ಠ ಎಂಟು ತಂಡಗಳು ಸ್ಪರ್ಧಿಸಲಿರುವ ಪ್ರತಿಷ್ಠಿತ ಟೂರ್ನಿ ಇದಾಗಿದೆ. ಶಿಖರ್ ಅವರಲ್ಲದೇ 2017ರ ಚಾಂಪಿಯನ್ ಪಾಕಿಸ್ತಾನ ತಂಡದ ನಾಯಕರಾಗಿದ್ದ ಸರ್ಫರಾಜ್ ಅಹಮದ್, ಆಸ್ಟ್ರೇಲಿಯಾದ ಮಾಜಿ ಆಲ್‌ರೌಂಡರ್ ಶೇನ್ ವಾಟ್ಸನ್ ಮತ್ತು ನ್ಯೂಜಿಲೆಂಡ್ ತಂಡದ ವೇಗಿ ಟಿಮ್ ಸೌಥಿ ಅವರನ್ನೂ ನೇಮಕ ಮಾಡಲಾಗಿದೆ.

ರಾಯಭಾರಿಗಳು ಪಂದ್ಯಗಳನ್ನು ವೀಕ್ಷಿಸುವರು ಹಾಗೂ ಅತಿಥಿ ಅಂಕಣಗಳ ಮೂಲಕ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸುವರು. ಚಾಂಪಿಯನ್ಸ್ ಟ್ರೋಫಿಯ ಎರಡು ಆವೃತ್ತಿಗಳಲ್ಲಿ 701 ರನ್ ಗಳಿಸಿರುವ ದಾಖಲೆ ಶಿಖರ್ ಅವರದ್ದು. ಅಲ್ಲದೇ ಸತತವಾಗಿ ಎರಡು ಬಾರಿ ಚಿನ್ನದ ಬ್ಯಾಟ್ ಗೌರವಕ್ಕೂ ಪಾತ್ರರಾಗಿದ್ದರು.

ಆರ್‌ಸಿಬಿ ನಾಯಕನ ರೇಸ್‌ನಲ್ಲಿ ವಿರಾಟ್ ಕೊಹ್ಲಿ, ಪಾಟೀದಾರ್



ವಿರಾಟ್ ಕೊಹ್ಲಿ



ಪಾಟೀದಾರ್

ಬೆಂಗಳೂರು (ಪಿಟಿಐ): ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡವು ಮುಂಬರುವ ಐಪಿಎಲ್ ಆವೃತ್ತಿಗೆ ತನ್ನ ನಾಯಕನನ್ನು ಗುರುವಾರ ಘೋಷಿಸಲಿದೆ. ಸ್ಟಾರ್ ಬ್ಯಾಟರ್ ವಿರಾಟ್ ಕೊಹ್ಲಿ ಮತ್ತು ರಜತ್ ಪಾಟೀದಾರ್ ಅವರ ಹೆಸರು ಮುಂಚೂಣಿಯಲ್ಲಿದೆ.

2013ರಿಂದ 2021ರವರೆಗೆ ಆರ್‌ಸಿಬಿ ತಂಡವನ್ನು ಕೊಹ್ಲಿ ಮುನ್ನಡೆಸಿದ್ದರು. 2022ರಿಂದ 2024ರವರೆಗೆ ದಕ್ಷಿಣ ಆಫ್ರಿಕಾದ ಫಫ್ ಡುಪ್ಲೆಸಿ ತಂಡದ ಸಾರಥ್ಯ ವಹಿಸಿದ್ದರು.

ಮೆಗಾ ಹರಾಜಿಗೆ ಮುಂಚಿತವಾಗಿ ಡುಪ್ಲೆಸಿ ಅವರನ್ನು ಆರ್‌ಸಿಬಿ ಬಿಡುಗಡೆ ಮಾಡಿತು. 40 ವರ್ಷ ವಯಸ್ಸಿನ ಅವರು ಈ ಋತುವಿನಲ್ಲಿ ಡೆಲ್ಲಿ ಕ್ಯಾಪಿಟಲ್ಸ್ ಪರ ಕಣಕ್ಕೆ ಇಳಿಯುವರು.

ಆರ್‌ಸಿಬಿ ನಾಯಕನಾಗಿ ಕೊಹ್ಲಿ ಉತ್ತಮ ದಾಖಲೆ ಹೊಂದಿದ್ದಾರೆ. ಆದರೆ, ತಂಡಕ್ಕೆ ಈವರೆಗೆ ಪ್ರಶಸ್ತಿ ಗೆಲ್ಲಲು ಸಾಧ್ಯವಾಗಲಿಲ್ಲ. 36 ವರ್ಷ ವಯಸ್ಸಿನ ಕೊಹ್ಲಿ 143 ಪಂದ್ಯಗಳಲ್ಲಿ ಆರ್‌ಸಿಬಿಯನ್ನು ಮುನ್ನಡೆಸಿದ್ದಾರೆ. ಚೆನ್ನೈ ಸೂಪರ್ ಕಿಂಗ್ಸ್‌ನ ಎಂ.ಎಸ್. ಧೋನಿ ನಂತರ ಅತಿ ಹೆಚ್ಚಿನ ಪಂದ್ಯಗಳಲ್ಲಿ ತಂಡವನ್ನು ಮುನ್ನಡೆಸಿದ ದಾಖಲೆಯನ್ನು ಕೊಹ್ಲಿ ಹೊಂದಿದ್ದಾರೆ.

ಹರಾಜಿಗೆ ಮುಂಚಿತವಾಗಿ ಆರ್‌ಸಿಬಿ ರಿಟೇನ್ ಮಾಡಿಕೊಂಡ ಆಟಗಾರರಲ್ಲಿ 31 ವರ್ಷ ವಯಸ್ಸಿನ ಪಾಟೀದಾರ್ ಕೂಡ ಒಬ್ಬರಾಗಿದ್ದರು. ಸೈಯದ್ ಮುಷ್ತಾಕ್ ಅಲಿ ಟ್ರೋಫಿ ಮತ್ತು ವಿಜಯ್ ಹಜಾರೆ ಟ್ರೋಫಿಯಲ್ಲಿ ಮಧ್ಯಪ್ರದೇಶವನ್ನು ಮುನ್ನಡೆಸಿದ ಅನುಭವವನ್ನು ಅವರು ಹೊಂದಿದ್ದಾರೆ.

ಭಾರತಕ್ಕೆ ಸುಲಭದ ತುತ್ತಾದ ಮಕಾವು

ಕ್ವಿಂಗ್‌ದಾವೊ (ಚೀನಾ), (ಪಿಟಿಐ): ಭಾರತ ತಂಡವು, ಬ್ಯಾಡ್ಮಿಂಟನ್ ಏಷ್ಯಾ ಮಿಶ್ರ ತಂಡ ಚಾಂಪಿಯನ್‌ಷಿಪ್‌ನಲ್ಲಿ ಉತ್ತಮ ಆರಂಭ ಮಾಡಿತು. ಬುಧವಾರ ನಡೆದ 'ಡಿ' ಗುಂಪಿನ ಪಂದ್ಯದಲ್ಲಿ ಮಕಾವು ತಂಡವನ್ನು 5–0 ಯಿಂದ ಸೋಲಿಸಿತು.

ಭಾರತ ಬುಧವಾರದ ಗೆಲುವಿನೊಡನೆ ಕ್ವಾರ್ಟರ್ ಫೈನಲ್ ಪ್ರವೇಶ ಖಚಿತಪಡಿಸಿಕೊಂಡಿತು. ಭಾರತ ಗುರುವಾರ ನಡೆಯುವ ಗುಂಪಿನ ಎರಡನೇ ಹಾಗೂ ಅಂತಿಮ ಪಂದ್ಯದಲ್ಲಿ ದಕ್ಷಿಣ ಕೊರಿಯಾ ತಂಡವನ್ನು ಎದುರಿಸಲಿದೆ.

ರಾಷ್ಟ್ರೀಯ ಕ್ರೀಡೆಗಳಲ್ಲಿ ಮೂರು ದಿನಗಳ ಹಿಂದೆ ಮಿಶ್ರ ಡಬಲ್ಸ್ ಚಿನ್ನ ಗೆದ್ದಿದ್ದ ಸತೀಶಕುಮಾರ್ ಕರುಣಾಕರನ್ – ಆದ್ಯಾ ವರಿಯತ್ ಜೋಡಿ 21–10, 21–9 ರಿಂದ ಇಯೊಕ್ ಚೊಂಗ್ ಲಿಯೊಂಗ್– ವೆಂಗ್ ಚಿ ಎನ್ಗಿ ಜೋಡಿಯನ್ನು ಸೋಲಿಸಿ ಭಾರತಕ್ಕೆ ಮುನ್ನಡೆ ಒದಗಿಸಿದರು. ಪುರುಷರ ಸಿಂಗಲ್ಸ್‌ನಲ್ಲಿ ಅನುಭವಿ ಲಕ್ಷ್ಯ ಸೇನ್ 21–16, 21–12 ರಿಂದ ಪಾಂಗ್ ಫಾಂಗ್ ಪುಯಿ ಅವರನ್ನು ಸೋಲಿಸಿ ಮುನ್ನಡೆಯನ್ನು 2–0ಗೆ ಹೆಚ್ಚಿಸಿದರು.

ಮಾಳವಿಕಾ ಬನ್ಸೋಡ್ ಮಹಿಳಾ ಸಿಂಗಲ್ಸ್‌ನಲ್ಲಿ 21–15, 21–9 ರಿಂದ ಹಾವೊ ವಾಯ್ ಚಾನ್ ಅವರನ್ನು ಸೋಲಿಸಿದರು. ಚಿರಾಗ್ ಶೆಟ್ಟಿ ನಂತರ ಎಂ.ಆರ್.ಅರ್ಜುನ್ ಅವರೊಡನೆ ಪುರುಷರ ಡಬಲ್ಸ್‌ನಲ್ಲಿ 21–15, 21–19 ರಿಂದ ಮಕಾವು ತಂಡದ ಚಿನ್ ಪೊನ್ ಪುಯಿ– ಕೊಕ್ ವಾಯ್ ಚಾನ್ ಜೋಡಿಯನ್ನು ಸೋಲಿಸಿದರು. ಮಹಿಳಾ ಡಬಲ್ಸ್‌ನಲ್ಲಿ ಟ್ರೀಸಾ ಜೋಳಿ– ಗಾಯತ್ರಿ ಗೋಪಿಚಂದ್ 21–10, 21–5 ರಿಂದ ಎನ್‌ಜಿ ವೆಂಗ್‌ಚಿ– ಪುಯಿ ಚಿ ವಾ ಅವರನ್ನು ಹಿಮ್ಮೆಟ್ಟಿಸಿದರು.



ಭಾರತದ ಲಕ್ಷ್ಯ ಸೇನ್ —ಬ್ಯಾಡ್ಮಿಂಟನ್ ಏಷ್ಯಾ ಚಿತ್ರ

ಸೆಮಿಯತ್ತ ಪಂಜಾಬ್

ಬೆಂಗಳೂರು: ಪಂಜಾಬ್ ತಂಡ, ಮೊಹಾಲಿಯಲ್ಲಿ ನಡೆಯುತ್ತಿರುವ ಕರ್ನಲ್ ಸಿ.ಕೆ.ನಾಯ್ಡು ಟ್ರೋಫಿ ಕ್ರಿಕೆಟ್ ಟೂರ್ನಿ ಪಂದ್ಯದಲ್ಲಿ ಕರ್ನಾಟಕ ವಿರುದ್ಧ ಬಿಗಿಹಿಡಿತ ಸಾಧಿಸಿದ್ದು, ಸೆಮಿಫೈನಲ್ ಹಾದಿಯನ್ನು ಬಹುತೇಕ ಖಚಿತಪಡಿಸಿಕೊಂಡಿತು.

ನಾಲ್ಕು ದಿನಗಳ ಈ ಪಂದ್ಯದ ಮೂರನೇ ದಿನದಾಟ ಮುಗಿದಾಗ ಆತಿಥೇಯರು ಎರಡನೇ ಇನಿಂಗ್ಸ್‌ನಲ್ಲಿ 7 ವಿಕೆಟ್‌ಗೆ 259 ರನ್ ಗಳಿಸಿದ್ದು ತಮ್ಮ ಒಟ್ಟು ಮುನ್ನಡೆಯನ್ನು 462 ರನ್‌ಗಳಿಗೆ ಉಬ್ಬಿಸಿದ್ದಾರೆ.

ಸಂಕ್ಷಿಪ್ತ ಸ್ಕೋರು: ಪಂಜಾಬ್: 380 ಮತ್ತು 85 ಓವರುಗಳಲ್ಲಿ 7 ವಿಕೆಟ್‌ಗೆ 259 (ಜಸ್ಕರಣ್‌ವೀರ್ ಸಿಂಗ್ ಪಾಲ್ 91, ಹರ್ಜಸ್ ಸಿಂಗ್ ಟಂಡನ್ ಬ್ಯಾಟಿಂಗ್ 46, ಆಯುಷ್ ಗೋಯಲ್ ಬ್ಯಾಟಿಂಗ್ 32; ಯಶೋವರ್ಧನ್ ಪರಂತಾಪ್ 36ಕ್ಕೆ2, ಶಶಿ ಕುಮಾರ್ ಕೆ. 50ಕ್ಕೆ2); ಕರ್ನಾಟಕ: 61.2 ಓವರುಗಳಲ್ಲಿ 177 (ಮೆಕ್ನಿಲ್ ನೊರೊನಾ 78, ಅನೀಶ್ವರ ಗೌತಮ್ 35; ಆರ್ಯಮನ್ ಧಾಲಿವಾಲ್ 52ಕ್ಕೆ4, ಹರ್ಜಸ್ ಸಿಂಗ್ ಟಂಡನ್ 31ಕ್ಕೆ3).

ರಣಜಿ ಟ್ರೋಫಿ: ನಾಲ್ಕರ ಘಟ್ಟಕ್ಕೆ ಕೇರಳ

ಸೆಮಿಫೈನಲ್‌ಗಳು	
ಕೇರಳ–ಗುಜರಾತ್	ದಿನಾಂಕ: ಫೆ. 17ರಿಂದ
ವಿದರ್ಭ–ಮುಂಬೈ	

ಪುಣೆ (ಪಿಟಿಐ): ಸಲ್ಮಾನ್ ನಿಜಾರ್ ಮತ್ತು ಮೊಹಮ್ಮದ್ ಅಜರುದ್ದೀನ್ ಅವರಿಬ್ಬರ ಬ್ಯಾಟಿಂಗ್ ಬಲದಿಂದ ಕೇರಳ ತಂಡವು ರಣಜಿ ಟ್ರೋಫಿ ಕ್ರಿಕೆಟ್ ಟೂರ್ನಿಯ ಕ್ವಾರ್ಟರ್ ಫೈನಲ್‌ನಲ್ಲಿ ಜಮ್ಮು–ಕಾಶ್ಮೀರ ಎದುರು ಸೋಲು ತಪ್ಪಿಸಿಕೊಂಡಿತು. ಡ್ರಾ ಸಾಧಿಸಿದ ಕೇರಳ ಮೊದಲ ಇನಿಂಗ್ಸ್‌ನಲ್ಲಿ ಪಡೆದಿದ್ದ 1 ರನ್ ಮುನ್ನಡೆಯ ಆಧಾರದಲ್ಲಿ ಸೆಮಿಫೈನಲ್ ಪ್ರವೇಶಿಸಿತು.

ಕೇರಳ ತಂಡವು ಜಯಿಸಲು 400 ರನ್‌ಗಳ ಗುರಿ ಸಾಧಿಸಬೇಕಿತ್ತು. ಮಂಗಳವಾರ ದಿನದಾಟದ ಕೊನೆಗೆ 2 ವಿಕೆಟ್‌ಗಳಿಗೆ 100 ರನ್ ಗಳಿಸಿದ್ದ ಕೇರಳ ಕೊನೆಯ ದಿನ ಆಟ ಮುಂದುವರಿಸಿತು. ಮೊದಲ ಇನಿಂಗ್ಸ್‌ನಲ್ಲಿ ಶತಕ ಗಳಿಸಿದ್ದ ಸಲ್ಮಾನ್ ಎರಡನೇ ಇನಿಂಗ್ಸ್‌ನಲ್ಲಿ ಅಜೇಯ 44 ರನ್ ಗಳಿಸಿದರು. ಅವರಿಗೆ ಅಜರುದ್ದೀನ್ (ಔಟಾಗದೆ 67) ಉತ್ತಮ ಜೊತೆ ನೀಡಿದರು. ಇಬ್ಬರೂ 7ನೇ ವಿಕೆಟ್ ಜೊತೆಯಾಟದಲ್ಲಿ 115 ರನ್ ಸೇರಿಸಿದರು. ತಂಡವು 6 ವಿಕೆಟ್‌ಗಳಿಗೆ 295 ರನ್ ಗಳಿಸಿತು. ದಿನದಾಟವನ್ನು ಅಂತ್ಯಗೊಳಿಸಿ ಡ್ರಾ ಘೋಷಿಸಲಾಯಿತು.

ಸಂಕ್ಷಿಪ್ತ ಸ್ಕೋರು: ಮೊದಲ ಇನಿಂಗ್ಸ್: ಜಮ್ಮು–ಕಾಶ್ಮೀರ: 95.1 ಓವರ್‌ಗಳಲ್ಲಿ 280, ಕೇರಳ: 85 ಓವರ್‌ಗಳಲ್ಲಿ 281. ಜಮ್ಮು–ಕಾಶ್ಮೀರ: 100.2 ಓವರ್‌ಗಳಲ್ಲಿ 9ಕ್ಕೆ399. ಕೇರಳ: 126 ಓವರ್‌ಗಳಲ್ಲಿ 6 ವಿಕೆಟ್‌ಗಳಿಗೆ 295 (ಅಕ್ಷಯ್ ಚಂದ್ರನ್ 48, ಸಚಿನ್ ಬೇಬಿ 48, ಮೊಹಮ್ಮದ್ ಅಜರುದ್ದೀನ್ ಔಟಾಗದೇ 67, ಯುದ್ಧವೀರ್ ಸಿಂಗ್ ಚರಕ 61ಕ್ಕೆ2, ಸಾಹಿಲ್ ಲೋತ್ರಾ 50ಕ್ಕೆ2, ಅಬಿದ್ ಮುಷ್ತಾಕ್ 56ಕ್ಕೆ2) ಫಲಿತಾಂಶ: ಡ್ರಾ. ಪಂದ್ಯಶ್ರೇಷ್ಠ: ಸಲ್ಮಾನ್ ನಿಜಾರ್

ಟ್ರಯಲ್ಸ್: ಭಾಕರ್‌ಗೆ ಎರಡನೇ ಸ್ಥಾನ



ನವದೆಹಲಿ (ಪಿಟಿಐ): ಪ್ಯಾರಿಸ್ ಒಲಿಂಪಿಕ್ಸ್ ಡಬಲ್ ಪದಕ ವಿಜೇತೆ ಮನು ಭಾಕರ್ ಅವರು ಬುಧವಾರ ಇಲ್ಲಿ ನಡೆದ ರೈಫಲ್/ಪಿಸ್ತೂಲ್ ರಾಷ್ಟ್ರೀಯ ಆಯ್ಕೆ ಟ್ರಯಲ್ಸ್‌ನ (ಗುಂಪು ಎ) ಮಹಿಳೆಯರ 25 ಮೀ ಪಿಸ್ತೂಲ್ ಸ್ಪರ್ಧೆಯಲ್ಲಿ ಎರಡನೇ ಸ್ಥಾನ ಪಡೆದರು. ರಿದಂ ಸಾಂಗ್ವಾನ್ ಮೊದಲ ಸ್ಥಾನ ಗಳಿಸಿದರು.

ಪ್ಯಾರಿಸ್ ಒಲಿಂಪಿಕ್ಸ್ ಕಂಚಿನ ಪದಕ ವಿಜೇತ ಸ್ವಪ್ನಿಲ್ ಕುಸಾಳೆ ಮತ್ತು ಆರ್ಯಾ ರಾಜೇಶ್ ಬೋರ್ಸೆ ಅವರು ಕ್ರಮವಾಗಿ ಪುರುಷರ 50 ಮೀಟರ್ ರೈಫಲ್ 3 ಪೊಸಿಷನ್ (3ಪಿ) ಟಿ1 ಮತ್ತು ಮಹಿಳೆಯರ 10 ಮೀಟರ್ ಏರ್ ರೈಫಲ್ ಟಿ2 ಸ್ಪರ್ಧೆಗಳಲ್ಲಿ ಮೊದಲಿಗರಾದರು.

ಲಂಕಾ ಗೆಲುವಿನಲ್ಲಿ ಮಿಂಚಿದ ಚರಿತ್ ಅಸಲಂಕಾ

ಕೊಲಂಬೊ (ಎಎಫ್‌ಪಿ): ಅಮೋಘವಾಗಿ ಚೇತರಿಸಿದ ಶ್ರೀಲಂಕಾ ತಂಡ ಮೊದಲ ಏಕದಿನ ಪಂದ್ಯದಲ್ಲಿ ಬುಧವಾರ ವಿಶ್ವ ಚಾಂಪಿಯನ್ ಆಸ್ಟ್ರೇಲಿಯಾ ತಂಡವನ್ನು 49 ರನ್‌ಗಳಿಂದ ಸೋಲಿಸಿತು. ಮಧ್ಯಮ ಕ್ರಮಾಂಕದ ಬ್ಯಾಟರ್ ಚರಿತ್ ಅಸಲಂಕಾ ಅವರ ಜೀವನಶ್ರೇಷ್ಠ 127 ರನ್‌ಗಳ (126ಎ, 4x14, 6x5) ಆಟ ಲಂಕಾ ಗೆಲುವಿನಲ್ಲಿ ಪ್ರಮುಖ ಪಾತ್ರ ವಹಿಸಿತು.

ಆಸ್ಟ್ರೇಲಿಯಾ ದಿಗ್ಗಜ ಆಟಗಾರರಾದ ಗ್ಲೆನ್ ಮ್ಯಾಕ್ಸ್‌ವೆಲ್ ಮತ್ತು ಟ್ರಾವಿಸ್ ಹೆಡ್ ಈ ಪಂದ್ಯಕ್ಕೆ ವಿಶ್ರಾಂತಿ ಪಡೆದಿದ್ದರು.

ಸ್ಕೋರುಗಳು: ಶ್ರೀಲಂಕಾ: 46 ಓವರುಗಳಲ್ಲಿ 214 (ಚರಿತ್ ಅಸಲಂಕಾ 127, ದುನಿತ್ ವೆಲ್ಲಾಳಗೆ 30; ಸ್ಪೆನ್ಸರ್ ಜಾನ್ಸನ್ 44ಕ್ಕೆ2, ಆರನ್ ಹಾರ್ಡಿ 13ಕ್ಕೆ2, ಸೀನ್ ಅಬಾಟ್ 61ಕ್ಕೆ3, ನಥಾನ್ ಎಲ್ಲಿಸ್ 23ಕ್ಕೆ2); ಆಸ್ಟ್ರೇಲಿಯಾ: 33.5 ಓವರುಗಳಲ್ಲಿ 165 (ಅಲೆಕ್ಸ್ ಕ್ಯಾರಿ 41, ಆರನ್ ಹಾರ್ಡಿ 32; ಅಸಿತ ಫೆರ್ನಾಂಡೊ 23ಕ್ಕೆ2, ಮಹೀಷ ತೀಕ್ಷಣ 40ಕ್ಕೆ4, ದುನಿತ್ ವೆಲ್ಲಾಳಗೆ 33ಕ್ಕೆ2). ಪಂದ್ಯದ ಆಟಗಾರ: ಚರಿತ್ ಅಸಲಂಕಾ

ರಾಷ್ಟ್ರೀಯ ಕ್ರೀಡಾಕೂಟ: ಕರ್ನಾಟಕದ ಅಭಿನಯಾ ಎಸ್‌. ಶೆಟ್ಟಿಗೆ ಹೈಜಂಪ್‌ನಲ್ಲಿ ಕಂಚಿನ ಪದಕ

ಸಚಿನ್, ಪೂಜಾ, ಸಾವನ್ ಕೂಟ ದಾಖಲೆ

ಡೆಹ್ರಾಡೂನ್ (ಪಿಟಿಐ): ಉತ್ತರ ಪ್ರದೇಶದ ಸಚಿನ್ ಯಾದವ್ ಮತ್ತು ಹರಿಯಾಣದ ಪೂಜಾ ಸಿಂಗ್ ಅವರು ಇಲ್ಲಿ ನಡೆಯುತ್ತಿರುವ 38ನೇ ರಾಷ್ಟ್ರೀಯ ಕ್ರೀಡಾಕೂಟದ ಅಥ್ಲೆಟಿಕ್ಸ್ ಸ್ಪರ್ಧೆಯ ಕೊನೆಯ ದಿನವಾದ ಬುಧವಾರ ಕ್ರಮವಾಗಿ ಪುರುಷರ ಜಾವೆಲಿನ್ ಥ್ರೋ ಮತ್ತು ಮಹಿಳೆಯರ ಹೈಜಂಪ್ ಸ್ಪರ್ಧೆಯಲ್ಲಿ ಕೂಟ ದಾಖಲೆಯೊಂದಿಗೆ ಚಿನ್ನದ ಪದಕ ಗೆದ್ದರು.

65 ಚಿನ್ನ ಗೆದ್ದ ಸರ್ವಿಸಸ್ ತಂಡವು (24 ಬೆಳ್ಳಿ, 24 ಕಂಚು; ಒಟ್ಟು 112) ಪದಕ ಪಟ್ಟಿಯಲ್ಲಿ ಅಗ್ರಸ್ಥಾನ ಕಾಯ್ದುಕೊಂಡಿದೆ. 33 ಚಿನ್ನ, 18 ಬೆಳ್ಳಿ ಮತ್ತು 27 ಕಂಚಿನೊಂದಿಗೆ ಒಟ್ಟು 78 ಪದಕ ಜಯಿಸಿರುವ ಕರ್ನಾಟಕ ನಾಲ್ಕನೇ ಸ್ಥಾನದಲ್ಲಿದೆ. ಇದೇ 14ರಂದು ಕೂಟಕ್ಕೆ ತೆರೆಬೀಳಲಿದೆ.

ಭಾರತದ ಜಾವೆಲಿನ್ ಥ್ರೋತಾರೆಗಳಾದ ನೀರಜ್ ಚೋಪ್ರಾ, ಕಿಶೋರ್ ಜೇನಾ ಅವರು ಅನುಪಸ್ಥಿತಿಯಲ್ಲಿ 25 ವರ್ಷ ವಯಸ್ಸಿನ ಸಚಿನ್ 84.39 ಮೀಟರ್ ಸಾಧನೆಯೊಂದಿಗೆ ದಾಖಲೆ ಬರೆದರು. ಈ ಎಸೆತವೂ ಐದನೇ ಪ್ರಯತ್ನದಲ್ಲಿ ಮೂಡಿಬಂತು. 2015ರ ಆವೃತ್ತಿಯಲ್ಲಿ ರಾಜಿಂದರ್ ಸಿಂಗ್ (82.23 ಮೀ) ನಿರ್ಮಿಸಿದ್ದ ದಾಖಲೆಯನ್ನು ಮುರಿದರು.

'ವಿಶ್ವ ಅಥ್ಲೆಟಿಕ್ಸ್‌ನ ಅರ್ಹತಾ ಮಟ್ಟ (85.50 ಮೀ) ಸಾಧಿಸುವುದು ನನ್ನ ಗುರಿಯಾಗಿತ್ತು. ಇಲ್ಲಿನ ಪ್ರಯತ್ನವು ಆ ಗುರಿಗೆ ಹತ್ತಿರವಾಗಿತ್ತು. ಮುಂದಿನ ಸ್ಪರ್ಧೆಯಲ್ಲಿ ಅದನ್ನು ಸಾಧಿಸುವ ಛಲ ಹೊಂದಿದ್ದೇನೆ' ಎಂದು ಸಚಿನ್ ಹೇಳಿದರು.

ಚೋಪ್ರಾ (89.94 ಮೀ), ಜೇನಾ (87.54 ಮೀ), ಶಿವಪಾಲ್ ಸಿಂಗ್ (86.23 ಮೀ) ಮತ್ತು ದವಿಂದರ್ ಸಿಂಗ್ ಕಾಂಗ್ (84.57 ಮೀ) ನಂತರ ಭಾರತದ ಐದನೇ ಅಥ್ಲೀಟ್‌ನ ವೃತ್ತಿಜೀವನದ ಅತ್ಯುತ್ತಮ ಎಸೆತ ಇದಾಗಿದೆ. ಬೆಳ್ಳಿ ಪದಕವೂ ಉತ್ತರ ಪ್ರದೇಶದ ಪಾಲಾಯಿತು. ರೋಹಿತ್ ಯಾದವ್ (80.47ಮೀ) ಮತ್ತು ಆತಿಥೇಯ ಉತ್ತರಾಖಂಡದ ವಿಕಾಶ್ ಶರ್ಮಾ ಕ್ರಮವಾಗಿ ಬೆಳ್ಳಿ ಮತ್ತು ಕಂಚು ಗೆದ್ದರು.



ಕರ್ನಾಟಕದ ಅಭಿನಯಾ ಎಸ್‌. ಶೆಟ್ಟಿ

ಪದಕ ಪಟ್ಟಿ

ತಂಡ	ಚಿನ್ನ	ಬೆಳ್ಳಿ	ಕಂಚು	ಒಟ್ಟು
ಸರ್ವಿಸಸ್	65	24	23	112
ಮಹಾರಾಷ್ಟ್ರ	48	60	63	171
ಹರಿಯಾಣ	39	45	56	140
ಕರ್ನಾಟಕ	33	18	27	78
ಮಧ್ಯಪ್ರದೇಶ	27	19	21	67
ತಮಿಳುನಾಡು	24	30	28	82
ಉತ್ತರಾಖಂಡ	22	33	42	97

ಹಾಲಿ ಚಾಂಪಿಯನ್ 18 ವರ್ಷ ವಯಸ್ಸಿನ ಪೂಜಾ 1.84 ಮೀಟರ್ ಎತ್ತರ ಜಿಗಿದು ಮೈಲಿಗಲ್ಲು ಸ್ಥಾಪಿಸಿದರು. 2022ರಲ್ಲಿ ಪಶ್ಚಿಮ ಬಂಗಾಳದ ಸ್ವಪ್ನಾ ಬರ್ಮನ್ (1.83ಮೀ) ನಿರ್ಮಿಸಿದ್ದ ದಾಖಲೆಯನ್ನು ಅವರು ಮುರಿದರು. ತಮಿಳುನಾಡಿನ ಗೋಪಿಕಾ ಕೆ. (1.79ಮೀ) ಬೆಳ್ಳಿ ಗೆದ್ದರೆ, ಕರ್ನಾಟಕದ ಅಭಿನಯಾ ಎಸ್. ಶೆಟ್ಟಿ (1.77ಮೀ) ಕಂಚಿನ ಪದಕವನ್ನು ಕೊರಳಿಗೇರಿಸಿಕೊಂಡರು.

ಸಾವನ್ ದಾಖಲೆ: ದೂರ ಅಂತರದ ಓಟಗಾರ ಹಿಮಾಚಲ ಪ್ರದೇಶದ ಸಾವನ್ ಬರ್ವಾಲ್ ಅವರು ಪುರುಷರ 5000 ಮೀಟರ್ ಓಟದಲ್ಲಿ ಕೂಟ ದಾಖಲೆ ಬರೆದರು. ಅವರು 13 ನಿಮಿಷ 45.93 ಸೆಕೆಂಡ್‌ಗಳಲ್ಲಿ ಗುರಿಮುಟ್ಟಿ, 2015ರಲ್ಲಿ ಸರ್ವಿಸಸ್‌ನ ಜಿ.ಲಕ್ಷ್ಮಣನ್ (13ನಿ.50.05ಸೆ) ನಿರ್ಮಿಸಿದ್ದ ದಾಖಲೆಯನ್ನು ಸರಿಸಿದರು.

ಸಾವನ್ ಅವರಿಗೆ ಕೂಟದಲ್ಲಿ ಎರಡನೇ ಚಿನ್ನ ಇದಾಗಿದೆ. ಶನಿವಾರ 10 ಸಾವಿರ ಮೀಟರ್ ಓಟದಲ್ಲೂ ಕೂಟ ದಾಖಲೆಯೊಂದಿಗೆ ಚಾಂಪಿಯನ್ ಆಗಿದ್ದರು. ಅವರು 2024ರ ಡೆಲ್ಲಿ ಮ್ಯಾರಥಾನ್‌ನಲ್ಲೂ ಪ್ರಶಸ್ತಿ ಗೆದ್ದಿದ್ದರು. ಹರಿಯಾಣದ ಗಗನ್ ಸಿಂಗ್ (14 ನಿ.0.04ಸೆ) ಮತ್ತು ಮಧ್ಯಪ್ರದೇಶದ ಸುನಿಲ್ ದಾವರ್ (14:01.33) ಕ್ರಮವಾಗಿ ನಂತರದ ಸ್ಥಾನ ಪಡೆದರು. ಮಹಿಳೆಯರ 400 ಮೀಟರ್ ಹರ್ಡಲ್ಸ್ ಸ್ಪರ್ಧೆಯಲ್ಲಿ ತಮಿಳುನಾಡಿನ ವಿದ್ಯಾ ರಾಮ್‌ರಾಜ್ ಅವರು ಹ್ಯಾಟ್ರಿಕ್ ಚಿನ್ನದ ಸಾಧನೆ ಮೆರೆದರು. ಕಳೆದೆರಡು ಆವೃತ್ತಿಗಳಲ್ಲಿ ಚಾಂಪಿಯನ್ ಆಗಿದ್ದ 26 ವರ್ಷದ ಅಥ್ಲೀಟ್ 58.11 ಸೆಕೆಂಡ್‌ನಲ್ಲಿ ಗುರಿ ಮುಟ್ಟಿದರು. ಈ ವಿಭಾಗದಲ್ಲಿ ಅವರು ಪಿ.ಟಿ. ಉಷಾ (55.42ಸೆ) ಅವರೊಂದಿಗೆ ರಾಷ್ಟ್ರೀಯ ದಾಖಲೆ ಹೊಂದಿದ್ದಾರೆ. ತಮಿಳುನಾಡಿನ ಶ್ರೀವರ್ತಾನಿ ಎಸ್. ಕೆ. (59.86ಸೆ) ಮತ್ತು ಮಹಾರಾಷ್ಟ್ರದ ನೇಹಾ ಢಬಾಲೆ ಕ್ರಮವಾಗಿ ಬೆಳ್ಳಿ ಮತ್ತು ಕಂಚು ಗೆದ್ದರು.

ಹಾಕಿ: ಫೈನಲ್‌ಗೆ ಕರ್ನಾಟಕ, ಉತ್ತರಪ್ರದೇಶ

ಹರಿದ್ವಾರ (ಪಿಟಿಐ): ಕರ್ನಾಟಕ ಹಾಕಿ ತಂಡವು ಗುರುವಾರ ನಡೆಯಲಿರುವ ಪುರುಷರ ವಿಭಾಗದ ಫೈನಲ್‌ನಲ್ಲಿ ಉತ್ತರಪ್ರದೇಶ ತಂಡವನ್ನು ಎದುರಿಸಲಿದೆ.

ಬುಧವಾರ ನಡೆದ 38ನೇ ರಾಷ್ಟ್ರೀಯ ಕ್ರೀಡಾಕೂಟದ ಪುರುಷರ ಹಾಕಿ ಸೆಮಿಫೈನಲ್‌ನಲ್ಲಿ ಕರ್ನಾಟಕ ತಂಡವು ಶೂಟೌಟ್‌ನಲ್ಲಿ 5–4ರಿಂದ ಮಹಾರಾಷ್ಟ್ರ ವಿರುದ್ಧ ಜಯಿಸಿತು. ನಿಗದಿತ ವೇಳೆಯಲ್ಲಿ ಪಂದ್ಯವು 2–2ರಿಂದ ಸಮಬಲವಾಗಿತ್ತು.

ಕರ್ನಾಟಕದ ತಂಡದ ಪರ ಗಣೇಶ್ ಮಾಜಿ (44ನಿ) ಮತ್ತು ಭರತ್ ಮಹಾಲಿಂಗಪ್ಪ ಕುರ್ತಕೋಟಿ (47ನಿ) ಗೋಲು ಗಳಿಸಿದರು. ವೆಂಕಟೇಶ್ ಕೆಂಚಿ (11ನಿ) ಮತ್ತು ಆದಿತ್ಯ ಲಾಳಗೆ 12ನೇ ನಿಮಿಷದಲ್ಲಿ ಲಭಿಸಿದ ಪೆನಾಲ್ಟಿಯಲ್ಲಿ ಮಹಾರಾಷ್ಟ್ರ ಪರ ಗೋಲು ಗಳಿಸಿದರು.

ನಂತರ ಕುತೂಹಲ ಕೆರಳಿಸಿದ್ದ ಶೂಟೌಟ್‌ನಲ್ಲಿ ಕರ್ನಾಟಕ ಮೇಲುಗೈ ಸಾಧಿಸಿತು. ಇನ್ನೊಂದು ಸೆಮಿಫೈನಲ್‌ನಲ್ಲಿ ಉತ್ತರಪ್ರದೇಶ ತಂಡವು 5–3ರಿಂದ ಪಂಜಾಬ್ ಎದುರು ಜಯಿಸಿತು.

ಹರಿಯಾಣ ಫೈನಲ್‌ಗೆ: ಮಹಿಳೆಯರ ವಿಭಾಗದ ಫೈನಲ್‌ನಲ್ಲಿ ಮಧ್ಯಪ್ರದೇಶ ಮತ್ತು ಹರಿಯಾಣ ತಂಡಗಳು ಮುಖಾಮುಖಿಯಾಗಲಿವೆ. ಮೊದಲ ಸೆಮಿಫೈನಲ್‌ನಲ್ಲಿ ಮಧ್ಯಪ್ರದೇಶ ತಂಡವು ಶೂಟೌಟ್‌ನಲ್ಲಿ 4–1ರಿಂದ ಮಹಾರಾಷ್ಟ್ರ ಎದುರು ಗೆದ್ದಿತು. ನಿಗದಿತ ಅವಧಿಯ ಆಟದಲ್ಲಿ 1–1ರಿಂದ ಪಂದ್ಯ ಸಮಬಲವಾಗಿತ್ತು. ಎರಡನೇ ಸೆಮಿಫೈನಲ್‌ನಲ್ಲಿ ಹರಿಯಾಣ ತಂಡವು 2–1ರಿಂದ ಜಾರ್ಖಂಡ್ ವಿರುದ್ಧ ಜಯಿಸಿತು.